२०) मेघाभिमानिपर्जन्यगंगाशामलासंज्ञारोहिणीविराड्‌उषादेवतासु,

दिगभिमानि/भौमपत्न्यब्भिमानिदेवतासु, / चित्रगुप्ते, / बल्यादिसप्तेन्द्रेषु, /

राहुकेतुमंगलशुक्रेषु, / अर्चिरादि धूमादि मार्गाभिमानिदेवेषु, / यज्ञसाधनाभिमानिदेवेषु, / अष्टगन्धर्वेषु, / द्विनवति अप्सरःसु / सप्तपितृषु, / एकादशमनुषु, / विश्वकर्मणि, चण्डकसुधामवप्त्रादिषु विष्णुपार्षदेषु, / सनकसनन्दनसनत्सुजातेषु, / च्यवनोचथ्यकर्दमादिषु द्विनवतिऋषिषु, / प्रियव्रतोत्तानपादगयमांधातृध्रुवपृथुशशबिंदुकार्तवीर्यककुत्स्थ दौष्यन्तिभरतपरीक्षिज्जनकहैहयार्षभभरतादिषु शतचक्रवर्तिषु, / वायुपुत्रमरीचि / अग्निपुत्रपावक / इन्द्रपुत्रजयन्तेषु, / जयविजयादिषु षट्पञ्चाशद् द्वारपालेषु, / कर्मजदेवेषु,

१८) विष्वक्सेनाश्विनिगणपतिकुबेरादिषु पञ्चाशीतिषु शेषशतस्थदेवेषु,

१७) मित्रनिर्ऋतिप्रावहीतारासु,

१६) प्रल्हादमरीचिपुलस्त्यात्रिपुलह–अंगीरसक्रतुवसिष्ठवैवस्वतमनुविश्वामित्रेषु,

१५) अग्निभृगुप्रसूतिषु,

१४) नारदे,

१३) वरुणे,

१२) सूर्यचन्द्रयमशतरूपासु,

११) प्रवहवायौ,

१०) स्वायम्भुवमनुदक्षबृहस्पत्यनिरुद्धशचिरतिषु,

९) आहंकारिकप्राणे,

८) कामे इन्द्रे च

७) सुपर्णीवारुणीपार्वतीषु,

६) जाम्बवतीभद्रानीलाकालिन्दीमित्रविन्दालक्ष्मणासु,

५) गरुडशेषरुद्रेषु

४) परशुक्लेषु भारतीसरस्वत्योः,

३) वायुब्रह्मणोः,

२) लक्ष्म्यां

तथा तदीयेषु अभिमन्यमानवस्तुव्याप्तेषु सदेहेन्द्रियादिषु अनन्तानन्तेषु अंशेषु तथा अनन्तानां तेषां अनन्तशक्ति, अपरिमितगुण, अद्भुतबल, यथायोग्यस्वातन्त्र्य, स्वामित्व,

निरुपमसौन्दर्य, अप्रतिहतैश्वर्य, अगाधानन्द, अमिततेजः, अपारदयाद्यनन्तगुणेषु, अभिमतवस्तूनां नियामकत्व प्रेरकत्व प्रवर्तकत्व निवर्तकत्व कारकत्व उत्पादकत्व पालकत्व विनाशकत्व तत्सत्ताप्रदत्व तदाधारत्व तदाकारत्वादिधर्मेषु,

नियामकाः, जनकाः, पालकाः, विनाशकाः, तदीयतत्तच्छक्तिप्रदाः, प्रेरकाः, प्रवर्तकाः, निवर्तकाः, तदाकाराः, तदाश्रयाः, तदाधाराः, तत्सत्ताप्रदाः, स्वासाधारणरूपैः व्याप्य तेषु संस्थिताः, तदीयदोषास्पृष्टाः तदचिन्त्याः तदुत्तमाः तत्तदीश्वराः, तद्व्योत्काराः, तदत्यन्तविलक्षणाः, तत्तच्छब्दवाच्याः, तद्गतधर्मसदृशैः अथापि तदत्यन्तविलक्षणैः तच्छब्दप्रवृत्तिनिमित्तभूतैः धर्मैः निरवधिकतया स्वातन्त्र्येण च परिपूर्णाः, तत्सेव्याः भगवद्रूपविशेषाः अनन्तानन्ताः।

मुक्ताः तद्गुणादयश्च

किञ्च मुक्तानां अनन्तानां ब्रह्मणां अनन्तानां शेषादीनां अनन्तानां इन्द्रादीनां सहस्रलक्षकोट्यादिविधेषु अतिविपुलानन्देषु अतिप्रभूतज्ञानेषु अतिप्राज्यभोगेषु अतिबहुलसंकल्पेषु अतिमहत्सु भक्त्याद्यनन्तगुणेषु नियामकप्रेरकादयः भगवद्रूपविशेषाः अनन्तानन्ताः।

ईश्वररूपविशेषाः

किञ्च नारायणाख्यं निरुपचरितमूलरूपं,

तस्यैव अवस्थाविशेषस्थितं पुरुषरूपं,

वासुदेवपुरुषरूपं, संकर्षणप्रद्युम्नानिरुद्धरूपाणि,

विश्वः तैजसः प्राज्ञः तुरीयः आत्मा अन्तरात्मा परमात्मा ज्ञानात्मा इत्यष्टरूपाणि,

क्रुद्धोल्कः महोल्कः वीरोल्कः द्युल्कः सहस्रोल्कः इति पञ्चरूपाणि,

अन्नमयः प्राणमयः (वाङ्मयः श्रोत्रमयः, चक्षुर्मयः) मनोमयः विज्ञानमयः आनन्दमयः इति पञ्च (अष्ट) रूपाणि,

प्राणः अपानः व्यानः उदानः समानः इति पञ्चरूपाणि,

गायत्री भूतं वाक् पृथिवी शरीरं हृदयं इति षड्रूपाणि,

देहव्याप्तः देहहृदयान्तर्गतः जीवव्याप्तः जीवहृदयान्तर्गतः इति चतूरूपाणि,

श्वेतद्वीपानन्तासनवैकुण्ठस्थितानि वासुदेवनारायणविकुण्ठनामकत्रिरूपाणि,

लोकवेदसमीररमान्तर्गतानि चतूरूपाणि,

विमला उत्कर्षिणी ज्ञाना क्रिया योगा प्र ी सत्या ईशाना अनुग्रहा इत्येवं नवरूपाणि,

तेषामेव ज्ञानेच्छाक्रियात्मकतया सप्तविंशतिरूपाणि

मोचिका सूक्ष्मा सूक्ष्मामृता ज्ञानामृता ध्यायन्ती व्यापिनी व्योमरूपिणी अनन्ता इत्येवं अष्टरूपाणि,

अणिमा महिमा लघिमा गरिमा प्राप्तिः प्राकाश्यं ईशित्वं वशित्वं इत्यष्टशक्तिरूपाणि,

मत्स्यादिदशरूपाणि,

केशवादिद्वादशरूपाणि,

हंस शुचिषत् वसु अन्तरिक्षसत् होता वेदिषत् अतिथि दुरोणसत् नृषत् वरसत् ऋतसत् अब्जाः गोजाः ऋतजाः अद्रिजाः ऋतं बृहत् इत्यष्टादशरूपाणि,

केशवादि चतुर्विंशतिरूपाणि,

अजानन्दादिपञ्चाशद्रूपाणि,

नरनारयणादिशतरूपाणि,

विश्वादिसहस्ररूपाणि,

परादिबहुरूपाणि,

अजिताद्यनन्तरूपाणि,

द्वासप्तविसहस्रनाडीगतरूपाणि,

पञ्चक्रतुस्थितत्रिंशद्रूपाणि, इत्येवं अनन्तानन्तानि भगवद्रूपाणि

अवतारादयः

किञ्च नारायणः हरिः कृष्णः तापसमनुः यज्ञः धन्वन्तरिः हंसः दत्तात्रेयः कपिलः महिदासः नारायणी मोहिनी हयग्रीवः वेदव्यासः उपेन्द्रः अजितः श्रीकरः त्रिविक्रमः शिंशुमारः सनत्कुमारः वैश्वानरः अर्धनारीनारायणः

मूर्धत्रयेण त्रिधामधारी त्रिमूर्धा, ब्रह्माण्डान्तर्व्यापी विराट् , ब्रह्माण्डाविष्टः विष्णुः, ब्रह्माण्डाधारो विष्णुकूर्मः, अगाधजलस्थितो विष्णुकूर्मः,

सृष्टिसंहाराद्यर्थं ब्रह्मशिवादिषु प्रविष्टाः ब्रह्मशिवादिनामकरूपविशेषाः,

अग्न्याद्यन्तर्गता: अग्न्याद्यनन्तर्गताश्च अनन्ता: अग्न्यादिनामका: भगवद्रूपविशेषा:

इत्येवं अनन्तानन्ता: भगवद्रूपविशेषा:

गुणक्रियारूपात्मका:

किञ्च अनन्तानन्तानां अनन्तविधानां आनन्दज्ञानबलधृतिशौर्यधैर्यसाहस पराक्रमवीर्यतेजोदयाक्षमासह:कान्तिसौन्दर्यगाम्भीर्यौदार्योत्साहवैराग्यलीला प्रागल्भ्याद्यैश्वर्यव्याप्तिस्वातन्त्र्यादिगुणात्मका:

तथा सृजन पालन हनन नियमन ज्ञानाज्ञानसुखदु:खलाभहानियशोऽयशोदान बन्धनमोचनाद्यनन्तक्रियात्मका:

तथा रामस्य (रामोद्भूतानि एवं अन्यत्रापि ज्ञेयं) रामकृष्ण-वेदव्यासाद्यनन्तरूपाणि, रामवेदव्यासस्य रामकृष्णकपिलवेदव्यासाद्यनन्तरूपाणि, रामवेदव्यासकपिलस्य केशवाद्यनन्तरूपाणि इत्येवं अनन्तरूपाणां अनन्तरूपाणि,

तथा रामस्य ज्ञानानन्दबलाद्यनन्तगुणात्मकरूपाणि, रामज्ञानस्य ज्ञानानन्दाद्यनन्तगुणात्मकरूपाणि, रामज्ञानबलस्य अनन्तगुणात्मकरूपाणि

तथा ज्ञानस्य रामादिरूपाणि, ज्ञानरामस्य सृष्ट्यादिरूपाणि, ज्ञानरामसृष्टे: केशवादिरूपाणि इत्येवं अनन्तरूपाणि

तथा गुणविशिष्टगुणात्मका: गुणविशिष्टक्रियात्मका: गुणविशिष्टरूपात्मका:, क्रियाविशिष्टगुणात्मका: क्रियाविशिष्टक्रियात्मका: क्रियाविशिष्टरूपात्मका:, रूपविशिष्टगुणात्मका: रूपविशिष्टक्रियात्मका: रूपविशिष्टरूपात्मका: इत्येवं अनन्तरूपाणि

अन्ये सर्वमूलोक्ता:

विशेषत: एकैकस्मिन् मनुष्यदेहे मज्जायां स्थितानि अशीत्युत्तरसहस्ररूपाणि, अस्थिगतानि षष्ट्युत्तरशतत्रयरूपाणि,

तथा द्वासप्ततिसहस्रनाडीषु सव्यदक्षिणभेदेन स्त्रीपुमात्मना संस्थितानि, तन्नाडीगतरमामुख्यप्राणादिसमस्तदेवतानियामकानि, पुरुषायुषीयशतवर्षाहोरात्र-संस्थितानि तन्नियामकानि सूर्यमण्डलस्थितानि बृहतीसहस्रस्वरव्यञ्जनवाच्यानि द्वासप्ततिसहस्ररूपाणि,

तथा बृहतीसहस्रमन्त्रप्रतिपाद्यानि विश्वादिसहस्ररूपाणि

तथा शरीरपुरुषछन्द:पुरुषवेदपुरुषमहापुरुषानां रसभूता: अशरीर-प्रज्ञात्माकारब्रह्मादित्यनामका: वासुदेवादय:

तथा पूर्वोत्तरवर्णसन्धिसन्धानेषु स्थिताः तद्वाच्याः लोकज्योतिर्विद्याप्रजादेहेषु अधिष्ठिताः, नारायणादीनां पञ्चानां वासुदेवादयः,

तथा पूर्वोत्तरवर्णसन्धिषु स्थिताः वराहवामननरसिंहाः वराहवामनवेदव्यासाः

तथा निर्भुजप्रतृण्णनामकसंहितापदानां क्रमाणां च देवताः पृथिवीस्वर्गान्त-रिक्षस्थाः वराहवामननरसिंहाः

तथा प्रस्तावोद्गीथप्रतिहारोपद्रवनिधनाख्यपञ्चसामप्रतिपाद्याः आदिहिंकार-मिलितसप्तसामप्रतिपाद्याः वराहनरसिंहमिलितनारायणादि (पञ्च)सप्त-भगवद्रूपविशेषाः

तथा सामसु संस्थितैः बहुकोटिभिः स्तोभशब्दैः पृथक् पृथक् वाच्याः बहुकोटयः प्रादुर्भावाः

तथा त्रिवृत्पञ्चदशसप्तदशैकविंशपञ्चविंशेति पञ्चविधस्तोमवाच्याः अनिरुद्धस्य अनिरुद्धादयः

तथा गायत्ररथन्तरबृहद्भद्रराजनाख्यपञ्चविधसामप्रतिपाद्याः प्रद्युम्नस्य अनिरुद्धादयः

तथा भोक्तृसंस्थौ भोक्तृशक्तिप्रदौ संकर्षणप्रद्युम्नौ, भोग्यसंस्थौ तर्पकौ नारायणानिरुद्धौ, आकाशस्थः अवकाशप्रदः वासुदेवः

तथा शतर्च्यादि सर्वऋष्यादिनामवाच्याः तत्संस्थाः

तथा पृथिव्यग्निजनकं तत्सेव्यं च वागिन्द्रियं,

अन्तरिक्षवायुजनकः तत्सेव्यः प्राणः,

आदित्यद्युजनकं तत्सेव्यं च चक्षुः,

दिक्चन्द्रमोजनकं तत्सेव्यं च श्रोत्रं,

अप्शब्दितसर्वदेववरुणजनकं तत्सेव्यं च मनः

तदात्मक भार्गवनरसिंहकपिलादयः

तथा उष्णिग्गायत्रीत्रिष्टुबनुष्टुब्जगतीपंक्तिबृहतीनां छन्दसां आश्रयभूतानि लोमत्वङ्मांसस्नावास्थिमज्जाप्राणरूपाणि

तथा प्रलीनाशेषकुत्सितः कुली, सर्वपालकः सर्वस्माद्विशिष्टः पविः, ओष्ठपिधानः सर्ववागीश्वरः सुवादकः वाक्संस्थः स्त्रीरूपो विष्णुः

तथा णकारोक्तः बलरूपः, षकारोक्तः रमाब्रह्मेशपूर्वकस्य अखिलस्यैव प्रणेतृत्वात्

प्राणनामा,

सर्वगुणै: देशत: कालतश्च आततत्वात् आत्मानामा च विष्णु:

तथा यदेतद्हृदयं मनश्चैतत् संज्ञानं आज्ञानं विज्ञानं प्रज्ञानं मेधा दृष्टि: धृति: मति: मनीषा जूति: स्मृति: संकल्प: क्रतु: असु: काम: अवश: इति श्रुतिप्रतिपादिता: गुणात्मकभगवद्रूपविशेषा:

तथा सर्वाभि: ऋग्भि: सर्ववेदै: सर्वघोषै: प्रतिपाद्य:

तथा सर्वभक्षक: अदिति:,

सप्तान्नजनक: अक्षितिनामा,

चातुर्वर्ण्यजनक:,

मध्यमाख्यशिशुप्राणस्य रमारूपदामद्वारा धारक: स्थूणानारायण:,

तथा लोक वृष्टि जल ऋतु पशु प्राणेषु संस्थिता: पञ्चविधसामप्रतिपाद्या:

तथा वागादित्य प्राण यज्ञ मिथुनादित्य पर्जन्य ऋतु लोक पशु देहांग देवतासु संस्थिता: सप्तविधसामप्रतिपाद्या:

तथा वसुरुद्रादित्यान्तर्गता: तन्नामका: प्रातर्माध्यन्दिनसायंसवनेषु यजमानानां उपतापादिपरिहारका: रूपविशेषा:

तथा प्रकाशवान् अनन्तवान् ज्योतिष्मान् आयतनवान्

तथा वामनि: भामनि:

तथा द्यु पर्जन्य पृथिवी पुरुष योषाख्य पञ्चाग्निषु संस्थिता: नारायणादय: एवं तदीयेषु समिद्धूमार्चिचन्द्रांगारविस्फुलिंगेषु च संस्थिता: नारायणादय:

तथा सत्य विज्ञान मति श्रद्धा निष्ठा कृति सुख भूमा अहंकार आत्मनामका: भगवद्रूपविशेषा:

तथा आदित्यस्थमधुनामक: स्वायम्भुवादिचक्रवर्तिस्थितराजराजेश्वररूपं,

मूर्तामूर्तरसरूप:, नेतिनेत्युक्त:,

पतिजायापुत्रवित्तब्रह्मक्षत्रलोकदेवभूतसर्वेषां किंबहुना स्वात्मन: प्रियत्वादिप्रद:

तथा "एतद्वै तदक्षरं गार्गि ब्राह्मणा अभिवदन्ति अस्थूलं अनणु अह्रस्वं अदीर्घं अलोहितं अस्नेहं अच्छायं अतम: अवायु अनाकाशं असंगं अरसं अगन्धं अचक्षुष्कं अश्रोत्रं अवाक् अमन: अतेजस्कं अप्राणं अमुखं अमात्रं अनन्तरं अबाह्यं न तदश्नाति

किञ्चन न तदश्नाति कश्चन" इति

तथा "स एष नेति नेति आत्मा अगृह्यो नहि गृह्यते अशीर्यो नहि शीर्यते असंगो नहि सज्जते असितो न व्यथते न रिष्यति" इति

तथा "य एषोऽन्तरादित्ये हिरण्मयः पुरुषः दृश्यते हिरण्यश्मश्रुः हिरण्यकेशः आप्रणखात् सर्व एव सुवर्णः तस्य यथा कप्यासं पुण्डरीकं एवमक्षिणी तस्य उदिति नाम स एष सर्वेभ्यः पाप्मभ्यः उदितः" इति श्रुत्युक्तमहिमा

तथा "मनोमयः प्राणशरीरः भारूपः सत्यकामः सत्यसंकल्पः आकाश आत्मा सर्वकर्मा सर्वकामः सर्वगन्धः सर्वरसः सर्वमिदमभ्यात्तः अवाक्यनादरः एष म आत्मा अन्तर्हृदये अणीयान् व्रीहेर्वा यवाद्वा सर्षपाद्वा शामाकाद्वा शामाकतण्डुलाद्वा" इति

तथा "तस्य प्राची दिक् जुहूर्नाम सहमाना नाम दक्षिणा राज्ञीनाम प्रतीची सुहूतानाम उदीची तस्य वायोर्वत्सः स य एतमेवं वायुं दिशां वत्सं वेद न पुत्ररोदं रोदिति सोऽहमेतमेवं वायुं दिशां वत्सं वेद मा पुत्ररोदं रुदन्" इति श्रुत्युक्तमहिमा

तथा "तमेवं प्रादेशमात्रं अभिविमानं आत्मानं वैश्वानरं उपास्ते स सर्वेषु लोकेषु सर्वेषु भूतेषु सर्वेषु आत्मसु अन्नमत्ति तस्य ह वा एतस्य आत्मनो वैश्वानरस्य मूर्धेव सुतेजाः, चक्षुर्विश्वरूपः, प्राणः पृथग्वर्त्मा, सन्दोहो बहुलः, बस्तिरेव रयिः, पृथिव्येव पादौ, उर एव वेदिः, लोमानि बर्हिः, हृदयं गार्हपत्यः, मनः अन्वाहार्यपचनः, आस्यमाहवनीयः" इति श्रुत्युक्तमहिमा

इत्येवं अनन्तानन्ताः भगवद्रूपविशेषाः निरवधिकानन्तशक्तिमत्वात् निरवधिकपूर्णानन्तस्वातन्त्र्यात् अनन्तदेशकालव्याप्तत्वात् देशकालवस्तुस्वभाव-कृतव्यवधानशून्यत्वात् तत्तद्देशकालस्थितिं अविहायैव स्वीयाचिन्त्याद्भुतशक्त्या प्रतितिष्ठन्त्वस्यां प्रतिमायां तत्संस्थेन रूपेण अभिन्नाः सन्तः।

पूर्णः प्रेष्ठः परः स्वामी व्याप्तः कर्तोपकारकः।

रक्षत्येव तदीयं मां कर्माच्यो गुरुदेवगः।

श्रीकृष्णार्पणमस्तु।

नैवेद्यम्

अत्रान्तरेऽनुसन्धेयः त्रैलोक्याचार्यश्रीचरणानुगृहीतः प्रमेयग्रामः।

नित्यनिर्दोषनिश्छिद्रनिरवधिकनिरतिशयनिर्दुःखसम्भेद-निर्ह्रासवृद्धिकस्वाभाविकशाश्वतैकप्रकाराचिन्त्याद्भुतानाद्यनन्याधीनाप्राकृता-लौकिकानितरसाधारणानन्तानन्तविधानन्दसम्परितुष्टवपुरपि अत एव परमाप्तकामोऽपि नारायणः केवलं लीलया इच्छति क्रीडया च भु े। न जातु तस्य भोगे वृद्धिः अभोगे क्षयः।

किञ्च भोग्येष्वपि तस्य स्वस्वरूपमेव निरतिशयप्रधानम् । भु े खलु हरिः स्वरूपभूतान् विविधान् विषयान् ।

ते च विषयाः अनन्तविधाः। यथा रूपं चक्षुषैव ग्राह्यं न घ्राणेन। यथा वा गन्धः घ्राणेनैव ग्राह्यः न चक्षुषा, विविधत्वात् । एवं भगवदाख्याः भगवद्भोग्याः अनन्तविधत्वात् अनन्तेन्द्रियसम्भोग्याः। तादृशनिरवधिकानन्तेन्द्रियाणि च भगवत एवेति तस्यैव ते भोग्याः।

त इमे रमादिभिरचिन्त्याः अतर्क्याः। नामी रसगन्धादयः लौकिका अपि तु लोकतोऽत्यन्तविलक्षणाः। रमादीनामपि महत्तममाश्चर्यं जनयन्त्येते।

भगवान् शब्दस्पर्शरूपरसगन्धाद्याकृतिः। एत एव शब्दाद्याः स्वाख्या इति आख्यायन्ते।

किञ्च स्वयं शब्दरूपोऽपि भगवान् शब्दरूपं स्वात्मानमत्ति। स्पर्शादिरूपो भगवान् शब्दमत्ति। शब्दादिरूपः स्पर्शमत्तीत्येवं स्वभोग्यत्वमन्योन्यभोग्यत्वं च

एकैकशब्दादिरूपोऽपि स्पर्शाद्यनन्तगुणात्मकः। तेऽपि भोग्याः भवन्तीति नात्र विस्मर्तव्यम् । सोऽयमेकः शब्दरूपो भगवान् अनन्तविधः अनन्तजातीयः। एवं स्पर्शरूपरसगन्धादिष्वपि ज्ञेयम् ।

किञ्च भगवतः आनन्दः, ज्ञानं, द्युतिः, बलं, सौन्दर्यं, औदार्यं, वीर्यं, स्वातन्त्र्यं, प्रागल्भ्यं इच्छा, दया, प्रीतिः, क्षमा, कृतिः, तेजः, कान्तिः, स्वामित्वमित्यादयः गुणाः सृष्टिः, स्थितिः, संहृतिः, नियतिः, धृतिः, प्रेरणं, बोधनं, बन्धनं, मोचनं, गतिरित्यादयः क्रियाश्च स्वयं भगवद्रूपाः।

सर्वे ते अनन्तगुणात्मकाः, अनन्तक्रियात्मकाश्च। सर्वे ते स्वाख्याः, भगवद्भोग्याः, परस्परभोग्याश्च।

किञ्च रमाऽपि भगवद्भोग्या। साऽपि शब्दस्पर्शरूपरसगन्धादिरूपा। फलपुष्पस्रक्चन्दनासनशयनवाहनप्रासादनदीसमुद्रवनगिरितरुगुल्मलताकुञ्जदीप-धूपपादुकाछत्रचामरमणिकनकरजतादिरूपा च। त इमे तानि इमानि च रमारूपाणि, रमायाः स्वाख्यानि।

किञ्च रमायाः भक्तिः आनन्दः, ज्ञानं, द्युतिः, बलं, सौन्दर्यं, औदार्यं, वीर्यं, प्रागल्भ्यं इच्छा, दया, प्रीतिः, क्षमा, कृतिः, तेजः, कान्तिः, स्वामित्वमित्यादयः गुणाः सृष्टिः, स्थितिः, संहृतिः, नियतिः, धृतिः, प्रेरणं, बोधनं, बन्धनं, मोचनं, गतिः विलासः, मन्दहासः, नृत्तं, गानं, चञ्चलापाङ्गनीराजनं इत्यादयः क्रियाश्च स्वयं रमारूपा एव। त इमे गुणाः ता इमाः क्रियाश्च अद्भुतकौतुकोपेताः। परस्परात्मका अनन्तगुणक्रियात्मकाश्च।

किञ्च परमाणोरनन्तांशमारभ्य अनन्ताकाशपर्यन्तं तत्र तत्र व्याप्तानि भगवत्याः रमायाः अनन्तानि रूपाणि ब्रह्माद्यचिन्त्यानि भु ` पूर्णशक्तिः। तत्र रमारूपरसभोगः आघ्राणनाख्यः। तत्रापि यन्महद्विचित्रं तच्छास्त्रतोऽनुसन्धेयम्।

किञ्च मुक्तानामपि तरतमभावेन विद्यमानानि उक्तविधानि गुणादीनि हरिर्भु `। तथा हि तस्येयं पृथिवी वित्तस्य पूर्णा स्यात् । स एको मानुष आनन्दः। तच्छतगुणः मनुष्यगन्धर्वाणां, तच्छतगुणः देवगन्धर्वाणां, तच्छतगुणः पितृणां, तच्छतगुणः आजानजानां, तच्छतगुणः कर्मदेवानां, तच्छतगुणः देवानां, तच्छतगुणः दक्षस्य, ततोऽधिक इन्द्रस्य ततोऽधिकः रुद्रस्य, ततोऽधिकः ब्रह्मणः, तत अनन्तगुणितः रमायाः ।

तेऽमी सर्वे प्रतिक्षणं भगवत आनन्दभिक्षां भिक्षित्वा भुञ्जते।

"एषाऽस्य परमा गतिः, एषाऽस्य परमा सम्पत् , एषोऽस्य परमो लोकः, एषोऽस्य परम आनन्दः एतस्यैवानन्दस्य अन्यानि भूतानि मात्रामुपजीवन्ति। (बृ.उ)

प्रतिबिम्बरूपविप्लुट्कान् तदानन्दस्य चाखिलाः ।

मुक्ता ब्रह्मादयोऽश्नन्ति तारतम्येन नित्यदा ।। (बृ.भा)" इत्युक्तदिशा अनन्तानन्तानां रमाब्रह्मशेषादिमुक्तगणानां यावानयमानन्दसन्दोहसन्दर्भः सोऽयं बिन्दुरिव भोग्य इत्यहो महदाश्चर्यम्।

एवं मुक्तानां ज्ञानादिगुणानामपि भोगो द्रष्टव्यः।

किञ्च सांसारिकाः ब्रह्मादयोऽपि उक्तरीत्या जडेषु फलपुष्पस्रक्चन्दनादिषु अन्नपायसशाकसूपदधिक्षारक्षीरभक्ष्यभोज्यलेह्यपेयादिषु स्थितानि तदभिमानि-भूतानि अनन्तानि स्वस्वरूपाणि भगवते समर्पयन्ति। सांसारिकब्रह्मादिरूप-रसभोगस्तु दृष्ट्याख्यः।

किञ्च स्तम्बप्लुषिकीटादिभिः रुद्रवायुब्रह्मपर्यन्तैः अणुतराणुतमैः महत्तरमहत्तमैश्च जीवैः सर्वैः सर्वेन्द्रियैर्भुज्यमानमपि भु े। परं शुभं भु े नाशुभम्

किञ्च अनन्तं देशं, अनन्तं कालं तत्तदीयान् अणुतराणुतमान् अंशान् तत्र तत्र स्वाख्यदेशकालादिरूपैः स्थित्वा भु े।

किञ्च अनन्तानन्तब्रह्मकल्पेभ्यः परं आगमिष्यत् सुखं, अनन्तानन्तब्रह्मकल्पेभ्यः पूर्वं अतीतं च सुखं सर्वदा क्षणस्यानन्तानन्तांशेऽपि अनुभवति। अहो अद्भुतम् ।

किञ्च तामसानां अज्ञानं, द्वेषं, भ्रान्तिं, क्रौर्यं, कौटिल्यं, दम्भं, दर्पं, क्रोधं, पारुष्यं, जरामरणरोगादीन् , दुःखं, किं बहुना अन्धे तमसि अनुभूयमानं नितान्तं प्रखरं सान्द्रं दुःसहदुःखजम्बालं च सानन्दमनुभवति। अहो अहो आश्चर्यम् ।

किञ्च भगवते निवेदनीयं अन्नादिकं समस्तं भगवतः अधीनं, तन्नियम्यं, तदुत्पाद्यं, तदाधारं, तदाकारं भवतीत्यविस्मर्तव्यम् ।

किञ्च मुखाज्जातौ पृथिवी च अग्निश्च। स्वपितरं विष्णुमुखं परिचरितुमेव सा धान्यमुत्पादयति, सः धान्यं पाचयति च।

किञ्च आ सृष्टेः आ लयात् अनन्तानन्तानां भूतानां प्रतिजन्म अवश्यम्भावि अन्नादिकं प्रजनयति प्रदापयति च भूतधात्र्या पुरुषो वा अक्षितिः

"कस्मात्तानि न क्षीयन्ते अद्यमानानि सर्वदेति। पुरुषो वा अक्षितिः स हीदमन्नं पुनः पुनर्जनयते.... यद्धैतन्न कुर्यात् न क्षीयेत।" इति

किञ्च एकस्माद् बीजात् यद्येक एव कणः उत्पद्यतां इति ईशनियतिः हन्त तर्हि कः कणः उप्यतां को वा कणो भुज्यतामित्यहो महतीं कष्टां दशामापन्नाः अभविष्याम।

किञ्च लक्षलक्षसंवत्सरस्थायीनि वज्रवत् द्रढिष्ठानि अस्थीनि,

ललिताः कुसुमवत् कोमलाः सहस्रशो नाड्यः,

प्रतिक्षणं उत्पद्यविनश्यन्तः मस्तिष्कगताः कोटिकोटयो जीवकोशाश्च

एकस्मादेवान्नात् निष्पद्यन्ते इति नूनं अचिन्त्यमहिमा तस्येश्वरस्य।

अत ईशावास्यमिदं सर्वम् ।

किञ्च पादे सुतं जलं नारिकेलपादपः मूले काण्डे त्वचि शाखायां पत्रे पुष्पे खर्परे च अनिधाय केवलं फलान्तरेव मधुरीकृत्य कथङ्कारं निदध्यात् ईश्वरेच्छां विना। एवमाम्रफलादिष्वपि ज्ञेयम् ।

किञ्च दशनावलिभ्यां खण्डनेऽपि कठिनाः अपूर्णचूर्णीकृताः शष्कुलीखण्डादयः अविच्छिद्य नालिकाः अम ्वा औदर्यं आन्तरं कोमलं चर्म कथं वा पच्यन्तां ऐश्वरीं व्यवस्थां विना।

किञ्च उक्तदिशा आ सृष्टेः आ लयाच्च जातानां जायमानानां जनिष्यमाणानां च अनन्तानन्तपरमाणुकालक्षणाद्यपेक्षया आधिक्येनानन्तानां जीवानां सामान्यतः चतुरधिकाशीतिलक्षविधयोनिजानां तत्तद्योनिवयोऽवस्थायोग्याहारान् यावत्तत्तज्जीवीयमरणं निरन्तरं प्रददान एव विराजते इत्यहो भागवती कृपा।

एवं परमाय महोपकारकृते सर्वभुजे भगवते समर्पणीयं अस्मदायत्तं किं वै अस्ति।

सावरणं हिरण्यगर्भाण्डमपि यदुदरकोणकोट्यंशलेशपूरणाय अकल्पं तस्य अव्याकृतगगनोदरस्य ह्रीदायिना अल्पेनान्नादिना कथं जातु तृप्तिः स्यात् स्वयं तस्य आप्तकामतां आत्मकामतां च विना ।

अहो बतायं महाकारुणिकः क्षमाम्भोनिधिः श्रीहरिः स्वस्य समग्राया अपि सपर्यायै नेच्छति भक्तानां द्रव्यद्रविणसम्पादनायासम् । विना द्रव्यं सुखागतैरेव कन्दमूलफलादिभिः पत्रपुष्पफलतोयादिभिः सभक्तिभारं समर्पितैः तुष्यति हृष्यति च।

हन्त! नैतावदेव! नैतान्यपि कन्दमूलफलादीनि अपेक्षते आत्मतृप्तः। मनसैव निर्मितान् केवलं वासनामयान् प्रविविक्ततरान् अत एव उपचारप्रवेकान् अलौकिकान् सभक्ति सश्रद्धं सादरं सप्रेमं समर्पितान् भोज्यान् अन्नादीन् भोग्यान् फलपुष्पस्रक्चन्दनासनशयनवाहनप्रासादनदीसमुद्रवनगिरितरुगुल्मलताकुञ्जदीप-धूपपादुकाछत्रचामरमणिकनकरजताभरणादिरूपान् तद्गतानि तदभिमानि ब्रह्मादिस्वरूपाणि तदन्तःस्थानि रमारूपाणि तत्सर्वनियामकानि अनन्तानि स्वस्वरूपाणि स्वीयाचिन्त्यशक्त्या बोभुञ्जानः नितान्तं तुष्यतितमां प्रभूतं हृष्यतितमां अत्यर्थं प्रसीदतितमाम् ।

पूर्णः प्रेष्ठः परः स्वामी व्याप्तः कर्तोपकारकः।

रक्षत्येव तदीयं मां कर्माच्यों गुरुदेवगः।

श्रीकृष्णार्पणमस्तु।

ಪೂಜಾ ರಹಸ್ಯ

ಲೇಖಕ- ಅಂತರಾತ್ಮಾ
ಅಧಿಷ್ಠಾನ- ಬ್ರಹ್ಮಾತ್ಮದಾಸ ಪಂ. ವಿದ್ಯಾಸಿಂಹಾಚಾರ್ಯ

ವಿಶ್ವಾತೀತ ಪರತತ್ತ್ವವೇ ಪರಮಾತ್ಮ. ಮೂರು ಕಾಲದ ಸಂಕೋಲೆಯನ್ನು ಇಲ್ಲವಾಗಿಸಿದ ಕಾಲಾತೀತ. ಅಕ್ಷರ. ಇಡಿಯ ವಿಶ್ವದ ಒಳ ಹೊರಗನ್ನು ತುಂಬಿದ ಬ್ರಹ್ಮ

ಅಂಕೆಗೆ ಸಿಗದ ಆನಂದ, ಜ್ಞಾನ, ಬಲ, ತೇಜಸ್ಸು, ವೀರ್ಯ, ದಯೆ, ಕ್ಷಮೆ, ಪರಾಕ್ರಮ, ಓಜಸ್ಸು, ಸೌಂದರ್ಯ, ಔದಾರ್ಯ, ಲಾವಣ್ಯ, ಕಾಂತಿ, ಐಶ್ವರ್ಯ, ಸ್ವಾತಂತ್ರ್ಯ, ಸ್ವಾಮಿತ್ವ, ಸಹಸ್ಸು, ವ್ಯಾಪ್ತಿ, ಕರ್ತೃತ್ವ, ರಕ್ಷಕತ್ವ, ಶ್ರೇಷ್ಠತ್ವ ಮುಂತಾದ ಗುಣಮಣಿಮಂಡಿತನಾದ ಪೂರ್ಣಬ್ರಹ್ಮ. ಎಲ್ಲೆ ಮೀರಿದ ವಾಗ್ಬ್ರಹ್ಮವು ಹೊಗಳುವ ಓಂಕಾರ.

ಸಿರಿ, ವಿಧಿ, ವಾಯು, ಶಿವ, ದೇವ, ದಾನವ, ಮಾನವ, ಪಶುಪಕ್ಷಿ, ಕ್ರಿಮಿ, ಕೀಟ ಮುಂತಾದ ಎಣಿಕೆ ಇಲ್ಲದ ಆತ್ಮರನ್ನು ನಿಯಮಿಸುವ ಅಂತರಾತ್ಮ.

ಎಲ್ಲರಿಗೂ ಅರಿವು ಇಚ್ಛೆ ಯತ್ನಗಳನ್ನು ಕೊಟ್ಟು ಕ್ರಿಯಾಶೀಲರನ್ನು ಮಾಡುವ ಸರ್ವಕರ್ತೃ.

ಅನಾದಿಯಿಂದ ಅನಂತದವರೆಗೆ ಎಂದೆಂದಿಗೂ ಹುಸಿಹೋಗದ ಸಂಕಲ್ಪ ಈತನದು. ಅಂತೆಯೇ ಇವನು ಸತ್ಯಕಾಮ, ಸತ್ಯಸಂಕಲ್ಪ.

ದೇಹದಲ್ಲಿದ್ದರೂ ದೇಹದ ಅಳಿವಿನಿಂದ ಅಳಿದುಹೋಗುವವನಲ್ಲ ಜೀವರಲ್ಲಿದ್ದರೂ ಜೀವರ ದೋಷಗಳಿಂದ ಕೊಳೆಯಾಗುವವನಲ್ಲ.

ಎಲ್ಲ ಜೀವರಿಗೂ ಇರವು, ಅರಿವು, ಒಳಿತು, ಏಳಿಗೆಗಳನ್ನು ಕೊನೆಯಲ್ಲಿ ಮುಕ್ತಿಯನ್ನೂ ದಯಪಾಲಿಸುವ ಮಹೋಪಕಾರಿ ದೊರೆ.

ಅವನಿಚ್ಛೆಯೇ ನಮ್ಮ ಅಸ್ತಿತ್ವದ ಆಸರೆ. ಅವನು ಬಿಂಬ. ನಾವು ಪ್ರತಿಬಿಂಬರು. ಅವನಿಂದಾಗಿ ನಾವು; ನಮ್ಮಿಂದಾಗಿ ಅವನಲ್ಲ. ಅವನಾಡಿದರೆ ಆಡಿ, ನುಡಿದರೆ ನುಡಿದು, ನಡೆದರೆ ನಡೆಯುತ್ತಿರುವ ಚೈತನ್ಯದ ಗೊಂಬೆಗಳು.

ಆತ ಇಡಿಯ ವಿಶ್ವಕ್ಕೆ ಒಡೆಯ. ಅಂತೆಯೇ ಇಡಿಯ ಪ್ರಪಂಚ ಆತನದು.

ಆದ್ದರಿಂದಲೇ ಅವನಿಗಿಲ್ಲದ್ದನ್ನು ಅವನದಲ್ಲದ್ದನ್ನು ಅವನಿಗರ್ಪಿಸಿ ಅವನನ್ನು ಪೂಜಿಸುವಂತಿಲ್ಲ.

ಕಾರಣ ಅವನನ್ನು, ಅವನಲ್ಲಿರುವದನ್ನು ಹಾಗೂ ಅವನದ್ದನ್ನು ಕಾಣುವದೇ, ಕಂಡು ಮೆಚ್ಚುವದೇ ಅವನರ್ಚನೆ.

ಕ್ಷಣ ಬಿಡದೆ ಕಂಡರೂ ನೂತನ. ದೇವರಲ್ಲಿ ಮಾಸಿದ್ದಿಲ್ಲ, ಹಳಸಿದ್ದಿಲ್ಲ.

ಅಂತೆಯೇ ವಿಶ್ವದ ಆಸರೆಯಾದ ಸಿರಿಯು ತುಂಬು ಪ್ರೇಮದ ತನ್ ಕಣ್ಣೋಟದಿಂದ ಅವನನ್ನು ಅರ್ಚಿಸಿ ಮೆಚ್ಚಿಸುವಳು.

"ಇಂದಿರಾಚಂಚಲಾಪಾಂಗನೀರಾಜಿತಂ" "ದೃಶ್ಯತಾಂ ದೃಶ್ಯತಾಂ ಇತ್ಯಜೇಶಾರ್ಚಿತಂ" ಎಂದರು ಆಚಾರ್ಯರು.

ಅವನದು ಅನಂತ; ಅವನು ಅನಂತಾನಂತ. ಅಂತೆಯೇ ಅವನು ಆಪ್ತಕಾಮ.

ಅಂಥ ಅನಂತನನ್ನು ಒಲಿಸುವದೇ, ಒಲಿಸಿ ಅವನ ಪ್ರೇಮವಾಹಿನಿಯಲ್ಲಿ ಮೀಯುವದೇ, ತನ್ನ ಉಸುರಿನ ಉದ್ದೇಶ್ಯವೆಂದು ಸಿರಿ ಬಗೆಯಲ್ಲಿ ಬಗೆಯುವಳು.

ನಿಖಿಲ ಚೇತನರಲ್ಲಿ ತನ್ನನ್ನು ಉತ್ತಮ ಗೊಳಿಸಿದ್ದು ಈ ಪ್ರಾಣನಾಥನ ಕಿರುನೋಟದ ಪ್ರಸಾದ. ಕಾರಣ ಅವನ ಸೇವೆಯಲ್ಲಿ ಅಷ್ಟು ತವಕ ಆಕೆಗೆ. "ಆದರಾದಲೋಪಃ" ಎಂದರು ಭಗವಾನ್ ವ್ಯಾಸರು.

ಹೀಗಿರುವಾಗ ವಿಧಿ, ವಾಯು, ವಾಣಿ, ಭಾರತಿ ಮುಂತಾದ ಅಮರರೆಲ್ಲ ಆ ಸರ್ವೋತ್ತಮನನ್ನು ಭಕ್ತಿಯಿಂದ ಭಜಿಸಿ, ಸೇವಿಸುವದರಲ್ಲಿ ತಮ್ಮ ಬಾಳಿನ ಪರಮಧನ್ಯತೆಯನ್ನು ಅನುಭವಿಸುತ್ತಿರುವುದು ಏನು ಅಚ್ಚರಿ?

ಇವರೆಲ್ಲರೂ ಪೂಜಿಸುವುದು ರನ್ನ ಹೊನ್ನು ಹವಳಗಳಿಂದ ಮಾತ್ರವಲ್ಲ. ಮೇರುವೇ ಮಂದಿರ, ಅದರ ಶೃಂಗವೇ ಮಂಟಪ, ಸೂರ್ಯಚಂದ್ರರೇ ದೀವಿಗೆ, ಅನಂತಜ್ಯೋತಿರ್ಮಂಡಲಗಳೇ ಸಾವಿರದ ಸಾಲುದೀಪ, ಸುರಿವ ಮಳೆ ಅಭಿಷೇಕ, ಹರಿವ ನದಿ ಪಾನೀಯ, ಬೆಳೆವ ಆಹಾರ ನೈವೇದ್ಯ, ನಡೆವ ನಡೆ ಪ್ರದಕ್ಷಿಣೆ ಮುಂತಾಗಿ ಭಾವಿಸುವರು ಅವರು.

ಸಾಲದುದಕ್ಕೆ ಈ ದೇವತಾಮಣಿಗಳು ತಮ್ಮಧೀನವಾದ ಪ್ರಕೃತಿ, ಮಹತ್, ಅಹಂ ಮುಂತಾದ ತತ್ತ್ವಗಳನ್ನೂ ಆ ತತ್ತ್ವಗಳಿಂದ ಸೃಷ್ಟಿಗೊಂಡ ಇಡಿಯ ಬ್ರಹ್ಮಾಂಡವನ್ನೂ ಹೆಚ್ಚೇನು ತಮ್ಮ ಸಿರಿ, ಸಂಪತ್ತು, ಸೌಭಾಗ್ಯ, ಸಂತಸ, ಆಸ್ತಿ ಅಂತಸ್ತು, ಅಧಿಕಾರ, ಪದವಿ, ಒಡೆತನಗಳನ್ನು ತಮ್ಮ ವೀರ್ಯ, ಶೌರ್ಯ, ಧೈರ್ಯ, ದಯೆ, ಕ್ಷಮೆ, ಜ್ಞಾನ, ಕಾಮ, ಭಕ್ತಿಗಳ ಜೊತೆ ತಮ್ಮನ್ನೇ ತಾವು ಸರ್ವಥಾ ದಾಸದಾಸರೆಂದು ದೇವರಡಿಗರ್ಪಿಸಿ ಭಾವಿಸಿ ಭಜಿಸುವರು.

ಸಿರಿಯರಸ ಭಗವಂತ ಎಲ್ಲೆಲ್ಲೂ ವ್ಯಾಪ್ತ. ಎಂದೆಂದಿಗೂ ಇರುವ. ಅವನಿಲ್ಲದ ಕಣವಿಲ್ಲ. ಅವನಿರದ ಕ್ಷಣವಿಲ್ಲ. ಎಲ್ಲೆಡೆಯಲ್ಲಿ ಎಲ್ಲ ಕಾಲದಲ್ಲಿದ್ದು ಎಲ್ಲವನ್ನೂ ನಿಯಮಿಸುವನಾತ.

ಎಲ್ಲ ಚೇತನರೂ, ಎಲ್ಲ ಜಡಗಳೂ ದೇವರ ಇಚ್ಛೆಗೆ ವಶಂವದಗಳು. ಎಲ್ಲದಕ್ಕೂ ಅವನೇ ದೊರೆ, ಅವನೇ ಸ್ವಾಮಿ. ಬೀಜ, ಅಂಕುರ, ಮರ, ನೆಲ, ನೀರು, ಅನಲ, ಅನಿಲ, ನಭಸ್ಸು, ದೇಹ, ಇಂದ್ರಿಯ, ಮನಸ್ಸು ಮುಂತಾದವೆಲ್ಲ ದೇವರ ನಿಯತಿಗೆ ಒಳಪಟ್ಟಿರುವವು.

ಎಲ್ಲವನ್ನೂ ಸೃಜಿಸಿ, ಇರಿಸಿ, ನಿಯಮಿಸುತ್ತಿರುವ ಆತ ವಿಶ್ವನಾಥ. ಪ್ರೇಮದಿಂದ ಪಾದಮುಟ್ಟಿ ಭಜಿಸುವವರಿಗೆ ಕೈವಲ್ಯ ಪದವನ್ನೀವ ಮಹೋಪಕಾರಿ.

ಸಮಸ್ತ ಪ್ರಾಣಿಗಳಿಗೆ ಉಸಿರು, ಅನ್ನ, ನೀರು, ನೆಲ, ಗಾಳಿ, ಬೆಳಕು ಇವುಗಳನ್ನೆಲ್ಲ ಕೊಟ್ಟ ಆ ಪರಮಾತ್ಮ ಪರಮಪ್ರಿಯಮಿತ್ರ, ಆಪ್ತಬಂಧು, ಅನಾಥಬಂಧು.

ಇವನನ್ನು ಪಾಮರ ಮಾನವ ಹೇಗೆ ಅರ್ಚಿಸಬಹುದು? ಹೇಗೆ ಮೆಚ್ಚಿಸಬಹುದು?

ಮಾನವ ಸ್ವತಃ ಅಜ್ಞಾನಿ, ದರಿದ್ರ, ಶಕ್ತಿಹೀನ, ಪಾಪಿಷ್ಠ, ದುಷ್ಪ್ರಜ್ಞ, ಕೃತಘ್ನ, ಕಾಮುಕ, ಅಹಂಕಾರಿ, ಮುಂಗೋಪಿ, ಭ್ರಷ್ಟ, ದುರಾಚಾರಿ.

ತಿಲಮಾತ್ರವೂ ಭಕ್ತಿ ಇಲ್ಲದವ. ಹೀಗಾಗಿ ದೇವರ ಪೂಜೆಗೆ ತುಸು ಅಧಿಕಾರವೂ ಇಲ್ಲದವನಾತ. ಎಂದ ಮಾತ್ರಕ್ಕೆ ಭಗವಂತನ ಪೂಜೆಯನ್ನು ತಪ್ಪಿಸಲೂ ಸಾಧ್ಯವಿಲ್ಲ.

ಭಗವಂತನ ಪೂಜೆ ಅಗತ್ಯವಾದ ವಿಹಿತಕರ್ಮವಲ್ಲವೇ?.

ಶ್ರೀಮದ್ಭಗವತ್ಪಾದಾಚಾರ್ಯರ "ತಂತ್ರಸಾರಸಂಗ್ರಹ" ಗುರುಸಾರ್ವಭೌಮ ರಾದ ಶ್ರೀಜಯತೀರ್ಥರ "ಪದ್ಯಮಾಲಾ" ನಾರಾಯಣಪಂಡಿತಾಚಾರ್ಯರ "ಯೋಗದೀಪಿಕಾ" ಮುಂತಾದ ಗ್ರಂಥಗಳಲ್ಲಿ ಹೇಳಿದ ಪೂಜಾ ವಿಧಾನವನ್ನು ಇಲ್ಲಿ ತಿಳಿಯೋಣ.

ನಿದ್ರೆಯಿಂದ ಎಚ್ಚತ್ತ ಕೂಡಲೇ ಹರಿಯನ್ನು ಸ್ಮರಿಸಬೇಕು. ನಿದ್ರೆಯನ್ನು ಕೊಟ್ಟ ದೇವರು ಪ್ರಾಜ್ಞ.

ಆ ಪ್ರಾಜ್ಞನಿಂದ ಹೊರಬಿದ್ದ ವಿಶ್ವನೇ ಜೀವನ ಜಾಗರಕ್ಕೆ ಕಾರಣ. ವಿಶ್ವನು ವಾಸವಾಗಿರುವದು ಜೀವರ ಕಣ್ಣಿನಲ್ಲಿ.

ಇಲ್ಲಿಯವರೆಗೆ ಪ್ರಾಜ್ಞ ಜೀವನನ್ನು ಬಿಗಿಯಾಗಿ ಆಲಿಂಗಿಸಿ ಗಾಢವಾಗಿ ನಿದ್ರೆಕೊಟ್ಟಿದ್ದ. ಈಗ ಆ ಪ್ರಾಜ್ಞ ನನ್ನನ್ನು ಹೊರಕಳುಹಿದ.

"ಸತಃ ಆಗಚ್ಛಾಮಹೆ"

ಇನ್ನು ಮೇಲೆ ವೈಶ್ವಾನರನ ದಿವ್ಯಲೀಲಾರಂಭ. ಇದುವೇ ಜಾಗರಾವಸ್ಥೆ. ಬಳಿಕ

ಸ್ವಾಮಿನ್ ದಾಸೋಸ್ಮಿ ತೇ ನಿತ್ಯಂ ಪ್ರಿಯಂ ಕಿಂ ತೇ ಕರೋಮ್ಯಹಂ।
ಅಪ್ರಿಯೇ ಭವತೋ ನಾಥ ಮಾಗಾನ್ಮೇ ಮನ ಆದಿಕಂ"

ಎಂಬುದಾಗಿ ಕೈ ಮುಗಿದು, ಮೈ ಮರೆತು ದೇವರನ್ನು ಹಾಡಬೇಕು. ದೇವರನ್ನು ಬೇಡಬೇಕು.

ನಂತರ ಭಗವಾನ್ ಕಪಿಲರು ತನ್ನ ತಾಯಿ ದೇವಹೂತಿಗೆ ವಿವರಿಸಿದಂತೆ ಭಗವಂತನನ್ನು ಅಡಿಯಿಂದ ಮುಡಿಯವರೆಗೆ ಚಿಂತಿಸಬೇಕು.

ಮುಂದೆ ಧ್ಯಾನಸ್ನಾನ. ಚತುರ್ಭುಜ ಭಗವಂತ ತನ್ನ ತಲೆಯ ಮೇಲೆ ನಿಂತಿರುವನೆಂದು ಭಕ್ತಿಯಿಂದ ಸ್ಮರಿಸಬೇಕು.

ಆತನ ಪಾವನ ಪಾದಗಳಿಂದ ಹರಿದ ಪಾದಜಲವು, ಮೂರ್ಧನ್ಯ ನಾಡಿಯಿಂದ ಒಳಹೊಕ್ಕು ನಾಡಿಮೂರರಲ್ಲಿ ತುಂಬಿದೆ ಎಂದು ಭಾವಿಸಬೇಕು.

ಈ ಪಾದತೀರ್ಥವೇ ಒಳಗಣ ಮನ-ಇಂದ್ರಿಯಗಳ ಮಾಲಿನ್ಯವನ್ನು, ಹೊರಗಿನ ಮೈಲಿಗೆಯನ್ನು ತೊಳೆಯುವದು.

ಮೂರೂವರೆ ಕೋಟಿ ತೀರ್ಥಕ್ಕಿಂತಲೂ ಮಿಗಿಲಾಗಿ ಪವಿತ್ರವಾದುದು ಧ್ಯಾನದಿಂದ ಹರಿದ ಈ ಪಾದತೀರ್ಥ.

ಆಮೇಲೆ, ಭಕ್ತಿಗೆ ಬಾಗಿದ ಭಗವಂತ ಗಜೇಂದ್ರನನ್ನು ಮೋಕ್ಷಗೊಳಿಸಿದ ಉಪಾಖ್ಯಾನವನ್ನು ಸ್ಮರಿಸಬೇಕು.

ಶ್ರೀಮದ್ ರಾಘವೇಂದ್ರಸ್ವಾಮಿಗಳವರ ಪರಮಪ್ರಸಾದವೆನಿಸಿದ ಪ್ರಾತಃಸಂಕಲ್ಪಗದ್ಯವನ್ನು ಪಠಿಸದೇ ಒಂದೂ ದಿನ ಇರಬಾರದು.

ಸಮಗ್ರ ಸರ್ವಮೂಲದ ಪ್ರಧಾನಸಾರವನ್ನು ಸಂಕ್ಷಿಪ್ತವಾಗಿ ನಿರೂಪಿಸುವಲ್ಲಿ ಸಮರ್ಥವಾಗಿದೆ ಈ ಕೃತಿ. ಮಾಧವ ಮಧ್ವರನ್ನು ಮೆಚ್ಚಿಸುವ ಪುಟ್ಟನುಡಿ.

ಮುಂದೆ, ಸಮಗ್ರ ಸೃಷ್ಟಿಯ ಚಿಂತನ, ದೇಹಸ್ಥ ರೂಪಗಳ ಚಿಂತನ ಮಾಡಬೇಕು.

ಅಂದಂದು ಮಾಡುವ ಕರ್ಮಗಳೆಲ್ಲ ಗುರುದೇವತಾಂತಸ್ಥ ಮುಖ್ಯಪ್ರಾಣಾಂತರ್ಯಾಮಿ ಬಿಂಬರೂಪಿಯಾದ ಸಚ್ಚಿದಾನಂದಾತ್ಮ ಭಗವಂತನ ಪೂಜೆ ಎಂದು ಸಂಕಲ್ಪಿಸಬೇಕು.

ಬಳಿಕ ಸ್ನಾನವಿಲ್ಲದೇ ಹೂ ತೆಗೆದು, ಆಮೇಲೆ ಸ್ನಾನ, ಪ್ರಾತರಾಹ್ನಿಕ ಮುಗಿಸಿ, (ತುಲಸ್ಯಾದೇಃ ಪರ್ಯುಷಿತತ್ವೇಪಿ ದೋಷೋ ನಾಸ್ತಿ ಪೂ.ಕ. ಬಳಿಕ ಸ್ನಾನವಿಲ್ಲದೇ ಹೂ ತೆಗೆದು, ಆಮೇಲೆ ಸ್ನಾನ, ಪ್ರಾತರಾಹ್ನಿಕ ಮುಗಿಸಿ, (ತುಲಸ್ಯಾದೇಃ ಪರ್ಯುಷಿತತ್ವೇಪಿ ದೋಷೋ ನಾಸ್ತಿ ಪೂ.ಕ. ವಚನಾನುಸಾರ ತುಲಸಿ ಪರ್ಯುಷಿತವಾದರೂ ದೋಷವಿಲ್ಲದ ಕಾರಣ ಹಿಂದಿನ ದಿನ ತೆಗೆದ ತುಲಸಿಯಿಂದಲೇ ಪೂಜೆ ಮಾಡಬಹುದು.) ನಿರ್ಮಾಲ್ಯವಿಸರ್ಜನಪೂಜೆಯನ್ನು ಮಾಡಿ, ಪಾಠಪ್ರವಚನಾದಿಗಳನ್ನು ಮಾಡಬೇಕು.

ತುಲಸಿಯನ್ನು ತೆಗೆದು, ಮಧ್ಯಾಹ್ನ ಸ್ನಾನ ಮಾಡಿ ಆಹ್ನಿಕವನ್ನು ಮುಗಿಸಿ ಮಹಾಪೂಜೆಯನ್ನು ಮಾಡಬೇಕು.

ತುಲಸಿಯ ಆವಶ್ಯಕತೆ

ದಾಸರೆನ್ನುತ್ತಾರೆ. 'ಎಲ್ಲ ಸಾಧನವಿದ್ದು ತುಲಸಿ ಇಲ್ಲದ ಪೂಜೆ ಒಲ್ಲನೋ ಹರಿ ತಾ ಕೊಳ್ಳನೋ'. ಇದರಭಿಪ್ರಾಯವನ್ನು ನಾವು ಹೀಗೆ ತಿಳಿಯಬಹುದು.

ದೇವರಲ್ಲಿ ದೇವತೆಗಳಲ್ಲಿ ಭಕ್ತಿ, ಸರ್ವೋತ್ತಮತ್ವ, ಜೀವೋತ್ತಮತ್ವ, ತಾರತಮ್ಯಗಳ ಜ್ಞಾನ,

ದೇವರ ಸರ್ವಕರ್ತೃತ್ವ, ಸ್ವತಂತ್ರತ್ವ, ಜೀವರ ಪಾರತಂತ್ರ್ಯ, ಸರ್ವಪದಾರ್ಥಗಳಲ್ಲಿ ಭಗವಂತನ ವ್ಯಾಪ್ತಿ, ಸ್ವಾಮಿತ್ವ ಮುಂತಾದವುಗಳ ಅನುಸಂಧಾನ,

ಪ್ರತಿಮೆಯಲ್ಲಿ ವಾಯು, ರಮಾ ಎಂಬ ಎರಡು ಗೋಲಕಗಳ ಚಿಂತನ,

ನಾರಾಯಣಮಂತ್ರ, ವಿಷ್ಣುಸಹಸ್ರನಾಮ, ಪುರುಷಸೂಕ್ತ ಮುಂತಾದ ಮಂತ್ರಗಳು ಪೂಜೆಗೆ ಅತಿ ಪ್ರಧಾನವಾದ ಅಂಗಗಳು. ಇವು ಅಂತರ್ ಅಂಗಗಳು.

ಬಹಿರ್ ಅಂಗಗಳಲ್ಲಿ ಸರ್ವೋತ್ತಮವಾದುದು ತುಲಸಿ.

ಹಾಲು, ಮೊಸರು, ಸ್ವಾದೂದಕ, ಗಂಧ, ವಸ್ತ್ರ ಆಭರಣ, ಧೂಪ, ದೀಪ ಮುಂತಾದ ಉಳಿದೆಲ್ಲ ಉಪಕರಣಗಳಿಗಿಂತಲೂ ತುಲಸಿಯು ಅತಿಶ್ರೇಷ್ಠವಾದುದು.

ಹಿಂದೆ ಹೇಳಿದ ಎಲ್ಲ ಉಪಕರಣಗಳಿದ್ದರೂ ತುಲಸಿ ಇಲ್ಲದ ಪೂಜೆಯನ್ನು ಭಗವಂತ ಎಂದಿಗೂ ಒಲ್ಲ.

ಹಾರದಲ್ಲಿ ನವರತ್ನಗಳಿದ್ದರೂ ತುಲಸಿ ಇಲ್ಲದಿದ್ದರೆ ಅದು ವೈಜಯಂತಿಯಲ್ಲ.

ತುಲಸಿದಲವಿಲ್ಲದಿದ್ದರೆ ಎಲೆಗಳಿಂದ ಪೂಜಿಸಬಹುದು. ಅದೂ ಇಲ್ಲದಿದ್ದರೆ, ಒಣಗಿದ ತುಲಸಿಯಿಂದ, ಅಥವಾ ಮೂರು ಸಲ ತೊಳೆದ ನಿರ್ಮಾಲ್ಯ ತುಲಸಿಯಿಂದ, ಅಥವಾ ತುಲಸಿಯ ಕಾಷ್ಠ, ಮೃತ್ತಿಕೆಗಳಿಂದಲೂ ಪೂಜಿಸಬಹುದು.

ಕೊನೆಯ ಪಕ್ಷ 'ತುಲಸೀ' 'ತುಲಸೀ' ಎಂದು ಸ್ಮರಣೆಯಾದರೂ ಮಾಡಿ ಜಲಜಾಕ್ಷನ ಅರ್ಚಿಸಿರಯ್ಯ"

ತುಲಸ್ಯಾಹರಣ- ತುಲಸಿ ತೆಗೆಯುವದಕ್ಕೆ ನಿಷಿದ್ಧವಾದ ಕಾಲ. ಮಂಗಲ, ಶುಕ್ರ ಭಾನುವಾರಗಳು. ವ್ಯತೀಪಾತ, ವೈಧೃತಿ, ಪೂರ್ಣಿಮಾ, ಅಮಾವಾಸ್ಯಾ, ಸಂಕ್ರಾಂತಿ, ಯುಗಾದಿ, ಮಧ್ಯಾಹ್ನದ ನಂತರದ ಕಾಲ ಹಾಗೂ ದ್ವಾದಶೀತಿಥಿ.

ಈ ಎಲ್ಲ ಸಮಯಗಳು ನಿಷಿದ್ಧ. ಕೆಲವು ಸ್ಮೃತಿವಾಕ್ಯಗಳ ಅನುಸಾರವಾಗಿ ಮೇಲೆ ಹೇಳಿದ ಎಲ್ಲ ಸಮಯವು ವಿಷ್ಣುಪೂಜೆಗಾಗಿ ತುಲಸಿ ತೆಗೆಯುವದಕ್ಕೆ ನಿಷಿದ್ಧವಾಗದಿದ್ದರೂ ದ್ವಾದಶೀತಿಥಿ ಮಾತ್ರ ನಿಷಿದ್ಧ. (ಕೆಲವರ ಪ್ರಕಾರ ದ್ವಾದಶೀತಿಥಿಯೂ ನಿಷಿದ್ಧವಲ್ಲ.)

ತುಲಸಿ ತೆಗೆಯುವ ಕ್ರಮ

ಮೊದಲು ಪ್ರಾರ್ಥನೆ.

'ಶ್ರೀಯಃ ಶ್ರಿಯೇ...'- 'ಹೇ ತುಲಸಿ ನೀನು ನಾರಾಯಣ ಪ್ರಿಯಳು. ಸಿರಿಗೂ ಮೆಚ್ಚಿನವಳು. ಸಿರಿಯ ಸನ್ನಿಧಾನವೂ ನಿನ್ನಲ್ಲಿದೆ. ನಾನು ಭಕ್ತಿಯಿಂದ ಸಲ್ಲಿಸುವ ಅರ್ಘ್ಯವನ್ನು ಪ್ರೀತಿಯಿಂದ ಸ್ವೀಕರಿಸು.'

'ಮನಃಪ್ರಸಾದ...'- 'ಹೇ ತುಲಸಿ, ಮನಸ್ಸಿಗೆ ಪ್ರಸನ್ನತೆಯನ್ನು ನೀಡುವ ಓ ಮಹಾತಾಯಿ, ಓ ಸುಖಸೌಭಾಗ್ಯವನ್ನು ಬೆಳಿಸುವ ದೇವಿ, ನನ್ನ ಮನದ ಪೀಡೆಯನ್ನು ದೇಹದ ರೋಗವನ್ನು ಕಳೆದು ಹಾಕು. ನಾನು ನಿನ್ನನ್ನು ವಂದಿಸುವೆ.'

'ಶ್ರೀಯಂ ದೇಹಿ...'- 'ಓ ತುಲಸಿ, ಸಿರಿ ಯಶಸ್ಸು, ಕೀರ್ತಿ, ಆಯುಸ್ಸು, ಸುಖ, ಬಲ, ಸಂತೋಷ, ಧರ್ಮಗಳನ್ನು ನನಗೆ ದಯಪಾಲಿಸು.'

'ಪ್ರಸೀದ ಮಮ...'- 'ಓ ದೇವೋತ್ತಮಳೇ, ಹರಿಪ್ರಿಯಳೇ, ಹಾಲುಗಡಲು ಕಡೆದಾಗ ಪ್ರಕಟನಾದ ಧನ್ವಂತರಿಯ ಆನಂದಾಶ್ರುಗಳಿಂದ ಉದ್ಭವಿಸಿದವಳೇ, ನೀನು ಪ್ರಸನ್ನಳಾಗು.'

'ತುಲಸ್ಯಮೃತ...'- 'ಓ ತುಲಸಿ, ನೀನು ಅಮೃತಜನ್ಮಳು. ನೀನು ಎಂದೆಂದಿಗೂ ಹರಿಪ್ರಿಯಳು. ದೇವರಿಗಾಗಿ ನಿನ್ನ ದಲಗಳನ್ನು ತೆಗೆಯುವೆ. ವರನೀಡು.'

'**ಮೋಕ್ಷೈಕಹೇತೋಃ-...**' 'ಓ ತುಲಸಿ, ಮೋಕ್ಷವನ್ನು ದಯಪಾಲಿಸುವ ಭಗವಂತನ ಆರಾಧನೆಗಾಗಿ ನಿನ್ನ ದಲಗಳನ್ನು ತೆಗೆಯುವೆ. ದಯೆಯಿಂದ ಕ್ಷಮಿಸು.'

ಹೀಗೆಂದು ಪ್ರಾರ್ಥಿಸುತ್ತ ತುಲಸಿಯ ಪಾದಗಳಿಗೆ ನೀರೆರೆದು, ತುಲಸಿಗೆ ಉಗುರು ತಾಕಿಸದೇ ದಲಗಳನ್ನು ತೆಗೆಯಬೇಕು.

ಅಗ್ರ್ಯೋದಕ- ಮಧ್ಯಾಹ್ನದ ಸ್ನಾನವಾದ ಬಳಿಕ ಕಲಶಗಳಲ್ಲಿ ವಸ್ತ್ರದಿಂದ ನೀರನ್ನು ಶೋಧಿಸಿ, ನಾರಾಯಣಮಂತ್ರದಿಂದ ತುಂಬಬೇಕು.

ಕಲಶದ ಮುಖವನ್ನು ಬಟ್ಟೆಯಿಂದ ಮುಚ್ಚಿ ಬಲಗೈಯಲ್ಲಿ ಇಲ್ಲವೇ ತಲೆಯ ಮೇಲಿಟ್ಟುಕೊಂಡು ತರಬೇಕು.

ತರುವಾಗ ಮನುಷ್ಯರ ನೆರಳು ಬೀಳದಂತೆ, ನೀರಿಗೆ ಉಗುರು ತಾಕದಂತೆ ಎಚ್ಚರ ವಹಿಸಬೇಕು.

ಮನೆಗೆ ತಂದ ಅಗ್ರ್ಯೋದಕಕಲಶವನ್ನು ಶುದ್ಧದೇಶದಲ್ಲಿ ಇಡಬೇಕು. ಕೈಕಾಲು ತೊಳೆದು ದೇವರ ಮನೆಯ ಸಮೀಪಕ್ಕೆ ಬರಬೇಕು.

ದ್ವಾರಪಾಲನಮನ

ಅಖಿಲಾಂಡಕೋಟಿಬ್ರಹ್ಮಾಂಡನಾಯಕನಾದ ಭಗವಂತನ ಪವಿತ್ರಕ್ಷೇತ್ರವೆನಿಸುವ ಪಾವನ ಪೂಜಾಗೃಹದಲ್ಲಿ ಪ್ರವೇಶಮಾಡಬೇಕು.

ಆ ದೇವಗೃಹಕ್ಕೆ ನಾಲ್ಕು ಪ್ರಾಕಾರಗಳು. ನಾಲ್ಕು ಪ್ರಾಕಾರಗಳಿಗೆ ನಾಲ್ಕು ದಿಕ್ಕುಗಳಲ್ಲಿ ಒಂದೊಂದು ದ್ವಾರಗಳು.

ಹೀಗೆ ಒಟ್ಟು ಹದಿನಾರು ದ್ವಾರಗಳು. ಆ ಎಲ್ಲ ದ್ವಾರಗಳಿಗೆ ಪಾಲಕದೇವತೆಗಳಿರುವರು.

ದ್ವಾರ	೧)	೨)	೩)	೪)
ಪೂರ್ವ	ಶ್ರೀ	ದ್ಯು(ಭಾರತೀ)	ಪ್ರಾಣ-ಚಕ್ಷು-ಸೂರ್ಯ	ಜಯ-ವಿಜಯ
ದಕ್ಷಿಣ	ಶ್ರೀ	ದಿಕ್(ಭಾರತೀ)	ವ್ಯಾನ-ಶ್ರೋತ್ರ-ಸೋಮ	ಬಲ-ಪ್ರಬಲ
ಪಶ್ಚಿಮ	ಶ್ರೀ	ಪೃಥಿವೀ(ಶ್ರೀ)	ಅಪಾನ-ವಾಕ್-ಅಗ್ನಿ	ನಂದ-ಸುನಂದ
ಉತ್ತರ	ಶ್ರೀ	ವಿದ್ಯುತ್(ಭಾರತೀ)	ಸಮಾನ-ಮನ-ಇಂದ್ರ	ಕುಮುದ-ಕುಮುದಾಕ್ಷ

ಈ ದೇವತೆಗಳು ಭಗವಂತನಿರುವ ನಮ್ಮ ಹೃನ್ಮಂದಿರಕ್ಕೂ ದ್ವಾರಪಾಲರಾಗಿದ್ದಾರೆ.

ಈ ಎಲ್ಲ ಮಹಾದೇವತೆಗಳನ್ನು ಹಾಗೂ ಉಪದೇವತೆಗಳನ್ನು ಮನಸಾರೆ ಸಾಷ್ಟಾಂಗವಾಗಿ ನಮಿಸಬೇಕು.

''ಅಖಿಲಾಂಡಕೋಟಿಬ್ರಹ್ಮಾಂಡನಾಯಕ ಸರ್ವೋತ್ತಮನಾದ ದೇವರ ಸನ್ನಿಧಾನವಿರುವ ದೇವಗೃಹದಲ್ಲಿ ಪ್ರವೇಶಿಸುವವರಿದ್ದೇವೆ.

ಅಂಥಲ್ಲಿ ಪ್ರವೇಶಿಸಲು ನಮಗೇನಧಿಕಾರ? ನಾವು ಎಷ್ಟರವರು? ಹೀನಮಾನವಯೋನಿಯಲ್ಲಿ ಹುಟ್ಟಿದ ನಾವು ದಿವ್ಯೋತ್ತಮನಾದ ಭಗವಂತನ ಭವನದಲ್ಲಿ ಹೆಜ್ಜೆ ಇಡಲು ದ್ವಾರಪಾಲರ ಅನುಜ್ಞೆಬೇಡವೇ?

ಕಾರಣ ಆ ದೇವತೆಗಳನ್ನು "ದಯಮಾಡಿ ಅನುಜ್ಞೆಯನ್ನು ನೀಡಿರಿ" ಎಂದಾಗಿ ಭಕ್ತಿಯಿಂದ ಪ್ರಾರ್ಥಿಸಬೇಕು.

ಅವರೆಲ್ಲರು ಭಗವಂತನಿಗೆ ಅತಿಸನಿಹದ ಭಕ್ತರು. ಅವರು ಭಗವಂತನ ಬಗೆಯನ್ನು ಬಲ್ಲವರು. ದೇವರ ಇಂಗಿತವನ್ನು ತಿಳಿದು ಅತ್ಯಲ್ಪ ಭಕ್ತರಾದ ನಮ್ಮ ಮೇಲೆ ಅನುಗ್ರಹಿಸುವರು ಹಾಗೂ ಅನುಮತಿಸುವರು ಎಂದು ತಿಳಿಯಬೇಕು.

"ವಾಯವಾಯಾಹಿ...'...'- ಈ ಮಂತ್ರದಿಂದ ದೇವಮಂದಿರದ ಬಾಗಿಲನ್ನು ತೆರೆಯಬೇಕು. (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ)

'ವಂದೇ ವಿಷ್ಣುಂ...'- ಭಗವಂತ ಶ್ರೀ ಭೂ ದೇವಿಯರು ಬ್ರಹ್ಮ ವಾಯು ಸರಸ್ವತೀ ಭಾರತೀ ಗರುಡ ಶೇಷ ರುದ್ರ ಸುಪರ್ಣೀ ವಾರುಣೀ ಪಾರ್ವತೀ ಇಂದ್ರ ಕಾಮ ಮುಂತಾದ ಸಕಲ ದೇವತೆಗಳನ್ನು, ಎಲ್ಲ ಗುರುಗಳನ್ನು ವಂದಿಸಬೇಕು.

ನಂತರ ಮೂರು ಬಾರಿ ಚಪ್ಪಾಳೆ ತಟ್ಟಿ, ಹೊಸ್ತಿಲನ್ನು ಕಾಲಿನಿಂದ ಮೆಟ್ಟದೆ, ಬಲಗಾಲಿನಿಂದ ಒಳಗೆ ಪ್ರವೇಶಿಸಬೇಕು.

'ಯಚ್ಚ ಕಿಂಚಿಜ್ಜಗತ್ಸರ್ವಂ...'- (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಪ್ರವೇಶಿಸುವಾಗ ಈ ಮಂತ್ರವನ್ನು ಪಠಿಸಿ ಅನುಸಂಧಾನಗೈಯಬೇಕು.

ದೇವರು ಈ ದೇಗುಲದ ಒಳಗೆ ಎಲ್ಲೆಡೆ ತುಂಬಿದ್ದಾನೆ.

ಆತ - ನಿಂತ ನೆಲ, ಸುತ್ತಣ ಗೋಡೆ, ಹೊರಗಣ ಬಾಗಿಲು, ಏರುವ ವೇದಿಕೆ, ಸುಂದರ ಮಂಟಪ, ಎತ್ತರದ ಸ್ತಂಭ, ನಿರ್ಮಲ ನೀರು, ಬಳಸುವ ಪಾತ್ರೆ, ಅರ್ಚಿಸುವ ಹೂ, ಅರ್ಪಿಸುವ ಹಣ್ಣು ಪೂಸುವ ಗಂಧ, ಬೆಳಗುವ ದೀಪ, ಸೂಸುವ ಧೂಪ, ಮಾಡುವ ನೈವೇದ್ಯ ಹಾಗೂ ಅರ್ಚನೀಯ ಪ್ರತಿಮೆ, ಅದಕ್ಕೂ ಮಿಗಿಲಾಗಿ ಅರ್ಚಕನ ಅಂಗಾಂಗಗಳು ಹಾಗೂ ಹೃದಯಾಂತರಂಗ ಇವುಗಳಲ್ಲೆಲ್ಲ ಅಂತರ್ಯಾಮಿಯಾಗಿ ಇರುವನು.

ಇದೆಲ್ಲ ಅವನ ಅಧೀನ. ಇದಕ್ಕೆಲ್ಲ ಅವನೇ ನಿಯಾಮಕ. ಇದನ್ನೆಲ್ಲ ಅವನೇ ನಿರ್ಮಿಸಿದವ. ಅಂತೆಯೇ ಅವನಿಗಾಗಿ ಇದೆಲ್ಲ ಎಂಬ ಅನುಸಂಧಾನ ಪೂಜೆಯ ಪ್ರಧಾನವಾದ ಅಂಗ.

'ಅಗ್ನಿನಾಗ್ನಿಃ ಸಮಿಧ್ಯತೇ...'- (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಒಳಗೆ ಹೋಗುತ್ತಲೇ ಈ ಮಂತ್ರದಿಂದ ದೀಪವನ್ನು ಬೆಳಗಬೇಕು.

ದೀಪದ ಅಭಿಮಾನಿಗಳಾದ ನಕ್ಷತ್ರದೇವತೆಗಳು ಬೆಳಗುವರು. ಮೇಲಾಗಿ ತ್ರೈಲೋಕ್ಯದ ಆಚೆಗೂ ಈಚೆಗೂ ಬೆಳಕು ಬೀರುವ ಲಕ್ಷ್ಮೀನಾರಾಯಣರು ದೀಪದಲ್ಲಿ ಇದ್ದು ಈ ಮಂದಿರವನ್ನೂ ಬೆಳಗುವರು ಎಂದು ಸ್ಮರಿಸಿ ಅವರನ್ನು ವಂದಿಸಬೇಕು.

ವಿಘ್ನನಿವಾರಣ-ಭೂತೋಚ್ಚಾಟನ

ದ್ಯುಲೋಕ, ಅಂತರಿಕ್ಷ ಹಾಗೂ ಭೂಮಿಗಳಲ್ಲಿ ಬಗೆಬಗೆಯ ವಿಘ್ನಗಳು ಇರುವ ಸಂಭವವಿದೆ. ದ್ಯುಲೋಕಸ್ಥ ವಿಘ್ನಗಳನ್ನು ಕಣ್ನೋಟದಿಂದ, ಅಂತರಿಕ್ಷದಲ್ಲಿರುವ ವಿಘ್ನಗಳನ್ನು ಹೂ ಚೆಲ್ಲಿ, ಭೂಮಿಯಲ್ಲಿರುವ ವಿಘ್ನಗಳನ್ನು ಕಾಲಿನ ಹಿಂಬಡವನ್ನು ಮೂರು ಸಲ ನೆಲಕ್ಕೆ ಬಡಿದು ಉಚ್ಚಾಟನೆ ಮಾಡಬೇಕು.

'ಅಪಸರ್ಪಂತು...' ಎಂಬ ಮಂತ್ರದಿಂದ ಮೂರು ಬಾರಿ ಚಪ್ಪಾಳೆ ತಟ್ಟಿ ಭೂತಗಳ ನಿವಾರಣೆ ಮಾಡಬೇಕು.

ನಾರಾಚ ಮುದ್ರೆಯಿಂದ ಎಲ್ಲ ದಿಕ್ಕುಗಳನ್ನು ಬಂಧಿಸಬೇಕು.

ಸಾಮಾನ್ಯವಾಗಿ ಸತ್ಕಾರ್ಯಗಳಿಗೆ ಬಗೆಬಗೆಯ ವಿಘ್ನಗಳು ನಿಶ್ಚಿತ.

ಎದರುಗಳನ್ನು ತಂದಿಡುವವರು ಅಸುರರು, ಭೂತರು, ಪಿಶಾಚರು. ಅದರಲ್ಲೂ ದೇವತಾರ್ಚನೆ ಮುಂತಾದ ಸತ್ಕರ್ಮಗಳಿಗೆ ಸಾಕಷ್ಟು ವಿಘ್ನಕರ್ತರು ಇರುತ್ತಾರೆ.

ಅವರನ್ನು ಪರಿಹರಿಸಿಕೊಳ್ಳದಿದ್ದರೆ ದೇವತಾರ್ಚನೆಗೆ ವಿಘ್ನವಾಗುವದು ನಿಶ್ಚಿತ. ಕಾರಣ ರುದ್ರದೇವ, ತದಂತರ್ಯಾಮಿ ವಾಯು, ತದಂತರ್ಯಾಮಿ ನೃಸಿಂಹದೇವರನ್ನು ವಿಘ್ನಗಳ ಪರಿಹಾರಕ್ಕಾಗಿ ಪ್ರಾರ್ಥಿಸಬೇಕು.

ಎಲ್ಲ ವಿಘ್ನಗಳ ನಿವಾರಣೆಗಾಗಿ 'ಪಾಂತ್ವಸ್ಮಾನ್' ಎಂಬ ಎರಡು ಶ್ಲೋಕಗಳನ್ನು ಪಠಿಸಬೇಕು. ರುದ್ರದೇವರು ತದಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ನರಸಿಂಹ ಈ ವಿಘ್ನಗಳನ್ನೆಲ್ಲ ಪರಿಹರಿಸಿ ಅರ್ಚನೆಗೆ ಅನುಕೂಲ ಮಾಡುವನು ಎಂದು ಅನುಸಂಧಾನಿಸಬೇಕು.

ಪ್ರಾರ್ಥನೆ

'ಲಕ್ಷ್ಮೀಕಾಂತ ನಮಸ್ತೇ...' ''ಓ ಇಡಿಯ ಜಗತ್ತಿನೊಡೆಯ! ಓಪ್ಪೋ ಸಿರಿಯರಸ! ಭಗವನ್! ನಿನಗೆ ನಮನ. ಸ್ವಾಮಿನ್! ಸಂಸಾರಸಾಗರದಿಂದ ನಾನು ಬಳಲಿ ಬೆಂಡಾಗಿರುವೆ. ಓ ಸರ್ವೇಶ! ಸರ್ವೋತ್ತಮ! ಇಂದು ನಾ ನಿನ್ನನ್ನು ಪೂಜಿಸುವೆ. ನನ್ನ ಮೇಲೆ ದಯೆತೋರು.

'ತ್ವಾಮೇವ ಶರಣಂ...'- 'ಓ ಶರಣಾಗತವತ್ಸಲ! ನೀನೇ ನನಗೆ ಶರಣು. ನನಗಿನ್ನಾರು ಗತಿಯಿಲ್ಲ. ಓ ಫಲಪ್ರದವಾಸುದೇವ! ನಾ ಮಾಡುವ ಪೂಜೆಯನ್ನು ಸಫಲಗೊಳಿಸು.

ಸಿರಿಕರಪೂಜಿತನೇ! ನಾನು (ಪಾಮರ, ಅಜ್ಞ, ಮೂಢ, ಕಾಮಾದಿಗಳಿಂದ ಬೆಂದವ, ಅಹಂಕಾರಿ, ನೃಶಂಸ, ಭಕ್ತಿಹೀನ,) ಪೂಜೆಗೈಯಲು ಏನೂ ಯೋಗ್ಯತೆ ಇಲ್ಲದವ. ನನ್ನನ್ನು ಯೋಗ್ಯನನ್ನು ಮಾಡು, ದಯೆತೋರು'

'ಕಾಯಿಕಾನ್ ವಾಚಿಕಾನ್...'- ಬುದ್ಧಿಪೂರ್ವಕವೂ, ಅಬುದ್ಧಿಪೂರ್ವಕವೂ, (ತಿಳಿದೂ, ತಿಳಿಯದೆಯೂ) ಅಶಕ್ತಿಯಿಂದಲೂ, ಆಲಸ್ಯದಿಂದಲೂ, ದುರ್ಭಾವನೆಯಿಂದಲೂ ನಾನು ಮಾಡಿದ ದೈಹಿಕ ವಾಚಿಕ ಮಾನಸಿಕ ಅಪರಾಧಗಳನ್ನು ಕ್ಷಮಿಸು.

ಅದರಲ್ಲೂ ವಿಷ್ಣುವೈಷ್ಣವ ದ್ವೇಷದಿಂದ ಆದ ಹಾಗೂ ಅಂಥ ದ್ವೇಷವನ್ನು ನನ್ನಿಂದ ಮಾಡಿಸುವ ಪಾಪಗಳನ್ನು ಸುಟ್ಟು ಬೂದಿಮಾಡು.

'ಅಪರಾಧಸಹಸ್ರಾಣಿ...'- ಇರುಳು ಹಗಲು ಸಾವಿರ ಸಾವಿರ ಅಪರಾಧಗಳನ್ನು ನಾನು ಮಾಡುತ್ತಲಿರುವೆ. ಅವನ್ನೆಲ್ಲ ಕ್ಷಮಿಸು.

'ಅನ್ಯಥಾ ಶರಣಂ ನಾಸ್ತಿ...'- ನನಗೆ ಬೇರೊಬ್ಬರು ಗತಿಯಿಲ್ಲ. ನೀನೇ ಎನಗೆ ಶರಣು. ಆದುದರಿಂದ ಕರುಣೆಯಿಂದ ನನ್ನನ್ನು ಕಾಪಾಡು, ಕಾಪಾಡು.

ಹೀಗೆ ಪುನಃ ಪುನಃ ತನ್ನ ದೋಷಗಳನ್ನು ವಿಜ್ಞಾಪಿಸಿ ಕ್ಷಮಿಸಲು ಪ್ರಾರ್ಥಿಸಬೇಕು.

ದಯೆಯ ಕಡಲು ಭಗವಂತ. ವಿನಯದಿಂದ ಬಾಗಿ ಬೇಡಿದವರ ಪಾಪಗಳನ್ನು ಪರಿಹರಿಸುವನು. ಸಂದೇಹವಿಲ್ಲ.

ಮಾತ್ರ, ಪ್ರಾರ್ಥನೆಯ ಹಿನ್ನೆಲೆಯಲ್ಲಿ ಆರ್ತತೆಯ ಆಳವಿರಬೇಕು. ಪ್ರಾಮಾಣಿಕ ಉದ್ಧಾರಾಕಾಂಕ್ಷೆ ಇರಬೇಕು.

ನಾಲಿಗೆಯ ಭಾಷೆ ಸಾಲದು; ಮನಸ್ಸಿನ ಭಾವ ಬೇಕು. ಕೆಲವರು ಮಂತ್ರದಲ್ಲಿ ಮಾತ್ರ ಪಂಡಿತರು ಮನಸ್ಸಿನಲ್ಲಿ ಅಗಾಧರಲ್ಲ. (ಕೆಲವರಿಗೆ ಮನಸ್ಸೂ ಇಲ್ಲ ಮಂತ್ರವೂ ಇಲ್ಲ.)

ಮನುಷ್ಯಗಂಧ ನಿವಾರಣ

ನಾವೆಲ್ಲರೂ ಮಾನವರು. ನಮ್ಮ ಶರೀರ ಮರ್ತ್ಯ, ದುರ್ಗಂಧಿ, ಕೊಳೆ ತುಂಬಿಕೊಂಡದ್ದು.

ಭಗವಂತ ಅಪ್ರಾಕೃತ, 'ಪುಣ್ಯೋ ಗಂಧಃ'. ಪರಮಾತ್ಮನೇ ಭಾಗ್ಯಸ್ವರೂಪ. ಅಂಥ ದೇವರ ಸನಿಹದಲ್ಲಿ ನಮ್ಮಂಥವರು ಹೋಗುವದು ಮಹಾಪರಾಧ.

ನಿಯಮದ ಪ್ರಕಾರ ಸಾಮಾನ್ಯ ದೇವತೆಗಳೇ ದುರ್ಗಂಧಿ ಮರ್ತ್ಯರಿಂದ ದೂರವಿರುವರು ಎಂದಮೇಲೆ ದೇವತಾಚೂಡಾಮಣಿಯಾದ ಭಗವಂತ ತೀರದೂರವಿರುವನು.

ಹಾಗಿದ್ದರೂ ನಾವು ದೇವರ ಸಮೀಪಕ್ಕೆ ಹೋಗದೇ ದೇವರನ್ನು ಪೂಜಿಸಲು ಸಾಧ್ಯವಿಲ್ಲ.

ಆದ್ದರಿಂದ ಭಗವಂತನಿಗೆ ನಾವು ಕ್ಷಮೆಯನ್ನು ಯಾಚಿಸಬೇಕು.

'ತೇಭ್ಯೋಹ ವೈ...'

'ಯೇಭ್ಯೋ ಮಾತಾ...'

'ಏವಾ ಪಿತ್ರೇ...' (ಈ ಮೂರರ ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ)

'ಮಾನುಷೋ...' ಎಂಬ ಮಂತ್ರಗಳನ್ನು ಪಠಿಸಬೇಕು.

ದುರ್ಗಂಧಪದಾರ್ಥದಲ್ಲಿ ಇದ್ದರೂ ದೇವರಿಗೆ ಕೆಟ್ಟ ವಾಸನೆಯಿಂದ ದುಃಖವಿಲ್ಲ.

ಹೀಗೆಂದ ಮಾತ್ರಕ್ಕೆ ದುರ್ಗಂಧಗಳ ಮಧ್ಯದಲ್ಲಿ ಇಡುವದು ಕ್ಷಮ್ಯವಲ್ಲ. ಆದ್ದರಿಂದ ಈ ಪ್ರಾರ್ಥನೆ.

ಬಳಿಕ ದೇವರಿಗೂ ನಮಗೂ ಮಧ್ಯದಲ್ಲಿ ಜವನಿಕೆಯನ್ನು (ತೆರೆಯನ್ನು) ಕಲ್ಪಿಸಬೇಕು. ನಂತರ ವೇದಿಕೆಯನ್ನು ಬರಿಕೊಡುವದು.

ಮುಂದೆ ಬ್ರಹ್ಮಪಾರಸ್ತವವನ್ನು ಪಠಿಸಬೇಕು. ಕಂಡುಮುನಿಗಳು ಕಂಡ ಸ್ತುತಿ ಅದು. ಅಮೋಘವಾದುದು.

ಈ ಸ್ತವನದಿಂದ ಭಗವಂತನಿಗೆ ಅಪಾರ ಮೆಚ್ಚುಗೆಯಂತೆ. ಅಂತೆಯೇ ಇದನ್ನು ಭಕ್ತಿಯಿಂದ ಪಠಿಸಿದ ಮಾತ್ರಕ್ಕೆ ದೇವರು ತುಷ್ಟನಾಗಿ ಬ್ರಹ್ಮಹತ್ಯೆಯಂಥ ಮಹಾಪಾತಕವನ್ನು ಹೊಡೆದೋಡಿಸುವನು.

ಈ ಸ್ತುತಿ ಮನುಷ್ಯನಲ್ಲಿರುವ ರಾಗ, ದ್ವೇಷ, ಅಸೂಯೆ, ಅಹಂಕಾರ, ಮೋಹ, ಮಮತೆ ಮುಂತಾದವನ್ನು ದೂರಮಾಡುವದರಲ್ಲಿ ಬಲು ಸಮರ್ಥವಾಗಿದೆ.

ಇದು ದೇವರ ಆರಾಧನೆಯ ಮುಖ್ಯಸಾಧನ. ಇದುವೇ ಪರಮಸಿದ್ಧಿಯ ತೀರ ಮುಖ್ಯಕಾರಣ.

ಇದನ್ನು ಪಠಿಸದವ ಪೂಜೆಗೆ ಅಧಿಕಾರಿಯಲ್ಲ. ಇದನ್ನು ಜಪಿಸಿ, ದೋಷಮುಕ್ತನಾಗಿ ಪೂಜಿಸಬೇಕು. ದೇವರಿಗೆ ಹೆಚ್ಚಿನ ಮೆಚ್ಚುಗೆ.

ಬ್ರಹ್ಮಪಾರಸ್ತೋತ್ರದ ಅರ್ಥ

'ಬ್ರಹ್ಮಪಾರಂ ಮುನೇ...'- ಬ್ರಹ್ಮರುದ್ರಾದಿಗಳ ಒಡೆಯನಾದ ದೇವ ಕೇಶವನನ್ನು ಮೆಚ್ಚಿಸಿದ ಕಂಡುಮುನಿಗಳು ಜಪಿಸಿದ ಬ್ರಹ್ಮಪಾರವೆಂಬ ಪರಮಸ್ತವವನ್ನು ಶ್ರವಣ ಮಾಡಲು ಇಚ್ಛಿಸುತ್ತೇವೆ.

'ಪಾರಃ ಪರಂ ವಿಷ್ಣುಃ...'- (ಪರಂ (ತತ್ತ್ವಂ) ಪಾರೋ ವಿಷ್ಣುಃ) ವಿಶ್ವದ ಪರತತ್ತ್ವವೇ ಪರಿಪೂರ್ಣ ವಿಷ್ಣುವು. (ಅಪಾರಪಾರಃ) ಇವನ ಪೂರ್ಣತೆಗೆ ಪರಿಮಿತಿಯಿಲ್ಲ. (ಪರಾಣಾಮಪಿ ಪರಃ ಪಾರಪಾರಃ) ದೇವತೋತ್ತಮರಾದ ಬ್ರಹ್ಮರುದ್ರಾದಿಗಳನ್ನು ಭವದ ಕಡಲಿನ ದಡಕ್ಕೆ ಪಾರಗಾಣಿಸುವ ದೊರೆ ಈತ.

(ಸಃ ಬ್ರಹ್ಮಪಾರಃ) ಈ ಗುಣಪೂರ್ಣನೇ ಸಂಸಾರಸಾಗರದ ಆಚೆತೀರ. (ಪರ(ತ್ರ)ಪಾರಭೂತಃ) ಈತನೇ ಉತ್ತಮತ್ವದ ಸಾ ಕಾಷ್ಠಾ ಸಾ ಪರಾ ಗತಿಃ. (ಪರೇಭ್ಯಃ ಪರಃ ಪರಮಾರ್ಥರೂಪೀ) ಏಕಾಂತಭಕ್ತರೆನಿಸಿದ ಉತ್ತಮರಿಗೆ ಲೋಕಾತೀತ ಪರಮಪುರುಷಾರ್ಥ. ಇಷ್ಟತಮ ಹೆದ್ದೈವ.

'ಸ ಕಾರಣಂ ಕಾರಣತಃ...'- (ಸಃ ಕಾರಣಂ) ಈತ ವಿಶ್ವದ ಕಾರ್ಯಗಳಿಗೆ ಕಾರಣ. (ಕಾರಣತಃ ಅಪಿ ತತಃ) ವಿಶ್ವದ ಕಾರ್ಯಗಳಿಗೆ ಕಾರಣವೆಂದು ಕಂಡವುಗಳಿಗಿಂತಲೂ ವ್ಯಾಪ್ತನಾಗಿರುವ. (ತಸ್ಯಾಪಿ ಹೇತುಃ) ಆ ಕಾರಣಗಳಿಗೂ ಇವನೇ ಕಾರಣ. (ಪರಹೇತುಹೇತುಃ) ಇದೆಲ್ಲದಕ್ಕೂ ಕಾರಣವಾದ ಸಿರಿಗೂ ಕಾರಣ.

(ಸಃ ಹಿ ಕಾರ್ಯೇಷು (ಕರ್ತವ್ಯೇಷು ಕೃತೇಷು ವಾ ಸತ್ಸು) ಕರ್ಮಕರ್ತೃರೂಪೈಃ ಸರ್ವಂ ಅವತಿ) ಈ ದೇವರು ಕಾರ್ಯವನ್ನು ಹುಟ್ಟಿಸುವದಕ್ಕೆ ಮುಂಚೆ ಹಾಗೂ ಬಳಿಕ ಎಲ್ಲ ಕರ್ತೃ ಕರ್ಮ ಕರಣ ಉಪಾದಾನ ಮುಂತಾದವುಗಳಲ್ಲಿ ಸ್ವಾಮ್ಯ ಕರ್ತೃಕರ್ಮಾದಿರೂಪಗಳಿಂದ ಪ್ರವೇಶಿಸುತ್ತಾನೆ ಹಾಗೂ ರಕ್ಷಿಸುತ್ತಾನೆ.

'ಬ್ರಹ್ಮಪ್ರಭುರ್ಬ್ರಹ್ಮ...'- (ಸಃ ಬ್ರಹ್ಮ) ದೇವರು ಗುಣಪೂರ್ಣ. (ಬ್ರಹ್ಮಪ್ರಭುಃ) ವಿಧಿಯೊಡೆಯ. (ಸರ್ವಭೂತಃ) ಎಲ್ಲಕ್ಕೂ ಆಶ್ರಯ. (ಪ್ರಜಾನಾಂ ಬ್ರಹ್ಮ ಪತಿಃ) ಜೀವರೆಲ್ಲರಿಗೆ ಎಂದೆಂದಿಗೂ ಎಲ್ಲೆಲ್ಲೂ ಇರುವ ಗುಣಪೂರ್ಣ ನಾದೊಡೆಯ. (ಅಥವಾ ಬ್ರಹ್ಮಪ್ರಜಾನಾಂ ಪತಿಃ) ತನ್ನ ಭಕ್ತರ ಪಾಲಕ. (ಅಚ್ಯುತಃ) ಸರ್ವೋತ್ತಮಪದದಿಂದ ಚ್ಯುತನಲ್ಲ.

(ಸ ವಿಷ್ಣು ಅವ್ಯಯಂ ಬ್ರಹ್ಮ) ಆ ದೇವರು ಎಂದಿಗೂ ಹ್ರಾಸವಾಗದೇ ಪೂರ್ಣನಾಗಿರುವ. (ಅಜಂ) ಜನ್ಮವಿಲ್ಲದವ. (ನಿತ್ಯಂ) ನಾಶರಹಿತ. (ಅಪಕ್ಷಯಾದ್ಯೈಃ ಅಖಿಲೈಃ ಅಸಂಗೀ) ಜೀವರಲ್ಲಿ ಜಗತ್ತಿನಲ್ಲಿ ಸನ್ನಿಹಿತನಾಗಿದ್ದರೂ ಅವರ ನಾಶಕ್ಲೇಶಗಳ ಸೋಂಕಿಲ್ಲದವ.

'ಬ್ರಹ್ಮಾಕ್ಷರಮಜಂ...'- ಈ ಪುರುಷೋತ್ತಮನು ಜನ್ಮ ಕ್ಷಯ ಮರಣ ಗಳಿಲ್ಲದವ, ಗುಣಪೂರ್ಣ ಎನ್ನುವುದು ಎಷ್ಟು ಸತ್ಯವೋ ಅಷ್ಟೇ ಸತ್ಯವಾಗಿ ಅಂಥ ಪುರುಷೋತ್ತಮನ ಜ್ಞಾನದಿಂದ ನನ್ನ ರಾಗದ್ವೇಷಾದಿ ದೋಷಗಳೆಲ್ಲವೂ ಕಳೆದು ಹೋಗಲಿ.

'ಏವಂ ಸ್ತೈ ಬ್ರಹ್ಮಪಾರಾ...'- ಇನಿತು ಬ್ರಹ್ಮಪಾರವೆಂಬ ಉತ್ತಮಸ್ತವ ವನ್ನು ಜಪಿಸುತ್ತಾ ಕಂಡುಮುನಿಗಳು ಕೇಶವನನ್ನು ಆರಾಧಿಸಿ ಪರಮಸಿದ್ಧಿಯನ್ನು ಪಡೆದರು.

ಘಂಟಾವಾದನ

'ಘಂಟಾಕಿರೀಟ...'- ಗಂಟೆಯಲ್ಲಿ ಬ್ರಹ್ಮದೇವರು, ಮೇಲಿನ ಕಿರೀಟದಲ್ಲಿ ಗರುಡ, ಮಧ್ಯದ ದಂಡದಲ್ಲಿ ನಾಗ, ಸ್ವರದಲ್ಲಿ ವಾಗ್ದೇವೀ, ನಾ(ಲ)ದದಲ್ಲಿ ಪ್ರಜಾಪತಿಗಳನ್ನು ಆವಾಹಿಸಿ ಅವರನ್ನು ವಂದಿಸಬೇಕು. ನಂತರ ಗಂಟೆಯನ್ನು ಬಾರಿಸಬೇಕು.

ಈ ಎಲ್ಲ ದೇವತೆಗಳ ಪ್ರೇರಣೆಯಿಂದ ಹಾಗೂ ಅನುಗ್ರಹದಿಂದ ಘಂಟಾವಾದದ ಫಲದೊರೆಯುವದು.

ಆರಂಭದ ಘಂಟಾನಾದದಿಂದ ದೇವತೆಗಳ ಮತ್ತು ದೈವೀಶಕ್ತಿಯ ಆಗಮನ ಹಾಗೂ ರಾಕ್ಷಸರ ದೂರೀಕರಣ ಆಗುವವು.

ಕಂಚಿನ ಗಂಟೆಯನ್ನು ಬಾರಿಸದಿದ್ದರೆ ಸುತ್ತಮುತ್ತ ರಾಕ್ಷಸರು ಉಳಿಯುವರು. ಆದ್ದರಿಂದಲೇ ಕಂಚಿನ ಗಂಟೆಯನ್ನು ಬಾರಿಸುವದು ಅವಶ್ಯ ಎಂದು ಶಾಸ್ತ್ರ.

ನಂತರ ಜವನಿಕೆ (ತೆರೆ)ಯನ್ನು ಸರಿಸಬೇಕು.

ಮಂಟಪಧ್ಯಾನ

ನಂತರ ದೇವರಮಂಟಪವನ್ನು ಧ್ಯಾನಿಸಬೇಕು. ಭಗವಂತನ ಮನೆಗೆ ಚಿನ್ನದ ಬಾಗಿಲು, ಹೊಳಪಿನ ರತ್ನದ ಕೆತ್ತನೆ, ಹೀರಕದ ಹಾರಗಳು, ಸ್ಫಟಿಕದ ಹೊಸ್ತಿಲು.

ಹೊರಪ್ರಾಕಾರದಲ್ಲಿ ಹಂಸ, ಶುಕ, ಪಿಕ, ಮುಂತಾದ ಪಕ್ಷಿಗಳು ಇನಿದನಿ ಮಾಡುತ್ತಿವೆ. ವಿಹರಿಸುತ್ತಿವೆ.

ರಮ್ಯವಾದ ಕೆರೆಗಳಲ್ಲಿ ತಾವರೆ ಅರಳಿನಿಂತಿವೆ. ಸುಗಂಧ ಬೀರುತ್ತಿವೆ. ಎಲ್ಲೆಡೆಯೂ ಅಗರು ಚಂದನ ಕುಂಕುಮ ಕಸ್ತೂರಿ ಮುಂತಾದವುಗಳ ಘಮಘಮ ಪರಿಮಳ ಆ ಪರಿಸರವನ್ನೇ ಸುರಭಿಗೊಳಿಸಿದೆ.

ಸಾಲು ಸಾಲು ರತ್ನದೀವಿಗೆಗಳು ಹೊಂಬೆಳಕಿನ ಹೊನಲು ಹರಿಸಿವೆ. ತಂಪಸೆಯ ವಾಯು ಈ ಸುಗಂಧಿಗಳ ಆಮೋದವನ್ನು ಸುತ್ತ ಬಿತ್ತರಿಸಿದೆ.

ಒಳಗೆ ಹೋದಂತೆ ಪುಟಕ್ಕೆ ಹಾಕಿ ತೆಗೆದ ಹೊಳಪಿನ ಹೊನ್ನದ ಎತ್ತರವಾದ ವೇದಿಕೆ, ಸ್ಫಟಿಕದ ಗೋಡೆಗಳು, ಚಿನ್ನದ ಸ್ತಂಭಗಳು, ಮುತ್ತಿನ ಗೊಂಚಲುಗಳು. ವಜ್ರಸ್ಫಟಿಕಗಳ ಸೋಪಾನ. ರತ್ನಮಯ ಪೀಠ. ನವರತ್ನದ ಹಾರಗಳು. ಚಿನ್ನದ ಮಂಟಪ. ಚತುಸ್ತಂಭಗಳ ಮೇಲೆ ಮಂಟಪದ ಕಿರೀಟ. ಸ್ತಂಭಗಳಿಗೆ ಪರಮಧವಲ ಚಾಮರಗಳು. ಅರಕ್ಕೆ ಹೂವಿನ ಅಲಂಕಾರ. ಸುತ್ತಲೂ ತೋರಣ.

ಇಂತಹ ಪೀಠದಲ್ಲಿ ಭಗವಂತನ ಆಸನವು ಸಜ್ಜಾಗಿದೆ. ಸಿರಿಯರಸನ ಮಂಟಪ ಮತ್ತು ಪರಿಸರಗಳ ಶ್ರೀಮಂತಿಕೆಯನ್ನು ಹೀಗೆ ಕೇವಲ ಭಾವಶೀಲಮನಸ್ಸಿನಿಂದ ಭಕ್ತಿಪೂರ್ಣಹೃದಯದಿಂದ ವಾಸನಾಮಯವಾಗಿ ನಿರ್ಮಿಸಿದರೆ ಸಾಕು, ಶ್ರೀಹರಿ ಆನಂದದಿಂದುಬ್ಬಿ ನಲಿವ. ಮೆಚ್ಚಿ ಕುಣಿವ.

ಭಾವವಿಲ್ಲದ ಬಂಗಾರ, ಪ್ರೇಮವಿಲ್ಲದ ಶೃಂಗಾರ ಭಗವಂತ ಎಂದೆಂದಿಗೂ ಒಲ್ಲ.

'ಸಕ್ತುಮಿವ...'- (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಈ ಮಂತ್ರದಿಂದ ಪ್ರತಿಮೆಯ ವಸ್ತ್ರವನ್ನು ತೆಗೆಯಬೇಕು.

'ಹಿರಣ್ಯವರ್ಣಾಂ...'- (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂದು ಪ್ರತಿಮೆಯನ್ನು ವೀಕ್ಷಿಸಬೇಕು.

'ಕೃಪಯೋತ್ಥೀಯತಾಂ...'- 'ಓ ಶ್ರೀಹರಿ! ಸಿರಿಯು ನಿನ್ನ ಪ್ರೇಮದ ಪುತ್ತಳಿ. ತೋಳುಬಳ್ಳಿಯ ತೆಕ್ಕೆಯಲ್ಲಿ ಅವಳು ನಿನ್ನ ಬಂಧಿಸಿರುವಳು. ಶಯ್ಯೆಯಿಂದ ಎದ್ದೇಳು. ಸಿರಿಯ ತೋಳು ಬಂದಿಯನ್ನು ಬಿಟ್ಟೇಳು (ಮುಂಚ ಬಾಹುಲತಾಪಾಶಂ).

ನಿನ್ನರ್ಚಿಸುವ ಹಂಬಲ ನನಗೆ. ನಿನ್ನೆಚ್ಚಿಸುವ ಆಸೆ ನನಗೆ. ಈ ಹಂಬಲ ನಿನ್ನ ಪ್ರೇರಣೆಯಿಂದ ಈ ಆಸೆ ನಿನ್ನ ಪ್ರೀತಿಗಾಗಿ.'

'ಆಯತಾಭ್ಯಾಂ...'- 'ಹೇ ಭಗವನ್! ದೀರ್ಘವೂ ವಿಶಾಲವೂ ಸೌಮ್ಯವೂ ಆದುದು ನಿನ್ನ ಕಣ್ಣು. ಅಂಥ ಕರುಣಾರಸಪೂರ್ಣವಾದ ಕಣ್ಣಿನಿಂದ ನನ್ನನ್ನು ನೋಡು. ಕರುಣೆಯ ಕಿರಣವನ್ನಿರಿಸು. ಎನ್ನನುದ್ಧರಿಸು'

ಹೀಗೆಂದು ಕೈ ಜೋಡಿಸಿ, ಪ್ರಾರ್ಥಿಸಿ ಭಗವಂತನನ್ನು ಎಬ್ಬಿಸಬೇಕು. ಪ್ರತಿಮೆಯನ್ನು ಎತ್ತಿ ಮಂಟಪದಲ್ಲಿ ಕೂಡಿಸಬೇಕು.

ನಿರ್ಮಾಲ್ಯವಿಸರ್ಜನ

'ದೇವರ ಎಡಭಾಗದಲ್ಲಿ ರುದ್ರದೇವರಿದ್ದಾರೆ. ಅವರಿಗೆ ದೇವರ ನಿರ್ಮಾಲ್ಯ ಬೇಕು. ಅಂತೆಯೇ ತಲೆಯ ಮೇಲೆ ಪಾತ್ರೆಯನ್ನು ಧರಿಸಿ ನಿಂತಿರುವರು.'

ಹೀಗೆಂದು ಅನುಸಂಧಾನಿಸಿ ಎಡಭಾಗದಲ್ಲಿಟ್ಟ ಪಾತ್ರೆಯಲ್ಲಿ ದೇವರ ನಿರ್ಮಾಲ್ಯವನ್ನು ವಿಸರ್ಜಿಸಬೇಕು.

'ಅಹಂ ರುದ್ರೇಭಿಃ...' ಎಂಬ ಅಂಭೃಣೀಸೂಕ್ತವನ್ನು ನಿರ್ಮಾಲ್ಯವಿಸರ್ಜನ ಕಾಲದಲ್ಲಿ ಪಠಿಸಬೇಕು.

'ಸಹಸ್ರಶೀರ್ಷಾ ಪುರುಷಃ...'- ಎಂಬ ಪುರುಷಸೂಕ್ತ ಮತ್ತು

'ಋಷಭಂ ಮಾ ಸಮಾನಾನಾಂ...' ಎಂಬ ಋಷಭಸೂಕ್ತದಿಂದ ನಿರ್ಮಾಲ್ಯಾಭಿಷೇಕವನ್ನು ಮಾಡಬೇಕು.

ಇದೇ ಸಮಯದಲ್ಲಿ ಲಕ್ಷ್ಮೀ ವಾಯು ಶೇಷಗರುಡರ ಪ್ರತಿಮೆಗಳಿಗೂ ನಿರ್ಮಾಲ್ಯವಿಸರ್ಜನ ಹಾಗೂ ಅಭಿಷೇಕಗಳನ್ನು ಮಾಡಬೇಕು.

ಕೆಲವರು ಇದರ ಜೊತೆಯಲ್ಲಿಯೇ ಶ್ರೀಸೂಕ್ತ ವಾಯುಸ್ತುತ್ಯಾದಿಗಳಿಂದ ಶುದ್ಧಾಭಿಷೇಕವನ್ನೂ ಮಾಡುತ್ತಾರೆ.

ಆದರೆ ಕೆಲವರು ಈಗ ಕೇವಲ ನಿರ್ಮಾಲ್ಯಾಭಿಷೇಕವನ್ನು ಮಾಡಿ, ಭಗವಂತನ ಪೂಜೆ ಆದ ಬಳಿಕವೇ ಶುದ್ಧಾಭಿಷೇಕವನ್ನು ಮಾಡುವರು. ಎರಡೂ ಸರಿಯೇ.

ಆದರೆ ಶುದ್ಧಾಭಿಷೇಕಕ್ಕಿಂತಲೂ ಮೊದಲು ಲಕ್ಷ್ಮೀ, ವಾಯು, ಶೇಷಾದಿ ಪ್ರತಿಮೆಗಳಲ್ಲಿ ಆಯಾ ದೇವತೆಗಳನ್ನು ಆವಾಹಿಸುವದು ಅಗತ್ಯ.

ದೇವತೆಗಳನ್ನು ಆವಾಹಿಸುವಾಗ ಪ್ರತಿಮೆಗಳಲ್ಲಿ ತತ್ತ್ವನ್ಯಾಸ, ಮಾತೃಕಾನ್ಯಾಸಗಳನ್ನು ಮಾಡಬೇಕು.

ಇಲ್ಲಿ ಕೆಲವು ತತ್ತ್ವಗಳನ್ನು ತಿಳಿಯುವದು ಅತ್ಯಗತ್ಯ.

'ದುರ್ಗಾಶಿವಸ್ಕಂದ....ತಸ್ಮಾತ್ ಧ್ಯೇಯೋ ಹರಿಃ ಸದಾ...'--

ಲಕ್ಷ್ಮೀ, ವಾಯು, ಶೇಷ, ಗರುಡ, ಶಿವ, ದುರ್ಗಾ, ಸ್ಕಂದ, ಸೂರ್ಯ, ಚಂದ್ರ, ಗಣಪತಿ, ಮಂಗಳ, ಶನಿ ಮುಂತಾದ ಯಾವುದೇ ದೇವತೆಗಳ ಪ್ರತಿಮೆಗಳನ್ನು ಪೂಜಿಸುವಾಗ ಆ ಪ್ರತಿಮೆಯಲ್ಲಿ ಅತಿಪ್ರಧಾನವಾಗಿ ಭಗವಂತನನ್ನೇ ಆವಾಹಿಸಿ ಪೂಜಿಸಬೇಕು.

ವಿಷ್ಣುವೇ ಸರ್ವೋತ್ತಮ. ಅವನೇ ಸ್ವತಂತ್ರ. ಅವನೇ ಅಂತಿಮಫಲಪ್ರದ. ಅವನೇ ಸರ್ವಾಂತರ್ಯಾಮಿ.

ಅಂದ ಮೇಲೆ ಅವನನ್ನು ಸರ್ವೋತ್ತಮನೆಂದು, ಸ್ವತಂತ್ರನೆಂದು, ಸರ್ವಾಂತರ್ಯಾಮಿಯೆಂದು, ಸರ್ವಸ್ವಾಮಿಯೆಂದು ಪೂಜಿಸದೆ ಈ ದೇವತೆಗಳನ್ನು ಪೂಜಿಸಿದರೆ ಏನು ಫಲ?

ಇದಕ್ಕೆ ವಿಪರೀತವಾಗಿ ದೇವರನ್ನು ಸರ್ವೋತ್ತಮ, ಸರ್ವಸ್ವಾಮಿ, ಸರ್ವಾಂತರ್ಯಾಮಿಯೆಂದು ನೆನೆಯದೆ ಲಕ್ಷ್ಮೀ, ವಾಯು ಮುಂತಾದ ಬೇರೆ ದೇವತೆಗಳನ್ನು ಭಜಿಸುವದು ಮಹಾ ಅನರ್ಥಸಾಧನ.

ಆದ್ದರಿಂದ ಲಕ್ಷ್ಮೀ, ಬ್ರಹ್ಮ ವಾಯು, ಶೇಷ, ಗರುಡ, ಶಿವ, ದುರ್ಗಾ, ಸ್ಕಂದ, ಸೂರ್ಯ, ಚಂದ್ರ, ಗಣಪತಿ, ಮಂಗಳ, ಶನಿ, ಮುಂತಾದ ಎಲ್ಲ ದೇವತೆಗಳನ್ನೂ ಭಗವಂತನ ಅಧಿಷ್ಠಾನರು, ಭಗವಂತನ ಭಕ್ತರು, ಭಗವಂತನ ಅಧೀನರು, ಭಗವಂತನ ಪರಮಪ್ರಿಯರು ಎಂದೇ ಪೂಜಿಸತಕ್ಕದ್ದು.

ಇದಕ್ಕೆ ಹೊರತಾಗಿ ಅವರೇ ಸ್ವತಂತ್ರರು, ಸರ್ವೋತ್ತಮರು, ಸರ್ವಸ್ವಾಮಿ, ಸರ್ವಾಂತರ್ಯಾಮಿಗಳು ಎಂದಾಗಲಿ, ವಿಷ್ಣುವಿನ ಸಮಾನರು ಎಂದಾಗಲಿ, ವಿಷ್ಣುವಿನಿಂದ ಅಭಿನ್ನರು ಎಂದಾಗಲಿ ತಿಳಿದು ಅವರನ್ನು ಪೂಜಿಸಿದರೆ ಅಂಧಂತಮಸ್ಸು ಕಟ್ಟಿಟ್ಟದ್ದು. ಇದರಲ್ಲಿ ಸಂಶಯವಿಲ್ಲ.

'ಭಕ್ತಿಂ ಕೃತ್ವಾನ್ಯದೇವೇಷು...'- ಬೇರೆ ದೇವತೆಗಳಲ್ಲಿ ಭಕ್ತಿಯನ್ನು ಮಾಡಿದರೂ ವಿಷ್ಣುವಿನಲ್ಲಿ ಭಕ್ತಿಯನ್ನು ಮಾಡದೇ ಸದ್ಗತಿ ಆಗುವದು ಸಾಧ್ಯವೇ ಇಲ್ಲ.

'ನ ಯಜ್ಞಾ ನ ಚ ತೀರ್ಥಾನಿ...'- ಎಷ್ಟೇ ಯಜನ ಯಾಜನ ಮಾಡಿದರೂ, ತೀರ್ಥಕ್ಷೇತ್ರಗಳನ್ನು ಅಲೆದರೂ, ಉಪವಾಸ ವ್ರತಗಳಿಂದ ಬೆಂಡಾದರೂ, ಮೂಲೆ ಮೂಲೆಯ ದೇವತೆಗಳನ್ನು ಕಂಡುದ್ದುಕು ಪೂಜಿಸಿದರೂ ತಿಲಮಾತ್ರವೂ ಫಲವಿಲ್ಲ. ಈ ಮಾನವನನ್ನು ಯಾರೂ ಕಾಪಾಡಲಾರರು.

'ಹರಿರ್ಹಿ ಸರ್ವದೇವಾನಾಂ...'- ಶ್ರೀಹರಿಯೆ ಸರ್ವದೇವತೆಗಳಿಗಿಂತ ಉತ್ತಮ. ಅನಂತಶಕ್ತಿಶಾಲಿ. ಅಂತೆಯೇ ಸ್ವತಂತ್ರ. ಅವನೇ ಜಗದ್ಗುರು. ಸಿರಿ ವಿಧಿ ಮುಂತಾದವರೆಲ್ಲ ಅವನಧೀನರು. ದುರ್ಬಲರು. ದಾಸರು.

'ಮತ್ಸಂಶತ್ವಾ...'- ಯಾವುದೇ ದೇವತೆಯ ಪೂಜೆಯನ್ನಾಗಲಿ, ಗುರುಗಳ ವಂದನೆಯನ್ನಾಗಲಿ ಆ ದೇವತೆ ಹಾಗೂ ಆ ಗುರುಗಳಲ್ಲಿ ಅಂತರ್ಯಾಮಿಯಾಗಿದ್ದ ಭಗವಂತನಿಗೇ ಮುಖ್ಯವಾಗಿ ಸಲ್ಲಿಸಬೇಕೇ ಹೊರತು ಕೇವಲ ಆ ದೇವತೆ, ಆ ಗುರುಗಳಿಗೆ ಸಲ್ಲಿಸತಕ್ಕದ್ದಲ್ಲ.

'ಉಚ್ಚಕ್ರಮಾಂತಗತ್ವೇನ...'- ಒಬ್ಬರ ಮೇಲೊಬ್ಬರೆಂಬಂತೆ ದೇವತೆಗಳಲ್ಲಿ ತಾರತಮ್ಯವನ್ನು ತಿಳಿದು ಅದರ ಅಂತಿಮಾವಧಿಯಾಗಿ 'ಸಾ ಕಾಷ್ಠಾ' ಎಂಬಂತೆ ಭಗವಂತನನ್ನು ತಿಳಿದು ಭಜಿಸಬೇಕು. ಅರ್ಥಾತ್ ಲಕ್ಷ್ಮೀ, ಬ್ರಹ್ಮ ವಾಯ್ವಾದಿಗಳೆಲ್ಲರೂ ಶ್ರೀಹರಿಯ ದಾಸಾನುದಾಸರೆಂದು ತಿಳಿದರ್ಚಿಸಬೇಕು.

'ಸ್ವತಂತ್ರಪೂಜ್ಯತಾಬುದ್ಧ್ಯಾ...'- ಲಕ್ಷ್ಮೀ, ಬ್ರಹ್ಮಾದಿಗಳು ಭಗವದಧೀನರಲ್ಲ, ಭಗವದ್ಭಕ್ತರಲ್ಲ. ಅವರೆಲ್ಲರು ಸ್ವತಂತ್ರವಾಗಿ ಪೂಜ್ಯರು ಎಂದು ತಿಳಿದು ಮಾಡಿದ ಅವರ ಅರ್ಚನೆ, ಯಜ್ಞ, ತಪಸ್ಸು ಮುಂತಾದವುಗಳನ್ನು ಅವರು ಎಂದೆಂದಿಗೂ ಸ್ವೀಕರಿಸುವದಿಲ್ಲ.

ಇಂಥ ಅರ್ಚನೆ, ಯಜ್ಞ, ತಪಸ್ಸುಗಳನ್ನು ಭಗವದ್ಭಕ್ತರಲ್ಲದ ಬ್ರಹ್ಮ ರುದ್ರ ಮುಂತಾದ ಹೆಸರುಗಳಿಂದಲೇ ಕರೆಯಲ್ಪಡುವ ಮಹಾದೈತ್ಯರು ಸೆಳೆದೊಯ್ಯುವರು.

ಆದ್ದರಿಂದ ಲಕ್ಷ್ಮೀ, ವಾಯು, ಶೇಷಾದಿ ಸಮಸ್ತದೇವತಾಪ್ರತಿಮೆಗಳಲ್ಲೂ ಶ್ರೀಹರಿಯೇ ಸರ್ವಪ್ರಧಾನವಾಗಿ ಅಧಿಷ್ಠಾತೃವು ಎಂದು ತಿಳಿದು ಅವನನ್ನೇ ಪರಮಮುಖ್ಯವಾಗಿ ಆವಾಹಿಸಿ ಪೂಜಿಸಬೇಕು.

ಭಗವಂತನ ಭಕ್ತರು ಭಗವಂತನ ಅಧಿಷ್ಠಾನರೆಂದಾಗಿ ಲಕ್ಷ್ಮೀ, ವಾಯ್ವಾದಿ ದೇವತೆಗಳನ್ನೂ ಆಯಾ ಪ್ರತಿಮೆಗಳಲ್ಲಿ ಪೂಜಿಸುವದು ಅವಶ್ಯಕ.

ಗೋಲಕಚಿಂತನ

ಅಲ್ಲದೇ, ಪ್ರತಿಮೆ, ಅಗ್ನಿ ಮುಂತಾದ ಯಾವುದೇ ಅಧಿಷ್ಠಾನಗಳಲ್ಲಿ ಶ್ರೀಹರಿಯನ್ನು ಪೂಜಿಸಬೇಕಾದರೆ ಎರಡು ಅಥವಾ ಮೂರು ಗೊಲಕಗಳನ್ನು (ಎಂದರೆ ಅಧಿಷ್ಠಾನಗಳನ್ನು) ಚಿಂತಿಸಲೇಬೇಕು.

ವಿಷ್ಣು ಲಕ್ಷ್ಮೀ, ವಾಯು ಈ ಮೂವರ ಪ್ರತಿಮೆಗಳಲ್ಲಿ ಆವಾಹಿಸಲ್ಪಡುವ ಭಗವಂತನಿಗೆ ಎರಡು ಗೋಲಕಗಳು.

ಶೇಷಗರುಡಾದಿ ಪ್ರತಿಮೆಗಳಲ್ಲಿ ನಾವು ಆವಾಹಿಸುವ ದೇವರಿಗೆ ಮೂರು ಗೋಲಕಗಳು.

ವಿಷ್ಣು ಲಕ್ಷ್ಮೀ, ವಾಯು ಈ ಮೂವರ ಪ್ರತಿಮೆಗಳಲ್ಲಿ ವಾಯುದೇವರು ಮೊದಲನೆಯ ಗೋಲಕ. ಆ ವಾಯುಗೋಲಕದಲ್ಲಿ ಚಿನ್ಮಯ ಲಕ್ಷ್ಮೀದೇವಿಯು ಎರಡನೆಯ ಗೋಲಕವಾಗಿ ಇರುವಳು ಎಂದು ಧ್ಯಾನಿಸಬೇಕು.

ಆ ಚಿನ್ಮಯಲಕ್ಷ್ಮೀಗೋಲಕದಲ್ಲಿ ಅನಂತಗುಣಪೂರ್ಣ ಸಚ್ಚಿದಾನಂದಾತ್ಮ (ಬಿಂಬರೂಪೀ) ಭಗವಂತನು ಸನ್ನಿಹಿತನಾಗಿರುವನೆಂದು ಚಿಂತಿಸಬೇಕು.

ಶೇಷಾದಿ ಉಳಿದೆಲ್ಲ ದೇವತೆಗಳ ಪ್ರತಿಮೆಗಳಲ್ಲಿ, ಆಯಾ ದೇವತೆಗಳು ಮೊದಲನೆಯ ಗೋಲಕ, ವಾಯುದೇವರು ಎರಡನೆಯ ಗೋಲಕ, ಲಕ್ಷ್ಮೀದೇವಿಯು ಮೂರನೆಯ ಗೋಲಕ ಎಂದು ಧ್ಯಾನಿಸಬೇಕು.

'ವಿನಾ ಪ್ರತೀಕಂ ಪ್ರಾಣಸ್ಯ...'- ಇದಕ್ಕೆ ಕಾರಣವಿಷ್ಟು ಲಕ್ಷ್ಮೀವಾಯು ಗಳೆಂಬ ಗೋಲಕಗಳನ್ನು ಸ್ಮರಿಸದಿದ್ದರೆ ಭಗವಂತ ಆ ಪ್ರತಿಮೆಯಲ್ಲಿ ಎಂದೆಂದಿಗೂ ಸನ್ನಿಹಿತನಾಗುವದಿಲ್ಲ.

ನಾವು ಮಾಡಿದ ಯಾವ ಪೂಜೆಯನ್ನೂ ಸ್ವೀಕರಿಸುವದಿಲ್ಲ. ಅವನಿಗೆ ಅತ್ಯಂತ ಪ್ರಿಯವಾದ ಯಾವ ವಸ್ತುವನ್ನು ಸಮರ್ಪಿಸಿದರೂ ಅದನ್ನು ಕೈಗೊಳ್ಳುವದಿಲ್ಲ.

ವಾಯುಲಕ್ಷ್ಮೀ ಅಧಿಷ್ಠಾನವನ್ನು ಬಿಟ್ಟು ಮಾಡುವ ಪೂಜೆಯು ಪರಮಾತ್ಮನಿಗೆ ಅತ್ಯಂತ ಅಪ್ರಿಯವಾದದ್ದು. ಇದರಿಂದಾಗಿ ನರಕಾದಿಗಳಾಗುವದು ನಿಶ್ಚಿತ.

ಆದ್ದರಿಂದ ಪ್ರತಿಯೊಂದು ಪ್ರತಿಮೆಯಲ್ಲಿ ವಾಯುದೇವರನ್ನು ಲಕ್ಷ್ಮೀದೇವಿಯನ್ನು ಧ್ಯಾನಿಸಿ ಅವರಲ್ಲಿ ಭಗವಂತನನ್ನು ಆವಾಹಿಸಬೇಕು.

ಬಳಿಕವೇ ಅಲ್ಲಿ ಭಗವಂತನು ಸನ್ನಿಹಿತನಾಗುವ, ಫಲಪ್ರದನಾಗುವ.

ಗೋಲಕಚಿಂತನಕ್ರಮ

ಹೀಗಿರುವ ಕಾರಣ ಆಯಾ ಪ್ರತಿಮೆಗಳಲ್ಲಿ ಆವಾಹಿಸುವ ಕ್ರಮವನ್ನು ತಿಳಿಯಬೇಕು. ಮೊದಲು ಲಕ್ಷ್ಮೀಪ್ರತಿಮೆಯಲ್ಲಿ ಮಾಡುವ ಆವಾಹನ ಕ್ರಮ.

ಮೊದಲು 'ಉದ್ಯದ್ರವಿಪ್ರಕರ...' ಎಂದು ವಾಯುದೇವರನ್ನು ಧ್ಯಾನಿಸಿ ಲಕ್ಷ್ಮೀಪ್ರತಿಮೆಯಲ್ಲಿ ಆವಾಹಿಸಬೇಕು.

ಬಳಿಕ 'ಕೌಶೇಯಪೀತವಸನಾಂ...' ಎಂದು ಲಕ್ಷ್ಮಿಯನ್ನು ಧ್ಯಾನಿಸಿ ಆವಾಹಿಸಬೇಕು.

ಕೊನೆಯಲ್ಲಿ 'ಉದ್ಯದ್ಭಾಸ್ವತ್ಸಮಾಭಾಸಃ...' ಎಂದು ನಾರಾಯಣನನ್ನು ಧ್ಯಾನಿಸಬೇಕು.

'ಉದ್ಯದ್ರವಿಪ್ರಕರ...'- 'ನಾವು ಮುಖ್ಯಪ್ರಾಣದೇವರನ್ನು ಧ್ಯಾನಿಸಬೇಕು. ಅವರು ಇದೀಗ ಉದಿಸುವ ಅನಂತಭಾನುಗಳಂತೆ ಭಾಸಮಾನರಾದವರು. ಶ್ರೀಹರಿಯ ತೊಡೆಯಲ್ಲಿ ವಿರಾಜಮಾನರಾದವರು. ಆ ದೇವರ ನಿತ್ಯಸ್ತುತಿಯಲ್ಲಿ ತೊಡಗಿದವರು.

ಒಂದು ಕೈಯಲ್ಲಿ ಗದೆ; ಇನ್ನೊಂದರಲ್ಲಿ ಅಭಯಮುದ್ರೆ. ಇನ್ನೆರಡು ಕೈಗಳಿಂದ ಬದ್ಧಾಂಜಲಿಯಾಗಿ ಭಗವಂತನನ್ನು ವಂದಿಸುತ್ತಿರುವವರು. ಭಕ್ತಿಯಿಂದ ಭಗವಂತನ್ನು ಭಜಿಸಲೋಸುಗ ಇಷ್ಟವಾದಂತೆ ಅನೇಕರೂಪಗಳನ್ನು ತಾಳಿದವರು. ಯಥೇಷ್ಟ ವಿಶಾಲವಾದ ದೇಹವುಳ್ಳವರು. ದೇವರ ಹಾಗೂ ತಮ್ಮಿಚ್ಛೆಯಂತೆ ಅನೇಕಾವತಾರಗಳನ್ನು ತಳೆದವರು. ಅನಂತ ಉನ್ನತ ಕರ್ಮಶಕ್ತಿಯಿರುವವರು.'

'ಕೌಶೇಯಪೀತವಸನಾಂ...'- 'ದೇವಿ ಮಹಾಲಕ್ಷ್ಮಿಯನ್ನು ನಾವೆಲ್ಲರೂ ಧ್ಯಾನಿಸಬೇಕು. ಆಕೆ ರೇಷ್ಮೆಯ ಪೀತಾಂಬರವನ್ನು ಧರಿಸಿರುವಳು. ತಾವರೆಯಂಥ ಕಣ್ಣು ಆಕೆಗೆ. ಅವಳ ಕೈ ಕಮಲದಂತೆ ಕೋಮಲ.

ಎರಡು ಕೈಗಳಲ್ಲಿ ಪದ್ಮಗಳನ್ನು ಇನ್ನೆರಡು ಕೈಗಳಲ್ಲಿ ಅಭಯ ವರ ಮುದ್ರೆಗಳನ್ನು ಧರಿಸಿರುವಳು. ಉದಿಸುವ ಅನಂತ ರವಿಗಳಂತೆ ತೇಜಃಪುಂಜಳು. ಭಗವಂತನ ತೊಡೆಯಲ್ಲಿ ಕುಳಿತವಳು. ಬ್ರಹ್ಮ ರುದ್ರ ಮುಂತಾದವರು ಇವಳ ಪಾದಗಳಿಗೆ ವಂದಿಸುವರು. ಇವಳೇ ಎಲ್ಲರ ತಾಯಿ.'

'ಉದ್ಯದ್ಭಾಸ್ವತ್ಸಮಾಭಾಸಃ...'- ಬಳಿಕ ಆ ನಾರಾಯಣನ ಧ್ಯಾನ.

'ಆತನ ಪ್ರಭೆ ಇದೀಗ ಉದಯಿಸುತ್ತಿರುವ ಭಾನುವಿನಂತೆ. ಜ್ಞಾನ, ಆನಂದ, ಬಲ, ವೀರ್ಯ ಮುಂತಾದ ಸದ್ಗುಣಗಳೇ ಆತನ ಮೂರ್ತಿ.

ಅವನಿಗೆ ನಾಲ್ಕು ಕೈಗಳು. ಅವುಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು (ಬಲದ ಮೇಲ್ಗೈ, ಎಡದ ಮೇಲ್ಗೈ, ಎಡದ ಕೆಳಗೈ, ಬಲದ ಕೆಳಗೈಗಳಲ್ಲಿ) ಧರಿಸಿರುವನು.

ರತ್ನಪೂರ್ಣವಾದ ಚಿನ್ನದ ಪೀಠದಲ್ಲಿ ಕುಳಿತಿರುವನು.

ಶ್ರೀಭೂದೇವಿಯರು ನಿತ್ಯನೂತನವಾದ ಈತನ ಪರಮಸೌಂದರ್ಯ ಹಾಗೂ ದಿವ್ಯಲಾವಣ್ಯಗಳಿಗೆ ಮಾರು ಹೋಗಿ ಇವನನ್ನು ಆಲಿಂಗಿಸಿ ಕುಳಿತಿರುವರು.

ಇವನ ಸುತ್ತಲೂ ಪ್ರದ್ಯುಮ್ನಾದಿ, ವಾಸುದೇವಾದಿ, ಕೇಶವಾದಿ, ಮತ್ಸ್ಯಾದಿ ರೂಪಗಳು ಇವೆ.

ವಿಧಿ, ವಾಯು, ಶಿವ, ಶೇಷ, ಸುಪರ್ಣರು ಹಾಗೂ ಇಂದ್ರಾದಿದೇವತೆಗಳು ಮಡದಿಯರಿಂದೊಡಗೂಡಿ ದೇವರನ್ನರ್ಚಿಸುತ್ತಿರುವರು.'

ಹೀಗೆಂದು ಬಿಂಬರೂಪೀ ನಾರಾಯಣನನ್ನು ನೆನೆಯುವದು.

ಆಮೇಲೆ ಪ್ರಾರ್ಥನೆ. "ಓ ಭಗವನ್! ಸಿರಿಯರಸ ನನ್ನೆದೆ ತಾವರೆಗದ್ದುಗೆಯ ದೇವ! ಈ ಪ್ರತಿಮೆಯಲ್ಲಿ ಕಣ ಕಣಗಳಲ್ಲಿಯೂ ವ್ಯಾಪಿಸಿ ಮುಖ್ಯಪ್ರಾಣರಿದ್ದಾರೆ.

'ಅವರ ಎಲ್ಲ ಪರಮ ದಿವ್ಯ ಅಂಗಾಂಗಗಳಲ್ಲಿಯೂ ಅಂಶಾಂಶಗಳಲ್ಲಿಯೂ ಲಕ್ಷ್ಮೀದೇವಿ ವ್ಯಾಪಿಸಿ ಇದ್ದಾಳೆ.

'ಆ ಶ್ರೀದೇವಿ ನಿನ್ನ ನೆರಮೆಡ್ಡುಗೆಯ ಪ್ರತಿಮೆ. ಗುಣಪೂರ್ಣ, ನಿರ್ಮಲ, ಚಿನ್ಮಯ ರಮಾದೇವಿಯೆಂಬ ಪ್ರತಿಮೆಯಲ್ಲಿ ರಮಾಂತರ್ಗತನಾದ ನಿನ್ನನ್ನಾವಾಹಿಸುವೆ.

'ನೀನು ರಮಾದೇವಿಯ ನಿಯಾಮಕ, ಪಾಲಕ, ಸಾಕ್ಷಾದಾಶ್ರಯ, ಆಧಾರ, ಪ್ರೇರಕ, ಅವಳಿಗೆ ಅಸ್ತಿತ್ವವನ್ನು ದಯಪಾಲಿಸಿದವ, ರಮಾದಿನಾಮಕ, ಅವಳ ಆಕಾರದವ, ರಮೆಯಲ್ಲಿದ್ದರೂ ಅವಳ ಪಾರತಂತ್ರ್ಯ, ಅಪೂರ್ಣತ್ವ ಮುಂತಾದ ದೋಷಗಳಿಲ್ಲದವ, ಅವಳಿಂದ ಅಚಿಂತ್ಯ, ರಮೆಗಿಂತಲೂ ಅನಂತಮಡಿ ಮಿಗಿಲಾದವ, ರಮಾನಾಥ, ರಮೇಶ.'

ಹೀಗೆ ರಮಾದೇವಿಯ ಪ್ರತಿಮೆಯಲ್ಲಿ ವಾಯುವನ್ನು, ಬಳಿಕ ತದಂತರ್ಗತ ರಮಾದೇವಿಯನ್ನು ನಂತರ ತದಂತರ್ಗತ ನಾರಾಯಣನನ್ನು ಆವಾಹಿಸಬೇಕು.

ಇದೇ ತೆರನಾಗಿ ವಾಯುಪ್ರತಿಮೆಯಲ್ಲಿಯೂ 'ಓ ಭಗವನ್!............. ವಾಯ್ವಂತರ್ಗತನಾದ ನಿನ್ನನ್ನು ಆವಾಹಿಸುವೆ.'

ಶೇಷ, ಗರುಡ, ಶಿವ, ದುರ್ಗಾ, ಸ್ಕಂದ, ಇಂದ್ರ, ಸೂರ್ಯ, ಚಂದ್ರ, ಗಣಪತಿ, ಶನಿ, ಮುಂತಾದ ದೇವತೆಗಳಲ್ಲಿ ಮೊದಲು ಆಯಾ ದೇವತೆಗಳನ್ನು ಧ್ಯಾನಿಸಿ ಆವಾಹಿಸಬೇಕು.

ಆ ದೇವತೆಗಳಲ್ಲಿ ವಾಯುದೇವರನ್ನು, ಮುಂದೆ ಲಕ್ಷ್ಮೀದೇವಿಯನ್ನು ಧ್ಯಾನಿಸಿ ಆವಾಹಿಸಿ, ಅವಳಲ್ಲಿ 'ಓ ಭಗವನ್! ಶೇಷದೇವರ ನಿಯಾಮಕನೂ, ...ಶೇಷಾಂತರ್ಗತನಾದ ನಿನ್ನನ್ನು ಆವಾಹಿಸುವೆ.'

ಹೀಗೆಯೇ ಗರುಡಾಂತರ್ಗತ/ ಶಿವಾಂತರ್ಗತ ಮುಂತಾಗಿ ಅಂದು ಆವಾಹಿಸಬೇಕು.

ಹೀಗೆ ಆವಾಹಿಸಿದ ಬಳಿಕ ಶ್ರೀಸೂಕ್ತ, ಅಂಭೃಣೀಸೂಕ್ತ, ಲಕ್ಷ್ಮೀಹೃದಯ, ವಾದಿರಾಜರ ಶ್ರೀಶ್ರೀಶಗುಣದರ್ಪಣ, ಯಾದವಾರ್ಯರ ಲಕ್ಷ್ಮ್ಯಷ್ಟಕ ಮುಂತಾದ ಮಂತ್ರಗಳನ್ನು ಪಠಿಸಿ, ಲಕ್ಷ್ಮೀದೇವಿಯ ಅಭಿಷೇಕಮಾಡಬೇಕು.

ಆಮೇಲೆ ಪವಮಾನ, ಬಳಿತ್ಥಾಸೂಕ್ತ, ಸುಂದರಕಾಂಡ (ತಾತ್ಪರ್ಯ ನಿರ್ಣಯ), ವಾಯುಸ್ತುತಿ, ಸುಮಧ್ವವಿಜಯ ಮುಂತಾದ ಮಂತ್ರಗಳಿಂದ ವಾಯುದೇವರ ಅಭಿಷೇಕಮಾಡಬೇಕು.

ಶೇಷಗರುಡರ ಮಂತ್ರಗಳಿಂದ ಅವರ ಅಭಿಷೇಕಮಾಡಬೇಕು.

ಇಲ್ಲಿ ಇನ್ನೊಂದಂಶ. ಲಕ್ಷ್ಮೀತೀರ್ಥವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುವುದು ಶಾಸ್ತ್ರವಿಹಿತವಲ್ಲ.

ಆದುದರಿಂದ ರಮಾದೇವಿಗೆ ಅಭಿಷೇಕಮಾಡಿದುದನ್ನು ಪ್ರೋಕ್ಷಣೆ ಮಾಡಿಕೊಂಡು ಬೇರೆ ಪಾತ್ರದಲ್ಲಿ ಹಾಕಬೇಕು.

ಶೇಷಗರುಡಾದಿಗಳ ಅಭಿಷೇಕಜಲವನ್ನೂ ಕೇವಲ ಪ್ರೋಕ್ಷಣೆ ಮಾಡಿಕೊಳ್ಳಬೇಕು. ತೀರ್ಥಪ್ರಾಶನ ಮಾಡಬಾರದು.

ಆದರೆ ಮುಖ್ಯಪ್ರಾಣದೇವರ ತೀರ್ಥವನ್ನು ಮಾತ್ರ ಅವಶ್ಯವಾಗಿ ಸ್ವೀಕಾರ (ಪ್ರಾಶನ) ಮಾಡಬೇಕು.

ಅದಕ್ಕಾಗಿ ವಾಯುದೇವರ ತೀರ್ಥವನ್ನು ಪ್ರತ್ಯೇಕವಾಗಿ ಪಾತ್ರೆಯಲ್ಲಿ ತೆಗೆದಿಡುವದು ಆವಶ್ಯಕ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಮಹತ್ವದ ಸಂಗತಿ.

ಲಕ್ಷ್ಮೀ, ವಾಯು, ಶೇಷ, ಗರುಡ ಈ ದೇವತೆಗಳನ್ನು ಬಿಟ್ಟು ಇನ್ನಾವ ದೇವತೆಗಳನ್ನೂ ದೇವರ (ಪೂಜೆಯನ್ನು ಮಾಡುವಾಗ) ಎದುರಿನಲ್ಲಿ ಪೂಜಿಸತಕ್ಕದ್ದಲ್ಲ.

ಶಿವ, ದುರ್ಗಾ, ನವಗ್ರಹ, ಗಣಪತಿ ಮುಂತಾದ ದೇವತೆಗಳ, ಋಷಿಗಳ ಹಾಗೂ ಪದ್ಮನಾಭತೀರ್ಥ, ಜಯತೀರ್ಥ, ವ್ಯಾಸರಾಜ, ವಾದಿರಾಜ, ರಘೂತ್ತಮ, ರಾಘವೇಂದ್ರ ಮುಂತಾದ ಎಲ್ಲ ಗುರುಗಳ ಪೂಜೆ, ಆರಾಧನೆಗಳನ್ನು ದೇವರ ಪೂಜೆ ಮುಗಿಸಿದ ಬಳಿಕವೇ ಮಾಡಬೇಕು.

ಇದಕ್ಕೆ ಹೊರತಾಗಿ ದೇವರ ಎದುರಿನಲ್ಲಿ ಲಕ್ಷ್ಮೀ, ವಾಯು, ಶೇಷ, ಗರುಡರಂತೆ ಉಳಿದ ದೇವತೆ ಋಷಿ ಗುರುಗಳ ಪೂಜೆಮಾಡುವದು ಶಾಸ್ತ್ರವಿರುದ್ಧವಾದದ್ದು.

ಅಂದರೆ ದೇವರ ಪ್ರತಿಮಾ, ಶಾಲಿಗ್ರಾಮಾದಿಗಳನ್ನು ಪೆಟ್ಟಿಗೆಯಲ್ಲಿ ಭದ್ರಂಗಿಸಿದ ಮೇಲೆಯೇ ಈ ಉಳಿದ ದೇವತೆಗಳ ಪೂಜೆ ಮಾಡಬೇಕು ಎಂದರ್ಥ.

ಇಲ್ಲಿ ತಿಳಿಯಬೇಕಾದ ಕೆಲವು ಸೂಕ್ಷ್ಮಾಂಶಗಳನ್ನು ಮುಂದೆ ಭಗವಂತನ ನೈವೇದ್ಯದ ಸಮಯದಲ್ಲಿ ವಿವರಿಸುವೆವು. ಅದಕ್ಕಾಗಿ ಅಲ್ಲಿ ಈ (page) * ಚಿಹ್ನೆಯನ್ನು ನೋಡಿ.

ಕುಳಿತಲ್ಲಿಯೇ 'ಅಪಕ್ರಾಮಂತು...' ಎಂದಂದು ಛೋಟಿಕಾ ಮುದ್ರೆಯಿಂದ (ಬೆರಳ ಚಿಟಕಿ ಬಾರಿಸಿ) ಭೂತೋಚ್ಚಾಟನವನ್ನು ಮಾಡಬೇಕು.

'ಪೃಥ್ವಿ ತ್ವಯಾ...'- 'ಓ ದೇವಿ, ನೀನೇ ಎಲ್ಲ ಲೋಕಗಳನ್ನು ಧರಿಸಿರುವಿ. ಓ ದೇವಿ, ನಿನ್ನನ್ನು ವಿಷ್ಣುವು ಧರಿಸಿರುವನು. ಓ ದೇವಿ, ನೀ ನನ್ನನ್ನು ಧರಿಸು.

ನನ್ನ ಆಸನವನ್ನು ಪಾವನಗೊಳಿಸು. ಜೊತೆಯಲ್ಲಿ ನನ್ನನ್ನೂ ಪವಿತ್ರಮಾಡು. ನಾನು ನಿನಗೆ ಭಕ್ತಿಯಿಂದ ನಮಿಸುವೆ.' ಎಂದಾಗಿ ಪೃಥ್ವಿಯನ್ನು ಪ್ರಾರ್ಥಿಸಬೇಕು.

ಆಸನ ಪದ್ಧತಿ- ಕೆಳಗೆ ದರ್ಭೆಯ ಆಸನ, ಮೇಲೆ ಕೃಷ್ಣಾಜಿನ, ಅದರ ಮೇಲೆ ಬಟ್ಟೆ ಹೀಗೆ ಆಸನವನ್ನು ಸಜ್ಜುಗೊಳಿಸಬೇಕು.

ಬಳಿಕ 'ಪರಮಪುರುಷ, ಆಧಾರಶಕ್ತಿ, ಮಂಡೂಕ, ಕೂರ್ಮ, ವರಾಹ, ಶೇಷ, ಕಾಲಾಗ್ನಿರುದ್ರ, ವಜ್ರ ಹಾಗೂ ಪೃಥಿವೀ' ಎಂಬ ದೇವತೆಗಳನ್ನು ಸ್ಮರಿಸಿ ವಂದಿಸಬೇಕು.

ಪೂರ್ವಾದಿ ದಿಕ್ಕುಗಳಲ್ಲಿ ಎಲ್ಲೆಲ್ಲೂ ಸುದರ್ಶನಚಕ್ರವು ನಿಂತು ರಕ್ಷಿಸುತ್ತಿದೆಯೆಂದು ಧ್ಯಾನಿಸಬೇಕು.

ನಂತರ ಪ್ರಾಣಾಯಾಮ ಮಾಡಿ ದೇಶಕಾಲ ಸಂಕೀರ್ತನಮಾಡಿ ಸಂಕಲ್ಪ ಮಾಡುವದು.

ಸಂಕಲ್ಪ

'ಅನಂತಕಲ್ಯಾಣಗುಣೈಕಸಿಂಧು...'- 'ದೇವರ ಪ್ರೇರಣೆ ಇಲ್ಲದಿರೆ ಸಿರಿಗೂ, ವಿಧಿಗೂ, ವಾಯುವಿಗೂ ಸ್ಪಂದಿಸಲೂ ಸಾಧ್ಯವಿಲ್ಲ.

ಎಂದಮೇಲೆ ಇಡಿಯ ವಿಶ್ವದಲ್ಲಿ ಪರಮಕ್ಷುದ್ರರೂ, ಅತ್ಯಲ್ಪರೂ ಆದ ನಮ್ಮಂಥ ಜಂತುಗಳಿಗೆ ಎಲ್ಲಿಯ ಸಾಮರ್ಥ್ಯ?

ಆದ್ದರಿಂದ ನಾವು ಮಾಡುವ ಎಲ್ಲ ತೆರನಾದ ಕರ್ಮಗಳನ್ನು ಭಗವಂತನೇ ಮಾಡಿಸುತ್ತಾನೆ. ದೇವರು ಲಕ್ಷ್ಮೀಬ್ರಹ್ಮಾದಿ ಸಕಲ ದೇವವರ್ಗವನ್ನು ಪ್ರೇರಿಸಿ ನಮ್ಮಿಂದ ಕರ್ಮಮಾಡಿಸುವನು.

ಪುರುಷೋತ್ತಮನ ಪ್ರೇರಣೆ ಇಲ್ಲವಾದರೆ ಯಾವ ಚೇತನನೂ ಏನೂ ಮಾಡಲು ಆರ.

ದೇವರ ಬಲದಿಂದ ನಮಗೆ ಬಲ.

ದೇವರ ವೀರ್ಯದಿಂದ ನಮ್ಮ ವೀರ್ಯ.

ಆತನ ತೇಜಸ್ಸಿನಿಂದ ನಮ್ಮ ತೇಜಸ್ಸು.

ಅವನು ಕ್ರಿಯೆಮಾಡಿದರೆ ನಮಗೆ ಕ್ರಿಯೆ.

ದೇವನ ಆಜ್ಞೆಯಿಂದ ಅವನಿತ್ತ ಬಲವೀರ್ಯಗಳಿಂದ ಅವನ ಪ್ರೀತ್ಯರ್ಥವಾಗಿ ದೇಹೇಂದ್ರಿಯಮನಃಪ್ರೇರಕನಾದ ಅವನು ನಡೆಸಿದಂತೆ ನಡೆದು ಅವನ ಪೂಜೆಯನ್ನು ನನ್ನ ಶಕ್ತ್ಯನುಸಾರವಾಗಿ ದೊರೆತ ಉಪಕರಣಗಳಿಂದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ತಂತ್ರಸಾರದಲ್ಲಿ ಆದೇಶಿಸಿದಂತೆ ಭಕ್ತಿಯಿಂದ ಪೂಜಿಸುವೆ'. ಹೀಗೆ ಸಂಕಲ್ಪವನ್ನು ಮಾಡಬೇಕು.

ನಾರಾಯಣಮಂತ್ರಜಪ

ಪೂಜೆ ಮಾಡುವದಕ್ಕೆ ಮೊದಲು ಅಧಿಕಾರಸಿದ್ಧಿಗಾಗಿ "ನಾರಾಯಣ" ಮಂತ್ರವನ್ನು ಜಪಿಸಬೇಕು.

ಅನೇಕರು ದೇವರ ಪೂಜೆಯನ್ನೇ ಮಾಡುವದಿಲ್ಲ. ಮಾಡುವವರೂ ಯಾಂತ್ರಿಕವಾಗಿ ಮಾಡಿ ಮುಗಿಸಿಬಿಡುತ್ತಾರೆ. ಕಾಟಾಟವೆಂದು ತಿಳಿಯುತ್ತಾರೆ. ಅವರಿಗೆ ಅದು ಅಪರಿಹಾರ್ಯಪೀಡೆ.

ಇನ್ನು ಕೆಲವರಿಗೆ ಪೂಜೆಯಲ್ಲಿ ಔದಾಸೀನ್ಯ. ಭಕ್ತಿಯಿಂದ ಅನುಸಂಧಾನವಿಟ್ಟು ಮಾಡುವವರು ಬಹಳ ವಿರಳ.

ಬೇರೆ ಕಾಲದಲ್ಲಿ ಅಲ್ಪ ಸ್ವಲ್ಪ ವಿಶ್ವಾಸ ಇರುವವರಿಗೂ ಪೂಜೆಯ ಸಮಯದಲ್ಲಿ ತನ್ಮಯತೆ ಇರುವದಿಲ್ಲ.

ಆದರೆ ಭಕ್ತಿಯಿಲ್ಲದ ಬಗೆಯಿಂದ, ಶ್ರದ್ಧೆಯಿಲ್ಲದ ಹೃದಯದಿಂದ, ಏಕಾಗ್ರ್ಯವಿಲ್ಲದ ಮನಸ್ಸಿನಿಂದ ಮಾಡಿದ ಪೂಜೆ ನಿಷ್ಫಲ. ತುಸು ಫಲ ದೊರಕಬೇಕಾದರೂ ತುಸುವೇ ಭಕ್ತಿಯು ಇರಲೇಬೇಕು.

ಭಕ್ತಿ ಇಲ್ಲದೆ ಅಶ್ರದ್ಧೆಯಿಂದ ಮಾಡಿದ ಪೂಜೆ ಅಸತ್ಪೂಜೆ; ಅಸತ್ಕರ್ಮ. ಇದು ನಿರರ್ಥಕಮಾತ್ರವಲ್ಲ, ಅನರ್ಥಕಾರಿಯೂ ಹೌದು.

'ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ ಪ್ರೇತ್ಯ ನೋ ಇಹ"

ಅದಕ್ಕೆಂದೇ ನಾರಾಯಣಮಂತ್ರವನ್ನು ಜಪಿಸಲು ಹೇಳಿರುವರು. ಜಪವನ್ನು ಮಾಡುತ್ತಾ ಕ್ಷಣಬಿಡದೆ ಮನದಲ್ಲಿ ನೆನೆಯಬೇಕು.

'ದೇವರು (ಸತ್) ಅಸ್ವಾತಂತ್ರ್ಯ, ದುಃಖ ಮುಂತಾದ ದೋಷಗಳಿಲ್ಲದವ. (ಚಿತ್) ಅನಂತಜ್ಞಾನಘನ. (ಆನಂದ) ಅಮಿತ ಆನಂದಮಯ. (ಆತ್ಮ) ಸರ್ವಸ್ವಾಮಿ. ಮಮಸ್ವಾಮಿ.

'ಅಲ್ಲದೇ ಸಿರಿ ವಿಧಿ ಮುಂತಾದೆಲ್ಲರಿಗಿಂತಲೂ ಅನಂತ ಅನಂತ ಮಡಿ ಉತ್ತಮನಾದವ. ಅನಂತ ಗುಣ ರೂಪ ಕ್ರಿಯೆಗಳುಳ್ಳವ.

'ಇಡಿಯ ವಿಶ್ವದ ಹುಟ್ಟು, ಸಾವು, ಇರವು, ನಿಯಮನ, ಜ್ಞಾನ, ಅಜ್ಞಾನ, ಬಂಧನ, ಮೋಚನಗಳನ್ನು ಕೊಡುವ ಮಹಾ ದೊರೆ.

'ಎಲ್ಲ ಅಚೇತನಗಳಿಗೂ ಮುಕ್ತಾಮುಕ್ತ ಚೇತನರಿಗೂ ಹಿರಿಯೊಡೆಯ. ಸ್ವತಂತ್ರ. ಎಲ್ಲರಿಗೆ ಅಸ್ತಿತ್ವವನ್ನು ಕೊಟ್ಟವ. ಸರ್ವನಿಯಾಮಕ, ಪ್ರೇರಕ, ರಮಾಬ್ರಹ್ಮಾದಿಗಳೆಲ್ಲರಲ್ಲಿದ್ದು ಆಯಾ ಕ್ರಿಯೆಗಳನ್ನು ಮಾಡಿಸುವವ.

'ಅಣುರೇಣುವನ್ನಾರಂಭಿಸಿ ಇಡಿಯ ಬ್ರಹ್ಮಾಂಡ, ಅದರ ಹೊರ ಆವರಣಗಳನ್ನು, ಸಮಸ್ತ ಅವ್ಯಾಕೃತ ಆಕಾಶವನ್ನು ವ್ಯಾಪಿಸಿದವ.

'ಅನಾದ್ಯನಂತ ಕಾಲದಲ್ಲಿ ಎಲ್ಲ ಜೀವರಿಗೆ ಅನಿಮಿತ್ತ ಮಹೋಪಕಾರಿ. ಅಂತೆಯೇ ಪರಮಪ್ರೇಷ್ಠ. ಎಲ್ಲ ಕರ್ಮಗಳಿಂದ ಪೂಜನೀಯ. ನಮ್ಮ ಗುರುಗಳಲ್ಲಿ ಹಾಗೂ ಸಮಸ್ತ ಗುರುಗಳಲ್ಲಿ ಮತ್ತು ದೇವತೆಗಳಲ್ಲಿ ಅಂತರ್ಯಾಮಿಯಾಗಿರುವವ.

'ನಮ್ಮಾರ್ತದನಿ ಕೇಳುವವ, ಕೇಳಿ ಕರುಣಿಸುವವ, ಶರಣುಹೊಕ್ಕವರಿಗೆ ಮೊರೆಯಾಗುವವ. ಅವನಿಂದ ನಮಗಾಗುವ ಉಪಕಾರ ಅನಂತ."

ಹೀಗೆಲ್ಲ ನೆನೆಯುತ್ತಾ ನಮ್ಮ ಮನಸ್ಸಿನಲ್ಲಿ (ಬಿಂಬರೂಪಿಯಾದ) ಭಗವಂತನ ವಾಸನಾಮಯ ರೂಪವನ್ನು ಹಾಗೂ (ಪೀಠ) ಆವರಣದೇವತೆಗಳ ರೂಪಗಳನ್ನೂ ನಿರ್ಮಿಸಬೇಕು.

ಆದರೆ ಆ ರೂಪವೇ ದೇವರೆಂದು ತಿಳಿಯಬಾರದು. ಆ ಮಾನಸ ರೂಪದಲ್ಲಿ ವಾಯು ಲಕ್ಷ್ಮೀದೇವಿಯರನ್ನು (ಗೋಲಕಗಳನ್ನು) ಸ್ಮರಿಸಿ ಆವಾಹಿಸಿ ಅಲ್ಲಿ ಚಿನ್ಮಯ ಭಗವಂತನನ್ನು ಆವಾಹಿಸಿ ಉಪಾಸನೆ ಮಾಡಬೇಕು. ಅವನ ಸುಂದರತಮ ಲಾವಣ್ಯಮೂರ್ತಿಯನ್ನು ಸ್ಮರಿಸಬೇಕು.ಈ ತೆರನಾದ ನೆನಹು ದೇವರಲ್ಲಿ ಭಕ್ತಿ ನೀಡಿ ನಮ್ಮ ಮನವನ್ನು ಕರಗೊಳಿಸುವದು. ಬಳಿಕ ಭಾವಪೂರ್ಣ ಮನಸ್ಸಿನಿಂದ ಪೂಜೆ ಸಾಧ್ಯವಾಗುವದು. ಅಂತೆಯೇ ಜಪವು ಆದಿಯಲ್ಲಿ ಅಗತ್ಯ.

(ನಾರಾಯಣಮಂತ್ರಜಪಕ್ರಮ ಹಾಗೂ ಅದರ ಪೂರ್ವೋತ್ತರಾಂಗಗಳನ್ನು ಈ ಮೊದಲೇ ಪ್ರತ್ಯೇಕವಾಗಿ ಇದೇ ಪುಸ್ತಕದಲ್ಲಿ ಮುದ್ರಿಸಿದ್ದೇವೆ.)

ಪ್ರಾರ್ಥನೆ

'ನಿಮುಸೀದ ಗಣಪತೇ...'- "ಭಗವನ್, ಸ್ವಾಮಿನ್, ಆರಾಧ್ಯದೇವ, ಎಲ್ಲಕ್ಕೂ ನೀನು ನಿಯಾಮಕ.

ಸಿರಿ, ವಿಧಿ, ವಾಯು ಮುಂತಾದ ಅಮರಗಣದಲ್ಲಿ ನಿಂತು ನೀ ಎನ್ನ ಪ್ರೇರಿಸು.

ಬಂಧು ಬಾಂಧವರ ಇಷ್ಟಮಿತ್ರರ ಗಣದಲ್ಲಿ ನಿಂತು ಸಾಧನೆಗೆ ಅನುಕೂಲ ಮಾಡು.

ಮನಸ್ಸಿನ ನಾನಾವೃತ್ತಿಗಳ ಗಣದಲ್ಲಿ ಇದ್ದು ಸತ್ವವೃತ್ತಿಯನ್ನು ಹೆಚ್ಚಿಸು.

ಇಂದ್ರಿಯಗಣಗಳಲ್ಲಿ ಅಧಿಷ್ಠಿತನಾಗಿದ್ದು ಸತ್ಕಾರ್ಯಗಳನ್ನು ಮಾಡಿಸು.

ನಾನುಣ್ಣುವ ಭೋಗ್ಯಪದಾರ್ಥಗಳ ಗಣದಲ್ಲಿದ್ದು ಪವಿತ್ರಗೊಳಿಸು.

ವೇದಾದಿ ಸಚ್ಛಾಸ್ತ್ರಗಳ ಗಣದಲ್ಲಿ ನೀನಿದ್ದು ತತ್ತ್ವವನ್ನು ತಿಳಿಪಡಿಸು.

ನೀನು ಶ್ರೇಷ್ಠರಿಗಿಂತಲೂ ಶ್ರೇಷ್ಠ, ಪರತರ, ಸರ್ವೋತ್ತಮ ಎಂದು ಕವಿಗಳಿಗೆ ಒಮ್ಮತದಿಂದ ಸಮ್ಮತ.

ನಿನ್ನ ಆಜ್ಞೆ, ಪ್ರೇರಣೆ, ಶಕ್ತಿಪ್ರಚೋದನೆ, ಅನುಗ್ರಹಗಳಿಲ್ಲದಿದ್ದರೆ ಯಾವ ಕಾರ್ಯವೂ ಆಗುವಂತಿಲ್ಲ.

ಅತಿ ಹತ್ತಿರದಲ್ಲಾಗಲಿ, ಬ್ರಹ್ಮಾಂಡದ ಆಚೆ ದೂರದಲ್ಲಾಗಲೀ,

ಇಂದಾಗಲಿ, ಅನಂತಕಾಲದ ಹಿಂದು ಮುಂದಾಗಲೀ,

ಯೋಗ್ಯತೆಯಲ್ಲಿ ಅತಿ ಹತ್ತಿರದವರಾದ ಸಿರಿ, ವಾಯುಗಳಿಂದಾಗಲಿ,

ಯೋಗ್ಯತೆಯ ಗಣನೆಯಲ್ಲಿ ಅತಿ ದೂರರಾದ ಕ್ಷುದ್ರ ಜೀವಿಗಳಿಂದಾಗಲೀ

ಯಾವ ಕಾರ್ಯವೂ ಆಗಲು ಸಾಧ್ಯವಿಲ್ಲ.

ನಿನ್ನ ಕೃಪೆಯಿದ್ದರೆ ಶ್ವಪಚನೂ ಬ್ರಹ್ಮನಾಗುವನು. ಇರದಿದ್ದರೆ ಬ್ರಹ್ಮನೂ ಶ್ವಪಚನಾಗುವನು.

ಎಲೆಯ ಅಲುಗಾಟ, ಹುಲ್ಲಿನ ಹಾರಾಟ, ಕಣಗಳ ತೂರಾಟ ಯಾವುದೂ ಸಾಧ್ಯವಿಲ್ಲ.

ಅಂತೆಯೇ ನೀನು ಮಹನೀಯ, ಸರ್ವೋತ್ತಮ.

ನಾನು ಅತಿ ಕ್ಷುದ್ರ ಜಂತು, ದುರ್ಬಲ, ಶಕ್ತಿಹೀನ, ಸ್ವತಃ ಕಿಂಚಿತ್ತಾದರೂ ಸಾಮರ್ಥ್ಯವಿಲ್ಲದವ.

ಹಾಗಾಗಿ ಅಸ್ವತಂತ್ರತಮ. ಏನನ್ನೂ ಮಾಡಲಾರೆ. ಯಜ್ಞ , ಯಾಗ, ದಾನ, ತಪಸ್ಸು, ಹೋಮ, ಪೂಜೆ, ತೀರ್ಥಾಟನ ಮುಂತಾದ ವಿಹಿತಕರ್ಮಗಳಾಗಲಿ, ತಿರುಗುವದು, ಮಾತಾಡುವದು, ಕೊಡುವದು, ಕೊಂಬುವದು, ಬೆಟ್ಟ ಏರುವದು, ಸಮುದ್ರ ಈಜುವದು ಮುಂತಾದ ಕರ್ಮಗಳಾಗಲಿ,

ಕಣ್ಣಳಿಂದ ದರ್ಶನ, ಕಿವಿಗಳಿಂದ ಶ್ರವಣ, ಕೈಗಳಿಂದ ಸ್ಪರ್ಶನ, ಅಥವಾ ರೆಪ್ಪೆಗಳ ಸ್ಪಂದನ, ಶ್ವಸನ ಉಚ್ಛ್ವಸನ ಮುಂತಾದ ಅತಿ ಹಗುರಾದ ಕರ್ಮಗಳೇ ಆಗಲಿ ಕೇವಲ ನನ್ನಿಂದ ಮಾಡಲು ಸಾಧ್ಯವಿಲ್ಲ.

ನಿನ್ನ ಪ್ರೇರಣೆ, ನೀ ಕೊಟ್ಟ ಶಕ್ತಿ, ನೀ ನೀಡಿದ ಪ್ರವೃತ್ತಿ, ನಿನ್ನನುಗ್ರಹ ಇವುಗಳಿಂದಲೇ ಆಗಬೇಕು.

ನೀನು ಸಿರಿ, ವಿಧಿ, ವಾಯುಗಳಿಗೂ ಪ್ರೇರಕ, ಪ್ರವರ್ತಕ, ಅನುಗ್ರಾಹಕ, ಶಕ್ತಿಪ್ರಚೋದಕ.

ಎಲ್ಲರೂ ನಿನ್ನ ಹಂಗಿನಲ್ಲಿ ಇರುವರು. ನಿನಗೆ ಮಾತ್ರ ಯಾರ ಹಂಗೂ ಇಲ್ಲ. ನೀನೊಬ್ಬನೇ ಸ್ವತಂತ್ರ, ಪರರೆಲ್ಲ ಪರತಂತ್ರರು.

ಓ ಸಿರಿವಂತನೇ! ಈ ಪರಿಯ ಸೊಬಗಾವ ದೇವರಲೂ ನಾ ಕಾಣೆ.

ಅಸ್ವತಂತ್ರನಾದ ನಾನು ನಿನ್ನನ್ನು ಪೂಜಿಸಲಾರೆ. ನೀನೇ ನಿನ್ನನ್ನು (ನನ್ನಧಿಷ್ಠಾನದಲ್ಲಿದ್ದು) ಪೂಜಿಸಿಕೊ, ಫಲಮಾತ್ರ ನನಗೆ ನೀಡು, ಮಿಗಿಲಾಗಿ ದಯಮಾಡು''.

ತನ್ನನ್ನು ತಾನು ಪೂಜಿಸಿಕೊಳ್ಳುವದೂ ವಿಚಿತ್ರ. ಒಬ್ಬರು ಪೂಜಿಸಿದಾಗ ಮತ್ತೊಬ್ಬರಿಗೆ ಫಲನೀಡುವದು ಇನ್ನೂ ವಿಚಿತ್ರ ''ಚಿತ್ರಂ ಅರ್ಹ''.

'ಆರಾಧ್ಯಸೇ ಪ್ರಾಣಭೃತಾಂ...'- 'ಓ ನಾರಾಯಣ! ದೋಷದೂರ! ಜ್ಞಾನಪೂರ್ಣ! ಸುಖಪೂರ್ಣ! ಓ ಎನ್ನೊಡೆಯ! ನಿನ್ನನ್ನು ಮುಖ್ಯಪ್ರಾಣ ಆರಾಧಿಸುವನು.

ನಿನ್ನನ್ನು ಪೂಜಿಸುವ ಸಾಮರ್ಥ್ಯ ನನಗೆಲ್ಲಿ? ಆ ಮುಖ್ಯಪ್ರಾಣ ಸರ್ವರಿಗೂ ಪ್ರೇರಕ. ಎಲ್ಲ ಪ್ರಾಣಗಳ ಪ್ರನಾಯಕ. ಪ್ರಾಣಾದಿಗಳಿಗೆ ಹಿರಿಯ ಒಡೆಯ.

ಅಂಥ ವಾಯುದೇವನಿಂದ ಪೂಜಿಸಲ್ಪಡುವ ಸರ್ವಸ್ವಾಮಿಯೇ! ಓ ಸಿರಿಯೊಡೆಯ! ನನ್ನಲ್ಲಿ ಪ್ರಸನ್ನನಾಗು.'

''ಬಿಂಬೋಸಿ...'...'- (ದೇವರು ಬಿಂಬ, ನಾವವನ ಪ್ರತಿಬಿಂಬರು.

ಪ್ರತಿಬಿಂಬ ಎನ್ನುವದಕ್ಕೆ ಇಷ್ಟು ಅರ್ಥ. ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವು ತೋರುವುದು.

ಬಿಂಬರಾದ ನಾವು ಚಲಿಸಿದಂತೆ ಆ ಪ್ರತಿಬಿಂಬವು ಚಲಿಸುವದು. ಬಿಂಬ ಚಲಿಸದಿರೆ ಪ್ರತಿಬಿಂಬವೂ ಚಲಿಸುವದಿಲ್ಲ.

ಬಿಂಬದಲ್ಲಿರುವ ಗುಣಧರ್ಮಗಳು ಪ್ರತಿಬಿಂಬದಲ್ಲಿ ಕಾಣಸುವವು. ಬಿಂಬದಲ್ಲಿ ಇಲ್ಲದ ಗುಣ ಪ್ರತಿಬಿಂಬದಲ್ಲಿ ಕಾಣಲು ಸಾಧ್ಯವಿಲ್ಲ.

ಶಾಸ್ತ್ರಗಳು ಈ ನಿಟ್ಟಿನಲ್ಲಿ ಚೇತನರನ್ನು ಚೇತನೋತ್ತಮನ ಪ್ರತಿಬಿಂಬರೂಪರೆಂದು ಬಣ್ಣಿಸುತ್ತವೆ.

ಜೀವ ದೇವರಂತೆ ಇರುವ. ದೇವರಧೀನನಾಗಿರುವ. ಅಂತೆಯೇ ದೇವರ ಪ್ರತಿಬಿಂಬ)

'ಓ ದೇವ! ನೀನು ಬಿಂಬ, ನಾನು ಪ್ರತಿಬಿಂಬ.

ಆದರೆ, ನೀನು ನಿರ್ದೋಷ, ನಾನು ಸದೋಷ.

ನೀನು ಅನಂತ ನಾನು ಸಾಂತ.

ನೀನು ಆನಂದಪೂರ್ಣ ನಾನು ದುಃಖಭರಿತ.

ನೀನು ಜ್ಞಾನಮಯ ನಾನು ಅಜ್ಞಾನಘನ.

ನಾನು ಎಣಿಕೆ ಇಲ್ಲದ ದೋಷಗಳ ಗಣಿ. ಅಜ್ಞಾನ, ಮಿಥ್ಯಾಜ್ಞಾನ, ಸಂಶಯ, ಕಾಮ, ಕ್ರೋಧ, ಮದ, ಮಾತ್ಸರ್ಯ, ಮೋಹ, ಮಮಕಾರ, ಕಪಟ, ಕ್ರೌರ್ಯ, ದೌರ್ಜನ್ಯ, ಕೌಟಿಲ್ಯ, ಕೃತಘ್ನತೆ, ಪಾರುಷ್ಯ, ನೃಶಂಸತ್ವ ಮುಂತಾದ ದೋಷಗಳಿಗೆ ತವರು ನಾನು.

ಓ ಸ್ವಾಮಿನ್, ನಿರ್ದೋಷನೆ! ಈ ಎಲ್ಲ ದೋಷಗಳು ನನ್ನನ್ನು ಅನಾದಿಯಿಂದ ಮೆತ್ತಿಕೊಂಡಿವೆ, ಸುತ್ತಗಟ್ಟಿ ಮುತ್ತಿಹಾಕಿವೆ.

ನಾನು ಪರಮದುರ್ಬಲನಾದುದರಿಂದ ಏನೂ ಮಾಡುವಂತಿಲ್ಲ. ನೀನಾದರೊ 'ವಿಷ್ರತಮ' ಪ್ರಬಲತಮ.

ಅನಾದಿ ನಿಬಿಡ ಅವಿದ್ಯಾಂಧಕಾರವನ್ನೇ ನಿನ್ನ ಪಾರದರ್ಶನ ನೀಡಿ ಸಿಡಿಲಿಸಂದರಿ ಸೀಳಿಹಾಕುವ ಓ ಅನಂತಶಕ್ತೇ! ಓವ್ರೋ ಮಾಯಾಪತೇ! ನಿನಗೆ ಈ ದೋಷಗಳು ಕ್ಷುದ್ರವೇ ಸರಿ.

ದಯಾಘನ! ನನ್ನೀ ದೋಷಗಳನ್ನು ಮರಳಿಬಾರದಂತೆ ತೊಲಗಿಸು.

ಆ ಉಪಕಾರಕ್ಕೆ ಪ್ರತಿಯಾಗಿ 'ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ'' ''ನಾನೆಂದಿಗೂ ಮರೆ ಯೆ ನೀ ಮಾಡಿದುಪಕಾರ.'

'ಭಗವನ್ ಯನ್ಮಯಾ...' 'ಭಗವನ್! ನೀನು ನನ್ನಿಂದ ಮಾಡಿಸುವ ಶುಭಕರ್ಮಗಳೆಲ್ಲವೂ ನಿನ್ನ ಪೂಜೆಯಾಗಲಿ.'

[ಕೆಲವರ ವಾದ - ದೇವರು ನಮ್ಮಿಂದ ಮಾಡಿಸುವ ಅಶುಭಕರ್ಮಗಳು (ನಿಷಿದ್ಧಕರ್ಮಗಳು) ಮತ್ತು ಸ್ವಾರ್ಥದ ಕರ್ಮಗಳೂ ದೇವರಿಗೆ ಸಮರ್ಪಿಸಿದ ಮಾತ್ರಕ್ಕೆ ಅವನ ಪೂಜಾರೂಪವಾಗುವವೆಂದು ಹೇಳುತ್ತಾರೆ.

ತಾವು ಬಿಡಲಾರದ ಪಾಪಕರ್ಮಗಳಿಗೆ ಧರ್ಮದ ಅಭಿವ್ಯಕ್ತಿ ತಾವು ಧಾರ್ಮಿಕರು, ಭಗವದ್ಭಕ್ತರು ಎಂದು ಮುಖವಾಡವನ್ನು ಹಾಕುವ ಆತ್ಮವಂಚನೆಯ ಪ್ರಯತ್ನ ಮಾತ್ರವಿದು.

ಆದರೆ ಇದು ಪೂರ್ಣ ತಪ್ಪು. ಏಕೆಂದರೆ ವಿಹಿತಕರ್ಮಗಳು ಮಾತ್ರ ಭಕ್ತಿಯಿಂದ ಮಾಡಿ ಸಮರ್ಪಿಸಿದಾಗ ಪೂಜೆಯಾಗುವದು.

ಹೊರತು, ನಿಷಿದ್ಧವಾದ ಕರ್ಮಗಳು ಹಾಗೂ ಸ್ವಾರ್ಥದಿಂದ ಮಾಡಿದ ಕರ್ಮಗಳು ಎಂದೆಂದಿಗೂ ಎಷ್ಟೇ ಭಕ್ತಿಯಿಂದ ಮಾಡಿ ಸಮರ್ಪಿಸಿದರೂ ಈಶ್ವರಪೂಜೆಯಾಗಲು ಸಾಧ್ಯವಿಲ್ಲ.

ಆದ್ದರಿಂದ ಭಗವಂತನ ಕರ್ತೃತ್ವದ ಅನುಸಂಧಾನಮಾಡಿ ಭಕ್ತಿಯಿಂದ ಸಮರ್ಪಿಸಿದಮಾತ್ರಕ್ಕೆ ನಿಷಿದ್ಧವಾದಕರ್ಮಗಳು ಭಗವತ್ಪೂಜೆಯಾಗುವದು ಎಂಬ ವಾದ ಮೂಢಸಾಹಸದ ವಾದ. ದುಷ್ಪಜ್ಞಾವಾದ.

ಈ ವಾದ ತಪ್ಪು ಎನ್ನುವದಕ್ಕೆ ನೂರಾರು ಪ್ರಮಾಣಗಳುಂಟು. ಕೆಲವನ್ನು ಮಾತ್ರ ಇಲ್ಲಿ ಉದಾಹರಿಸೋಣ.

ಮೇಲೆ ಕಾಣುವ ಶ್ಲೋಕದಲ್ಲಿ 'ಶುಭಂ ಕಾರಯಸಿ ಪ್ರಭೋ'. ಎಲ್ಲವನ್ನೂ ದೇವರು ಮಾಡಿಸುವ ಎಂಬ ಅನುಸಂಧಾನದಿಂದಲೇ ಕರ್ಮವು ದೇವರ ಪೂಜೆಯಾಗುವದಾದರೆ ಶುಭಂ ಎಂಬ ಶಬ್ದವೇ ಅನಾವಶ್ಯಕ.

ಗೀತಾತಾತ್ಪರ್ಯ- "ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ ತದ್ವಿರುದ್ಧಃ ಸರ್ವೋಽಪ್ಯಧರ್ಮಃ" ಭಕ್ತಿಯಿಂದ ಆರಾಧಿಸಿದ ಮಾತ್ರಕ್ಕೆ ಪರಮಧರ್ಮವಾಗುವದಾದರೆ ಸ್ವವಿಹಿತ ವೃತ್ತಿ ಎಂಬ ಶಬ್ದವು ಸರ್ವಥಾ ಅನಾವಶ್ಯಕ.

ನ್ಯಾಯದೀಪಿಕಾ- 'ನನು ಯುದ್ಧಾದಿ ಸ್ವವಿಹಿತವೃತ್ತಿನಿವೃತ್ತೋಽಪಿ ಅರ್ಜುನಃ ನ ಪರಧರ್ಮನಿವೃತ್ತಃ ಭಕ್ತ್ಯಾದಿಮತ್ತ್ವಾತ್ । ಅತಃ ಕಿಂ ಚೋದ್ಯತೇ ಇತ್ಯತಃ ಆಹ ।ತದಿತಿ। ನ ಭಕ್ತ್ಯಾದಿಕಂ ಪ್ರತ್ಯೇಕಂ ಪರಮಧರ್ಮಃ ಯೇನ ತಾವತಾ ತಸ್ಯ ನ ಪರಮಧರ್ಮನಿವೃತ್ತಿಃ ಕಿಂತು ಮಿಲಿತಮೇವ ಅತಃ ಅನ್ಯತಮಾಭಾವೇಽಪಿ ಪರಧರ್ಮನಿವೃತ್ತೇಃ ಯುಕ್ತಂ ತಚ್ಚೋದನಮಿತಿ ಭಾವಃ

ಯೋಗದೀಪಿಕಾ- 'ತಥಾ ನಿಷೇಧತಸ್ತ್ಯಕ್ತಾನ್ ಸರ್ವಾನ್ ತಸ್ಮೈ ಸಮರ್ಪಯೇತ್' ಸಮರ್ಪಣೆ ಮಾಡಿದ ಮಾತ್ರಕ್ಕೆ ಎಲ್ಲ ಕರ್ಮಗಳಿಂದಲೂ ಹರಿಪ್ರೀತಿಯಾಗುವದಾದರೆ ನಿಷೇಧತಸ್ತ್ಯಕ್ತಾನ್ ಎಂಬ ನಿಷಿದ್ಧಗಳ ತ್ಯಾಗದ ಮಾತನ್ನೇ ಆಡಬಾರದಾಗಿತ್ತು.

ಹೀಗೆ ಅನೇಕಾನೇಕ ಪ್ರಮಾಣಗಳನ್ನು ಈ ವಿಷಯದಲ್ಲಿ ತಿಳಿಯಬಹುದು.

ಇನ್ನೊಂದು ಪ್ರಮಾಣ.

ಗೀತಾ-

"ಯಸ್ಯ ನಾಹಂಕೃತೋ ಭಾವಃ ಬುದ್ಧಿರ್ಯಸ್ಯ ನ ಲಿಪ್ಯತೇ।
ಹತ್ವಾಪಿ ಸ ಇಮಾನ್ ಲೋಕಾನ್ ನ ಹಂತಿ ನ ನಿಬಧ್ಯತೇ॥"

ಗೀತಾತಾತ್ಪರ್ಯ -

'ಯಸ್ತದರ್ಥಂ ಸಮುತ್ಪನ್ನಃ ಯಥಾ ರುದ್ರೋ ಯಥಾ ಯಮಃ
ಹತ್ವಾಪಿ ಸ ಇಮಾನ್ ಲೋಕಾನ್ ನ ಹಂತಿ ನ ನಿಬಧ್ಯತೇ।
ಅಧ್ಯಕ್ಷ ತದರ್ಥಂ ಜಾತೋಽಪಿ ಬಧ್ಯತೇ ದೈತ್ಯವತ್ ಧ್ರುವಂ।
ಅಪರೋಕ್ಷದೃಟ್ ನ ಜಾತೋ ಯಃ ತದರ್ಥಂ ಮುಕ್ತಿಗಂ ಸುಖಂ।
ಹ್ರಸೇತ್ತಸ್ಯ ಪರೋಕ್ಷಜ್ಞ ಕಿಂಚಿದ್ದೋಷೇಣ ಲಿಪ್ಯತೇ'' ಇತಿ

ಈ ಎಲ್ಲ ಮಾತುಗಳಿಂದ 'ನಿಷಿದ್ಧಕರ್ಮಗಳನ್ನು ದೇವರು ಮಾಡಿಸಿದನೆಂದು ಸಮರ್ಪಿಸಿದ ಮಾತ್ರಕ್ಕೆ ಆ ಪಾಪವೆಲ್ಲವೂ ಪೂರ್ಣ ನಿರ್ಮೂಲವಾಗುವವು' ಎಂಬ ವಾದವು ಸರಿಯಲ್ಲವೆಂದು ನಿಶ್ಚಯಿಸಿಕೊಳ್ಳಬಹುದು.]

'ಅನಂಶಸ್ಯಾಪಿ...'- (ನಾವು ಭಾರವಾದ ಬಂಡೆಯನ್ನು ಎತ್ತುವಾಗ ಬಳಸುವ ಶಕ್ತಿಯನ್ನು ಹುಲ್ಲು ಎತ್ತುವಾಗ ಬಳಸುವದಿಲ್ಲ.

ಅಂದಮೇಲೆ ಹೆಚ್ಚು ಶಕ್ತಿಯನ್ನು ಒಮ್ಮೆ, ಕಡಿಮೆ ಶಕ್ತಿಯನ್ನು ಒಮ್ಮೆ ಬಳಸುವದು ನಮ್ಮ ಅನುಭವಕ್ಕೆ ಸಿದ್ಧ.

ಆದರೆ ತಾತ್ವಿಕವಾಗಿ ಇದು ಸಾಧ್ಯವಿಲ್ಲ. ಜೀವನಿಗೆ ಒಂದೇ ಶಕ್ತಿ. ಹೆಚ್ಚು ಶಕ್ತಿ ಒಂದು, ಕಡಿಮೆ ಶಕ್ತಿ ಒಂದು ಎಂದು ವಿಭಾಗವಿಲ್ಲ.

ಶಕ್ತಿಯೇ ಜೀವ. ಜೀವವೇ ಶಕ್ತಿ. ಜೀವ ಶಕ್ತಿಗಳಿಗೆ ಅಭೇದ. ಒಂದೇ ಜೀವದಲ್ಲಿ ಸ್ವಲ್ಪ ಜೀವ, ಹೆಚ್ಚು ಜೀವ ಎಂಬ ವಿಭಾಗ ಸಲ್ಲದು.

ಅಂದ ಮೇಲೆ ಜೀವನಿಂದ ಅಭಿನ್ನವಾದ ಒಂದು ಶಕ್ತಿಯಲ್ಲಿಯೂ ಹೆಚ್ಚು ಕಡಿಮೆ ಎಂಬ ವಿಭಾಗ ಸಲ್ಲದು.

ಹಾಗಾಗಿ ಹೆಚ್ಚು ಶಕ್ತಿಯನ್ನು ಬಳಸಿ ಬಂಡೆಯನ್ನು, ಕಡಿಮೆ ಶಕ್ತಿಯನ್ನು ಬಳಸಿ ಹುಲ್ಲನ್ನು ಎತ್ತುವದಾಗಲಿ ಸಾಧ್ಯವಿಲ್ಲವೆಂದಾಯಿತು.

ಇದು ಸಾಧ್ಯವಾಗಬೇಕಾಗಿದ್ದರೆ ಜೀವನಲ್ಲಿ ತುಂಡುಗಳು ಇವೆ ಎಂದು ಒಪ್ಪಬೇಕಾದೀತು. ಈ ತೆರನಾದ ವಾಸ್ತವಿಕ ಬಿಕ್ಕಟ್ಟಿನಲ್ಲಿ)

ದೇವರು ಜೀವರ ಅಂಶಗಳಲ್ಲಿ ಭೇದಗೊಳಿಸುವದಿಲ್ಲ. ಅತ್ಯಂತ ಅಭೇದವನ್ನೇ ಉಳಿಸುವನು.

ಆದರೂ ಅಚ್ಛೇದ್ಯ ಅವಿಭಾಜ್ಯರಾದ ಜೀವರಲ್ಲಿ ಅಭಿನ್ನವಾದ ತುಂಡು ತುಣುಕುಗಳನ್ನು ಮಾಡುವನು. ಇದು ಕೇವಲ ದೇವರ ಅಚಿಂತ್ಯವಾದ ಶಕ್ತಿಗೆ ಮಾತ್ರ ನೀಗುವದು.

ಹೀಗೆ 'ಅವಿಭಾಜ್ಯರಾದ ಜೀವರ ಶಕ್ತಿಯಲ್ಲಿ (ಹೆಚ್ಚು ಕಡಿಮೆ ಎಂಬುದಾಗಿ) ಭಾಗಗಳನ್ನು ಮಾಡಿ ಆ ಆ ಕಾರ್ಯಕ್ಕೆ ಬೇಕಾಗುವ ತಕ್ಕ ಶಕ್ತಿಯನ್ನು ಜೀವನಿಗೆ ಒದಗಿಸಿ ಕಾರ್ಯವನ್ನು ಮಾಡಿಸುವ ಓ ಸ್ವತಂತ್ರ ಪ್ರಭುವೇ! ನಿನಗೆ ನನ್ನ ಕೋಟಿ ಕೋಟಿ ಪ್ರಣಾಮ. ಅನಂತ ನಮನ.'

'ಸ್ವವಂದನಂ ಯಥಾ...'- 'ತಂದೆ ತನ್ನ ಮಗುವಿನ ಕತ್ತುಬಾಗಿಸಿ ವಂದನೆ ಮಾಡಿಸಿಕೊಂಡು ತಾನೇ ಹರಸಿ ಆಶೀರ್ವದಿಸುವನು.

ಅಂತೆಯೇ ಭಗವಂತ ನಮ್ಮ ದೇಹ, ಇಂದ್ರಿಯ, ಮನಸ್ಸುಗಳನ್ನು ಮತ್ತು ಆತ್ಮನನ್ನು ಹಾಗೂ ಇವೆಲ್ಲದರ ಅಭಿಮಾನಿ ದೇವತೆಗಳನ್ನು ತಾನೇ ಪ್ರೇರಿಸಿ ನಮ್ಮಿಂದ ಪೂಜೆ ಮಾಡಿಸಿಕೊಂಡು ನಮ್ಮನ್ನು ಅನುಗ್ರಹಿಸುತ್ತಾನೆ.

ಇಲ್ಲಿ ನಿಜವಾಗಿ ದೇವರೇ ಮಾಡಿದರೂ (ಪರಾಧೀನರಾಗಿ) ನಾವು ಮಾಡಿದೆವು ಎಂಬ ಮಾತು ತಪ್ಪಲ್ಲ.'

'ಜಯಾಚ್ಯುತ...'- 'ಅಚ್ಯುತನಿಗೆ ಜಯವಾಗಲಿ! ಅನಂತನಿಗೆ ಜಯವಾಗಲಿ! ಓ ಪ್ರಭುವೇ, ಓ ಹರಿಯೇ, ಓ ಕೃಷ್ಣನೇ ನೀನು ಜಯಶೀಲನಾಗು. ಸಿರಿಯೊಡೆಯ, ಕೇಶವ ನೀನು ಜಯಶೀಲನಾಗು.'

'ಮಯಿ ಸ್ಥಿತೋ...'- 'ನನ್ನಲ್ಲಿಯೂ ನನ್ನ ಅಂಗಗಳಲ್ಲಿಯೂ ನಿಂತಿರುವ, ಎಲ್ಲವನ್ನೂ ತುಂಬಿರುವ ಶ್ರೀಹರಿಯು ಸ್ವತಂತ್ರನು.

ಜನ್ಮಮೃತಿ ಮೊದಲಾದ ದೋಷವಿಲ್ಲದ ಭಗವಂತ ಅಸ್ವತಂತ್ರನಾದ ನನ್ನನ್ನು ತನ್ನ ಮನಬಂದಂತೆ (ನನ್ನ ಕರ್ಮಾನುಸಾರ) ಪ್ರೇರಿಸುವನು.'

'ಸ್ವಾತ್ಮನಸ್ತಸ್ಯ ಪೂಜಾ...'- 'ನನ್ನ ಮನ ಮೈ ಮಾತುಗಳ ಕ್ರಿಯೆಗಳನ್ನೆಲ್ಲ ದೇವರು ತನ್ನ ಪೂಜೆಗಾಗಿ ಮಾಡಿಸುವನು. ಅಂತೆಯೇ ವಿಶ್ವದಲ್ಲಿ ನಡೆಯುವ ಎಲ್ಲ ಕ್ರಿಯೆಗಳಿಗೆ ದೇವರೇ ಕರ್ತೃ, ದೇವರೇ ಉದ್ದೇಶ್ಯ.'

ದೇವರಾಳುವ ಈ ವಿಶ್ವದಲ್ಲಿ ದೇವರ ಮನಸ್ಸಿಗೆ ಒಪ್ಪಿಗೆಯಾಗದಿದ್ದರ್ದು ಒಂದೂ ನಡೆಯುವಂತಿಲ್ಲ.

ಹಾಗೇನಾದರೂ ಆದಲ್ಲಿ ದೇವರು ಸ್ವತಂತ್ರನಾಗಲಾರ. ಕಾರಣ ಎಲ್ಲ ಕರ್ಮಗಳನ್ನೂ ತನ್ನಿಚ್ಛೆಯಂತೆಯೇ ಮಾಡಿಸುವ.

ಇಡಿಯ ಪ್ರಪಂಚದಲ್ಲಿ ನಡೆಯುವ ಯಾವುದೊಂದು ಕ್ರಿಯೆಯೂ ದೇವರಿಗೆ ಬೇಡವಾದದ್ದಲ್ಲ. ದೇವರಿಗೆ ಬೇಜಾರು ತರಿಸುವದಲ್ಲ.

ಎಲ್ಲ ಕ್ರಿಯೆಯಿಂದಲೂ ದೇವರಿಗೆ ಪ್ರೀತಿ. ಪ್ರೀತಿ ತರಿಸುವ ಕ್ರಿಯೆಯೇ ಪೂಜೆ. ಎಂದ ಮೇಲೆ ಎಲ್ಲ ಕ್ರಿಯೆಯೂ ಪ್ರೀತಿ ತರಿಸುವದು. ಹಾಗಾಗಿ ಎಲ್ಲ ಕ್ರಿಯೆಯೂ ದೇವರ ಪೂಜೆ.

ಆದರೆ ಇದು ದೇವರ ಹಾಗೂ ದೇವತೆಗಳ ದೃಷ್ಟಿಯಲ್ಲಿ ಮಾತ್ರ. 'ಅಸತಾಮಧಮಾಚಾರಃ ಹರಿದೃಷ್ಟ್ಯಾ ಆತ್ಮಪೂಜನಂ'

ದೇವರಿಂದಲೂ ದೇವತೆಗಳಿಂದಲೂ ಪ್ರೇರಿತನಾಗಿ ನಿಷಿದ್ಧಕರ್ಮಗಳನ್ನು ಮಾಡುವ ವ್ಯಕ್ತಿಯ ದೃಷ್ಟಿಯಿಂದ ಸರ್ವಥಾ ಅಲ್ಲ.

ಏಕೆಂದರೆ ಈ ಕರ್ಮಗಳೆಲ್ಲವೂ ಅವನಿಗೆ ನಿಷಿದ್ಧವಾದವುಗಳು. ಕರ್ಮಾನುಸಾರವಾಗಿ ಪ್ರೇರಿಸಿ ಅವರವರಿಂದ ನಿಷಿದ್ಧಕರ್ಮಗಳನ್ನು ಮಾಡಿಸುವ ದೇವರಿಗಾಗಲಿ ದೇವತೆಗಳಿಗಾಗಲಿ ಇವು ಸತ್ಕರ್ಮಗಳೇ.

ಆದ್ದರಿಂದಲೇ ನಿಷಿದ್ಧಕರ್ಮಗಳನ್ನು ಮಾಡುವ ವ್ಯಕ್ತಿಗೆ ಅಧೋಗತಿಯಾಗುವದರಲ್ಲಿ ಸಂದೇಹವಿಲ್ಲ. 'ತಸ್ಯ ಅಧೋಗಮನಾಯೇತಿ.'

ನಿಷಿದ್ಧಕರ್ಮಗಳನ್ನು ಪ್ರೇರಿಸಿದರೂ ದೇವತೆಗಳಿಗೆ ಅದರಿಂದ ಪಾಪಲೇಪವಿಲ್ಲ.

'ಜ್ಞಾನಕರ್ಮೇಂದ್ರಿಯಗತೈಃ' - 'ಓ ಸಿರಿಯೊಡೆಯ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಲ್ಲಿ ಅಭಿಮಾನಿಗಳಾಗಿ ನಿಯಮಿಸುತ್ತಿರುವ ಬ್ರಹ್ಮ ರುದ್ರಾದಿಗಳಿಂದ ಸನ್ಮಾರ್ಗದಲ್ಲಿ ಪ್ರೇರಿತನಾದ ನಾನು ಇಂದು ನಿನ್ನನ್ನು ಪೂಜಿಸುವೆ.'

ಕಲಶಪೂಜಾ

ಇದಾದ ಬಳಿಕ ಕಲಶ ಪೂಜೆ. ಜಲಾಶಯದಿಂದ ಪ್ರತ್ಯೇಕವಾಗಿ ಪಾತ್ರೆಗಳನ್ನು ನೀರು ತುಂಬಿ ತರುವುದೇ ಮೇಲು.

ಒಂದೇ ಪಾತ್ರವನ್ನು ತುಂಬಿ ತಂದು ಬೇರೆ ಬೇರೆ ಪಾತ್ರೆಗಳಲ್ಲಿ ವಿಭಾಗಗೈಯುವುದು ಅನಿವಾರ್ಯ ಪಕ್ಷ

೧) ಪೂರ್ಣಕುಂಭ, ೨) ಸ್ನಾನಕುಂಭ ೩) ನಿರ್ಮಾಲ್ಯಾಭಿಷೇಕ,
೪)ನೈವೇದ್ಯಪ್ರೋಕ್ಷಣ, ೫) ಅರ್ಘ್ಯಾದಿ ಪಾತ್ರೆಗಳನ್ನು ತುಂಬುವದು,
೬)ಪಾನೀಯ, ೭) ನಮ್ಮ ಕೈ ತೊಳೆಯುವದಕ್ಕಾಗಿ

[೮)ಶಂಖಭ್ರಮಣ ೯) ಗಂಧವನ್ನು ತೇಯುವದಕ್ಕೆ]

ಹೀಗೆ ಅನೇಕ ಬಗೆಯ ಪಾತ್ರೆಗಳಲ್ಲಿ ನೀರು ತುಂಬಿ ತರಬೇಕು.

ಇವುಗಳಲ್ಲಿಯ ಎರಡು ಕಲಶಗಳನ್ನು ಪೂಜಿಸುವದು. ಒಂದು ಸ್ನಾನೀಯ ಬೃಹತ್‌ಕಲಶ. ಇನ್ನೊಂದು ಅದಕ್ಕೂ ಚಿಕ್ಕದಾದ ಪೂರ್ಣ ಕಲಶ.

ಮೊದಲನೆಯ ಕಲಶಜಲವನ್ನು ಶಂಖದಿಂದ ಅಭಿಷೇಕ ಮಾಡಬೇಕು. ಎರಡನೆಯದನ್ನು ಕುಂಭವನ್ನೇ ಎತ್ತಿ ಅಭಿಷೇಕ ಮಾಡಬೇಕು.

ಬಳಿಕ ಶಂಖ, ಚಕ್ರ, ಗದಾ, ಪದ್ಮ ಧೇನು, ಗರುಡ, ಚಂದ್ರ, ನಾರಾಚ, ಹಂಸವೆಂಬ ಮುದ್ರೆಗಳನ್ನು ತೋರಿಸಬೇಕು.

ಗರುಡ ಮುದ್ರೆಯಿಂದ ವಿಷನಿವಾರಣೆ, ಧೇನುಮುದ್ರೆಯಿಂದ ಅಮೃತಪರಿಪೂರಣ, ಶಂಖಮುದ್ರೆಯಿಂದ ಪವಿತ್ರೀಕರಣ, ಚಕ್ರಮುದ್ರೆಯಿಂದ ಸಂರಕ್ಷಣ, ಗದಾ ಮುದ್ರೆಯಿಂದ ದಿಗ್ಬಂಧನ, ಪದ್ಮ ಮುದ್ರೆಯಿಂದ ಜಲಶೋಧನ.

ಕಲಶದಲ್ಲಿ ತುಂಬಿದ ನೀರಿನ ಮೇಲ್ಭಾಗದಲ್ಲಿ ಆರುದಲದ ತಾವರೆಯನ್ನು ತುಲಸೀದಲದಿಂದ ಚಿತ್ರಿಸಿ ಕಲಶಗಳ ಮುಖದ ಮೇಲೆ ಬಲಗೈ ಇಡಬೇಕು.

ಬುಧ ವರುಣರು ಜಲದೇವತೆಗಳು. ಜಲದಲ್ಲಿ ಅವರನ್ನು, ಅವರಿಬ್ಬರ ಅಂತರ್ಗತ ಭಾರತೀರಮಣಮುಖ್ಯ ಪ್ರಾಣಾಂತರ್ಯಾಮಿಯಾದ ಲಕ್ಷ್ಮೀನಾರಾಯಣನನ್ನೂ ಆವಾಹಿಸಬೇಕು.

ಆ ಕಲಶದಲ್ಲಿ ತುಲಸೀಪುಷ್ಪಗಳನ್ನು ಹಾಕಿ ಬಲಗೈಯಿಂದ ಕಲಶವನ್ನು ಸ್ಪರ್ಶಿಸಬೇಕು.

ಕಲಶದ ಮುಖದಲ್ಲಿ ವಿಷ್ಣು ಕಂಠದಲ್ಲಿ ರುದ್ರ, ಮೂಲದಲ್ಲಿ ಬ್ರಹ್ಮ ಮಧ್ಯದಲ್ಲಿ ವರ್ಣದೇವತೆಗಳು ಇರುವರು.

'ಏಳು ಸಾಗರ, ಏಳುದ್ವೀಪ, ಇಡಿಯ ಪೃಥ್ವೀ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ ಕಲ್ಪ, ವ್ಯಾಕರಣ, ನಿರುಕ್ತ ಛಂದಸ್ಸು, ಜ್ಯೋತಿಷ್ಯ ಎಂಬ ಆರು ವೇದಾಂಗಗಳು'

ಇದೆಲ್ಲದರ ಅಭಿಮಾನಿದೇವತೆಗಳು ಕಲಶದ ಕುಕ್ಷಿಯಲ್ಲಿ ನೆಲೆಸಿರುವರು ಎಂದು ಚಿಂತಿಸಬೇಕು.

ಇದಲ್ಲದೇ ಗಾಯತ್ರೀ, ಸಾವಿತ್ರೀ, ಪುಷ್ಟಿಕರೀ, ಶಾಂತಿ ಎಂಬ ಎಲ್ಲ ದೇವತೆಗಳು ದೇವರ ಪೂಜೆಗಾಗಿ ನನ್ನ ದುರಿತವನ್ನು ದೂರಮಾಡುವದಕ್ಕಾಗಿ ಬರಲಿ ಎಂದು ಪ್ರಾರ್ಥಿಸಬೇಕು.

ಗಂಗೆ, ಯಮುನೆ, ಸರಸ್ವತೀ, ಶುತುದ್ರಿ, ಅಸಿಕ್ನೀ, ಗೋದಾವರೀ, ನರ್ಮದೆ, ಸಿಂಧು, ಕಾವೇರಿ ಈ ಎಲ್ಲ ನದೀದೇವತೆಗಳು ಕಲಶಜಲದಲ್ಲಿ ಸನ್ನಿಹಿತರಾಗಲಿ ಎಂದು ಪ್ರಾರ್ಥಿಸಬೇಕು.

ಎಲ್ಲ ಸಮುದ್ರ, ನದಿ, ನದ, ತೀರ್ಥಗಳ ಅಭಿಮಾನಿ ದೇವತೆಗಳೆಲ್ಲ ದೇವರ ಪೂಜೆಯಲ್ಲಿ ಅಭಿಷೇಕಕ್ಕಾಗಿ ಅತ್ಯಾದರದಿಂದ ಬಂದು ನೆಲೆಗೊಳ್ಳಲಿ ಎಂದು ಕೇಳಿಕೊಳ್ಳಬೇಕು.

ಬಳಿಕ ಸ್ನಾನೀಯ ಬೃಹತ್‌ಕಲಶದ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ನಾರಾಯಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧರನ್ನು ಗಂಧಸಹಿತ ತುಲಸೀದಲದಿಂದ ಪೂಜಿಸಬೇಕು.

ನಂತರ ಎರಡೂ ಕಲಶಗಳ ನೀರಿನಲ್ಲಿ ಮುಂದೆ ನಿರೂಪಿಸುವಂತೆ ಪೀಠಪೂಜೆಯನ್ನು ಮಾಡಬೇಕು.

'ಓ ನಾರಾಯಣ, ಸೂರ್ಯಾಂತರ್ಗತ ಅಜಾದಿ ನೂರುದೇವತೆಗಳಿಂದ ಒಡಗೂಡಿ ಸ್ನಾನೀಯಬೃಹತ್ ಕಲಶದಲ್ಲಿ ಸನ್ನಿಹಿತನಾಗು' ಎಂದು ಯಾಚಿಸಬೇಕು.

ಬಳಿಕ ಅಜ, ಅನಂದಾದಿ ರೂಪಗಳನ್ನು ಕಲಶದಲ್ಲಿ ಆವಾಹಿಸಬೇಕು. ಈ ಅಜ ಅನಂದಾದಿರೂಪಗಳೆಲ್ಲವೂ ಸೂರ್ಯನಿಂದ ಹೊರಹೊಮ್ಮಿ ಎರಡೂ ಕಲಶಗಳಲ್ಲಿ ಪ್ರವೇಶಿಸುತ್ತವೆ ಎಂದು ಭಾವಿಸಬೇಕು.

ಮೂಲನಾರಾಯಣನ ಜೊತೆಯಲ್ಲಿ ಅಜಾದಿ ಶಿಂಶುಮಾರಾಂತ ದೇವತೆಗಳನ್ನು ಸ್ನಾನೀಯ ಬೃಹತ್ ಕಲಶದಲ್ಲಿ (ಕ್ರಮವಾಗಿ) ಹಾಗೂ ಶಿಂಶುಮಾರಾದಿ ಅಜಾಂತ ದೇವತೆಗಳನ್ನು ಪೂರ್ಣಕುಂಭದಲ್ಲಿ (ವ್ಯತ್ಕ್ರಮವಾಗಿ) ಆವಾಹಿಸಬೇಕು.

ಆಮೇಲೆ ಮಾತೃಕಾನ್ಯಾಸ, ತತ್ವನ್ಯಾಸ ಕ್ರುದ್ಧೋಲ್ಕಾದಿ ಪಂಚಾಂಗನ್ಯಾಸ, ಅಷ್ಟಾಕ್ಷರನ್ಯಾಸಗಳನ್ನು ಮಾಡಬೇಕು.

'ಉದ್ಯದ್ಭಾಸ್ವತ್' ಎಂಬ ಶ್ಲೋಕಗಳಲ್ಲಿ ಹೇಳಿದಂತೆ ಧ್ಯಾನಿಸಬೇಕು. ಎರಡೂ ಕಲಶಗಳನ್ನು ಮುಟ್ಟಿ ಭಗವಂತನ ವಿಶೇಷ ಸನ್ನಿಧಾನಕ್ಕಾಗಿ ಹನ್ನೆರಡು ಬಾರಿ ಮೂಲ ಮಂತ್ರವನ್ನು ಜಪಿಸಬೇಕು.

'ಓ ದೇವತೆಗಳೇ! ಪೂಜೆ ಮುಗಿಯುವವರೆಗೆ ಈ ತಾಣದಲ್ಲಿಯೇ ನೆಲೆ ನಿಂತು ಭಕ್ತಿಯಿಂದ ನಾನು ಮಾಡುವ ಪೂಜೆಯನ್ನು ಸ್ವೀಕರಿಸಿ ಕಾಪಾಡಿರಿ' ಎಂದು ಪ್ರಾರ್ಥಿಸಬೇಕು.

ಬಳಿಕ ಆವಾಹನ, ಸ್ಥಾಪನ, ಸನ್ನಿಧಾನ, ಸಮ್ಮುಖೀಕರಣ, ಸನ್ನಿರೋಧನ, ಅವಗುಂಠನ ಎಂಬ ಆರು ಮುದ್ರೆಗಳನ್ನು ತೋರಿಸಬೇಕು. ಈ ಎಲ್ಲ ಮುದ್ರೆಗಳನ್ನು ತೋರಿಸುವಾಗ ನಾರಾಯಣ ಮಂತ್ರವನ್ನು ಪಠಿಸಬೇಕು.

ಈ ದೇವತೆಗಳಿಗೆ ಮೂಲ (ನಾರಾಯಣ) ಮಂತ್ರದಿಂದ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಪುನರಾಚಮನ, ಸ್ನಾನ, ವಸ್ತ್ರ ವಿಭೂಷಣ, ಉಪವೀತ, ಆಸನಗಳೆಂಬ ದಶೋಪಚಾರಗಳನ್ನು ಹೂವಿನಿಂದಾಗಲೀ, ಪ್ರತ್ಯೇಕವಾದ ಪಾತ್ರೆಯಲ್ಲಿಯ ನೀರು ಹಾಕುತ್ತಲಾಗಲೀ ಸಮರ್ಪಿಸಬೇಕು.

ನಂತರ ಗಂಧವನ್ನು, ತುಲಸೀಪುಷ್ಪಗಳನ್ನು ಸಮರ್ಪಿಸಬೇಕು. ಕಲಶದಲ್ಲಿರುವ ಮೂಲದೇವರ ಆವರಣಪೂಜೆಯನ್ನು ಮಾಡುವದು. (ಆವರಣ ಪೂಜೆಯನ್ನು ಮುಂದೆ ವಿವರವಾಗಿ ವರ್ಣಿಸುವೆವು.)

ಈ ಆವರಣ ದೇವತೆಗಳಿಗೆ ಪುನಃ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಪುನರಾಚಮನ, ಸ್ನಾನ, ವಸ್ತ್ರ ವಿಭೂಷಣ, ಉಪವೀತ, ಆಸನ, ಗಂಧ, ಪುಷ್ಪಗಳೆಂಬ ಹನ್ನೆರಡು ಉಪಚಾರಗಳನ್ನು ಪ್ರತ್ಯೇಕವಾಗಿ ಸಮರ್ಪಿಸುವದು.

ಇಷ್ಟಾದ ಮೇಲೆ ಪೀಠ ದೇವತೆಗಳಿಗೂ ಆವರಣ ದೇವತೆಗಳಿಗೂ ಹಾಗೂ ಮೂಲರೂಪಕ್ಕೂ ಮಿಲಿತವಾಗಿ ಧೂಪ, ದೀಪ, ನೈವೇದ್ಯ, ನಮಸ್ಕಾರಗಳೆಂಬ ನಾಲ್ಕು ಉಪಚಾರಗಳನ್ನು ಸಮರ್ಪಿಸಬೇಕು.

'ಕಲಶಃ ಕೀರ್ತಿಂ...' - ನಾವು ಪೂಜಿಸಿದ ಕಲಶವು ಅರ್ಥಾತ್ ಈ ಎಲ್ಲ ದೇವತೆಗಳು ಭಕ್ತನಿಗೆ ಧವಲಕೀರ್ತಿ, ದೀರ್ಘ ಆಯುಷ್ಯ, ಶುದ್ಧವಿದ್ಯೆ, ವಿಪುಲ ಮೇಧಾಶಕ್ತಿ, ಸಮೃದ್ಧ ಐಶ್ವರ್ಯ, ಅತುಲ ಬಲ, ಯೋಗ್ಯತೆಯ ಅಭಿವ್ಯಕ್ತಿ, ಪಾಪದ ಹಾನಿ, ಹಾಗೂ ಪುಣ್ಯದ ವೃದ್ಧಿಯನ್ನು ದಯಪಾಲಿಸುವರು.

''ಸರ್ವದೇವಮಯೋ...' - ಪೂರ್ಣಕುಂಭದಲ್ಲಿ ಎಲ್ಲ ಕ್ಷೇತ್ರಾಭಿಮಾನಿಗಳೂ, ಎಲ್ಲ ದೇವತೆಗಳೂ ಸನ್ನಿಹಿತರಾಗಿರುವರು.

'ಕ್ಷೇತ್ರದೇವತೆಗಳು ಹೇಗೆ ಹರಿಪ್ರಿಯರೋ ಹಾಗೆ ಓ ಪೂರ್ಣಕುಂಭವೇ! ನೀನೂ ಭಗವಂತನಿಗೆ ಪ್ರಿಯ. ಕಾರಣ ನಾನು ನಿನಗೆ ನಮಿಸುವೆ. ನೀನು ನನ್ನ ಮೇಲೆ ದಯೆ ತೋರು.'

ಇದು ಕಲಶ ಪೂಜಾ ವಿಧಿ.

ಶಂಖಪೂಜೆ

ವಿಷ್ಣುವಿನ ಪೂಜೆಯನ್ನು ಶಂಖದಿಂದಲೇ ಮಾಡಬೇಕು. ಶಂಖದಿಂದ ವಿಷ್ಣುವನ್ನು ಮಾತ್ರ ಪೂಜಿಸಬೇಕು. ಈ ಎರಡೂ ನಿಯಮಗಳು ಮಹತ್ವಪೂರ್ಣವಾದದ್ದು.

ಶಂಖವಿಲ್ಲದೇ ದೇವರು ಎಂದೆಂದಿಗೂ ಪೂಜೆಯನ್ನು ಸ್ವೀಕರಿಸುವದಿಲ್ಲ. ಶಂಖದಲ್ಲಿ ಲಕ್ಷ್ಮೀಸನ್ನಿಧಾನ ಶಾಸ್ತ್ರಸಿದ್ಧ. ಲಕ್ಷ್ಮಿಯ ಮುಖಾಂತರವೇ ಭಗವಂತ ಸೇವೆಯನ್ನು ಕೈಕೊಳ್ಳುವ.

ಸಿರಿಯ ದ್ವಾರದಿಂದ ಶ್ರೀಹರಿಗೆ ಸಮರ್ಪಿಸಿದ ಸೇವೆ ಅನಂತ ಪುಣ್ಯಪ್ರದ. ಸಿರಿಯನ್ನು ಬಿಟ್ಟು ನೇರವಾಗಿ ಸಮರ್ಪಿಸಿದ ಸೇವೆ ಅಲ್ಪಫಲ, ಅಫಲ.

ಅಲ್ಲದೆ, ಸಿರಿಯು ಶ್ರೀಹರಿಯನ್ನೇ ಪೂಜಿಸುವಳು. ಪರರನ್ನಲ್ಲ. ಎಂದಮೇಲೆ ಸಿರಿಯ ಪ್ರತೀಕವಾದ ಶಂಖದಿಂದ ಬೇರಾವ ದೇವತೆಗಳನ್ನು ಸರ್ವಥಾ ಪೂಜಿಸಬಾರದು.

ಶಂಖದಿಂದ ಬೇರೆಯವರನ್ನು ಪೂಜಿಸಿದರೆ ಸಿರಿಯಿಂದ ಬೇರೆಯವರನ್ನು ಪೂಜೆಮಾಡಿಸಿದಂತೆ. ಇದು ಮಹಾ ಅನರ್ಥಸಾಧನ. ಆದ್ದರಿಂದ ಎಂದಿಗೂ ಮಾಡತಕ್ಕದ್ದಲ್ಲ.

'ತ್ವಂ ಪುರಾ ಸಾಗರೋತ್ಪನ್ನೋ...'- 'ಓ ಶಂಖವೇ! ಸಾಗರದಿಂದ

ಹುಟ್ಟಿದ ನಿನ್ನನ್ನು ವಿಷ್ಣುವು ಕೈಯಲ್ಲಿ ಧರಿಸಿರುವ. ಎಲ್ಲ ದೇವತೆಗಳು ನಿನ್ನನ್ನು ನಮಿಸುವರು. ಪಾಂಚಜನ್ಯ! ನಿನಗೆ ಎನ್ನ ನಮನ.

'ಗರ್ಭಾ ದೇವಾರಿನಾರೀಣಾಂ...'- 'ಪಾತಾಲದಲ್ಲಿರುವ ಸಾವಿರ ಸಾವಿರ ದೈತ್ಯರ ಮಡದಿಯರ ಗರ್ಭಗಳು ನಿನ್ನ ನಾದ ಕೇಳಿ ವಿಶೀರ್ಣವಾಗುತ್ತವೆ.'

'ತವ ನಾದೇನ...'- 'ಹತ್ತಾರು ಸಾವಿರ ಚಂದ್ರಮರ ಬೆಳಕಿನಂತೆ ಕಾಂತಿಯುಳ್ಳ ಪಾಂಚಜನ್ಯವೇ! ನಿನಗೆ ನನ್ನ ನಮನ.'

'ದರ್ಶನೇನ ಹಿ ಶಂಖಸ್ಯ...'- 'ಸೂರ್ಯ ಉದಿಸಿದಾಗ ಮಂಜು ಕರಗುವಂತೆ ಶಂಖದ ದರ್ಶನದಿಂದಲೇ ಪಾಪಗಳೆಲ್ಲವೂ ಕರಗುವವು; ಸ್ಪರ್ಶದಿಂದ ಇನ್ನೇನು.'

'ನತ್ವಾ ಶಂಖಂ...'- 'ಈ ಮಂತ್ರಗಳಿಂದ ಶಂಖವನ್ನು ನಮಿಸಿ, ಕೈಯಲ್ಲಿ ಧರಿಸಿ, ದೇವರ ಅಭಿಷೇಕಮಾಡುವ ವಿಷ್ಣುಭಕ್ತನ ಪುಣ್ಯಕ್ಕೆ ಎಣೆಯಿಲ್ಲ.'

'ತ್ರಿಲೋಕ್ಯಾಂ ಯಾನಿ...'- 'ಮೂಲೋಕಗಳಲ್ಲಿರುವ ತೀರ್ಥ ದೇವತೆಗಳೆಲ್ಲ ದೇವರ ಆಜ್ಞೆಯಿಂದ ಶಂಖದಲ್ಲಿ ಸನ್ನಿಹಿತರಾಗಿರುವರು. ಕಾರಣ ಶಂಖವನ್ನು ಪೂಜಿಸಬೇಕು.'

'ಶಂಖಂ ಚಂದ್ರಾರ್ಕದೇವತ್ಯಂ...'- 'ಶಂಖಕ್ಕೆ ಚಂದ್ರ ಮತ್ತು ಸೂರ್ಯರು ದೇವತೆಗಳು. ಶಂಖದ ಮಧ್ಯಕ್ಕೆ ವರುಣ. ಬೆನ್ನಿನಲ್ಲಿ ಪ್ರಜಾಪತಿ. ತುದಿಯಲ್ಲಿ ಗಂಗಾ ಸರಸ್ವತಿಯರು ಇರುವರು.'

ಹೀಗೆ ಶಂಖವನ್ನು ಸ್ತುತಿಸಿ ಪ್ರಾರ್ಥಿಸಬೇಕು.

ಸ್ನಾನೀಯ ಜಲವನ್ನು ಉದ್ಧರಣೆಯಿಂದ ಶಂಖದಲ್ಲಿ ತುಂಬಿ, ತುಲಸಿ ಪುಷ್ಪಗಳನ್ನು ಹಾಕಿ, **'ಓಂ ನಮೋ ಭಗವತೇ ಪಾಂಚಜನ್ಯಾಯ'** ಹಾಗೂ **'ಪಾಂಚಜನ್ಯಾಯ ವಿದ್ಮಹೇ'** (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರಗಳಿಂದ ಮೂರು ಬಾರಿ ಅಭಿಮಂತ್ರಿಸಬೇಕು.

ಧ್ಯಾನ, ಆವಾಹನ, ಆಸನ, ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಪುನರಾಚಮನ ಎಂಬ ಎಂಟು ಉಪಚಾರಗಳನ್ನು ಸಮರ್ಪಿಸಬೇಕು. ದೇವಪೂಜೆಯನ್ನು ಮಾಡಲು ನೀನು ಅನುಗ್ರಹಿಸು ಎಂದು ಕೇಳಿಕೊಳ್ಳಬೇಕು.

ಅರ್ಘ್ಯಾದಿಪಾತ್ರಪೂಜೆ

ಪಾತ್ರ	ದಿಕ್ಕು	ದೇವತೆ	ಮುದ್ರೆ
ಅರ್ಘ್ಯ	ವಾಯವ್ಯ	ಶ್ರೀ	ದಾನಮುದ್ರಾ
ಪಾದ್ಯ	ನೈರುತ್ಯ	ಸರಸ್ವತಿ	ಅಂಜಲಿಮುದ್ರಾ
ಆಚಮನೀಯ	ಈಶಾನ್ಯ	ರತಿ	ಗೋಕರ್ಣಮುದ್ರಾ
ಸ್ನಾನೀಯ	ಆಗ್ನೇಯ	ವರುಣ	ಹಂಸಮುದ್ರಾ
ಮಧುಪರ್ಕ	ಮಧ್ಯ	ಬ್ರಹ್ಮ	ಸೂಕರೀಮುದ್ರಾ
ಪುನರಾಚಮನ	ಮಧ್ಯ	ಶಾಂತಿ	ಹಂಸಮುದ್ರಾ

ಅರ್ಘ್ಯಾದಿಪಾತ್ರಗಳಲ್ಲಿಯ ದೇವತೆಗಳಿಗೆ ಸಮರ್ಪಣೀಯ ದ್ರವ್ಯ-

ಅರ್ಘ್ಯದಲ್ಲಿ ಕುಶದ ಅಗ್ರಭಾಗ, ಸಾಸಿವೆ, ಎಳ್ಳು, ಹಣ್ಣು ಹೂವು, ಅಕ್ಷತಾ, ಯವ, ಗಂಧ.

ಪಾದ್ಯದಲ್ಲಿ ವಿಷ್ಣುಪರ್ಣೀ, ಎಳ್ಳು, ದೂರ್ವಾ, ಶಾಮಾಕ, ಪದ್ಮ, ಅಕ್ಷತಾ.

ಆಚಮನದಲ್ಲಿ ಲವಂಗ, ಜಾಜೀಕಾಯಿ, ಕಂಕೋಲ, ಯಾಲಕ್ಕಿ, ಕರ್ಪೂರ, ಚಂದನ.

ಮಧುಪರ್ಕದಲ್ಲಿ ದಧಿ ಮತ್ತು ಮಧು.

ಸ್ನಾನೀಯದಲ್ಲಿ ಮಕರಂದ, ದೇವದಾರು, ಪ್ರವಾಳ, ಸುರಚಂದನ, ಧಾತ್ರಿ.

ಪುನರಾಚಮನದಲ್ಲಿ ಲವಂಗ, ಜಾತಿ, ಕಂಕೋಲ, ಗಂಧಪುಷ್ಪ

ಈ ಪದಾರ್ಥಗಳೆಲ್ಲವೂ ಸಿಗದಿರುವಾಗ ಗಂಧ ತುಲಸೀ ಪುಷ್ಪಗಳನ್ನಷ್ಟೇ ಸಮರ್ಪಿಸಿದರೂ ಸಾಕು.

ಇತ್ಯಾದ ಬಳಿಕ ಶಂಖಪೂಜೆ ಮಾಡುವಾಗ ಶಂಖದಲ್ಲಿ ಹಾಕಿ ಅಭಿಮಂತ್ರಿಸಿದ ನೀರಿನಿಂದ ಹೂವು ಹಣ್ಣು ಗಂಧ ನೈವೇದ್ಯ ಮುಂತಾದ ಪೂಜಾ ಸಾಧನೆಗಳನ್ನು ಅಲ್ಲದೇ (ತನ್ನನ್ನು) ದೇವರ ಪ್ರತಿಮೆಯನ್ನು ಮೂರು ಸಲ ಪ್ರೋಕ್ಷಿಸಬೇಕು.

ಪಂಚಾಮೃತ ದ್ರವ್ಯಗಳ ಪೂಜೆ

ದಿಕ್ಕು	ಪದಾರ್ಥ	ಭಗವದ್ರೂಪ
ಮಧ್ಯ	ಹಾಲು	ಗೋವಿಂದ
ಪೂರ್ವ	ಮೊಸರು	ವಾಮನ
ದಕ್ಷಿಣ	ಆಜ್ಯ	ವಿಷ್ಣು
ಪಶ್ಚಿಮ	ಜೇನು	ಮಧುಸೂದನ
ಉತ್ತರ	ಸಕ್ಕರೆ	ಅಚ್ಯುತ

ಈ ದೇವತೆಗಳನ್ನು ಪೂಜಿಸಬೇಕು. ಬಳಿಕ ಗರುಡ ಧೇನು ಶಂಖ ಚಕ್ರ ಗದಾ ಎಂಬ ಐದು ಮುದ್ರೆಗಳನ್ನು ಆಯಾ ಮಂತ್ರಗಳಿಂದ ತೋರಿಸಬೇಕು.

ತುಲಸೀ ಪುಷ್ಪಗಳನ್ನು ಹಾಕಬೇಕು. ಮೂಲಮಂತ್ರದಿಂದ ಹಾಗೂ ವಿಷ್ಣುಗಾಯತ್ರಿಯಿಂದ ಅಭಿಮಂತ್ರಿಸಿ ನಮಸ್ಕರಿಸಬೇಕು.

ಪೂಜೆಯ ಪೂರ್ವಾಂಗ

ಇನ್ನು ಭಗವಂತನ ಪೂಜೆ ಆರಂಭವಾಗುವದು. ಅದಕ್ಕಾಗಿ ಮನಸ್ಸಿನ ಭಾವಿಕ ಸಿದ್ಧತೆ ಬೇಕು.

ಅನಂತಶಕ್ತಿ, ಅಪರಿಮಿತ ಗುಣ, ಅದ್ಭುತ ಬಲ, ನಿರವಧಿಕ ಸ್ವಾತಂತ್ರ್ಯ, ನಿರುಪಮ ಸೌಂದರ್ಯ, ನಿಸ್ಸೀಮ ವ್ಯಾಪ್ತಿ, ನಿರರ್ಗಳ ಐಶ್ವರ್ಯ, ಅಪ್ರತಿಹತ ಸಂಕಲ್ಪ, ಅಗಾಧವಾದ ಆನಂದ, ಅಮಿತ ತೇಜಸ್ಸು, ಅನಂತ ಔದಾರ್ಯ, ಅಪಾರ ದಯೆ ಇತ್ಯಾದಿ ಗುಣಗಳುಳ್ಳವನು ಆ ದೇವ.

ಹುಟ್ಟು, ಸಾವು, ನೋವು, ದುಃಖ, ರೋಗ, ಮುಪ್ಪು, ಚಿಂತೆ, ಸಂತಾಪ, ಅಜ್ಞಾನ, ಅಶಕ್ತಿ, ವೈಷಮ್ಯ, ನೈರ್ಘೃಣ್ಯ, ಪರಾಜಯ, ಪರಾಧೀನತೆ, ಮುಂತಾದ ಯಾವ ದೋಷಗಳೂ ಇಲ್ಲದವ ಆತ.

ಸಿರಿ ವಿರಿಂಚ ಹರಾದಿ ಅನಂತಾನಂತ ಜೀವನಿಯಾಮಕನಾದ ಸರ್ವೇಶ, ಸರ್ವೋತ್ತಮ, ಸರ್ವಕರ್ತೃ, ಸರ್ವನಿಯಾಮಕ, ಸರ್ವಪ್ರೇರಕನಾಗಿರುವ ಭಗವಂತ.

ಅಂಥ ದೇವರ ಪೂಜೆಯನ್ನು ಮಾಡಲು ಹೊರಟಿದ್ದೇವೆ ಎನ್ನುವುದು ಕ್ಷಣಕ್ಷಣಕ್ಕೂ ಎಚ್ಚರವಿರಬೇಕು.

ಸಾಮಾನ್ಯವ್ಯಕ್ತಿಯ ಪೂಜೆಯಲ್ಲ ಇದು. ಗುರುಹಿರಿಯರ ವಂದನೆಯೂ ಅಲ್ಲ. ನವಗ್ರಹಗಳ ಅಥವಾ ಇಂದ್ರ ಶೇಷಾದಿಗಳ ಪೂಜೆಯೂ ಅಲ್ಲ.

ಲಕ್ಷ್ಮೀಬ್ರಹ್ಮಾದಿಗಳಿಂದ ನಿರಂತರ ಅನಂತವೈಭವಗಳಿಂದ ಪೂಜೆಗೊಳ್ಳುವ, ಇಷ್ಟಿದ್ದರೂ ಆ ಪೂಜೆಯಲ್ಲಿ 'ಅನಾದರಃ' ಆಸಕ್ತಿಮೋಹಗಳಿಲ್ಲದ ಭಗವಂತನನ್ನು ಪೂಜಿಸುತ್ತಿದ್ದೇವೆ.

'ಯಾತರವ ನಾನಯ್ಯ ಇಂದಿರೇಶ' ಇಡಿಯ ವಿಶ್ವವೇ ಆತನ ಅಧೀನವಾಗಿರುವಾಗ ನನಗೆಲ್ಲಿ ಕರ್ತೃತ್ವ? ನನ್ನದೆಲ್ಲಿ ಪೂಜಾಸಾಧನಗಳು?

ದೇವರನ್ನು ಪೂಜಿಸಲು, ಭಗವಂತನನ್ನು ಯಜಿಸಲು ಬ್ರಹ್ಮದೇವರಿಗೇ ಸಾಧನಗಳು ದೊರಿಯಲಿಲ್ಲ.

ದೇವರದ್ದಲ್ಲದನ್ನು ಒಂದನ್ನಾದರೂ ದೇವರಿಗೆ ಸಮರ್ಪಿಸೋಣ ಎಂದು ಪ್ರಪಂಚದ ಆಚೆ ಈಚೆ ಪರದಾಡಿ ಹುಡುಕಿದರೂ ಸಿಗಲಿಲ್ಲ.

ಪೂಜಾ ಯಜ್ಞಗಳ ಸಾಧನಗಳೆಲ್ಲವೂ ದೇವರಿಂದ ಹುಟ್ಟಿವೆ, ದೇವರನ್ನು ಆಶ್ರಯಿಸಿವೆ. ದೇವರ ಅಧೀನವಾಗಿವೆ.

ಅಶ್ವಮೇಧಾದಿ, ಪ್ರಯಾಜಾದಿ ಯಜ್ಞ , ಆಡು ಮೇಕೆ ಮುಂತಾದ ಪಶು, ಅಶ್ವತ್ಥಾದಿ ವನಸ್ಪತಿ, ಬಗೆ ಬಗೆಯ ಕುಶ, ಯಜ್ಞಭೂಮಿ, ವಸಂತಾದಿ ಕಾಲ, ಯಜ್ಞಕ್ಕೆ ಬೇಕಾದ ಧನ, ವ್ರೀಹಿ ಮುಂತಾದ ಓಷಧಿ, ಆಜ್ಯ ಮುಂತಾದ ಸ್ನೇಹದ್ರವ್ಯ, ಮಧುರಾದಿ ಕ್ಷೀರಾದಿ ರಸ, ಕಬ್ಬಿಣ ಮುಂತಾದ ಲೋಹ, ಇಟ್ಟಿಗೆ ಮೊದಲಾದುದಕ್ಕೆ ಸಾಧನವಾದ ಮೃತ್, ಗಂಗಾದಿ ಜಲ,

ಋಕ್, ಯಜು, ಸಾಮ, ಹೋತೃ, ಅಧ್ವರ್ಯು, ಉದ್ಗಾತೃ, ಬ್ರಹ್ಮರೆಂಬ ನಾಲ್ವರು ಮಾಡಬೇಕಾದ ಕರ್ಮವೆಂಬ ಚಾತುರ್ಹೋತ್ರ,

ಜ್ಯೋತಿಷ್ಟೋಮ, ಅಗ್ನಿಷ್ಟೋಮ ಅಥವಾ ಇಂದ್ರ, ಅಗ್ನಿ ಮುಂತಾದ ನಾಮಧೇಯ, ಹೋಮಾದಿಗಳಲ್ಲಿ ಬಳಸುವ ಮಂತ್ರ, ಯಜ್ಞದ ಸಾಂಗತೆಗೆ ಕೊಡಬೇಕಾದ ದಕ್ಷಿಣೆ, ಬ್ರಹ್ಮಚರ್ಯಾದಿ ವ್ರತ, ಇಂದ್ರಾದಿದೇವತೆಗಳ ತಾರತಮ್ಯ (ಅಥವಾ ಪೂರ್ವೋತ್ತರೀಭಾವ) ಎಂಬ ದೇವತಾನುಕ್ರಮ, ಯಜ್ಞಪ್ರಯೋಗದ ವಿಧಿಯನ್ನು ತಿಳಿಸುವ ಆಶ್ವಲಾಯನಾದಿ ಶ್ರೌತಸೂತ್ರಗಳೆಂಬ ಕಲ್ಪ, 'ಈ ಯಾಗವನ್ನು ನಾನು ಮಾಡುವೆ' ಎಂಬ ಮಾನಸ ವಾಚಿಕ ಸಂಕಲ್ಪ, ಕರ್ಮ ದೇವತಾ ಬ್ರಹ್ಮ ಮೀಮಾಂಸೆಗಳ ಸೂತ್ರ, ಸ್ವರ್ಗಾದಿಫಲಗಳೆಂಬ ಗತಿ, ದೇವತಾ ಧ್ಯಾನಾದಿರೂಪ ಮತಿ,

'ಇಲ್ಲಿ ಹೇಳಿದ್ದು ಸತ್ಯ' 'ಇದರಿಂದ ನನಗೆ ಮಹಾಲಾಭ' ಎಂಬ ಆಸ್ತಿಕ್ಯಬುದ್ಧಿರೂಪವಾದ ಶ್ರದ್ಧೆ, ಕರ್ಮಗಳಲ್ಲಿ ನಡೆದ ತಪ್ಪುಗಳನ್ನು ತೊಡೆದು ಹಾಕುವದಕ್ಕೆ ಮಾಡುವ ಕರ್ಮವೆಂಬ ಪ್ರಾಯಶ್ಚಿತ್ತ,

'ನಾಹಂ ಕರ್ತಾ ಹರಿಃ ಕರ್ತಾ' ಎಂಬ ಅನುಸಂಧಾನಪೂರ್ವಕವಾಗಿ ಹರಿಪ್ರೀತಿ ಪ್ರಾರ್ಥನಾರೂಪವಾದ ಸಮರ್ಪಣೆ ಮುಂತಾದ ಎಲ್ಲ ಯಜ್ಞ ಪೂಜಾದಿಸಾಧನೆಗಳು ದೇವರಿಂದ ಹುಟ್ಟಿವೆ.

ದೇವರಿಗೆ ಅಧೀನವಾಗಿವೆ. ದೇವರನ್ನು ಆಶ್ರಯಿಸಿವೆ. ದೇವರು ಪ್ರೇರಿಸಿದಾಗ ಕಾರ್ಯಕಾರಿ ಆಗುವವು. ದೇವರು ಇಲ್ಲವಾಗಿಸಿದಾಗ ಇಲ್ಲವಾಗುತ್ತವೆ.

ಹೀಗಾಗಿ ದೇವರ ಅಧೀನವಾಗದ, ದೇವರಿಂದ ಹುಟ್ಟದ, ದೇವರ ಪ್ರೇರಣೆಯಿರದಿದ್ದರೂ ಕಾರ್ಯಕಾರಿ ಆಗುವ,

ಒಟ್ಟಾರೆ ದೇವರ ಹಂಗಿಲ್ಲದೆ ತಾವೇ ತಾವು ಪಡೆಯಬಹುದಾದ ಹುಲ್ಲು, ಮಣ್ಣು ಮುಂತಾದ ಅತಿ ಕ್ಷುದ್ರ ಪದಾರ್ಥವೂ ಜಗದ್ವಿಧಾತೃವಾದ ಬ್ರಹ್ಮದೇವರಿಗೇ ದೊರೆಯದಿರುವಾಗ ನಮ್ಮದೇನು ಪಾಡು?

ನಾವು ಪೂಜೆಗಾಗಿ ಬಳಸುವ ಯಾವ ಪದಾರ್ಥ ನಮ್ಮದು?

ಪೂಜಾಸಾಧನಗಳಲ್ಲಿ ಯಾವುದನ್ನು ನಾವೇ ನಾವಾಗಿ ನಿರ್ಮಿಸಿದ್ದೇವೆ?

ಅಭಿಷೇಚನೆಯ ಜಲ, ಜಲದಲ್ಲಿಯ ರಸ, ಚಂದನದ ಕೊರಡು, ಕೊರಡಿನಿಂದ ಹೊರಡುವ ಗಂಧ, ಗಂಧದ ಪರಿಮಳ, ಅರ್ಚನೆಗೆ ತಂದ ಹೂವು, ಹೂವಿನ ಕೋಮಲತೆ, ಜೊತೆಗಿರುವ ಸೌರಭ, ಸೌಂದರ್ಯ, ನಿವೇದಿಸುವ ಆಹಾರ, ಅವುಗಳನ್ನು ಸಿದ್ಧಪಡಿಸುವ ಧಾನ್ಯ ಕಾಳುಗಳು, ಹೊತ್ತಿಸಿ ಬೆಳಗುವ ದೀಪ, ಅದಕ್ಕಿರುವ ಪ್ರಕಾಶ ಇತ್ಯಾದಿ ಇತ್ಯಾದಿ ನೂರಾರು ಸಹಸ್ರಾರು ಕರಣ ಉಪಕರಣಗಳಲ್ಲಿ ಯಾವುದನ್ನು ನಾವು 'ನಮ್ಮ ಸ್ವಂತ' ವೆಂದು ಹೇಳಬಹುದು?

ಇವೆಲ್ಲ ನಮ್ಮದೇ? ಇವೆಲ್ಲವನ್ನು ನಿರ್ಮಿಸಿದವರು ನಾವೇ? ಇವುಗಳ ಕ್ರಿಯಾಶೀಲತೆಗೆ ನಾವು ಕಾರಣರೇ?

ಇದೆಲ್ಲ ವಿಶ್ವ ವಿಶ್ವನಾಥನ ಒಡೆತನಕ್ಕೆ ಸೇರಿದ್ದು ಅವನ ಆಸ್ತಿ. ಅದನ್ನು ನಾವು ನಮ್ಮ ಆಸ್ತಿಯೆಂದು ಭಾವಿಸಿ, ಭ್ರಮಿಸಿ ದೇವರಿಗೆ ಸಮರ್ಪಿಸುತ್ತಿದ್ದೇವೆ ಎಂಬ ಎಚ್ಚರವಿರಬೇಕು.

ಅದಕ್ಕೆಂದೇ 'ಈಶಾವಾಸ್ಯಮಿದಂ ಸರ್ವಂ' ಎಂದಿತು ಉಪನಿಷತ್ತು. 'ನಿನ್ನಾಧೀನ ಈ ಜಗವೆಲ್ಲ' ಎಂದರು ದಾಸರು.

ಈ ಚಿಂತನ ಮನದ ಆಳದಲ್ಲಿ ಸುಳಿಯುತ್ತಿರುವಾಗಲೇ ದೇವರ ಪೂಜೆ ಸಾಗಬೇಕು.

ಇದು ಮರ್ತ್ಯದೇಹದಲ್ಲೂ ಅಮೃತಾನುಭವ. ಈ ಅನುಭವ ಪರಮರೋಮಾಂಚಕಾರಿ.

ಈ ಅನುಸಂಧಾನ ನಮ್ಮನ್ನು ಈ ಲೋಕದಿಂದ ಆಚೆ ಒಯ್ಯುವದು.

ಪೀಠಪೂಜೆ

ದೇವರು ಸರ್ವೋತ್ತಮ, ಗುಣಪೂರ್ಣ, ವೇದವೇದ್ಯ, ದೇವನಾಥ, ರಮಾ ವಿರಿಂಚಾದಿಗಳಿಂದ ಅರ್ಚಿತ, ವಿಶ್ವವ್ಯಾಪ್ತ, ಅಸಂಗ.

ಇಂಥ ಭಗವಂತನನ್ನು ಕುಳ್ಳಿರುಸುವದಕ್ಕೆ ಪೀಠವನ್ನು ಪರಿಕಲ್ಪಿಸಬೇಕು.

ಮನೆಗೆ ಚಿಕ್ಕವರು ಬಂದಾಗ ಚಿಕ್ಕ ಮಣೆಯಿಡುತ್ತೇವೆ. ದೊಡ್ಡವರಿಗೆ ದೊಡ್ಡ ಆಸನ. ಗುರುಗಳಿಗೆ ಗುರುತರ ಪೀಠ. ರಾಜನಿಗೆ ಸಿಂಹಾಸನ.

ಹೀಗೆ ಹಿರಿತನ ಒಡೆತನಗಳಿಗೆ ತಕ್ಕಂತೆ ಅವರವರಿಗೆ ಪೀಠ ಎಂಬುದು ಲೋಕಶಾಸ್ತ್ರಸಿದ್ಧ.

ಈ ನಿಟ್ಟಿನಲ್ಲಿ ಎಣಿಕೆ ಹಾಕುತ್ತ ಗುಣಿಸುತ್ತ ಹೊರಟಂತೆ ನಿರವಧಿಕಾನಂತಗುಣಮಯನಾದ ದೇವರಿಗೂ ತಕ್ಕುದಾದ ಪೀಠವನ್ನು ಸಮರ್ಪಿಸಬೇಕಲ್ಲವೇ?

ಅಖಿಲಾಂಡಕೋಟಿಬ್ರಹ್ಮಾಂಡನಾಯಕ ದೇವದೇವೋತ್ತಮನಾದ, ಸಿರಿಯರಸ ಭಗವಂತನಿಗೆ ತಕ್ಕುದಾದ ಜಡಪೀಠವು ಇಡಿಯ ವಿಶ್ವದಲ್ಲಿ ಎಲ್ಲಾದರೂ ಸಿಗಲು ಸಾಧ್ಯವೇ?

ಆದ್ದರಿಂದ ದಿವ್ಯದೇವತಾಮಯವಾಗದ ಕೇವಲ ಜಡಪೀಠವನ್ನು ದೇವರಿಗೆ ಸಮರ್ಪಿಸುವದು ಉಪಚಾರದ ಹೆಸರಿನಲ್ಲಿ ಮಾಡುವ ಮಹಾ ಅಪಚಾರವೇ ಸರಿ.

ಇನ್ನು ದೇವತಾಮಯವಾದ ಪೀಠವೂ ಭಗವಂತನಿಗೆ ತಕ್ಕುದಾದುದಿಲ್ಲ. ಆದರೂ ಅನಿವಾರ್ಯವಾದುದರಿಂದ ಶಾಸ್ತ್ರಕಾರರು ಮಹಾಮಹಾದೇವತೆಗಳಿಂದ ನಿರ್ಮಿತವಾದ ಭಗವಂತನ ಅದ್ಭುತಪೀಠದ ಪರಿಕಲ್ಪನೆಯನ್ನು ತಿಳಿಸಿರುವರು.

ಅವರು ತಿಳಿಸಿದ ಬಗೆಯನ್ನು ಬಗೆಯಲ್ಲಿ ಸ್ಮರಿಸಿ ನಮಿಸಿ ಕೃತಾರ್ಥರಾಗೋಣ.

ಪೀಠಕ್ಕೆ ನಾಲ್ಕು ಕಾಲುಗಳು. ನಾಲ್ಕು ಪಾದಗಳಲ್ಲಿ ಕೆಳಗಣ ಮತ್ತು ಮೇಲಣ ಎಂಬ ಎರಡು ಭಾಗಗಳು. ಆ ಪಾದಗಳ ಮೇಲೆ ವಿಶಾಲವಾದ ಫಲಕ.

ಪೀಠದ ಮಧ್ಯದಲ್ಲಿ ಪೂಜನೀಯ ಪರಮಾತ್ಮನನ್ನು ಸ್ಥಾಪಿಸಬೇಕು.

ದೇವರ ಎಡದಲ್ಲಿ ಪೀಠದ ಹೊರಗೆ ಸರ್ವರಿಗೂ ಗುರುವಾದ ವಾಯುದೇವರು.

ದೇವರ ಬಲದಲ್ಲಿ ಪೀಠದ ಹೊರಗೆ ಸರ್ವದೇವತೆಗಳು (ಬ್ರಹ್ಮ ವಿಷ್ಣು ಮಹೇಶ್ವರರು).

ಪುನಃ ಪೀಠದ ಹೊರಗೆ ದೇವರ ಎಡದಲ್ಲಿ ಸರ್ವಗುರುಗಳು (ಅಂದರೆ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ).

'ಗುರುಗಳ ಮೈಬಣ್ಣ ಬೆಳ್ಳಗೆ. ಬಟ್ಟೆ ಬೆಳ್ಳಗೆ. ಒಂದು ಕೈಯಲ್ಲಿ ಪುಸ್ತಕ. ಇನ್ನೊಂದು ಕೈಯಲ್ಲಿ ವ್ಯಾಖ್ಯಾನ ಮುದ್ರೆ. ತಮ್ಮ ಬಿಂಬರೂಪಿಯಾದ ಪರಮಾತ್ಮನನ್ನು ಧ್ಯಾನಿಸುತ್ತಿರುವರು.' ಎಂದು ಇವರನ್ನು ಧ್ಯಾನಿಸಬೇಕು.

ಪೂಜಾ ಕರ್ಮಗಳ ಆರಂಭದಲ್ಲಿ ಗುರುಗಳ ಧ್ಯಾನ ಅಗತ್ಯ. ಹೀಗೆ ಧ್ಯಾನಿಸಲು ಮಾನವ ಜ್ಞಾನವಂತನಾಗುವ.

ಪೀಠದ ಪಾದದ ಕೆಳದೇವತೆಗಳು.

(ಆಗ್ನೇಯ) ಗರುಡ, (ನೈರುತ್ಯ) ವೇದವ್ಯಾಸ,

(ವಾಯವ್ಯ)ದುರ್ಗಾ, (ಈಶಾನ್ಯ) ಸರಸ್ವತಿ.

ಪೀಠದ ಪಾದದ ಮೇಲು ದೇವತೆಗಳು

(ಆಗ್ನೇಯ)	ಧರ್ಮಾಭಿಮಾನಿ	ಯಮ	ಎತ್ತಿನವೇಷ	ಕೆಂಪುಬಣ್ಣ
(ನೈರುತ್ಯ)	ಜ್ಞಾನಾಭಿಮಾನಿ	ವಾಯು	ಸಿಂಹದೇಹ	ಶ್ಯಾಮವರ್ಣ.
(ವಾಯವ್ಯ)	ವೈರಾಗ್ಯಾಭಿಮಾನಿ	ಶಿವ	ಭೂತಾಕಾರ	ಹಳದಿಬಣ್ಣ
(ಈಶಾನ್ಯ)	ಐಶ್ವರ್ಯಾಭಿಮಾನಿ	ಇಂದ್ರ	ಗಜದೇಹ	ಕಪ್ಪುಬಣ್ಣ

ಪೀಠದ ಫಲಕದೇವತೆಗಳು.

(ಪೂರ್ವ) ಅಧರ್ಮಾಭಿಮಾನಿ ನಿರ್ಋತಿ

(ದಕ್ಷಿಣ) ಅವೈರಾಗ್ಯಾಧಿಪತಿ ಕಾಮ

(ಪಶ್ಚಿಮ) ಅಜ್ಞಾನಾಭಿಮಾನಿ ದುರ್ಗೆ

(ಉತ್ತರ) ಅನೈಶ್ವರ್ಯಾಭಿಮಾನಿ ರುದ್ರ

ಅನಂತಗುಣಪೂರ್ಣನಾದ ಭಗವಂತನನ್ನು ಮೆಚ್ಚಿಸುವಂತೆ ವಿಧಿವತ್ತಾಗಿ ನಾವು ಪೂಜೆಯನ್ನು ಮಾಡಬೇಕಾಗಿದೆ.

ಭಗವಂತ ಮೆಚ್ಚುವದು ಭಕ್ತಿಗೆ ಹಾಗೂ ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಿಗೆ ಮಾತ್ರ.

ಆದ್ದರಿಂದ ಭಕ್ತಿಯನ್ನು ಸಂಪಾದಿಸುವಂತೆ ಧರ್ಮ, ವಿಜ್ಞಾನ, ವೈರಾಗ್ಯ, ಐಶ್ವರ್ಯಗಳನ್ನು ಗಳಿಸುವದು ಅಷ್ಟೇ ಅಗತ್ಯ.

ಜೊತೆಗೆ ಅಧರ್ಮ, ಅಜ್ಞಾನ, ಅವೈರಾಗ್ಯ ಅನೈಶ್ವರ್ಯಗಳನ್ನು ಹೋಗಲಾಡಿಸುವದೂ ಆವಶ್ಯಕ.

ಧರ್ಮಾದಿ ನಾಲ್ಕು ಗುಣಗಳಿದ್ದಲ್ಲಿ ಭಗವಂತನ ಅಧಿಷ್ಠಾನವಿರುವದು ಎಮ್ಬುವದಕ್ಕೆ ಇದೊಂದು ಸಾಂಕೇತಿಕ ನಿದರ್ಶನ.

'ಜ್ಞಾನಮಪ್ರತಿಘಂ ಯಸ್ಯ ವೈರಾಗ್ಯಂ ಚ ಜಗತ್ಪತೇಃ

ಐಶ್ವರ್ಯಂ ಚೈವ ಧರ್ಮಶ್ಚ ಸಹಸಿದ್ಧಂ ಚತುಷ್ಟಯಂ'

ಎಂದು ಹೇಳಿದಂತೆ ಬ್ರಹ್ಮವಾಯುದೇವರಿಗೆ ಸ್ವಾಭಾವಿಕವಾದ ಈ ನಾಲ್ಕು ಗುಣಗಳು ಅತೀ ಹೆಚ್ಚಿನ ಮಟ್ಟದಲ್ಲಿ ಇವೆ.

ಆದುದರಿಂದಲೇ ಅವರು ಭಗವಂತನ ಸರ್ವೋತ್ತಮ ಅಧಿಷ್ಠಾನರು. ಅವರಲ್ಲಿ ಇರುವಷ್ಟು ದೇವರ ಸನ್ನಿಧಾನ ಇನ್ನಾರಲ್ಲೂ ಇಲ್ಲ.

ಅಂತೆಯೇ 'ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ' ಎಂಬ ವೇದವಾಣಿಯು ಪ್ರವೃತ್ತವಾಗಿದೆ.

ಈ ಕಾರಣದಿಂದಾಗಿ ಗುರುಭ್ಯೋ ನಮಃ ಎಂಬುದಾಗಿ ಧರ್ಮವಿಜ್ಞಾನ ವೈರಾಗ್ಯಪರಮೈಶ್ವರ್ಯಶಾಲಿ ವಾಯುದೇವರನ್ನು ಮೊದಲು ನಮಿಸಬೇಕು. ಅವರ ಕಾರುಣ್ಯ ನಮ್ಮ ಮೇಲೆ ಇರಲಿ ಎಂದು ಪ್ರಾರ್ಥಿಸಬೇಕು.

ಇದೇ ರೀತಿ ಸರ್ವದೇವತಾಭ್ಯೋ ನಮಃ ಎಂದು ಬ್ರಹ್ಮ ವಿಷ್ಣು ಮಹೇಶ್ವರರನ್ನು ನಮಿಸಿ, ಪ್ರಾರ್ಥಿಸಬೇಕು.

ಬಳಿಕ, ಧರ್ಮಕ್ಕೆ ಯಮರಾಜನು ಅಭಿಮಾನಿ. ಅಂತೆಯೇ ಧರ್ಮಾಧರ್ಮಗಳ. ಶಾಸನೆಯನ್ನು ಯಮಧರ್ಮನು ಮಾಡುವನೆಂದು ಶಾಸ್ತ್ರಪುರಾಣಗಳಲ್ಲಿ ಕೇಳುತ್ತೇವೆ.

ವಿಜ್ಞಾನಕ್ಕೆ ವಾಯುದೇವರು ಅಭಿಮಾನಿ. ಆದ್ದರಿಂದಲೇ 'ವಾಯು' ಶಬ್ದದಲ್ಲಿಯೇ ಜ್ಞಾನಗುಣವನ್ನು 'ವಾ'ಕಾರವು ಸೂಚಿಸುವದು. ವಾಸ್ತವದಲ್ಲಿ ವಾಯುದೇವರು ಎಲ್ಲ ಗುಣಗಳಿಗೆ ಅಭಿಮಾನಿಗಳು.

ವೈರಾಗ್ಯಕ್ಕೆ ಶಿವನು ಅಭಿಮಾನಿ.. ಆದ್ದರಿಂದಲೇ ಭಸ್ಮ ಬಡಿದುಕೊಂಡು ಸ್ಮಶಾನದಲ್ಲಿ ಕಪಾಲಧರಿಸಿ ವಾಸವಾಗಿದ್ದಾನೆ.

ಐಶ್ವರ್ಯಕ್ಕೆ ಇಂದ್ರ ಅಭಿಮಾನಿ. ಸ್ವರ್ಗಲೋಕದ ಅಮರಾವತಿಯಲ್ಲಿ ಅಪಾರ ಐಶ್ವರ್ಯ ಶಾಸ್ತ್ರಸಿದ್ಧ.

ಆದ್ದರಿಂದ ಧರ್ಮಜ್ಞಾನಾದಿಗುಣಗಳ ಲೋಭ ಇದ್ದವರು ಈ ದೇವತೆಗಳನ್ನು ಲೋಪ ಮಾಡದೇ ಭಜಿಸಬೇಕು. ಅವರ ಕೃಪೆಯಿಂದ ಆ ಗುಣಲಾಭವಾಗುವದು ನಿಶ್ಚಿತ.

ಈ ನಾಲ್ಕು ಗುಣಗಳಲ್ಲಿ ಎರಡು ಜೊತೆ ಇದೆ. ಧರ್ಮವಿಜ್ಞಾನಗಳ ಒಂದು ಜೊತೆ. ವೈರಾಗ್ಯಐಶ್ವರ್ಯಗಳ ಇನ್ನೊಂದು ಜೊತೆ.

ಇದು ತುಂಬ ಸಾಂಕೇತಿಕ. ಕೇವಲ ಧರ್ಮ ಅಂಧಶ್ರದ್ಧೆಯಾದರೆ, ಕೇವಲ ಐಶ್ವರ್ಯ ಭೋಗಲೋಲುಪತೆಯಾದೀತು.

ಕೇವಲ ಧರ್ಮವಿದ್ದು ಲಾಭವಿಲ್ಲ. ಅದಕ್ಕೆ ಜ್ಞಾನದ ಬೆಂಬಲಬೇಕು. ಕೇವಲ ಐಶ್ವರ್ಯವಿದ್ದರೆ ಸಾಲದು. ಅದನ್ನು ಅನುಭವಿಸುವಲ್ಲಿ ವೈರಾಗ್ಯವೂ ಬೇಕು.

ಆದ್ದರಿಂದ ಧರ್ಮಕ್ಕೆ ಜ್ಞಾನದಬಲ, ಐಶ್ವರ್ಯಕ್ಕೆ ವೈರಾಗ್ಯದ ನಿಯಂತ್ರಣ ಅಗತ್ಯ.

ಹಾಗೆಯೇ, ಕೇವಲ ಜ್ಞಾನ ಬರುಡು ಪಾಂಡಿತ್ಯವಾದರೇ ಕೇವಲ ವೈರಾಗ್ಯ ಅಭಾವವೈರಾಗ್ಯವಾದೀತು. ಈ ಜ್ಞಾನವೈರಾಗ್ಯಗಳನ್ನು ಸಮಗ್ರಗೊಳಿಸುವದಕ್ಕಾಗಿಯೇ ಧರ್ಮ ಐಶ್ವರ್ಯಗಳೂ ಅನಿವಾರ್ಯವಾಗಿವೆ.

ಇದೇರೀತಿ ಅಧರ್ಮ, ಅವಿಜ್ಞಾನ, ಅವೈರಾಗ್ಯ, ಅನೈಶ್ವರ್ಯಗಳನ್ನು ನೀಗಿಹಾಕುವುದು ತುಂಬ ಅಗತ್ಯ.

ಅಧರ್ಮಕ್ಕೆ ನಿರ್ಋತಿ ಅಭಿಮಾನಿ. ಋತ ಎಂದರೆ ಧರ್ಮ. ನಿರ್ಋತಿ ಎಂದರೆ ಅಧರ್ಮ, ಪಾಪ. ಆ ದೇವತೆಯು ಪಾಪನಲ್ಲ, ಆದರೆ ಅವನು ಪಾಪದ ಅಭಿಮಾನಿ.

ದುರ್ಗೆ ತಮೋಗುಣದ ದೇವತೆ. ಅಜ್ಞಾನದ ತವರು ತಮೋಗುಣ. ಕಾರಣ ದುರ್ಗೆ ಅಜ್ಞಾನದ ದೇವತೆ.

ಕಾಮ ಅವೈರಾಗ್ಯಕ್ಕೆ ಅಭಿಮಾನಿಯೆನ್ನುವದು ಸ್ವತಃಸಿದ್ಧ.

ಅನೈಶ್ವರ್ಯ ಎಂದರೆ ದಾರಿದ್ರ್ಯ. ಅದಕ್ಕೆ ಮೇಲೆ ಹೇಳಿದಂತೆ ಸ್ಮಶಾನವಾಸಿ ಕಪಾಲಧಾರಿ ಭಿಕ್ಷುಕವೃತ್ತಿಯಲ್ಲಿರುವ ಮಹಾದೇವರು ಅಭಿಮಾನಿದೇವತೆ.

ವಾಯುದೇವರ ಬಳಿಕ ಸರ್ವದೇವರಿಗಿಂತಲೂ ಉತ್ತಮರಾದ ಈ ಮಹಾದೇವರು ದುರ್ದೈವದಿಂದಾಗಿ ಸ್ಮಶಾನದಲ್ಲಿ ದಾರಿದ್ರ್ಯವನ್ನನುಭವಿಸುತ್ತಿಲ್ಲ.

ಆದರೆ ಭಗವಂತನ ಸಂಕಲ್ಪದ ಪ್ರಕಾರ ತಾವೇ ಸ್ವೇಚ್ಛೆಯಿಂದ ಈ ವೃತ್ತಿಯನ್ನು ಅವಲಂಬಿಸಿದ್ದಾರೆ. ಈ ಮಾತನ್ನು ನಿಖರವಾಗಿ ತಿಳಿಯುವದು ಅಗತ್ಯ.

ಅಧರ್ಮಾದಿಗಳಿಗೆ ಅಭಿಮಾನಿಗಳಾದ ನಿರ್ಋತಿ, ದುರ್ಗಾ, ಕಾಮ, ಶಿವ ಎಂಬ ಈ ನಾಲ್ಕು ದೇವತೆಗಳನ್ನು ಪೂಜಿಸಬೇಕು.

ಅವರನ್ನು ಪೂಜಿಸಿದರೆ ಅವರು ನಮ್ಮಲ್ಲಿರುವ ಅಧರ್ಮಾದಿಗಳನ್ನು ಅಟ್ಟಿ ಬೀಸಾಡುವರು. ಪೂಜಿಸದಿದ್ದರೆ ಅಧರ್ಮಾದಿಗಳಿಂದ ಅವರು ನಮ್ಮನ್ನು ಬಳಲಿಸುವರು. ಆದ್ದರಿಂದ ಅವರ ಪೂಜೆ ಅಗತ್ಯ.

ಈ ಎಲ್ಲ ದೇವತೆಗಳನ್ನು ನಾವಿಡುವ ಭಗವಂತನ ಪೀಠದಲ್ಲಿ ಸನ್ನಿಹಿತರಾಗಲು ಪ್ರಾರ್ಥಿಸಬೇಕು. ಅವರೆಲ್ಲ ಭಗವಂತನ ಸೇವೆಗಾಗಿಯೂ ನಮ್ಮನ್ನು ಅನುಗ್ರಹಿಸುವದಕ್ಕಾಗಿಯೂ ಮಾನವಾದಿಗಳಿಗೆ ಅಚಿಂತ್ಯವಾದ ತಮ್ಮ ಶಕ್ತಿಯಿಂದ ಆ ಅಧಿಷ್ಠಾನಗಳಲ್ಲಿ ಒಂದಂಶದಿಂದ ಸನ್ನಿಹಿತರಾಗುವರು.

ಇದಾದ ಬಳಿಕ ಬ್ರಹ್ಮಾಂಡದ ಕೆಳಗಡೆಯಿಂದ ಇತ್ತ ಪೀಠವಿರುವವರೆಗೆ ಒಬ್ಬರ ಮೇಲೊಬ್ಬರಾಗಿ ಇರುವ ದೇವತೆಗಳನ್ನು ಸ್ಮರಿಸಿ ಪೂಜಿಸಬೇಕು.

ಇಲ್ಲಿ ತಿಳಿಯಬೇಕಾದದ್ದಿಷ್ಟು, ನಾವಿರುವದು ಭೂಲೋಕದಲ್ಲಿ. ಅದಕ್ಕೆ ಕೆಳಗೆ ಏಳು ಲೋಕ. ಅದರ ಬುಡದಲ್ಲಿ ಅಗಾಧ ಜಲ. ಅದನ್ನು ಧರಿಸಿದ್ದು ಬ್ರಹ್ಮಾಂಡದ ಖರ್ಪರ.

ಅದರಾಚೆ ಪೃಥಿವೀ ತತ್ತ್ವದ ಆವರಣ. ಅದರ ಹೊರಗೆ ನೀರು, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ತ್ವ (ತಮಸ್, ರಜಸ್, ಸತ್ವ) ತ್ರೈಗುಣ್ಯ ಹೀಗೆ ಏಳು ಆವರಣಗಳು.

ಒಂದರ ಹೊರಗೆ ಒಂದು. ಹಿಂದಿನದರ ಹತ್ತು ಪಟ್ಟು ವಿಸ್ತಾರವಾಗಿ ಮುಂದಿನ ಆವರಣಗಳು ಇವೆ.

ಇಡಿಯ ಬ್ರಹ್ಮಾಂಡವನ್ನು ಹಾಗೂ ಅದರ ಹೊರಗಿರುವ ಈ ಏಳು ಆವರಣಗಳನ್ನು ಅಚಿಂತ್ಯ, ಅನಂತ, ಅದ್ಭುತಶಕ್ತಿಯ ಲೇಶಾತಿಲೇಶದಿಂದ ಧರಿಸಿರುವನು ಪರಮಪುರುಷ ನಾರಾಯಣ.

ಆ ನಾರಾಯಣನನ್ನವಲಂಬಿಸಿ ಅವನ ಮೇಲೆ ಆಧಾರಶಕ್ತಿ ನಾಮಕಳಾದ ರಮೆ ಇರುವಳು.

ಅವಳ ಮೇಲೆ ಇಡಿಯ ಬ್ರಹ್ಮಾಂಡವನ್ನು ಹೊತ್ತ ಕೂರ್ಮರೂಪನಾದ ವಿಷ್ಣು ಅವನ ಬೆನ್ನೇರಿ ನಿಂತಿದೆ ಬ್ರಹ್ಮಾಂಡ ಖರ್ಪರ.

ಅದರೊಳಗೆ ಅಗಾಧ ಜಲ ಉಂಟು. ಅದರ ಆಧಾರನಾಗಿ ಕೂರ್ಮರೂಪನಾದ ವಿಷ್ಣುವು ಇರುವ. ಅವನ ಬಾಲವನ್ನಾಶ್ರಯಿಸಿ ಕೂರ್ಮರೂಪರಾದ ವಾಯುದೇವರಿರುವರು.

ವಾಯುಕೂರ್ಮನ ಬಾಲವನ್ನವಲಂಬಿಸಿ ಅದ್ಭುತಶಕ್ತಿಯ ಸಾವಿರಹೆಡೆಯ ಶೇಷ ನಿಂತಿರುವ. ಶೇಷದೇವರಿಗೆ ಸಾವಿರ ಹೆಡೆಗಳು. ಸಾವಿರದಲ್ಲಿಯ ಒಂದು ಹೆಡೆಯ ಮೇಲೆ ಸಾಸಿವೆಯಂತೆ ನಿಂತಿದೆ ಈ ಚತುರ್ದಶಭುವನಾತ್ಮಕ ಪೃಥಿವೀ. ಅದಕ್ಕೆ ಅಭಿಮಾನಿನೀ ಧರಾದೇವಿ.

ಅದಕ್ಕೆ ಮೇಲೆ ಕ್ಷೀರಸಾಗರಾಭಿಮಾನಿಯಾದ ವರುಣ. ಆ ಮೇಲೆ ರಮಾರೂಪವಾದ ಶ್ವೇತದ್ವೀಪ. ಅಲ್ಲಿ ದಿವ್ಯರತ್ನಖಚಿತವಾದ ಹೊನ್ನದ ಮಹಾಮಂಟಪ. ಈ ಮಹಾಮಂಟಪದ ರೂಪವನ್ನು ಧರಿಸಿ ಸಿರಿದೇವಿ ದೇವರನ್ನು ಸೇವಿಸುತ್ತಿರುವಳು.

ಆ ಮಂಟಪದಲ್ಲಿ ಪದ್ಮ ಅದೂ ರಮಾದೇವಿಯೇ. ಆ ತಾವರೆಗೆ ಆರು ದಲಗಳು. ಮುಂದೆ ಮೂರು. ಹಿಂದೆ ಮೂರು.

ಹಿಂದಿನ ಎಡದಲದಲ್ಲಿ ಸತ್ವಾಭಿಮಾನಿ ಶ್ರೀದೇವಿ. ಮಧ್ಯದಲ್ಲಿ ರಜೋಭಿಮಾನಿ ಭೂದೇವಿ. ಬಲದಲದಲ್ಲಿ ತಮೋಭಿಮಾನಿ ದುರ್ಗಾದೇವಿ.

ಎದುರಿನ ಎಡದಲದಲ್ಲಿ ಸೂರ್ಯ. ಮಧ್ಯ ದಲದಲ್ಲಿ ಚಂದ್ರ. ಬಲ ದಲದಲ್ಲಿ ಅಗ್ನಿ.

ಈ ಆರುದಲದ ತಾವರೆಯ ಮಧ್ಯದಲ್ಲಿ ಅಷ್ಟದಲದ ಕಮಲ. ಎತ್ತರವಾದ ಅಷ್ಟದಲದ ಕಮಲವನ್ನು ಏರುವದಕ್ಕೆ ನಾಲ್ಕು ದಿಕ್ಕಿನಲ್ಲಿ ಸೋಪಾನಗಳು.

ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮರೆಂಬವು ಭಗವಂತನ ನಾಲ್ಕು ರೂಪಗಳು. ಆ ರೂಪಗಳು (ಮೆಟ್ಟಲಿನ) ಸೋಪಾನದ ರೂಪದಲ್ಲಿ ನಿಂತಿವೆ. ಪೂರ್ವದಲ್ಲಿ ಆತ್ಮ ದಕ್ಷಿಣದಲ್ಲಿ ಅಂತರಾತ್ಮ ಪಶ್ಚಿಮದಲ್ಲಿ ಪರಮಾತ್ಮ ಉತ್ತರದಲ್ಲಿ ಜ್ಞಾನಾತ್ಮ.

ಬಳಿಕ, ಎಂಟು ದಳದ ಕಮಲ. ಆ ದಲಗಳಲ್ಲಿ ಕ್ರಮವಾಗಿ ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ. ಕರ್ಣಿಕೆಯಲ್ಲಿ (ಕಮಲದ ಮಧ್ಯಭಾಗದಲ್ಲಿ) ಅನುಗ್ರಹಾ.

ವಿಮಲಾದೇವತೆ ಛತ್ರವನ್ನು ಧರಿಸಿರುವಳು. ಉತ್ಕರ್ಷಿಣೀ ಚಾಮರವನ್ನು ಹಾಕುವಳು. ಜ್ಞಾನಾ ವ್ಯಜನ ಬೀಸುವಳು. ಕ್ರಿಯಾ ದರ್ಪಣ ತೋರಿಸುವಳು. ಯೋಗಾ ಗಾನ ಮಾಡುವಳು. ಪ್ರಹ್ವೀ ನೃತ್ಯ ಮಾಡುವಳು. ಸತ್ಯಾ ವಾದ್ಯ ಬಾರಿಸುವಳು. ಈಶಾನಾ ಸ್ತುತಿಸುವಳು. ಅನುಗ್ರಹಾ ಇವರೆಲ್ಲ ಮಾಡುವ ಸೇವೆಯನ್ನು ಸಮರ್ಪಿಸುವಳು.

ಈ ಒಂಬತ್ತು ರೂಪಗಳಲ್ಲಿ ಇಚ್ಛಾ, ಜ್ಞಾನ, ಕ್ರಿಯಾ ಎಂಬ ಮೂರು ಬಗೆಗಳಿವೆ. ಎಂದರೆ ವಿಮಲಾಜ್ಞಾನಾ, ವಿಮಲಾಕ್ರಿಯಾ, ವಿಮಲೇಚ್ಛಾ ಇತ್ಯಾದಿ. ಅಂದರೆ ಒಟ್ಟಿನಲ್ಲಿ ಇಪ್ಪತ್ತೇಳು ರೂಪಗಳಾದವು.

ಇವೆಲ್ಲ ಸಾಕ್ಷಾತ್ ಭಗವಂತನ ರೂಪಗಳೇ. ಅಲ್ಲದೆ (ಭಗವಂತನಿಗೆ ವಿಮಲಾದಿ ರೂಪಗಳು ಇರುವಂತೆ) ಲಕ್ಷ್ಮೀ, ಬ್ರಹ್ಮ, ವಾಯು, ಶೇಷ, ಗರುಡ ಈ ಐವರಿಗೂ ಪ್ರತ್ಯೇಕವಾಗಿ ವಿಮಲಾದಿ ಇಪ್ಪತ್ತೇಳು ರೂಪಗಳು ಇವೆ.

ಒಟ್ಟು ಒಂದುನೂರ ಅರವತ್ತೆರಡು(೧೬೨) ರೂಪಗಳಾದವು. ಇಷ್ಟೆಲ್ಲ ಸ್ಮರಿಸುವದು ವಿಶೇಷಫಲ.

ಮುಂದೆ, ಅನುಗ್ರಹಾ ದೇವತೆಯು ಮೇಲೆ ದಿವ್ಯರತ್ನಮಯರಾದ ಯೋಗಪೀಠಸ್ವರೂಪರಾದ ಶೇಷದೇವರನ್ನು ಸ್ಮರಿಸಬೇಕು.

ಆ ಶೇಷದೇವರಲ್ಲಿ ರತ್ನಗಂಬಳಿ, ಮಂಚ, ತಲ್ಪ, ತಲೆಗಿಂಬು ಇವೆಲ್ಲ ರೂಪಗಳಿಂದ ಲಕ್ಷ್ಮೀದೇವಿಯೇ ಇರುವಳು. ಭಗವಂತ ಅಲ್ಲಿ ಕುಳಿತಿರುವ.

ಬ್ರಹ್ಮಾಂಡದ ಹೊರಗಿರುವ ಪರಮಪುರುಷನಿಂದ ಭಗವಂತನ ಪೀಠದವರೆಗಿರುವ ಎಲ್ಲ ದೇವತೆಗಳನ್ನು ಸ್ಮರಿಸಿ ನಮಿಸಿ ಆವಾಹಿಸಬೇಕು. ಈ ಎಲ್ಲ ಪೀಠದೇವತೆಗಳ ಮಧ್ಯದಲ್ಲಿ ನಮ್ಮ ಅಂತರ್ಯಾಮಿಯಾದ ಬಿಂಬರೂಪೀ ಪರಮಾತ್ಮನನ್ನು ಆವಾಹಿಸಬೇಕು.

ಅಂತರ್ಯಾಮಿ-ಬಿಂಬರೂಪ

ವಿಶ್ವಗುರುಗಳಾದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು, ಗುರುಸಾರ್ವಭೌಮರಾದ ಶ್ರೀ ಜಯತೀರ್ಥರು,

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು, ಶ್ರೀನಾರಾಯಣಪಂಡಿತಾಚಾರ್ಯರು,

ಶ್ರೀ ವ್ಯಾಸರಾಜರು ಶ್ರೀ ವಾದಿರಾಜರು, ಶ್ರೀ ರಘೂತ್ತಮರು, ಶ್ರೀ ರಾಘವೇಂದ್ರರು, ಶ್ರೀ ಯಾದವಾರ್ಯರು, ಶ್ರೀ ವ್ಯಾಸತತ್ತ್ವಜ್ಞರು, ಶ್ರೀ ವಿಷ್ಣುತೀರ್ಥರು, ಶ್ರೀ ವಿಜಯದಾಸರು ಮತ್ತು ಶ್ರೀ ಜಗನ್ನಾಥದಾಸರು ಇವರೆಲ್ಲರನ್ನು

ವಿಶ್ವವಿಭೂತಿಗಳೆನಿಸಿದ ಅನನ್ಯಸಾಧಾರಣ ಕಾರ್ಯವನ್ನು ಮಾಡಿದ ಈ ಶತಮಾನದಲ್ಲಿ ವೈಷ್ಣವ ಸಿದ್ಧಾಂತವನ್ನು ಜೀವಂತವಾಗಿ ಉಳಿಸಿದ ನನ್ನ ಪರಮಗುರುಗಳಾದ ಶ್ರೀ ಶ್ರೀ ಸತ್ಯಧ್ಯಾನತೀರ್ಥ ಶ್ರೀಪಾದಂಗಳವರನ್ನು

ತಪೋವಿದ್ಯಾವಿಭೂತಿಗಳಾದ ಭಕ್ತಕೋಟಿಯನ್ನು ತಮ್ಮ ತಪಃಶಕ್ತಿಯಿಂದ ಅನುಗ್ರಹಿಸಿ ಉದ್ಧಾರ ಮಾಡಿದ, ವಿಶೇಷವಾಗಿ ನನ್ನ ಮೇಲೆ ಪರಮಾನುಗ್ರಹಗೈದ, ನನ್ನ ಮಹಾ ಗುರುಗಳಾದ ಶ್ರೀ ಶ್ರೀ ಸತ್ಯಪ್ರಮೋದತೀರ್ಥ. ಶ್ರೀಪಾದಂಗಳವರನ್ನು,

ಅದ್ಭುತ ಜ್ಞಾನ, ಪ್ರಕಾಂಡ ಪ್ರತಿಭೆ, ಪರಮ ವೈರಾಗ್ಯ, ಸಿದ್ಧಾಂತ ಪ್ರಚಾರದ ಅದಮ್ಯ ದೀಕ್ಷೆ, ಸಮಾಜದ ಪ್ರಾಮಾಣಿಕ ಉದ್ಧಾರಾಕಾಂಕ್ಷೆ ಮುಂತಾದ ಗುಣಗಳುಳ್ಳ ಗುರುವರೇಣ್ಯರಾದ ಶ್ರೀ ಶ್ರೀ ಸತ್ಯಾತ್ಮತೀರ್ಥಶ್ರೀಪಾದಂಗಳವರನ್ನು

ಮತ್ತು ನನ್ನ ಲಕ್ಷ ಕೋಟಿ ಜನ್ಮಗಳ ಪುಣ್ಯದಿಂದ ದೇವರು ನನಗೆ ಕರುಣಿಸಿದ ನನ್ನ ಸ್ವರೂಪೋದ್ಧಾರಕರೂ ನನ್ನ ಪ್ರಾಣಸರ್ವಸ್ವರೂ ಆದ ಪರಮಪೂಜ್ಯ (ನನ್ನ ಪಿತೃಪಾದರು ಮಾಹುಲಿ ಗೋಪಾಲಾಚಾರ್ಯರು) ಗುರುಗಳನ್ನು ಭಕ್ತಿಯಿಂದ ನೆನೆ ನೆನೆದು ವಂದಿಸಿ

ಹಾಗೂ ವಿಷ್ಣುಭಕ್ತರಾದ ಸಕಲ ವಿದ್ವದ್ವರೇಣ್ಯರಿಗೂ ದಾಸಶ್ರೇಷ್ಠರಿಗೂ ನಮಿಸಿ ಬಿಂಬರೂಪ, ಚಿಂತನ ಮತ್ತು ಆವಾಹನಕ್ರಮವನ್ನು ವರ್ಣಿಸುವೆ.

ಬಿಂಬಾಧೀನತೆ

ನಾವು ನಮ್ಮ ಬಿಂಬರೂಪಗಳ ಕುರಿತಾಗಿ ತಿಳಿಯುವುದು ಅತ್ಯಂತ ಅಗತ್ಯ.

"ನಾನು ಅಸ್ಮಿ" ಎಂಬ ನುಡಿಗೆ "ಅವನು ಅಸ್ತಿ" ಎನ್ನುವುದೇ ಅಸ್ತಿತಾರ. ನಮ್ಮ ಅಸ್ತಿತ್ವಕ್ಕೆ ಅವನ ಇಚ್ಛೆಯೇ ಮೂಲ. ನಮ್ಮ ಉಸಿರಾಟಕ್ಕೆ ಅವನೇ ಆಧಾರ. ನಮ್ಮ ಅರಿವಿಗೆ ಅವನೇ ಆಲಂಬನ. ನಮ್ಮ ಕ್ರಿಯೆಗೆ ಅವನೇ ನಿದಾನ. ನಮ್ಮ ಮನಸ್ಸು ಇಂದ್ರಿಯ ದೇಹಗಳೆಲ್ಲ ಅವನಧೀನ.

ಇದನ್ನು ಸ್ವಲ್ಪ ವಿವರದೊಂದಿಗೆ ತಿಳಿಯೋಣ.

ನಮ್ಮ ಮಸ್ತಿಷ್ಕ (Brain) ಎಂಥ ವಿಚಿತ್ರ! ಅದನ್ನು ಯಾವ ವಿಜ್ಞಾನಿಯೂ ಪೂರ್ಣಮಟ್ಟದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಅದರಲ್ಲಿ ಯಾವುದೇ ಸಣ್ಣ ಕೊರತೆಯೂ ಬದುಕಿನ ಶಾಪವಾಗಬಹುದು.

ಮೆದುಳಿನಲ್ಲಿ ನಿತ್ಯವೂ ಅಬ್ಜ ಅಬ್ಜ ಸಂಖ್ಯೆಯಲ್ಲಿ ಹುಟ್ಟಿ ಸಾಯುವ, ಸತ್ತು ಹುಟ್ಟುವ ಜೀವಕೋಶಗಳು (Cells) ಅಗಾಧ ಪ್ರಪಂಚವನ್ನೇ ತೆರೆಯುತ್ತವೆ.

ಒಂದೊಂದು (Cell) ಜೀವಕೋಶವೂ ಹೊರಲಾಗದಷ್ಟು ಮಾಹಿತಿಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದೆ. ಹತ್ತು, ಇಪ್ಪತ್ತು, ಎಪ್ಪತ್ತು, ಎಂಬತ್ತುವರ್ಷಗಳ ಹಿಂದಿನ ಅನುಭವಗಳ ಸಂಸ್ಕಾರಗಳನ್ನು ಶೇಖರಿಸುವಲ್ಲಿ ಉಪಕಾರಕವಾಗಿವೆ.

ಅತಿ ಬೃಹದಾಕಾರದ ಭಾರೀ ಸೌಕರ್ಯಗಳಿರುವ (Computer) ಗಣಕಯಂತ್ರಕ್ಕಿಂತಲೂ ಅತ್ಯದ್ಭುತವಾಗಿದೆ ಮಾನವನ ಮಸ್ತಿಷ್ಕ.

ಇದರ ಒಂದೊಂದವಸ್ಥೆಯೂ ಅಚ್ಚರಿಗೊಳಿಸುವಂಥದು.

ಎಚ್ಚರ (ಜಾಗರ) ಒಂದು ಅವಸ್ಥೆಯಾದರೆ ಸ್ವಪ್ನ ಅದಕ್ಕೆ ತೀರ ಹೊರತಾದ ಅವಸ್ಥೆ.

ಮಾನವ ಎಷ್ಟು ಪ್ರಯತ್ನ ಮಾಡಿದರೂ ಎಚ್ಚರವಿರುವಾಗ -ಅರ್ಥಾತ್ ಮಸ್ತಿಷ್ಕ ಪೂರ್ಣ ಕ್ರಿಯಾಶೀಲವಾಗಿರುವಾಗ- ಸ್ವಪ್ನವನ್ನು ಕಾಣಲು ಸಾಧ್ಯವಿಲ್ಲ.

ನಿದ್ರೆ (ಸುಷುಪ್ತಿ) ಇದಕ್ಕೂ ಹೊರತಾಗಿರುವ ಅವಸ್ಥೆ. ಮೂರ್ಛೆ ಇದೆಲ್ಲವನ್ನೂ ಮೀರಿದ ಸ್ಥಿತಿ.

ಇದಲ್ಲದಂತೆ ಸ್ವಾಭಾವಿಕ ಒಲವುಗಳು (Instincts), ಸಂವೇದನೆ (Sensation & Feeling), ಅನುಭವ (Experience), ವಿವೇಕ (Faculty of Discretion), ಭಾವನೆ (Emotion), ಅವಧಾನ (ಏಕಾಗ್ರತೆ) (Attention), ನೆನಪು (Memory), ಗುರುತು ಹಿಡಿಯುವುದು (Recognition), ಸ್ಫುರಣ (Flash), ಅನುಭವಿಸಿದ ಸಂಗತಿಗಳಲ್ಲಿ ವಿಭಜನ (Classification & Analysis)), ಸಜಾತೀಯ ಸಂಯೋಜನ (Synthesis), ಭಾವೀಕರಣ (Abstraction), ವಿಮರ್ಶನ (Thinking) ಇತ್ಯಾದಿ ಇತ್ಯಾದಿ ಅಸಂಖ್ಯ ಸಂಮಿಶ್ರ ಸಂಕೀರ್ಣ ಸಾಮರ್ಥ್ಯಗಳು (Mixture of Faculties & Complex Faculties of mind) ನಮ್ಮ ಮಸ್ತಿಷ್ಕಕ್ಕೆ (ಮನಸ್ಸಿಗೆ) ಇರುವವು.

ಇವುಗಳನ್ನೆಲ್ಲ ಬಳಸುವಾಗ ಆಶ್ಚರ್ಯವೆಂದು ತೋರದಿದ್ದರೂ ಅದರ ಕುರಿತು ಆಳವಾದ ಚಿಂತನ ನಡೆಸಿದಾಗ ಅತ್ಯದ್ಭುತ, ಅತ್ಯಗಾಧ ಎಂದು ತೋರುವಲ್ಲಿ ಸಂದೇಹವಿಲ್ಲ.

ಇಷ್ಟು ಮಾತ್ರವಲ್ಲ, ನಮಗಿರುವ ಪ್ರೇಮ-ದ್ವೇಷ, ವಿವೇಕ, ತಿಳಿವು, ದಯಾ-ಕ್ಷಮಾ, ಸತ್ಯ-ಸುಳ್ಳು, ದಮ, ಶಮ, ಸುಖ-ದುಃಖ, ಇರವು-ಅರಿವು, ಭಯ-ಅಭಯ, ಅಹಿಂಸಾ, ಸಂತೋಷ-ಅತೃಪ್ತಿ, ತಪಸ್ಸು, ಯಶ-ಅಪಯಶ, ಸಿರಿ-ದಾರಿದ್ರ್ಯ, ಸೌಭಾಗ್ಯ-ದೌರ್ಭಾಗ್ಯ, ರೋಗ-ಆರೋಗ್ಯ, ಸಿಟ್ಟು-ಸಹನೆ, ಸೊಕ್ಕು-ವಿನಯ, ಕ್ಷುದ್ರತೆ-ಉದಾರತೆ, ಭೋಗ- ತ್ಯಾಗ, ಹಗೆತನ, ಭಕ್ತಿ, ವೈರಾಗ್ಯ, ಶ್ರದ್ಧೆ, ನಿಷ್ಠೆ, ಚಿಂತನ, ನೆನಪು, ಜಾಗರ, ಸ್ವಪ್ನ, ಸುಷುಪ್ತಿ, ಸಮಾಧಿ, ಮೂರ್ಛೆ, ಆಲಸ್ಯ-ಚಟುವಟಿಕೆ, ಕಠೋರತೆ-ಮಾರ್ದವ, ನಾಚಿಕೆ, ಸ್ಥಿರತೆ-ಚಾಂಚಲ್ಯ, ತೇಜಸ್ಸು ಧೈರ್ಯ ದಂಭ, ದರ್ಪ, ಕಾಮ, ಸಂಶಯ, ಭ್ರಾಂತಿ, ಪ್ರತ್ಯಭಿಜ್ಞಾ, ಜಯ-ಪರಾಜಯ, ಲಾಭ-ಹಾನಿ, ತಟಸ್ಥವೃತ್ತಿ, ಬಲ, ದೌರ್ಬಲ್ಯ, ದರ್ಶನ, ಸ್ಪರ್ಶನ, ಭಾಷಣ, ಶ್ರವಣ, ಭೋಜನ, ಗಮನ, ಗ್ರಹಣ, ಉನ್ಮೇಷಣ, ನಿಮೇಷಣ, ಉತ್ಕ್ಷೇಪಣ, ಅಪಕ್ಷೇಪಣ, ಆಕುಂಚನ, ಪ್ರಸರಣ, ವರ್ಧನ, ಶಯನ, ಪೂಜನ, ಭೋಜನ, ಧ್ಯಾನ, ಇತ್ಯಾದಿ ಇತ್ಯಾದಿ ಗುಣಕ್ರಿಯೆಗಳೆಲ್ಲವನ್ನು ಆಳವಾಗಿ ಚಿಂತಿಸುವಾಗ ನಮ್ಮ ಮನ ಮಸ್ತಿಷ್ಕಗಳೇ ನಮಗೆ ಊಹಾತೀತ ಅದ್ಭುತವಾಗಿ ತೋರುವದು.

ಇದಲ್ಲದೆ ಹೃದಯ, ಯಕೃತ್, ಕರುಳು, ಹೊಟ್ಟೆ, ಕಣ್ಣು ಕಿವಿ, ಎಲುಬು, ತೊಗಲು, ನರಗಳು, ನಾಡಿಗಳು ಮುಂತಾದ ಒಂದೊಂದೂ ಊಹೆ ಮೀರಿದ ಅದ್ಭುತ!

ಇದೆಲ್ಲದರ ಒಡೆಯನೆಂದು ಹಮ್ಮಿನಿಂದ ಹೇಳಿಕೊಳ್ಳುವ ಜೀವನಿಗೇ ಗೊತ್ತಿಲ್ಲದಂತೆ ಎಣಿಕೆಯಿಲ್ಲದ ಕ್ರಿಯೆ-ವಿಕ್ರಿಯೆಗಳು ಆಗುತ್ತಲೇ ಇವೆ.

ಅಂದಮೇಲೆ ಎಲ್ಲಿಯ ಒಡೆತನ ಆ ಜೀವನಿಗೆ? ಎಲ್ಲಿಯ ಸ್ವತಂತ್ರತೆ? ಇದಕ್ಕೆಲ್ಲ ಕರ್ತೃ ಯಾರು?

ಬಿಂಬರೂಪದೇವರು ರೂಪಾಂತರಗಳಿಂದ ಈ ಅಂಗದಲ್ಲಿ ಹಾಗೂ ಅದರ ಅಣುತರ ಅಂಶಗಳಲ್ಲಿ ಇದ್ದು ಕಾರ್ಯ ನಡೆಸುತ್ತಲಿರುವ.

ಅನಾದಿ ಕಾಲದಿಂದ ಅನಂತಕಾಲದವರೆಗಿರುವ ನಮ್ಮ ಅಸಂಖ್ಯಾತ ತಂದೆ ತಾಯಿ ಅಕ್ಕ-ತಂಗಿ, ಅಣ್ಣ-ತಮ್ಮ ಹೆಂಡತಿ-ಮಕ್ಕಳು, ಬಂಧು-ಬಳಗ, ಶತ್ರು-ಮಿತ್ರ, ಉದಾಸೀನ, ಮನೆ-ಮಣ್ಣು ಹೊಲ-ಹೊನ್ನು, ವ್ಯಾಪಾರ-ಉದ್ಯೋಗ, ಸಿರಿ-ಸಂಪತ್ತು, ರಾಜ್ಯ-ಅಧಿಕಾರ ಇತ್ಯಾದಿಗಳು,

ಹಾಗೂ ಇವುಗಳ ಬಗೆಗಿರುವ ಪ್ರೇಮ ಮೋಹ ಕಾಮ ದ್ವೇಷ ಔದಾಸೀನ್ಯಗಳನ್ನು ಕೊಟ್ಟವನೂ ಆ ಬಿಂಬರೂಪಿಯೇ.

ಅವನೇ ಇದಕ್ಕೆಲ್ಲ ಬುನಾದಿ, ಬೀಜ, ಆಸರೆ, ಆಧಾರ.

ಹೀಗೆಂದಮೇಲೆ ನಾವೆಷ್ಟು ಅವನಧೀನರು! ನಮಗೆಷ್ಟು ಅವನುಪಕಾರ! ಲೆಕ್ಕ ಹಾಕಬೇಕು. ಆದರೆ ಇದೆಲ್ಲ ಲೆಕ್ಕ ಮೀರಿದೆ!

ಹೀಗೆ ಮೊದಲಿಲ್ಲದ ಕಾಲದಿಂದ ಕೊನೆಯಿಲ್ಲದ ಕಾಲದವರೆಗೆ ಎಂದೆಂದಿಗೂ ಆ ದೇವನೇ ಒಳಹೊರಗೆ ತುಂಬಿ ನಮ್ಮ ಅಂತರ್ಯಾಮಿಯಾಗಿದ್ದು ನಮ್ಮ ಪ್ರಾರಬ್ಧಕರ್ಮವನ್ನನುಸರಿಸಿ ತನ್ನ ಸ್ವತಂತ್ರ ಸತ್ಯಸಂಕಲ್ಪಾನುಸಾರ ನಾನಾವಿಧ ಪುಣ್ಯಾಪುಣ್ಯಕರ್ಮಗಳನ್ನು ಮಾಡಿ ಮಾಡಿಸುವನು.

ಇದಲ್ಲದೇ ಇನ್ನೂ ಕೆಲವಂಶವನ್ನು ತಿಳಿಯಬೇಕಾದದ್ದುಂಟು. ಜೀವರು ಬಾಹ್ಯವಾಗಿ ಮಾತ್ರ ದೇವರ ಅಧೀನರಾಗಿರುವರಲ್ಲ.

ಆದರೆ ಅತ್ಯಂತ ಆಂತರಿಕವಾಗಿಯೂ ಜೀವರು ಭಗವದಧೀನರು - ಅರ್ಥಾತ್ ಅವರ ಸ್ವರೂಪವೂ ಭಗವದಧೀನ.

ಇದರ ತುಸು ವಿವರವನ್ನು ತಿಳಿಯೋಣ. ಜೀವರು ಅನಾದಿ ನಿತ್ಯರು. ಅವರ ಈ ಅನಾದಿ ನಿತ್ಯತ್ವವು ಅಕಸ್ಮಾತ್ತಾಗಿ ಬಂದದ್ದಲ್ಲ. ಜೀವರು ತಾವೇ ತಾವಾಗಿ ಪಡೆದುಕೊಂಡದ್ದೂ ಅಲ್ಲ. ತನ್ನಷ್ಟಕ್ಕೆ ತಾನೇ ಇರುವಂಥ ಸ್ವಭಾವವೂ ಅಲ್ಲ.

ಏಕೆಂದರೆ ವಾಸ್ತವಿಕತೆಯಲ್ಲಿ ದೇವರ ಇಚ್ಛೆ ಇಲ್ಲದೆ ಯಾವುದೂ ಯಾರ ಸ್ವಭಾವವೂ ಆಗುವದಿಲ್ಲ. ಕಾರಣ ಭಗವಂತನ ಇಚ್ಛೆಯಿಂದಲೇ ಜೀವರ ಅನಾದಿನಿತ್ಯತ್ವವು ಇರುವದು.

ದೇವರ ಇಚ್ಛೆ ಇಲ್ಲದೇ ರಮಾ ಬ್ರಹ್ಮಾದಿ ಯಾವ ಜೀವರೂ ಅನಾದಿ ನಿತ್ಯರಾಗಿರಲು ಸಾಧ್ಯವಿಲ್ಲ.

ಜೀವರ ಸ್ವರೂಪವು ಧ್ವಂಸವಾಗಬಾರದು, ಅದನ್ನು ಧ್ವಂಸಗೊಳಿಸುವ ಯಾವ ಸಾಧನವೂ ಇರಬಾರದು ಎಂಬ ಭಗವಂತನ ಸತ್ಯ ಸಂಕಲ್ಪಕ್ಕನುಗುಣವಾಗಿ ಜೀವರು ನಿತ್ಯರಾಗಿರುವರು.

ಆದುದರಿಂದ ಭಗವಂತನ ಅಧೀನರಾಗಿ ಅವನಿಚ್ಛೆಯಿಂದ ಜೀವರು ಅನಾದಿನಿತ್ಯರು. ಅವರ ಸ್ವರೂಪ ಅಪ್ರಾಕೃತ. ಅದು ಪ್ರಕೃತಿಯಿಂದ, ಸತ್ತ್ವರಜಸ್ತಮೋಗುಣಗಳಿಂದ ಹುಟ್ಟಿದುದಲ್ಲ.

ಅದು ಅಪ್ರಾಕೃತಚೈತನ್ಯಧಾತುಮಯ. ಆ ಚೈತನ್ಯಧಾತುವೇ 'ಷೋಡಶೀಕಲಾ' ಹದಿನಾರನೆಯ ಕಲೆ.

ಇದು ಮುಖ್ಯಪ್ರಾಣದೇವರಿಂದ ಅಭಿಮನ್ಯಮಾನ. ಇದು ಜೀವನಿಂದ ಅಭಿನ್ನ. ಇದುವೇ ಪ್ರತಿಬಿಂಬನಾದ ಜೀವನ ನಿತ್ಯೋಪಾಧಿ.

ಇದಕ್ಕೆ ಬಿಂಬ ಭಗವಂತ. ಆ ಬಿಂಬದೇವರು ಈ ಜೀವಸ್ವರೂಪದ ಅಂತರ್ಯಾಮಿಯಾಗಿರುವ. ಬಿಂಬನಾದ ಭಗವಂತನು ನಿತ್ಯನಾದುದರಿಂದ ಪ್ರತಿಬಿಂಬನಾದ ಜೀವನಿಗೆ ನಾಶವಿಲ್ಲ.

ಬಿಂಬನಾದ ಭಗವಂತ ಜೀವರ ಸ್ವರೂಪದೇಹದ ಅಖಿಲ ಅಂಶಗಳಲ್ಲೂ ನಿಶ್ಛಿದ್ರನಾಗಿ ವ್ಯಾಪಿಸಿ ಇರುವ. ಅಂತೆಯೇ ಏಕಾಂಶಕ್ಕೂ ನಾಶವಿಲ್ಲ.

ತನ್ನ ಸನ್ನಿಧಾನದಿಂದ ಅಸ್ತಿತ್ವವನ್ನು ನೀಡಿ ಜೀವರನ್ನು ರಕ್ಷಿಸುವ ಬಿಂಬನ ಈ ವ್ಯಾಪಾರವು ಇಂದು ನಿನ್ನೆ ನಾಳೆ ಮಾತ್ರವಲ್ಲ.

ಉಮೇದು ಉತ್ಸಾಹಗಳು ಉಬ್ಬಿದಾಗ ಜೀವರನ್ನು ರಕ್ಷಿಸಿದ, ಆಲಸ್ಯ ಗ್ಲಾನಿಗಳು ಬಂದಾಗ ಅವರನ್ನು ಎತ್ತಿ ಬೀಸಿ ಎಸೆದ, ಸಿಟ್ಟಿನ ಕಾವೇರಿದಾಗ ಬೆಂಕಿಗೆ ನೂಕಿ ಬೂದಿ ಭಸ್ಮ ಮಾಡಿದ ಎಂದಲ್ಲ.

ಅನಾದಿಕಾಲದಿಂದ ಅನಂತಕಾಲದವರೆಗೆ ಈ ಪರಿಯಲ್ಲೇ ಜೀವರ ಸ್ವರೂಪದಲ್ಲಿ ತನ್ನ ಸನ್ನಿಧಾನವಿಟ್ಟು ತನ್ನ ಅಚಿಂತ್ಯ ಅದ್ಭುತ ಅನಂತ ಶಕ್ತಿಯ ಅನಂತಾಂಶಲೇಶದಿಂದ ಅವರನ್ನು ಜತ್ತಾಗಿ ರಕ್ಷಿಸುತ್ತಾ ಇರುವ.

ಅಂತೆಯೇ ಎಲ್ಲ ಜೀವರೂ ಅನಾದಿ, ಅನಾಶಿ, ಅವಿಕಾರಿ, ನಿತ್ಯ, ಅಚ್ಛೇದ್ಯ, ಅಭೇದ್ಯ, ಅದಾಹ್ಯ, ಅಕ್ಲೇದ್ಯ, ಅಶೋಷ್ಯರಾಗಿರುವರು.

ಬಿಂಬಸಾದೃಶ್ಯ

ಇದರ ಜೊತೆಯಲ್ಲಿ, ಎಲ್ಲ ಜೀವರು ಭಗವಂತನ ಸಾದೃಶ್ಯ ಉಳ್ಳವರು. ಆದ ಕಾರಣವೂ ಎಲ್ಲ ಜೀವರೂ ಪ್ರತಿಬಿಂಬರೆಂದು ಕರೆಯಲ್ಪಡುವರು.

ಸಾದೃಶ್ಯ ನಾನಾ ಬಗೆಯದು. ಆಕಾರ, ಜಾತಿ, ಸ್ತ್ರೀಪುರುಷತ್ವ, ಗುಣ, ಕ್ರಿಯಾ.

ಬಿಂಬರೂಪಿಯ ಆಕಾರದಂತೆ ಜೀವರೆಲ್ಲರ ಆಕಾರ.

ಬಿಂಬರೂಪನ ಜಾತಿಯಂತೆ ಜೀವರ ದೇವಮಾನವಪಶುಪಕ್ಷಿಕ್ರಿಮಿ ಮುಂತಾದ ಜಾತಿಗಳು.

ಬಿಂಬರೂಪದಂತೆ ಸ್ತ್ರೀರೂಪ ಬಿಂಬರೂಪದಂತೆ ಪುರುಷರೂಪ.

ಬಿಂಬನಂತೆ ಸತ್ಯ ನಿತ್ಯ ಅಪ್ರಾಕೃತ ಅನಾದಿ ಆಗಿರುವರು ಹಾಗೂ ಜ್ಞಾನಸ್ವರೂಪರೂ, ಇಚ್ಛಾ ಪ್ರಯತ್ನ ಮುಂತಾದ ಗುಣಧರ್ಮಗಳುಳ್ಳವರೂ ಆಗಿರುವರು.

ಬಿಂಬನು ಕುಳಿತಂತೆ ಕುಳಿತು, ನಿಂತಂತೆ ನಿಂತು, ನಡೆದಂತೆ ನಡೆದು, ನುಡಿದಂತೆ ನುಡಿದು, ನೋಡಿದಂತೆ ನೋಡಿ, ಉಂಡಂತೆ ಉಂಡು, ಓಡಾಡಿದಂತೆ ಓಡಾಡುವರು ಜೀವರು. ಹೀಗೆ ಬಿಂಬನ ಕ್ರಿಯೆಗಳಿಗೆ ಸದೃಶವಾದ ಕ್ರಿಯೆಗಳುಳ್ಳವರು.

ಉತ್ತಮ ಜೀವರಂತೂ ಭಗವಂತನಿಗೆ ಸದೃಶವಾಗಿ ಶುಭಗುಣವಂತರೂ ದೋಷರಹಿತರೂ ಆಗಿರುವರು.

ಅಪ್ರಾಕೃತ ಸ್ವರೂಪಾನಂದ, ದೈಹಿಕ ಸುಲಕ್ಷಣಗಳು, ಪ್ರೇಮ, ದಯಾ, ಕ್ಷಮಾ, ವೈರಾಗ್ಯ, ಸ್ನೇಹ, ಸೌಂದರ್ಯ, ದೀಪ್ತಿ, ಬಲ, ಓಜಸ್ಸು, ಸಹಸ್ಸು, ವಿವೇಕ, ತಿಳಿವು, ಸತ್ಯ, ದಮ, ಶಮ, ಅಭಯ, ಅಹಿಂಸಾ, ಸಂತೋಷ, ತೃಪ್ತಿ, ತಪಸ್ಸು, ಯಶ, ಸಿರಿ, ಸೌಭಾಗ್ಯ, ವಿನಯ, ಉದಾರತೆ, ಭೋಗ, ತ್ಯಾಗ, ಭಕ್ತಿ, ವೈರಾಗ್ಯ, ಶ್ರದ್ಧೆ ನಿಷ್ಠೆ, ಮಾರ್ದವ, ಸ್ಥಿರತೆ, ತೇಜಸ್ಸು ಧೈರ್ಯ ವೀರ್ಯ, ಪರಾಕ್ರಮ, ಲಾವಣ್ಯ, ಕಾಂತಿ, ಐಶ್ವರ್ಯ, ಸೂಕ್ಷ್ಮತ್ವ, ಸ್ವಾಮಿತ್ವ, ಪ್ರಾಗಲ್ಭ್ಯ, ವ್ಯಾಪ್ತಿ, ಸತ್ಯಸಂಕಲ್ಪತ್ವ, ಸತ್ಯಕಾಮತ್ವ, ಪುಣ್ಯಗಂಧತ್ವ, ಮುಂತಾದ ಕಲ್ಯಾಣಗುಣಗಳು;

ಹಾಗೂ ಕ್ಷುಧೆ, ಪಿಪಾಸೆ, ಸಂಗ, ಪಾಪ, ಮುಪ್ಪು, ಶೋಕ, ರೋಗ, ವ್ರಣ, ಕಾಮೋಪದ್ರವ, ಸತ್ವಾದಿಗುಣಬಂಧ ಮುಂತಾದ ದೋಷಗಳಿಂದ ನಿರ್ಮುಕ್ತತೆ ಉತ್ತಮಜೀವರಿಗೂ ಸ್ವರೂಪದಲ್ಲಿವೆ.

ಆದುದರಿಂದ ಉತ್ತಮರು ಭಗವಂತನಿಗೆ ಸಮೀಪದ ಪ್ರತಿಬಿಂಬರೆಂದೆನಿಸುವರು.

ಹೀಗೆ ಅನಾದ್ಯನಂತಕಾಲದಲ್ಲಿ ಸಕಲ ಚೇತನರೂ ಭಗವಂತನಿಗೆ ಅಧೀನರೂ, ಸದೃಶರೂ ಆಗಿರುವರು. ಇದುವೇ ಬಿಂಬಪ್ರತಿಬಿಂಬಭಾವ.

ದೇವರಿಗೂ ನಮಗೂ ಇರುವ ನಾನಾ ಬಗೆಯಾದ ಸಾದೃಶ್ಯವನ್ನು ಹಾಗೂ ವಿಶೇಷವಾಗಿ ಕ್ಷಣ ಕ್ಷಣಕ್ಕೂ ನಮಗಿರುವ ಅನಂತ ಬಗೆಯಾದ ಬಿಂಬಾಧೀನತೆಯನ್ನು ಪ್ರತಿನಿತ್ಯವೂ ಪ್ರತಿಕ್ಷಣವೂ ಸಾಧ್ಯವಿದ್ದಷ್ಟು ಬಿಡಿ ಬಿಡಿಯಾಗಿ ನೆನೆದು, ನಮಗೂ ದೇವರಿಗೂ ಇರುವ ಬಿಂಬಪ್ರತಿಬಿಂಬಭಾವದ ಸಂಬಂಧವನ್ನು ಸ್ಮರಿಸಿ ಪೂಜಿಸಬೇಕು.

ಇಂಥ ಬಿಂಬರೂಪ ಭಗವಂತನು

ನಮ್ಮ ಇಡಿಯ ಭೌತಿಕ ದೇಹದಲ್ಲಿ,

ಭೌತಿಕದೇಹದ ಹೃದಯಕಮಲಕರ್ಣಿಕೆಯಲ್ಲಿ,

ಇಡಿಯ ಜೀವಚೈತನ್ಯದಲ್ಲಿ ಹಾಗೂ

ಜೀವಚೈತನ್ಯದ ಹೃದಯದಲ್ಲಿ ಇರುವ.

ಹೃದಯದಲ್ಲಿ ಮೂರು ಮೂರ್ತಿಗಳು.

೧) ಪ್ರಾದೇಶ ೨) ಮೂಲೇಶ ೩) ಅಗ್ರೇಶ.

೧) ಪ್ರಾದೇಶನಾಮಕನು ಇಡಿಯ ಹೃದಯದಲ್ಲಿ ತುಂಬಿ ಜೀವರಿಗೆ ಆಶ್ರಯದಾತೃವಾಗಿ ಅವರ ನಿವಾಸ ಸ್ಥಾನನಾಗಿರುವನು.

೨) ಮೂಲೇಶನು ಹೃದಯಕಮಲದ ಕರ್ಣಿಕೆಯ ಮೂಲದಲ್ಲಿರುವನು. ಜೀವನನ್ನು ಅತ್ತ ಇತ್ತ ಹೋಗದಂತೆ ದಿಟ್ಟಾಗಿ ಧರಿಸಿರುವ. ಹೆಬ್ಬೆರಳಿನ ಅಗ್ರಭಾಗದಷ್ಟು ಇವನ ಗಾತ್ರ.

೩) ಅಗ್ರೇಶನು ಇಡಿಯ ಅಂಗುಟದಷ್ಟು ಪರಿಮಾಣವುಳ್ಳವ. ಹೃದಯಕಮಲ ಕರ್ಣಿಕೆಯ ಅಗ್ರದಲ್ಲಿರುವನು.

ಸುಷುಪ್ತಿ ಕಾಲದಲ್ಲಿ ಜೀವರನ್ನು ಬಳಿ ಸೆಳೆದು ಬಿಗಿದಪ್ಪಿ ಗಾಢವಾಗಿ ನಿದ್ರೆಗೊಳಿಸುವ. ಇವನೇ ಪ್ರಾಜ್ಞನಾಮಕ.

ಈ ಪ್ರಾಜ್ಞನಿಂದ ಹೊರ ಬಂದಾಗಲೇ ಜಾಗರ.

ಇದೇ ಅಗ್ರೇಶನಾಮಕ ಪ್ರಾಜ್ಞರೂಪ ಭಗವಂತನನ್ನು ಈಗ ನಾವು ಪ್ರತಿಮೆಯಲ್ಲಿ ಆವಾಹಿಸುತ್ತಿರುವದು.

ಇವನನ್ನು ಧ್ಯಾನಿಸಿ, ಹೃದಯದಲ್ಲೊಮ್ಮೆ ಪೂಜಿಸಿ, ಆವಾಹಿಸಬೇಕು.

ಹೃದಯಕಮಲವಿಕಾಸ

ಮೊದಲು ತನ್ನ ಬಿಂಬಮೂರ್ತಿಯನ್ನು ಸ್ಮರಿಸುವದು. ಈ ಬಿಂಬಮೂರ್ತಿಯ ಅಧಿಷ್ಠಾನ ಹೃದಯಕಮಲ. ಅದು ಅಧೋಮುಖವಾಗಿದೆ. ಕಮಲದಲಗಳ ತುದಿ ತುಸು ಒಳಗೆ ಮುದುಡಿದೆ ಎಂದರ್ಥ (ಅಂತಃ ಕಿಂಚಿತ್ ಕುಂಚಿತಪತ್ರಾಗ್ರಂ).

ಈ ಕಮಲವನ್ನು 'ಯಂ' ಎಂಬ ವಾಯುಬೀಜಾಕ್ಷರವನ್ನುಚ್ಚರಿಸಿ ಸಮ್ಮುಖ ಮಾಡಿಕೊಳ್ಳಬೇಕು. ಬಳಿಕ ಓಂ ಕಾರವನ್ನು ಪಠಿಸಿ ಒಳಗೆ ಕುಂಚಿತವಾದ ಕಮಲದಲಗಳ ಅಗ್ರಭಾಗವನ್ನು ಊರ್ಧ್ವಮುಖಗೊಳಿಸಬೇಕು. ನೆಟ್ಟಗೆ ಮಾಡಬೇಕು. ದೇವರ ಜ್ಞಾನವೆಂಬ ಸೂರ್ಯನಿಂದ ಆ ತಾವರೆಯನ್ನು ಅರಳಿಸಬೇಕು.

ಹಿಂದೆ ಹೇಳಿದ ಎಲ್ಲ ಪೀಠದೇವತೆಗಳನ್ನು ಆ ತಾವರೆಯಲ್ಲಿ ಮತ್ತೊಮ್ಮೆ ನೆನೆದು ಅವರೆಲ್ಲರ ಮೇಲೆ ವಿರಾಜಮಾನನಾದ ಬಿಂಬಮೂರ್ತಿಯನ್ನು ಸ್ಮರಿಸಬೇಕು.

ಎಂಟುದಳದ ಕಮಲ. ಅದರಲ್ಲಿ ಒಂದರ ಮೇಲೊಂದರಂತೆ ಸೂರ್ಯಮಂಡಲ ಚಂದ್ರಮಂಡಲ ವಹ್ನಿಮಂಡಲಗಳು ಇವೆ. ಅಲ್ಲೊಂದು ಪೀಠ.

ಆ ಪೀಠದಲ್ಲಿ ವಿರಾಜಿಸುವ ಬಿಂಬಮೂರ್ತಿಯನ್ನು ಪಾದಪೀಠದಿಂದಾರಂಭಿಸಿ ಮುಡಿಯ ಮುಕುಟದವರೆಗೆ ಧೇನಿಸಬೇಕು.

ಬಿಂಬರೂಪವರ್ಣನ

ಇಡಿಯ ಜಗದೊಡೆಯರು ಸಿರಿವಿಧಿವಾಯು ಮುಂತಾದ ಅಮರರು. ಅಮರರ ಮಸ್ತಕದಲ್ಲಿ ದಿವ್ಯಕಿರೀಟ. ಕಿರೀಟಗಳಲ್ಲಿ ಝಗಝಗಿಸುವ ಮಾಣಿಕ್ಯಗಳು.

ತಮ್ಮೊಡೆಯನ ದರ್ಶನಕ್ಕೆ ಕಾದ ದೇವತೆಗಳು ಲಗುಬಗೆಯಿಂದ ಬರುವರು. ದೇವರ ಪಾದಪೀಠಕ್ಕೆರಗುವರು. ಮಂಡೆಬಾಗಿ ನಮಸ್ಕರಿಸುವರು. ಕಿರೀಟಮಣಿಗಳ ಘರ್ಷಣೆಯಿಂದ ಥಳಥಳ ಹೊಳೆಯುತ್ತಿದೆ ಪಾದಪೀಠ.

ಆ ಚಿನ್ನದ ಪಾದಪೀಠದಲ್ಲಿ ಕಂಗೊಳಿಸುತ್ತಿವೆ ಅಡಿದಾವರೆಗಳು. ಅಂಗಾಲುಗಳಲ್ಲಿ ವಜ್ರ, ಅಂಕುಶ, ಧ್ವಜ, ತಾವರೆಗಳ ಚಿಹ್ನಗಳಿವೆ.

ಅವನಡಿಗಳು ಕಮಲದಂತೆ ಮಿಗಿಲಾಗಿ ಕೆಂಪು. ಮಾವಿನ ಚಿಗುರಿನಂತೆ ಅತಿಯಾಗಿ ಕೋಮಲ.

ಎತ್ತರವಾದ ಕಾಲುಗಳು. ತೆಳ್ಳನೆಯ ಬೆರಳುಗಳು. ಎಲ್ಲಾ ಬೆರಳುಗಳಲ್ಲಿ ಉಂಗುರಗಳು.

ಈ ಪಾದವನ್ನೇ ಪೂಜಿಸಿ ವಿಧಿ ಗಂಗೆಯನ್ನು ಹರಿಸಿದ. ಶಿವ ಈ ಪಾದತೀರ್ಥವನ್ನು ಧರಿಸಿ ಶಿವನಾದ.

ಈ ಪಾದಗಳು ಉದಿಸುವ ಭಾನುವಿನಂತೆ ಭಾಸಮಾನ, ಪ್ರಚಂಡ ತೇಜಃಪುಂಜ. ಒಂದೊಂದು ನಖಗಳಲ್ಲೂ ಅನಂತ ಸೂರ್ಯರಿಗಿಂತಲೂ ಮಿಗಿಲಾದ ಪ್ರಖರ ದೀಪ್ತಿ.

ಅಷ್ಟಿದ್ದರೂ ಕೋಟಿ ಕೋಟಿ ಚಂದ್ರಮರನ್ನು ಮೀರಿಸುವ ಶಾಂತಕಾಂತಿ. ಇದರ ನೆನಹು ಬಗೆಯ ಅನಾದಿ-ನಿಬಿಡ-ಅವಿದ್ಯಾಂಧಕಾರಕ್ಕೆ ಪಂಜು. ಪಾಪದ ಬೆಟ್ಟಕ್ಕೆ ಭಾರಿಯಾದ ಸಿಡಿಲು.

ಕಾಲಿನ ಕಿರುಗೆಜ್ಜೆಯ ನಿನಾದ ಅತಿಮಧುರ. ಗೆಜ್ಜೆಯ ಧ್ವನಿಯು ಕೇಳಿದವರ ಕಲೇವರವನ್ನೇ ಕಳೆಯುವದು.

ದುಂಡಾಗಿದೆ ಇವನ ಕಾಲಿನ ಮಣಿಗಂಟು. ಮಾಂಸಲ ಅಂಗದಲ್ಲಿ ಅವಿತು ಹೋಗಿದೆ.

ಕ್ರಮವಾಗಿ ತೆಳ್ಳನಾಗುವ ಜಂಘಾಯುಗಲ ಆತನದು. ವಲಯಾಕಾರದ ಮೊಣಕಾಲು. ಆನೆಯ ಸೊಂಡಿಲಿನಂತೆ ಕ್ರಮವಾಗಿ ಸಣ್ಣಕಾಗುವ ತೊಡೆಗಳು. ಬಾಳೆಯಕಂಬದಂತೆ ಕೋಮಲವೂ ದುಂಡನೆಯದೂ ಹೌದು. ಈ ತೊಡೆಗಳೆರಡನ್ನು ಎಡಬಲ ಧರಿಸಿ ಅಹೋ ಧನ್ಯ ಎಂದುಕೊಳ್ಳುತ್ತಾನೆ ಗರುಡದೇವ.

ಮೇರುಬೆಟ್ಟದಲ್ಲಿ ಮೂಡಿ ಬಂದ ಜಾಂಬೂನದ ಹೊನ್ನದಂತೆ ಹೊಳಪಿನ ಪೀತಾಂಬರ ಉಟ್ಟಿರುವ.

ಸಿಂಹದಂತಹ ಕಟಿ ಸಿರಿಯನ್ನೂ ಮೋಹದ ಸೆರೆಯಲ್ಲಿ ಹಿಡಿಯುವುದು. ಚಿನ್ನದ ಉಡಿದಾರ. ಪೀತಾಂಬರವು ಪುಟಕ್ಕಿಟ್ಟ ಹೊನ್ನದಂತೆಯೋ, ಕಾರ್ಮೋಡಗಳಲ್ಲಿ ಕಂಗೊಳಿಸುವ ಮಿಂಚಿನಂತೆಯೋ ಹೊಳೆಯುತ್ತಿದೆ.

ನಾಭಿಯು ಆಳವಾಗಿದೆ. ತೆಳ್ಳಗಾಗಿದೆ. ಬಲಕ್ಕೆ ಹೊರಳುವ ಅದರ ಸುಳಿ ಕಣ್ಣಿಗೆ ಆನಂದ ನೀಡುವದು.

ವಿಶ್ವವಿಧಾತೃವಾದ ಬ್ರಹ್ಮನನ್ನು ಹೆತ್ತ ತಾವರೆಯ ತವರು. ಹದಿನಾಲ್ಕು ಭುವನಗಳನ್ನು ನಿರ್ಮಿಸಿದ ಕಮಲದ ನೆಲೆ.

ಎಲ್ಲ ಇಲ್ಲದ ಬ್ರಹ್ಮಾಂಡವನ್ನು ಹೊಟ್ಟೆಯಲ್ಲಿ ಮುಚ್ಚಿಹಾಕಿದರೂ ತೆಳ್ಳಗಿದೆ ಇವನ ಉದರ. ಜೊತೆಗೆ ತುಂಬಿಕೊಂಡೂ ಇದೆ.

ಅಲ್ಲಿ ಮೂರು ತೆಳ್ಳನೆಯ ಗೆರೆಗಳು. ಈ ಸೊಂಟ ಹಾಗೂ ಉದರಗಳ ಲಾವಣ್ಯಕ್ಕೆ ಮಾರು ಹೋಗಿ ಎಡಬಲದ ಮಡದಿಯರು ಶ್ರೀಭೂದೇವಿಯರು ಆನಂದವಾಗಿ ಆಲಿಂಗಿಸಿದ್ದಾರೆ.

ಮೇಲೆ ವಿಶಾಲವಾದ ವಕ್ಷಸ್ಸು, ಇದೇ ಸಿರಿಯ ಸೆರೆ, ಸಿರಿಯ ಆಸರೆ. ಇಲ್ಲಿಯೇ ಶ್ರೀವತ್ಸ ಕಣ್ಣನಗಳಿಗೆ ಸಂತಸ ಸುರಿಯುವದು.

ಸ್ವಯಂ ಅನಂತವಾದರೂ ವಕ್ಷಸ್ಥಲವು ಅಚಿಂತ್ಯಶಕ್ತಿಯಿಂದಾಗಿ ಎರಡು ಬಾಹುಗಳ ಮಧ್ಯದಲ್ಲಿದ್ದಂತೆ ತೋರುವದು.

ಕಂಠದಲ್ಲಿ ಕಣ್ಮಣಿಯಾದ ಕೌಸ್ತುಭ. ಇದಕ್ಕೆ ಬ್ರಹ್ಮನೇ ಅಭಿಮಾನಿ. ಕೋಟಿ ಕೋಟಿ ಭಾಸ್ಕರರ ಕಿರಣಗಳನ್ನು ನುಂಗುವಂಥದು. ಅಂಥ ಕೌಸ್ತುಭಕ್ಕೆ ಬೆಳಕು ಕೊಟ್ಟ ಕಂಠ ಈತನದು.

ಈತನಿಗೆ ನಾಲ್ಕು ಬಾಹುಗಳು. ಬಾಹುಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳು.

ನೂರು ಸುಳಿಯ ಶಂಖ ಲೆಕ್ಕವಿಲ್ಲದ ಚಂದ್ರಮರ ಕಾಂತಿಯನ್ನು ಧಿಕ್ಕರಿಸುವಂಥದು. ವೈಕುಂಠದಲ್ಲಿಯ ಶಂಖದ ಧೀಮಧ್ವನಿ ಪಾತಾಲದಲ್ಲಿಯ ದೈತ್ಯರ ಗರ್ಭಸ್ರಾವಕ್ಕೆ ಕಾರಣ. ಕ್ರೂರಘೋರದೃಷ್ಟಿಯುಳ್ಳ ಯಾತುಧಾನ, ಪ್ರಮಥ, ಪ್ರೇತ, ಮಾತೃ, ಪಿಶಾಚ ಮೊದಲಾದವರನ್ನು ತನ್ನ ಭಯಾನಕ ಧ್ವನಿಯಿಂದ ದೂರ ಓಡಿಸುತ್ತದೆ. ನೆನೆದವರ ಪಾಪವನ್ನು ಬುಡಮೇಲೆ ಮಾಡುವದು.

ಮೇಲಿನ ಎಡಗೈಯಲ್ಲಿ ಚಕ್ರ. ಚಕ್ರಕ್ಕೆ ಸಾವಿರ ಹಲ್ಲುಗಳು. ಒಂದೊಂದೂ ಹಲ್ಲು ಪ್ರಳಯದ ಕಾಲಾಗ್ನಿಯನ್ನು ಕಾರುತ್ತದೆ. ಅಸುರರ ಕತ್ತನ್ನು ಕತ್ತರಿಸುತ್ತದೆ.

ದೈತ್ಯ-ಪಿಶಾಚರಿಗೆ ಅಸಹ್ಯವಾಗುವ ತೇಜಸ್ಸು ಈ ಚಕ್ರಕ್ಕೆ. ಇದು ಮಹಾಪಾತಕನಾಶನ. ದಿವ್ಯಜ್ಞಾನಪ್ರದ.

ಕೆಳಗಿನ ಎಡಗೈಯಲ್ಲಿ ಕೌಮೋದಕೀ ಗದೆ. ಅದಕ್ಕೆ ಅಸ್ತ್ರಗಳು ಎಂಟು. ಅದರ ವೇಗ ಸಿಡಿಲಿನಂತೆ. ಅದು ಕೂಷ್ಮಾಂಡ, ವೈನಾಯಕ, ಯಕ್ಷ, ರಾಕ್ಷಸ, ಭೂತ, ಗ್ರಹಗಳನ್ನು ಚೂರ್ಣಗೊಳಿಸುತ್ತದೆ. ಶತ್ರುಗಳ ನೆತ್ತರು ನೆಕ್ಕಿ ಕೆಂಪಾಗಿ ಕಾಣುತ್ತದೆ.

ಬಲದ ಕೆಳಗೈಯಲ್ಲಿ ತಾವರೆ. ಆ ತಾವರೆಗೆ ಸಾವಿರ ದಲಗಳು. ಅದರ ಬಣ್ಣ, ಪರಿಮಳ, ಕಾಂತಿ, ಲಾವಣ್ಯಗಳೆಲ್ಲ ಲೋಕಾತೀತ, ಲೋಕವಿಲಕ್ಷಣ.

ಶಂಖಕ್ಕೆ ಅಭಿಮಾನಿದೇವತೆ ಶ್ರೀದೇವಿ ಹಾಗೂ ಅನಿರುದ್ಧ. ಚಕ್ರಕ್ಕೆ ಅಭಿಮಾನಿದೇವತೆ ದುರ್ಗೆ ಹಾಗೂ ಕಾಮ. ಗದೆಗೆ ವಾಯುದೇವರು ಅಭಿಮಾನಿಗಳು. ಪದ್ಮಕ್ಕೆ ಭೂದೇವಿ.

ಈ ಶಂಖ, ಚಕ್ರ, ಗದಾ, ಪದ್ಮಗಳಿಗೆ ಸಹಮಾನಾ, ಜುಹೂ, ರಾಜ್ಞೀ, ಸುಭೂತಾ, ಎಂಬ ಹೆಸರುಗಳೂ ಇವೆ.

ದೇವರ ನಾಲ್ಕು ಕೈಗಳಿಂದ ವಾಯುದೇವರು ಜನಿಸಿದರು. ಆ ವಾಯುದೇವರಿಗೆ (ಜುಹೂ) ಚಕ್ರವು ಧರ್ಮವನ್ನು , (ಸಹಮಾನ) ಶಂಖವು ಜ್ಞಾನವನ್ನು, (ರಾಜ್ಞೀ) ಗದೆಯು ವೈರಾಗ್ಯವನ್ನು, (ಸುಭೂತಾ) ಪದ್ಮವು ಐಶ್ವರ್ಯವನ್ನು ದಯಪಾಲಿಸಿವೆ. ಹೀಗೆ ವಾಯುದೇವರಲ್ಲಿ ಧರ್ಮ, ವಿಜ್ಞಾನ, ವೈರಾಗ್ಯ, ಐಶ್ವರ್ಯಗಳನ್ನು ತುಂಬಿವೆ ಈ ಬಾಹುಗಳು ಎಂದು ಸ್ಮರಿಸಬೇಕು.

ಕ್ರಮವಾಗಿ ತೆಳ್ಳಗಾಗುವ ರಮ್ಯ ಬಾಹುಗಳು. ಮೇಲ್ಭಾಗದಲ್ಲಿ ಅಂಗದ. ಅದರ ಕೆಳಕ್ಕೆ ನಾಗಮುರಿಗೆ. ಕೈಗಳಲ್ಲಿ ಕಂಕಣ. ಬೆರಳುಗಳಲ್ಲಿ ನವರತ್ನದ ಉಂಗುರ. ಉಗುರು ತೇಜೋಮಯ.

ಅಂಗೈ ಮಿಗಿಲಾಗಿ ಕೆಂಪಾಗಿದೆ. ಸಂಸಾರ ಸಾಗರದಲ್ಲಿ ಬಳಲಿ ಬೆಂಡಾಗಿ ಮುಳುಗಿ ಹೋಗುತ್ತಿರುವವರಿಗೆ ತನ್ನಾಸರೆಯನ್ನು ಕೊಟ್ಟು ಮುಕ್ತಿಮಂದಿರಕ್ಕೆ ಎತ್ತಿ ಒಯ್ಯುತ್ತದೆ.

ಅವನ ಕಂಠ ಶಂಖದಂತೆ ಚೆನ್ನು. ಕಂಠ ಸಾಕಷ್ಟು ಹ್ರಸ್ವ, ಅಲ್ಲಿ ಮೂರು ರೇಖೆಗಳು. ಅದು ಅನಂತವೇದಗಳ ಉದ್ಗಮ ಭೂಮಿ.

ಕೊರಳಲ್ಲಿ ವೈಜಯಂತಿ. ಅವನ ಗದ್ದ ಮುದ್ದಾಗಿ ಎದ್ದು ಕಾಣುತ್ತದೆ. ಕೆನ್ನೆ ಹೊಳೆಯುತ್ತದೆ. ಅದರ ರೂಪ ಮೃದುವಾಗಿದೆ. ಕಿವಿಯಲ್ಲಿ ಮಕರಕುಂಡಲ.

ತುಂಟ ತುಟಿ ಅವನದು. ಭಾರೀ ಕೆಂಪು. ವಿಶ್ವಾತೀತ ಚೆಲುವು ಮುಪ್ಪುರಿಗೊಂಡಿದೆ.

ದಾಡಿಮ ಬೀಜದಂತಹ ನೆಟ್ಟನೆಯ ಪುಟ್ಟ ಹಲ್ಲುಗಳ ಸಾಲು. ಕೆಂಪು ನಾಲಿಗೆ.

ಸಂಪಿಗೆಯಂಥ ನಾಸಿಕೆ. ಅದು ದೀರ್ಘ, ನೆಟ್ಟಗೆ, ಎತ್ತರ. ಯಾರನ್ನೂ ಮೋಹಗೊಳಿಸುವದು.

ತಾವರೆ ತನ್ನಾಕಾರವನ್ನು ಪಡೆಯಲು ಪ್ರಯತ್ನಿಸಿದ್ದೇ ದೇವರ ಕಣ್ಣಳನ್ನು ಕಂಡು. ಅದೇನು ಚೆಲುವು, ಅದೆಂಥ ಸೌಭಾಗ್ಯ!

ದೀರ್ಘವೂ ವಿಶಾಲವೂ ಶಾಂತ ಶೀತಕಾಂತಿಮಯವೂ ಆದ ಮೋಹಕಕಣ್ಣುಗಳು ಪ್ರಸಾದರಸವನ್ನು ಸಂತತ ಸುರಿಸಿದಂತೆ ತೋರುತ್ತದೆ. ಕಣ್ಣುಗಳ ಅಂಚಿನಲ್ಲಿ ಕೆಂಪು. ಸುತ್ತಲೂ ಕಿರು ನೀಲ ಮಿಶ್ರವಾದ ಬಿಳಿ. ಮಧ್ಯದಲ್ಲಿ ಕಪ್ಪು. ಸೂರ್ಯ ಚಂದ್ರಮರ ತಾಯಿಮನೆ.

ಈತನ ಹುಬ್ಬಿನ ಚೆಲ್ಲಾಟ ವಿಧಿ, ವಾಯು, ಶರ್ವ ಶಕ್ರಾದಿಗಳನ್ನು ಕಿರಿದಾದ ಪದದಲ್ಲಿ ಇರಿಸಿದೆ. ವಿಶ್ವದ ಹುಟ್ಟು, ಅಳಿವು, ಇರುವುಗಳಿಗೆ ಇದೇ ಮೂಲಕಾರಣ.

ಅರ್ಧ ಚಂದ್ರಮನಂತೆ ಇರುವ ವಿಶಾಲವಾದ ಹಣೆ ನಿರ್ಮಲ, ಶುಭ್ರವಾಗಿದೆ. ಸುತ್ತಣದ ಕಪ್ಪುಕೂದಲಿನ ಮಧ್ಯದ ಈ ಮುಖ ಕಪ್ಪು ಅಗಸದ ಮಧ್ಯದ ಚಂದ್ರನಂತೆ ಕಂಗೊಳಿಸುತ್ತಿದೆ.

ಮುಖಮಂಡಲದಲ್ಲಿಯ ಮಂದಸ್ಮಿತವು ಉಕ್ಕಿಬಂದ ಅನಂತ ಸೌಭಾಗ್ಯದಂತಿದೆ. ಇಂಥ ಭಗವಂತನ ರೂಪದ ಮೂವತ್ತೆರಡು ಲಕ್ಷಣಗಳನ್ನೂ ಸ್ಮರಿಸಬೇಕು.

ಮೂವತ್ತೆರಡು ಲಕ್ಷಣಗಳು.

೧) ಐದು ದೀರ್ಘ, ೨) ಐದು ಸೂಕ್ಷ್ಮ, ೩) ಏಳು ಕೆಂಪು, ೪) ಆರು ಎತ್ತರ, ೫) ಮೂರು ವಿಶಾಲ, ೬) ಮೂರು ಕಿರಿದು, ೭) ಮೂರು ಗಂಭೀರ.

೧) ಭುಜ, ನೇತ್ರ, ಗದ್ದ, ತೊಡೆ, ನಾಸಿಕೆ ಇವು ಐದು ದೀರ್ಘವಾಗಿವೆ.

೨) ತೊಗಲು, ಕೂದಲು, ಬೆರಳು, ಹಲ್ಲು, ಬೆರಳುಗಳಲ್ಲಿನ ರೇಖೆ, ಇವು ಐದು ಸೂಕ್ಷ್ಮವಾಗಿವೆ.

೩) ಕಣ್ಣಿನ ಅಂಚು, ಉಗುರು, ಅಂಗೈ, ಅಂಗಾಲು, ತಾಲು(ನಾಲಿಗೆಯ ಮೇಲಿನ ಭಾಗ) ನಾಲಿಗೆ, ಕೆಳದುಟಿ ಇವು ಏಳು ಕೆಂಪಾಗಿವೆ.

೪) ಕಕ್ಷ ಕುಕ್ಷಿ ವಕ್ಷಸ್ಸು, ಮೂಗು, ಹೆಗಲು, ಹಣೆ ಇವು ಆರು ಉನ್ನತವಾಗಿವೆ.

೫) ಹಣೆ, ಸೊಂಟ, ಎದೆ ಈ ಮೂರು ಸ್ಥಾನಗಳು ವಿಶಾಲವಾಗಿವೆ.

೬) ಕುತ್ತಿಗೆ, ಜನನೇಂದ್ರಿಯ, ಬೆನ್ನು ಇವು ಮೂರು ಹ್ರಸ್ವವಾಗಿವೆ.

೭) ಸ್ವರ, ಶಕ್ತಿ, ನಾಭಿ ಇವು ಮೂರು ಗಂಭೀರವಾಗಿವೆ.

ಇಂಥ ಭಗವಂತನ ರೂಪವನ್ನು ಸಾಧ್ಯವಿದ್ದಷ್ಟು ಕಾಲದವರೆಗೆ ಸ್ಮರಿಸುತ್ತಿರಬೇಕು, ಧ್ಯಾನಿಸುತ್ತಿರಬೇಕು.

ಬಿಂಬರೂಪನ ಮಾನಸಪೂಜೆ

ಈ ಭಗವಂತನನ್ನು ಅಮಲಮಾನಸಮಂದಿರದಲ್ಲಿ ಪೂಜಿಸಬೇಕು. ಇದಕ್ಕೆ ಯಾವ ಹಣ ವೆಚ್ಚಮಾಡುವ ಅಗತ್ಯವಿಲ್ಲ. ಇದರಿಂದ ಯಾರಿಗೂ ಪೀಡೆಯಿಲ್ಲ.

ಇದಕ್ಕಾಗಿ ಹೊರಗಿನ ಸಿರಿವಂತಿಕೆಗಿಂತ ಮನಸ್ಸಿನ ಸಿರಿವಂತಿಕೆ ಬೇಕು. ಹೊರಗಿನ ಹೂ-ಹಣ್ಣು-ಧೂಪ-ದೀಪಗಳಿಗಿಂತ ಅಂತಸ್ಸಂಪತ್ತು ವಿಪುಲವಾಗಿರಬೇಕು.

ಭಕ್ತಿಯ ರಸ ಉಕ್ಕೇರಿದಾಗ, ಭಾವದ ಹೊಳೆ ಹರಿದಾಗ, ಮನೋವಿಲಾಸ ಮೆರೆದಾಗ ಈ ಬಗೆಯ ಪೂಜೆ ಸಾಧ್ಯ.

ಈ ಬಗೆಯ ಪೂಜೆ ಅತ್ಯಂತ ಅಗತ್ಯ, ಅನಿವಾರ್ಯ. ಈ ಪೂಜೆಯಿಂದ ಭಗವಂತನಿಗೆ ಬಹಳ ಮೆಚ್ಚುಗೆ. ದೇವರಿಗೆ ಬೇಕು ಮನಸ್ಸು, ವಾಕ್, ಪ್ರಾಣ.

ನಾವು ಬಾಹ್ಯಪೂಜೆಯಲ್ಲಿ ಸಮರ್ಪಿಸುವ ಯಾವಪದಾರ್ಥಗಳೂ ದೇವರಿಗೆ ಬೇಕಾಗಿಲ್ಲ. ಆ ಎಲ್ಲ ಪದಾರ್ಥಗಳನ್ನೂ ನಮ್ಮ ಭಕ್ತಿಯ ಸಂಕೇತವಾಗಿ ಸಮರ್ಪಿಸಬೇಕು, ಅಷ್ಟೇ.

ಹೀಗೆಂದಮಾತ್ರಕ್ಕೆ ಬಹಿರಂಗಪೂಜೆಯನ್ನು ಮಾಡುವದು ಅಗತ್ಯವಲ್ಲ, ಅನಿವಾರ್ಯವಲ್ಲ ಎಂದು ಸರ್ವಥಾ ತಿಳಿಯಬಾರದು.

ಹಾಗಿದ್ದರೆ ಶ್ರೀಮದಾನಂದತೀರ್ಥರೂ ಕೇವಲ ಮಾನಸಪೂಜೆಯನ್ನೇ ಮಾಡಿ ಮುಗಿಸಬಹುದಿತ್ತು. ಬಾಹ್ಯಪೂಜೆಯನ್ನು ಸರ್ವಥಾ ಮಾಡಬಾರದಾಗಿತ್ತು.

ಆ ಸರ್ವಜ್ಞಾಚಾರ್ಯರೇ ಸಣ್ಣ ಸಣ್ಣ ಶಾಸ್ತ್ರನಿಯಮವನ್ನೂ ಬಿಡದೇ ಬಾಹ್ಯಪೂಜೆಯನ್ನು ಆಚರಿಸಿರುವದೇ ಆದರ್ಶವಾಗಿದೆ.

'ಅರ್ಚಾದೌ ಅರ್ಚಯೇತ್ ತಾವದೀಶ್ವರಂ ಮಾಂ ಸ್ವಕರ್ಮಕೃತ್।
ಯಾವತ್ ನ ವೇದ ಸ್ವಹೃದಿ ಸರ್ವಭೂತೇಷ್ವವಸ್ಥಿತಂ॥'

ಎಂದು ಭಾಗವತದಲ್ಲಿ ಹೃದಯದಲ್ಲಿ ಭಗವಂತನಿರುವನು ಎಂದು ತಿಳಿಯುವವರೆಗೆ ಪ್ರತಿಮೆಯಲ್ಲಿ ಪೂಜಿಸಬೇಕು. ತಿಳಿದಬಳಿಕ ಬಾಹ್ಯ ಪೂಜೆ ಅಗತ್ಯವಿಲ್ಲ ಎಂಬುದಾಗಿ ಹೇಳಿದಂತೆ ತೋರುತ್ತದೆ.

ಅದರರ್ಥವನ್ನು ಸ್ಪಷ್ಟ ತಿಳಿಸುವದಕ್ಕೆ ಆಚಾರ್ಯರು ಈ ವಾಕ್ಯವನ್ನು ಉದಾಹರಿಸಿರುವರು.

'ಅಜ್ಞಃ ಅರ್ಚಯೇದೇವ ಅರ್ಚಾಯಾಂ ಅನ್ಯಥಾ ದೋಷವಾನ್ ಭವೇತ್।
ಜ್ಞಸ್ತು ಅರ್ಚಯನ್ ಸುಗುಣವಾನ್ ಅನ್ಯಥಾ ದೋಷವಾನ್ ನ ತು'

ಇದರ ಅಭಿಪ್ರಾಯ 'ಅಪರೋಕ್ಷಜ್ಞಾನವಾಗುವವರೆಗೆ ಪ್ರತಿಮೆಯಲ್ಲಿ ಪೂಜೆಯನ್ನು ಮಾಡಲೇಬೇಕು. ಸರ್ವಥಾ ಅನಿವಾರ್ಯ. ಮಾಡದಿದ್ದರೆ ಮಹಾದೋಷ ಬರುವದು.

ಅಪರೋಕ್ಷಜ್ಞಾನವಾದ ಬಳಿಕ ಭಕ್ತನು ಪ್ರತಿಮೆಯಲ್ಲಿ ಭಗವಂತನನ್ನು ಪೂಜಿಸಿದರೆ ಹೆಚ್ಚಿನ ಲಾಭವಾಗುವದು. ಪೂಜಿಸದಿದ್ದರೆ ನರಕವಾಗುವದಿಲ್ಲ. ಮುಕ್ತಿಯಾಗುವದಾದರೂ ಮುಕ್ತಿಯಲ್ಲಿ ಆನಂದಹ್ರಾಸ ನಿಶ್ಚಿತ.' ಎಂದು.

'ಅಜ್ಞಸ್ಯ ಕರ್ಮ ಲಿಪ್ಯೇತ ಕೃಷ್ಣೋಪಾಸ್ತಿಮಕುರ್ವತಃ
ಜ್ಞಾನಿನೋಽಪಿ ಯತೋ ಹ್ರಾಸಃ ಆನಂದಸ್ಯ ಭವೇದ್ಧ್ರುವಮ್ ।
ಅತೋ ಅಲೇಪೇಽಪಿ ಲೇಪಃ ಸ್ಯಾದತಃ ಕಾರ್ಯೈವ ಸಾ ಸದಾ।

'ಅಪರೋಕ್ಷಜ್ಞಾನವಿಲ್ಲದವನು ಕರ್ಮಗಳನ್ನು ಮಾಡದಿದ್ದರೆ ನರಕಾದ್ಯನರ್ಥಗಳು ಆಗುವವು. ಮಾತ್ರವಲ್ಲ, ಅಪರೋಕ್ಷಜ್ಞಾನಿಯಾದವನಿಗೂ ಕರ್ಮಗಳನ್ನು ಬಿಟ್ಟಾಗ -ನರಕಾದ್ಯನರ್ಥಗಳೆಂಬ ಲೇಪವಾಗದಿದ್ದರೂ- ಮುಕ್ತಿಯಲ್ಲಿ ಆನಂದ ಹ್ರಾಸವೆಂಬ ಲೇಪವಾಗುವದು ಖಂಡಿತ. ಆದ್ದರಿಂದ ಕರ್ಮಗಳನ್ನಾಚರಿಸಲೇ ಬೇಕು.' ಇಷ್ಟು ಮೇಲಿನ ವಾಕ್ಯದ ಅರ್ಥ.

ಹೀಗಿರುವ ಕಾರಣ ಭಗವಂತನ ಸಾಕ್ಷಾತ್ಕಾರಕ್ಕಿಂತಲೂ ಮೊದಲು ಪ್ರತಿಮಾದಿಗಳಲ್ಲಿ ಪರಮಾತ್ಮನ ಪೂಜೆ ಅತ್ಯಂತ ಅನಿವಾರ್ಯ. ಇದಕ್ಕೆ ಹೊರತಾಗಿ ಹೇಳುವವರು ಹಾಗೂ ಮಾಡುವವರು ಮೂಢರು ಎಂದು ತಿಳಿಯಬೇಕು.

ಪ್ರಕೃತ, ಬಹಿರಂಗಪೂಜೆ ಪೂರ್ಣಸಫಲವಾಗಬೇಕಾದರೆ ಅಂತರಂಗ ಪೂಜೆಯನ್ನು ಮಾಡಲೇಬೇಕು.

ಅಂತರಪೂಜೆಯನ್ನು ಮಾಡದಿದ್ದರೆ ಎಷ್ಟೇ ವಿಸ್ತಾರದ ಬಹಿರಂಗಪೂಜೆಯು ಪೂರ್ಣವಾಗುವದಿಲ್ಲ. ಕೆಲವೊಮ್ಮೆ ಬಹಿರಂಗಪೂಜೆ ಯಾಂತ್ರಿಕವಾಗಿಬಿಡುತ್ತದೆ.

ಅಲ್ಲದೇ ಬಿಂಬರೂಪನ ಉಪಾಸನೆ, ಪೂಜೆ ಮುಂತಾದವು ತೀರ ಅವಶ್ಯಕ. ಬಿಂಬೋಪಾಸನೆ ಮುಕ್ತಿಗೆ ಪ್ರಧಾನವೂ, ಅತ್ಯಂತ ಅನಿವಾರ್ಯವೂ ಆದ ಸಾಧನೆ.

'ಸ್ವಹೃದಿಸ್ಥಿತಂ ಸ್ವನಿಯಾಮಕಂ ಭಗವದ್ರೂಪಂ ಉಪಾಸ್ಯೈವ ಮೋಕ್ಷೋ ಭವತಿ... ಯೇಷಾಂ ಬಹಿರುಪಾಸನೇನ ಮೋಕ್ಷಃ ತೇಷಾಮಪಿ ಹೃದ್ಯುಪಾಸನಂ ಕಿಂಚಿತ್ ಕರ್ತವ್ಯಮೇವ" ಎಂದು ಆಚಾರ್ಯಚರಣರು ಆದೇಶಿಸಿದ್ದಾರೆ.

ಎಲ್ಲ ಸಾಧನೆಗಳನ್ನು ಒಂದರ್ಥದಲ್ಲಿ ಸಾಂಗಗೊಳಿಸುವದು ಈ ಬಿಂಬೋಪಾಸನೆ. ಬಿಂಬನನ್ನು ಉಪಾಸಿಸದೇ, ಪೂಜಿಸದೇ, ಮಾಡಿದ ಉಳಿದೆಲ್ಲ ಸಾಧನೆಯು ಅಲ್ಪಫಲವಾಗುವದು, ವ್ಯಂಗವಾಗುವದು. ಆದುದರಿಂದಲೇ ಹೃದಯಮಂಟಪದಲ್ಲಿ ಮಾನಸಪೂಜೆಯನ್ನಾಚರಿಸಬೇಕು.

ಇದಲ್ಲದೇ, ಮಾನಸಪೂಜೆಯಲ್ಲಿ ಅತಿಮಹತ್ವದ ವಿಶೇಷವಿದೆ. ಬಾಹ್ಯಪೂಜೆಯಲ್ಲಿ ನಾವು ಕೊಡುವ ಅರ್ಘ್ಯಪಾದ್ಯಾದಿಗಳನ್ನು ಪ್ರತಿಮೆಯು ನಮ್ಮೊಟ್ಟಿಗೆ ಸ್ಪಂದಿಸುತ್ತ ಸ್ವೀಕರಿಸುವದಿಲ್ಲ. ಅಚಲವಾಗಿಯೇ ಇರುತ್ತದೆ.

ಪ್ರತಿಮಾಸ್ಥ ದೇವರು ಸ್ಪಂದಿಸುತ್ತ ಸ್ವೀಕರಿಸಿದರೂ ನಮಗದು ಕಾಣುವದಿಲ್ಲ.

ಅಲ್ಲದೇ ಬಾಹ್ಯಪೂಜೆಯಲ್ಲಿ ಭಾರೀ ಭಾರೀ ಪದಾರ್ಥಗಳನ್ನು ಪರಮ ಅದ್ಭುತರೀತಿಯಲ್ಲಿ ಬಳಸಿ ದೇವರ ಪೂಜೆಯನ್ನು ಮಾಡುವದು ಸಾಧ್ಯವಿಲ್ಲ.

ಈ ತರಹದ ಪೂಜೆಗೆ ದಾರಿದ್ರ್ಯ, ರೋಗ, ಅಸಾಮರ್ಥ್ಯ, ದೇಶಕಾಲ ಅವಸ್ಥೆಗಳ ಅನನುಕೂಲತೆ, ಇನ್ನಿತರ ಸಂಕೋಚ ಮುಂತಾದವೆಲ್ಲ ಅಡ್ಡಿಯಾಗುವವು.

ಆದರೆ ಮನಸ್ಸಿನಲ್ಲಿ ಎಂಥ ಅದ್ಭುತ ಪೂಜೆಯನ್ನು ಮನದಣಿಯೆ ಮಾಡಬಹುದು.

ಈ ನಿಟ್ಟಿನಲ್ಲಿ, ಮಾನಸಪೂಜೆಯನ್ನು ಮಾಡುವಾಗ ಆಗುವ ತೃಪ್ತಿ ಬಾಹ್ಯಪೂಜೆಯ ತೃಪ್ತಿಗಿಂತಲೂ ಮಿಗಿಲಾದುದು.

ಈ ಮಾನಸಪೂಜೆಯನ್ನು ಕೇವಲ ಕಲ್ಪನಾವಿಲಾಸಿಗಳೂ ಮಾಡಬಹುದು. ಆದರೇ, ಜ್ಞಾನಭಕ್ತಿಗಳಿಲ್ಲದೆ ಮಾನಸಪೂಜೆಯನ್ನು ಮಾಡಿ ಏನೂ ಪ್ರಯೋಜನವಿಲ್ಲ. ಅದು ಕೇವಲ ಮನೋವಿಲಾಸವಾದೀತು.

ಧ್ಯಾನವಿಲ್ಲದ ಕಲ್ಪನೆ ವಿಭ್ರಮವೇ ಸರಿ. ಆದುದರಿಂದ ಭಕ್ತಿಜ್ಞಾನ ಪುರಸ್ಸರವಾಗಿ, ಹದವಾದ ಮನಸ್ಸಿನಲ್ಲಿ ವಾಸನಾಮಯ ಭಗವದ್ರೂಪವನ್ನೂ, ವಾಸನಾಮಯ ಪದಾರ್ಥಗಳನ್ನೂ ನಿರ್ಮಿಸುತ್ತ, ಭಗವಂತನ ಅತಿ ಪ್ರೀತಿಕರವಾದ ಅರ್ಚನೆಯನ್ನು ಮಾಡಬೇಕು.

ಮಾನಸಪೂಜೆಯಲ್ಲಿಯೂ ಒಂದು ಬಾರಿ ಹಿಂದೆ ಹೇಳಿದ ಪೀಠದೇವತೆಗಳನ್ನು ಹೃದಯಕಮಲದಲ್ಲಿ ಪೂಜಿಸಬೇಕು.

ಈ ಎಲ್ಲ ದೇವತೆಗಳನ್ನು ಸ್ಮರಿಸಬೇಕು ಎಂದಾಗ ಸಾಮಾನ್ಯವಾಗಿ ಆಯಾ ದೇವತೆಗಳ ಹೆಸರನ್ನು ಮನಸಾ ಸ್ಮರಿಸಿ ಮುಗಿಸಿಬಿಡುವದುಂಟು. ಅದು ದೇವತಾಸ್ಮರಣವಲ್ಲ. ಅದು ಕೇವಲ ದೇವತಾನಾಮಸ್ಮರಣ.

ಕೇವಲ ದೇವತಾನಾಮಸ್ಮರಣಮಾಡೆಂದು ಹೇಳಿಲ್ಲವಾದುದರಿಂದ ಆಯಾ ದೇವತೆಗಳ ಚಿತ್ರಗಳನ್ನೇ ಮನೋಭಿತ್ತಿಯಲ್ಲಿ ರಚಿಸಿ ಸ್ಮರಿಸಬೇಕು. ಇದು ತುಂಬ ಮಹತ್ವದ ಮಾತು.

ಮಧ್ಯದಲ್ಲಿ ದೇವರು. ಎಡದಲ್ಲಿ ಗುರು. ಬಲದಲ್ಲಿ ಸರ್ವದೇವತೆಗಳು. ಪುನಃ ಎಡದಲ್ಲಿ ಸರ್ವಗುರುಗಳು.

ಪೀಠಪಾದದ ಕೆಳಭಾಗದಲ್ಲಿ ಗರುಡ, ವೇದವ್ಯಾಸ, ದುರ್ಗಾ, ಸರಸ್ವತಿಯರು.

ಮೇಲ್ಭಾಗದಲ್ಲಿ (ಧರ್ಮ) ಯಮ, (ವಿಜ್ಞಾನ) ವಾಯು, (ವೈರಾಗ್ಯ) ಶಿವ, (ಐಶ್ವರ್ಯ) ಇಂದ್ರ.

ಪೀಠದ ಫಲಕದಲ್ಲಿ (ಅಧರ್ಮ) ನಿರ್ಋತಿ, (ಅವಿಜ್ಞಾನ) ದುರ್ಗಾ, (ಅವೈರಾಗ್ಯ) ಕಾಮ, (ಅನೈಶ್ವರ್ಯ) ಶಿವ.

ಬಳಿಕ ಬ್ರಹ್ಮಾಂಡದ ಆಚೆಯಿಂದ ಆರಂಭಿಸಿ ಪರಮಪುರುಷ, ಆಧಾರಶಕ್ತಿ, ಹೊರಗಿನ ವಿಷ್ಣುಕೂರ್ಮ, ಅಂಡದೊಳಗಿನ ವಿಷ್ಣುಕೂರ್ಮ, ವಾಯುಕೂರ್ಮ, ಶೇಷ, ಪೃಥಿವಿ, ಕ್ಷೀರಸಾಗರ (ವರುಣ), ಶ್ವೇತದ್ವೀಪ (ರಮಾ), ಮಂಡಪ (ರಮಾ), ಪದ್ಮ (ರಮಾ), ದಲಗಳಲ್ಲಿ ಸತ್ವ-ಶ್ರೀ, ರಜಸ್-ಭೂ, ತಮಸ್-ದುರ್ಗಾ, ಸೂರ್ಯ, ಸೋಮ, ಅಗ್ನಿ.

ಸೋಪಾನ ದೇವತೆಗಳು- ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಅದಕ್ಕೆ ಮೇಲೆ ಎಂಟುದಳದ ಪದ್ಮ.

ಅಲ್ಲಿ ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ, ಅನುಗ್ರಹಾ. ಅದರ ಮೇಲೆ ಯೋಗಪೀಠ ರೂಪನಾದ ಶೇಷ.

ಅಲ್ಲಿ ಈ ಬಿಂಬರೂಪಿಯಾದ ಪ್ರಾದ್ಯನಾಮಕ ಅಗ್ರೇಶ ರಾರಾಜಿಸುತ್ತಿರುವ ಎಂದು ಸ್ಮರಿಸಬೇಕು.

ಆ ಬಿಂಬರೂಪಿಯಾದ ಭಗವಂತನಿಗೆ ಮನಸ್ಸಿನಿಂದಲೇ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.

೧. ದೇವರಿಗೆ ಅರ್ಘ್ಯವನ್ನು ನೀಡುತ್ತಿದ್ದೇವೆ. ದೇವರು ಕೈಚಾಚಿ ಸ್ವೀಕರಿಸುತ್ತಿರುವ.

೨. ಭಗವಂತನ ಪಾವನ ಪಾದಗಳಿಗೆ ಪಾದ್ಯಜಲವನ್ನು ಎರೆದು ತೊಳೆಯುತ್ತಿದ್ದೇವೆ. ಆ ಪಾದಗಳಿಗೆ ಕೋಟಿಸೂರ್ಯರಂತಹ ತೇಜ. ತಾವರೆಯಂತೆ ಚೆಲುವು.

ಇದೇ ಪಾದವನ್ನು ತೊಳೆದು ಬ್ರಹ್ಮ ಧನ್ಯನಾದ. ಆ ತೀರ್ಥವನ್ನು ಧರಿಸಿ ಶಿವ ಪುನೀತನಾದ.

ನೆನೆದವರ ಮನದ ಅಜ್ಞಾನವನ್ನು ಪರಿಹರಿಸುವ ಪಾದವಿದು. ಅಂಥ ಪಾದವನ್ನು ತೊಳೆದು ಆ ಪಾದತೀರ್ಥವನ್ನು ಮನದಲ್ಲಿಯೇ ಮೈ ಮನೆಗಳಿಗೆಲ್ಲ ಪ್ರೋಕ್ಷಿಸುತ್ತಿದ್ದೇವೆ. ಧನ್ಯರೆಂದುಕೊಳ್ಳುತ್ತಿದ್ದೇವೆ.

೩. ಏಲಕ್ಕಿ, ಕರ್ಪೂರ, ಕೇಸರ, ಕಸ್ತೂರಿ ಇವುಗಳಿಂದ ಘಮಘಮಿಸುವ ಗಂಗೋದಕದ ಆಚಮನ ಭಗವಂತನ ಅಂಗೈಯಲ್ಲಿ ಹಾಕುತ್ತಿದ್ದೇವೆ. ದೇವರು ಸ್ವೀಕರಿಸುತ್ತಿರುವ.

೪. ದಿವ್ಯ ಮಧುಪರ್ಕವನ್ನು ಸಮರ್ಪಿಸುತ್ತಿದ್ದೇವೆ. ದೇವರು ಸ್ವೀಕರಿಸುತ್ತಿರುವ.

೫. ಪುನರಾಚಮನವನ್ನು ನೀಡುತ್ತಿದ್ದೇವೆ.

೬. ನೂರಾ ಒಂದು ಕಲಶದೇವತೆಗಳ ಸನ್ನಿಧಾನವುಳ್ಳ ಸ್ನಾನೀಯಕುಂಭದಿಂದ ಶಂಖದಲ್ಲಿ ನೀರೆತ್ತಿ ಅನಂತಶೀರ್ಷಾದಿಗಳುಳ್ಳ ಅನಂತರೂಪಿಯಾದ ಅಪ್ರಾಕೃತ ಸಚ್ಚಿದಾನಂದಮಯ ಭಗವಂತನಿಗೆ 'ಸಹಸ್ರಶೀರ್ಷಾ ಪುರುಷಃ' ಎಂದಂದು ಅಭಿಷೇಕ ಮಾಡುತ್ತಿದ್ದೇವೆ.

ಭಕ್ತಿಹೀನನಾದ ಯಾವ ವ್ಯಕ್ತಿಯ ಮನದಲ್ಲೂ ಮೂಡದ ಭಗವಂತನನ್ನು ನನ್ನ ಕೈಯಾರೆ ಅಭಿಷೇಕ ಮಾಡುತ್ತಲಿರುವೆ. ಅಹೋ ಧನ್ಯ!

ಭಗವಂತನ ಸಚ್ಚಿದಾನಂದಮಯವಾದ ವಿಗ್ರಹವನ್ನು ಬಟ್ಟೆಯಿಂದ ಒರಿಸುತ್ತಿದ್ದೇವೆ. ಭಗವಂತನ ಮೈ ಎಂಥ ಕೋಮಲ! ಎಂಥ ಮೃದು! ಅದ್ಭುತ!

೭. ಮೇರು ಬೆಟ್ಟದ ಮೇಲಿರುವ ಜಾಂಬೂನದ ಚಿನ್ನದ ಹೊಳಪಿನಂಥ ಪೀತಾಂಬರವನ್ನು ದೇವರಿಗೆ ನೀಡುತ್ತಿದ್ದೇವೆ. ಅದನ್ನು ಉಡುತ್ತಿದ್ದಾನೆ.

೮. ಅನಂತ ಶ್ರೀಮಂತನಾದ ಸಿರಿಯರಸನಿಗೆ ವಿಭೂಷಣಗಳನ್ನು ತೊಡಿಸುತ್ತಿದ್ದೇವೆ.

ಕಾಲುಬೆರಳುಗಳಿಗೆ ಉಂಗುರಗಳು, ಕಾಲಿಗೆ ಮಧುರನಿನಾದದ ಕಿರುಗೆಜ್ಜೆ ಕಿರುಪೆಂಡೆ, ಸೊಂಟಕ್ಕೆ ಉಡಿದಾರ, ಕಟಿಬಂಧ, ಕೈಬೆರಳುಗಳಲ್ಲಿ ಉಂಗುರ, ಕೈಗೆ ಕಂಕಣ, ಮೇಲೆ ನಾಗಮುರಿಗೆ, ಅಂಗದ, ಬಾಹುಭೂಷಣ, ಕೊರಳಿಗೆ ಚಿನ್ನ ರನ್ನ ನವರತ್ನಗಳ ಹಾರ, ವನಮಾಲೆ, ಕೊರಳಿಗೆ ಕೌಸ್ತುಭಮಣಿ, ಕರ್ಣಗಳಿಗೆ ಮಕರಕುಂಡಲ, ಭಾರಿಯಾದ ವಜ್ರದ ಕಿರೀಟ, ಕಾಲಿಗೆ ಹೊನ್ನದ ಪಾದುಕೆ ಇವುಗಳನ್ನೆಲ್ಲ ಸಮರ್ಪಿಸುತ್ತಿದ್ದೇವೆ.

ಒಂದೊಂದು ಆಭರಣವನ್ನು ನೀಡಿದಾಗ ಆಪ್ತಕಾಮನಾದರೂ ಪರಮಾತ್ಮ ಕೌತುಕದಿಂದ, ಪ್ರೀತಿಯಿಂದ ಸ್ವೀಕರಿಸುತ್ತಲಿದ್ದಾನೆ.

೯. ಮೂರುವೇದದೇವತೆಗಳ ಸನ್ನಿಧಾನವುಳ್ಳ ಯಜ್ಞೋಪವೀತವನ್ನು ಸಮರ್ಪಿಸಿದ್ದೇವೆ.

೧೦. ಕಸ್ತೂರೀ, ಕೇಸರ, ಕರ್ಪೂರ, ಪುನಗು, ಜಾಜಿ ಮುಂತಾದವುಗಳಿಂದ ಸಿದ್ಧವಾದ ಪರಮಸುರಭಿ ಗಂಧವನ್ನು ಸ್ವಯಂ ಗಂಧಮಯವಾದ ಭಗವಂತನ ಚಿನ್ಮಯದೇಹಕ್ಕೆ ಲೇಪಿಸುತ್ತಿದ್ದೇವೆ.

೧೧. ಪರಮಾತ್ಮನ ಪ್ರಸಾದ ಸಾಧನವಾದ ತುಲಸಿಯಿಂದರ್ಚನೆಯನ್ನು ಪಾದಗಳಿಗೆ ಮಾಡುತ್ತಿದ್ದೇವೆ.

ನವತುಲಸಿಯ ಹಾರವನ್ನು ದೇವರ ಕೊರಳಿಗೆ ಹಾಕುತ್ತಿದ್ದೇವೆ. ಬಗೆ ಬಗೆಯ ಹೂಗಳನ್ನು ಹೂಗಳಹಾರಗಳನ್ನು ಸಮರ್ಪಿಸುತ್ತಿದ್ದೇವೆ.

ತುಲಸೀಪುಷ್ಪಸಮರ್ಪಣೆಯ ಕಾಲದಲ್ಲಿ ಶತನಾಮ ಸಹಸ್ರನಾಮ ಮುಂತಾದವನ್ನೆಲ್ಲ ಸ್ಮರಿಸುತ್ತಿದ್ದೇವೆ.

ಬಳಿಕ ಏಳು ಆವರಣಗಳ ದೇವತೆಗಳನ್ನು ಸ್ಮರಿಸಬೇಕು.

೧) ಶ್ರೀ ಭೂದೇವಿಯರು.

೨) ಹೃದ್ಧೋಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ, ಸಹಸ್ರೋಲ್ಕ

೩) ವಾಸುದೇವ-ಮಾಯಾ, ಸಂಕರ್ಷಣ-ಜಯಾ, ಪ್ರದ್ಯುಮ್ನ-ಕೃತಿ, ಅನಿರುದ್ಧ-ಶಾಂತಿ.

೪) ಕೇಶವನಿಂದ ದಾಮೋದರನ ವರೆಗೆ.

೫) ಮತ್ಸ್ಯದಿಂದ ಕಲ್ಕಿಯವರೆಗೆ. ಜೊತೆಗೆ ವಿಶ್ವರೂಪ, ಅನಂತ.

೬) ಬ್ರಹ್ಮ -ಸರಸ್ವತಿ, ವಾಯು-ಭಾರತಿ, ಶೇಷ-ವಾರುಣೀ, ಶಿವ-ಪಾರ್ವತೀ, ಗರುಡ-ಸೌಪರ್ಣೀ.

೭) ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಸೋಮ, ಈಶಾನ, ಅನಂತ, ಬ್ರಹ್ಮ.

ಈ ಎಲ್ಲ ಆವರಣದೇವತೆಗಳಿಗೆ ಪ್ರತ್ಯೇಕವಾಗಿ ಅರ್ಘ್ಯ ಮೊದಲು ಮಾಡಿ ಪುಷ್ಪದವರೆಗಿನ ಎಲ್ಲ ಉಪಚಾರಗಳನ್ನು ಮನಸ್ಸಿನಿಂದಲೇ ಅರ್ಪಿಸುತ್ತಿದ್ದೇವೆ.

೧೨. ಧೂಪವನ್ನು ಸಮರ್ಪಿಸುತ್ತಿದ್ದೇವೆ.

೧೩. ದೀಪವನ್ನು ಬೆಳಗುತ್ತಿದ್ದೇವೆ.

೧೪. ಚಿನ್ನಭಶ್ಚಂದ್ರಮಂಡಲದಿಂದ ಹರಿದುಬಂದ ಅಮೃತಸ್ಯಂದವನ್ನು ಹಾಗೂ ನಾನಾತೆರನಾದ ಅದ್ಭುತರಸಮಯ ಭಕ್ಷಭೋಜ್ಯಾದಿಗಳನ್ನು ಮಣಿಗಣ ಖಚಿತವಾದ ಸೌವರ್ಣಪಾತ್ರಗಳಲ್ಲಿ ನೈವೇದ್ಯವಾಗಿ ಆಪ್ತಕಾಮ, ಅನಶನ, ಸರ್ವಭೋಜೀ, ಶುಭಭೋಜೀ, ನಿಸ್ಪೃಹ, ಕೇವಲ ಸ್ವಾತ್ಮರಸತೃಪ್ತನಾದ ಭಗವಂತನಿಗೆ ನೀಡುತ್ತಿದ್ದೇವೆ.

ಬಳಿಕ, ಕೋಟಿಸೂರ್ಯಪ್ರಭನಾದ ಸೂರ್ಯಾದಿ ಸಕಲ ತೇಜೋಮಂಡಲಗಳಿಗೆ ತೇಜಃಪ್ರದನಾದ ಆ ಹೆದ್ದೈವನಿಗೆ ಲಕ್ಷೋಪಲಕ್ಷ ಕಿರುದೀಪಗಳ ಸಾಲುಗಳನ್ನು ಸೇವೆಯಾಗಿ ಸಮರ್ಪಿಸುತ್ತಿದ್ದೇವೆ.

ಮನದಲ್ಲಿಯೇ ಪ್ರದಕ್ಷಿಣೆ ಹಾಕಿ ನಮನಗಳನ್ನು ಅರ್ಪಿಸುತ್ತಿದ್ದೇವೆ.

ನಾವು ಮಾಡಿದ ಈ ಮಾನಸಪೂಜೆಯಿಂದ ಮಿಗಿಲಾದ ಮೆಚ್ಚುಗೆಯಾಗಿ ಆ ಮಹಾದೊರೆ ತನ್ನ ಮುಖಮಂಡಲದಿಂದ ನಮ್ಮತ್ತ ಮುಗುಳುನಗೆಯನ್ನು ಹೊರಸೂಸುತ್ತಾ ನಮ್ಮನ್ನು ಹರಸುತ್ತಿದ್ದಾನೆ.

ಹೀಗೆಲ್ಲ ಮನದಲ್ಲಿಯೇ ತುಂಬು ಭಕ್ತಿಯಿಂದ, ಭಾವಗಳಿಂದ ಚಿತ್ರಿಸಿದ ರೂಪವನ್ನು ಮನಸಾರೆ ಕಂಡು ಸಂತಸಪಡಬೇಕು. ಈ ತೃಪ್ತಿ ವಾಚಾತೀತ.

ಇದುವೇ 'ಹಸತ್ಯಥೋ ರೋದಿತಿ ರೌತಿ ಗಾಯತಿ ಉನ್ಮಾದವನ್ನೃತ್ಯತಿ ಲೋಕಬಾಹ್ಯಃ'

'ನಗುವರೋ, ರೋದಿಸುವರೋ, ನಾಟ್ಯವಾಡುವರೋ' ಎಂಬ ಲೋಕಬಾಹ್ಯಾವಸ್ಥೆಗೆ ಕಾರಣ.

ಈ ರೀತಿ ಷೋಡಶೋಪಚಾರಗಳಿಂದ ಪೂಜಿಸಬೇಕು.

ಬಿಂಬರೂಪಾವಾಹನ

ಹೀಗೆ ಹೃದಯಾಂತರಂಗದ ಅಂಗಣದಲ್ಲಿ ಹೃದಯತಾವರೆಯರಸನನ್ನು ಅರ್ಚಿಸಿ, ಮೆಚ್ಚಿಸಿ, ಹೊರಪ್ರತಿಮೆಯಲ್ಲಿ ಬಂದು ನೆಲಸಲು ಆರ್ತಿಯಿಂದ ಪ್ರಾರ್ಥಿಸಬೇಕು.

'ಓ ಬಿಂಬದೇವನೆ! ಪೀಠಸ್ಥ ಪ್ರತಿಮೆಯಲ್ಲಿ ನಿನ್ನನ್ನಾವಾಹಿಸುವೆ. ಓ ಭಗವನ್! ಒಂದಂಶದಿಂದ ಹೊರಬಂದು ಪ್ರತಿಮೆಯಲ್ಲಿ ಸನ್ನಿಹಿತನಾಗು' ಎಂದು ಯಾಚಿಸಬೇಕು.

ಹೃದಯದಿಂದ ಸುಷುಮ್ನಾ ನಾಡಿಯ ಮಾರ್ಗದಿಂದ ಬ್ರಹ್ಮರಂಧ್ರಕ್ಕೆ ದೇವರನ್ನು ಕರೆತರಬೇಕು.

ಬಳಿಕ ದೇವರು ಕೆಳಗಿಳಿದು ಎಡಮೂಗಿನ ಉಚ್ಛ್ವಾಸದಿಂದ ಹೊರಬಿದ್ದು ಅಂಜಲಿಯಲ್ಲಿರುವ ತುಲಸಿ ಪುಷ್ಪಗಳಲ್ಲಿ ಸನ್ನಿಹಿತನಾದ ಎಂದು ಭಾವಿಸಬೇಕು.

ಅಂಜಲಿಯಲ್ಲಿರುವಾಗಲೂ ವಾಚಾ ಷೋಡಶೋಪಚಾರಗಳಿಂದ ಪೂಜಿಸಿ, ಪ್ರತಿಮೆಯಲ್ಲಿ ಸನ್ನಿಹಿತನಾಗಲು ಪ್ರಾರ್ಥಿಸಬೇಕು.

ಇದರರ್ಥ ಪ್ರತಿಮೆಯಲ್ಲಿ ದೇವರ ಸನ್ನಿಧಾನವೇ ಇಲ್ಲವೆಂದಲ್ಲ. ಇದಲ್ಲದೆ ಎಲ್ಲೆಡೆಯಲ್ಲೂ ತುಂಬಿದ ಭಗವಂತ ನಾವು ಆವಾಹಿಸುವದಕ್ಕೂ ಮುಂಚೆ ಪ್ರತಿಮೆಯಲ್ಲಿ ಒಂದು ರೂಪದಿಂದ ಇದ್ದೇ ಇರುವನು. ಆದರೂ ವಿಶೇಷಸನ್ನಿಧಾನಕ್ಕಾಗಿ ಆವಾಹನ ಪ್ರಾರ್ಥನೆ.

ಗೋಲಕ ಚಿಂತನ

(ಈ ಮುಂದಿನಭಾಗ ಸಂಸ್ಕೃತದ ಅನುಸಂಧಾನವಿಶೇಷಾಃ ಎಂಬುದರ ವಿವರ)

ನಾವು ಹಿಂದೆ ತಿಳಿಸಿದಂತೆ ಭಗವಂತನನ್ನು ನೇರವಾಗಿ ಜಡಪ್ರತಿಮೆಯಲ್ಲಿ ಆವಾಹಿಸಕೂಡದು.

ಭಗವಂತನಿಗೆ ಸಾಕ್ಷಾತ್ ಅಧಿಷ್ಠಾನಳು ರಮಾದೇವಿ. ಅವಳಿಗೆ ಅಧಿಷ್ಠಾನರು ಮುಖ್ಯಪ್ರಾಣದೇವರು.

ಹೀಗಿರುವುದರಿಂದ ಮೊದಲು ವಾಯುದೇವರನ್ನು ಗೋಲಕವಾಗಿ ಪ್ರತಿಮೆಯಲ್ಲಿ ಆವಾಹಿಸಿ, ಬಳಿಕ ಆ ವಾಯುಗೋಲಕದಲ್ಲಿ ರಮಾದೇವಿಯನ್ನು ಗೋಲಕವಾಗಿ ಆವಾಹಿಸಬೇಕು. ಹೀಗೆ ಪ್ರತಿಮೆಯಲ್ಲಿ ವಾಯು ಲಕ್ಷ್ಮೀ ಎಂಬ ಎರಡು ಗೋಲಕ (ಅಧಿಷ್ಠಾನ) ಗಳನ್ನು ತಿಳಿಯಬೇಕು.

ವಾಯು ರಮಾ ನಾರಾಯಣರು ಇರುವ ಕ್ರಮವನ್ನು ಸ್ವಲ್ಪ ತಿಳಿಯೋಣ.

ಸ್ವತಃ ಪ್ರತಿಮೆಗೇ ಅನೇಕ ಅವಯವಗಳು. ಅವುಗಳಿಗೆ ಸಾವಿರಾರು ಭಾಗಗಳು. ಅಲ್ಲಿ ಹತ್ತಾರುಸಾವಿರ ತುಂಡುಗಳು. ಅದರಲ್ಲಿ ಲಕ್ಷಾಂತರ ತುಣುಕುಗಳು. ಅಲ್ಲಿ ನಮ್ಮ ಲೆಕ್ಕದಿಂದ ಕೊನೆಯಾದ ಪರಮಾಣುಗಳು. ಅವುಗಳನ್ನು ಭೇದಿಸಿ ಭಾಗಿಸಿದಾಗ ಕಂಡು ಬರುವದು ಅನಂತಾಂಶಗಳ ವಿಶ್ವ.

ಹೀಗೆ ಅನೇಕ ಅಂಗಗಳು ಸಹಸ್ರಾರು ಭಾಗಗಳು, ಲಕ್ಷಾಂತರ ತುಂಡುತುಣುಕುಗಳು ಲೆಕ್ಕವಿಲ್ಲದ ಅನಂತ ಪರಮಾಣುಗಳು, ಅವುಗಳ ಒಡಲಲ್ಲಿ ಸಿಕ್ಕ ಅನಂತ ಅಂಶಗಳು.

ಇವುಗಳಲ್ಲೆಲ್ಲಾ ಆಯಾ ಪರಿಮಾಣದ ಆಯಾ ರೂಪ, ಗುಣ, ಭಾರ ಇತ್ಯಾದಿಗಳುಳ್ಳವರಾಗಿ ವಾಯುದೇವರು ಅನಂತಾಂಶಗಳಿಂದ ಸನ್ನಿಹಿತರಾಗಿರುವರು.

ಅವರು ನಿಖಿಲಜೀವೋತ್ತಮರು, ಪರಮಶುದ್ಧರು, ಋಜುಗಣದರಸರು, ಶ್ರೀಹರಿಯ ಪರಿಪೂರ್ಣಕೃಪಾಪಾತ್ರರು, ನಿಖಿಲವಿಶ್ವವ್ಯಾಪ್ತರು.

ಇಂಥ ಪಾಪಾವಿದ್ಧ ಅಖಿಲ ಜೀವೋತ್ತಮ ವಾಯುಪ್ರತಿಮೆಯ ಅನಂತಾಂಶಗಳಲ್ಲಿ ಶ್ರೀ ರಮಾದೇವಿಯು ತನ್ನ ಅಪ್ರಾಕೃತ ಕೇವಲಚಿನ್ಮಯ ಅನಂತಾಂಶಗಳಿಂದ ವ್ಯಾಪಿಸಿ ಇರುವಳು.

ಇವಳು ಭಗವಂತನಿಗೆ ಪರಮ ಪ್ರಿಯತಮಳು, ಭಗವಂತನಿಗೆ ಅನಂತಾಂಶಗಳಿಂದ ಕಡಿಮೆಯಾದರೂ ಅನಂತಗುಣಪೂರ್ಣಳೂ, ದೇವರಂತೆ ದೇಶಕಾಲವ್ಯಾಪ್ತಳೂ, ಶ್ರೀಹರಿಯನ್ನು ಬಿಟ್ಟು ವಿಶ್ವದ ಎಲ್ಲ ವಸ್ತುಗಳಿಗೆ ಅಭಿಮಾನಿನಿಯೂ ನಿತ್ಯಮುಕ್ತಳೂ ಆಗಿರುವಳು.

ಇವಳ ಈ ಎಲ್ಲ ಸೂಕ್ಷ್ಮಾತಿಸೂಕ್ಷ್ಮ ಅನಂತಾಂಶಗಳಲ್ಲಿ ನಿಸ್ಸೀಮಶಕ್ತಿಶಾಲಿ, ನಿರವಧಿಕಸ್ವತಂತ್ರ ಶ್ರೀಹರಿಯು ಅತಿಪರಮಸೂಕ್ಷ್ಮ ಅಣೋರಣೀಯ ನಿರವಧಿಕ ಅನಂತ ಪರಿಪೂರ್ಣಾಂಶಗಳಿಂದ ವ್ಯಾಪಿಸಿ ಪ್ರತಿಷ್ಠಿತನಾಗಿರುವ. ಇದೇ ಗೋಲಕದ್ವಯದಲ್ಲಿ ಭಗವಚ್ಚಿಂತನ.

ಪ್ರತಿಮಾಸ್ಥ ಭಗವದ್ರೂಪ ಚಿಂತನ

ನಾವು ಪೂಜಿಸುವ ಪ್ರತಿಮೆಯಲ್ಲಿ ಸನ್ನಿಹಿತನಾಗಿರುವ ಭಗವಂತನ ಒಂದು ರೂಪವು ಪ್ರತಿಮೆಯ ಸಮಾನಾಕಾರವಾದುದು.

ಈ ಸಮಗ್ರ ಪ್ರತಿಮೆಯಲ್ಲಿ ವ್ಯಾಪಿಸಿದ ಒಂದು ಭಗವಂತನ ರೂಪಕ್ಕೆ ಅನೇಕ ಇಂದ್ರಿಯಗಳು ಹಾಗೂ ಅಂಗಗಳು ಇರುವವು.

ಭಗವಂತನ ಬೇರೆ ಬೇರೆ ರೂಪಗಳೇ ದೇವರ ಇಂದ್ರಿಯಗಳು ಹಾಗೂ ಅಂಗಗಳು ಆಗಿವೆ. ಉದಾಹರಣೆಗೆ, ದೇವರ ಕಣ್ಣು ಕಪಿಲ, ಘ್ರಾಣ ನರಸಿಂಹ, ವಾಕ್ ಭಾರ್ಗವರಾಮ, ತಲೆ ಅನಿರುದ್ಧ, ಬಲಗೈ ಎಡಗೈ ಪ್ರದ್ಯುಮ್ನ, ಎರಡು ಕಾಲುಗಳು ಸಂಕರ್ಷಣ, ಮಧ್ಯದೇಹ ವಾಸುದೇವ ಇತ್ಯಾದಿ ಇತ್ಯಾದಿ.

ಈ ದೇವರ ಕಣ್ಣಾಗಿರುವ ಕಪಿಲದೇವರಿಗೂ ಕಣ್ಣು ಘ್ರಾಣ ವಾಕ್ ತಲೆ ಮುಂತಾದವುಗಳೆಲ್ಲ ಇವೆ. ಅವೂ ಎಲ್ಲವೂ ಕಪಿಲಾದಿಭಗವದ್ರೂಪಗಳೇ.

ಪರಮಾಣುವಿಗಿಂತಲೂ ಅಣುತರವಾದ ರೂಪಗಳಲ್ಲೂ ಇದೇ ತರಹ ಶಿರಸ್ಸು, ಕಣ್ಣು, ಬಾಹು, ವಕ್ಷಸ್ಸು, ಉದರ, ಕಟಿ, ತೊಡೆ, ಪಾದ ಎಂದಾಗಿ ಸಮಗ್ರ ಅಂಗಗಳು ಇವೆ.

ಇಷ್ಟು ಮಾತ್ರವಲ್ಲ, ಅಣೋರಣೀಯರೂಪಗಳಲ್ಲೂ ಅನಂತ ಶಿರಸ್ಸು ಅಸಂಖ್ಯ ಕಣ್ಣು ಅಗಣಿತ ಬಾಹು, ಅಪರಿಮಿತ ವಕ್ಷಸ್ಸು, ಲೆಕ್ಕವಿಲ್ಲದ ಉದರ, ಎಣಿಕೆ ಮೀರಿದ ಕಟಿ, ಅಪಾರ ತೊಡೆ, ಅಮಿತ ಪಾದಗಳು ಇವೆ.

ಇಂಥ ಅಣೋರಣೀಯ ಅನೇಕ ರೂಪಗಳ ಸಮುದಾಯವೇ ಒಂದು ಅಣುವಿನ ಸಮಪರಿಮಾಣರೂಪ.

ಇಂಥ ಅಣುಪರಿಮಾಣರೂಪಗಳ ಗುಂಪು ಒಂದು ಕಣಸಮ ಪರಿಮಾಣರೂಪ.

ಅಂಥ ಅನೇಕಾನೇಕ ಕಣಸಮಪರಿಮಾಣರೂಪಗಳ ಸಮೂಹವೇ ಸಣ್ಣ ಪ್ರತಿಮೆಯಲ್ಲಿರುವ ಭಗವದ್ರೂಪದ ಪಾದರೂಪ.

ಇಂಥ ಅನೇಕ ರೂಪಗಳ ಗಣವೇ ಆ ಪ್ರತಿಮೆಯಲ್ಲಿರುವ ಸಮಗ್ರರೂಪ.

ನಾವು ಹೇಳಿದುದಷ್ಟೇ ಕೊನೆಯೆಂದು ತಿಳಿಯಬಾರದು. ಇದು ಕೇವಲ ತಿಳಿವಿಗಾಗಿ ಹೇಳಿದ ಮಾತು.

ಇಂಥ ಭಗವದ್ರೂಪವನ್ನು ಪ್ರತಿಮೆಯಲ್ಲಿ ಸನ್ನಿಹಿತನಾಗಲು ಪ್ರಾರ್ಥಿಸಬೇಕು.

ಅನೇಕ ಭಗವದ್ರೂಪಗಳ ಚಿಂತನ

ಇದಲ್ಲದೇ, ಮಹಾಕಾಲ, ಅವ್ಯಾಕೃತಾಕಾಶ, ಶಬ್ದ, ಪ್ರಕೃತ್ಯಾದಿ ತತ್ತ್ವ ಬ್ರಹ್ಮಾಂಡಗತ ಪದಾರ್ಥ, ಆಯಾ ತೀರ್ಥಕ್ಷೇತ್ರಪ್ರತಿಮೆ, ಕಾರ್ಯಕಾರಣ- ಪ್ರೇರಕಪ್ರೇರ್ಯಾದಿಗಳು, ಅನಂತ ಜೀವರಾಶಿ, ಜೀವರ ಗುಣ, ಕರ್ಮ, ತರತಮಭಾವದಿಂದಿರುವ ಸಕಲ ಜೀವರು, ಮುಕ್ತರು, ನಿತ್ಯಮುಕ್ತಳಾದ ಲಕ್ಷ್ಮೀ ಇವರೆಲ್ಲರಲ್ಲಿರುವ ಅಂತರ್ಯಾಮಿರೂಪಗಳು, ವಿಭೂತಿರೂಪಗಳು, ಹಾಗೂ ಅವತಾರಗಳು, ಸ್ವತಂತ್ರಭಗವದ್ರೂಪಗಳು ಗುಣಾತ್ಮಕ, ಕ್ರಿಯಾತ್ಮಕ ಭಗವದ್ರೂಪಗಳು ನಾನು ಪೂಜಿಸುವ ಈ ಪ್ರತಿಮೆಯಲ್ಲಿರುವ ಬಿಂಬರೂಪದೊಡನೆ ಅಭಿನ್ನರಾಗಿದ್ದು ಸನ್ನಿಹಿತರಾಗಬೇಕು ಎಂದು ಪ್ರಾರ್ಥಿಸಬೇಕು.

೧) ಕಾಲ-

ಮಹಾಕಾಲ ಅನಾದಿ, ನಿತ್ಯ. ಎಲ್ಲ ದೇಶದಲ್ಲಿ ವ್ಯಾಪಿಸಿರುವುದು. ಈ ಮಹಾಕಾಲದ ಅಂಶಗಳು ನಾನಾ ಬಗೆ.

ಬ್ರಹ್ಮಕಲ್ಪ, ದಿನಕಲ್ಪ, ಮನ್ವಂತರ, ಮಹಾಯುಗ, ಯುಗ, ವರ್ಷ, ಋತು, ಮಾಸ, ದಿನ, ಮುಹೂರ್ತ, ಘಟಿಕಾ, ಲಘು, ಕಾಷ್ಠಾ, ಕ್ಷಣ, ನಿಮೇಷ, ಲವ, ವೇಧ, ತ್ರುಟಿ, ತ್ರ್ಯಣುಕ, ದ್ವ್ಯಣುಕ, ಪರಮಾಣು ಹಾಗೂ ಆ ಪರಮಾಣುಕಾಲದ ಅಪರ್ಯವಸಿತ ಅನಂತಾಂಶಗಳು. ಇವುಗಳೆಲ್ಲ ಮಹಾಕಾಲದ ಅಂಶಗಳು.

ಈ ಪ್ರತಿಯೊಂದು ಕಾಲಾಂಶಗಳು ಅನಂತಾನಂತ. ಹಿಂದಿನ ಹಿಂದಿನ ಬೃಹತ್ ಕಾಲಾಂಶಗಳಿಗಿಂತಲೂ ಮುಂದಿನ ಮುಂದಿನ ಕಾಲಾಂಶಗಳ ಸಂಖ್ಯೆಯು ಹೆಚ್ಚು ಹೆಚ್ಚು ಇರುವದು.

ಇವೆಲ್ಲದಕ್ಕೂ ರಮಾ ಬ್ರಹ್ಮ ಮುಂತಾದ ಅನೇಕಾನೇಕ ಅಭಿಮಾನಿ ದೇವತೆಗಳಿರುವರು. ಹೀಗಿರುವ ಅನಾದಿ ಅನಂತ ಮಹಾಕಾಲದ,

ಅನಂತಾನಂತಕಾಲಾಂಶಗಳ, ಇದೆಲ್ಲದರ ಅಭಿಮಾನಿದೇವತೆಗಳ ಸೃಷ್ಟಿ, ನಿಯಮನ, ಪ್ರೇರಣೆ ಮಾಡತ್ತವೆ ಭಗವಂತನ ಅನಂತ ರೂಪಗಳು.

ಅಲ್ಲದೇ ಯಾವುದೇ ಒಂದು ಕಾರ್ಯವು ಜನಿಸಲು ಕಾಲವು ನಿಮಿತ್ತವಾಗುವದು. ಆಯಾ ಕಾಲಗಳನ್ನು ನಿಮಿತ್ತ ಗೊಳಿಸಿದ್ದೂ ಈ ಭಗವದ್ರೂಪಗಳೇ.

ಸಾಮಾನ್ಯವಾಗಿ, ನಾವೆಲ್ಲರೂ ವರ್ಷ ದಿನ ತಾಸು ನಿಮಿಷಗಳನ್ನು ಅನುಭವಿಸುತ್ತೇವೆ. ಆದರೆ ಅತಿಸೂಕ್ಷ್ಮವಾದ ಕಾಲಾಂಶಗಳು (Fraction of second) ಸ್ಪಷ್ಟವಾಗಿ ನಮ್ಮ ಅನುಭವಕ್ಕೆ ಗೋಚರಿಸುವದಿಲ್ಲ.

ದೇವರಿಗೆ ಮಾತ್ರ ಅನಂತಾನಂತಾಂಶಗಳೂ ಅನುಭವಕ್ಕೆ ಗೋಚರವಾಗುತ್ತವೆ. ಆದ್ದರಿಂದ ಆ ಆ ಸೂಕ್ಷ್ಮಾಂಶಗಳಲ್ಲಿರುವ ಭಗವಂತನು ಆ ಆ ಕಾಲಾಂಶಭೋಕ್ತಾ ಎಂದು ಕರೆಯಲ್ಪಡುತ್ತಾನೆ.

ದೇವರು ರಸದಲ್ಲಿ ರಸನಾಗಿ, ಶಬ್ದದಲ್ಲಿ ಶಬ್ದನಾಗಿ, ನೀರಿನಲ್ಲಿ ನೀರಾಗಿ ಮಣ್ಣಿನಲ್ಲಿ ಮಣ್ಣಾಗಿ ಇರುವನು. ಅಂತೆಯೇ ದೇಶದಲ್ಲಿ ದೇಶವಾಗಿ ಕಾಲದಲ್ಲಿ ಕಾಲವಾಗಿ ಇರುವನು.

ಅಲ್ಲಲ್ಲಿ ಆಯಾ ತೆರನಾಗಿ ಇರುವ ರೂಪಗಳಿಗೆ ಸ್ವಾಖ್ಯರಸ, ಸ್ವಾಖ್ಯಶಬ್ದ ಸ್ವಾಖ್ಯದೇಶ, ಸ್ವಾಖ್ಯಕಾಲ ಎಂದು ಕರೆಯುತ್ತಾರೆ.

ಕಾಲಕ್ಕೆ ವ್ಯಾಪ್ತತ್ವವನ್ನು, ಅನಾದಿನಿತ್ಯತ್ವವನ್ನು, ಉತ್ಪತ್ತಿವಿನಾಶವನ್ನು, ನಿಮಿತ್ತಕಾರಣತ್ವವನ್ನು, ಕೊಟ್ಟ ಸರ್ವಕಾಲಾಂಶಗಳನ್ನು ಅನುಭವಿಸುವ, ಸಕಲಕಾಲನಿಯಾಮಕ ಪ್ರೇರಕ ಸ್ವಾಖ್ಯಕಾಲರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೨) ದೇಶ

ಒಂದು ಪರಮಾಣುವು ವ್ಯಾಪಿಸುವ ದೇಶವನ್ನು ಪರಮಾಣುದೇಶವೆಂದು ಕರೆಯೋಣ. ಇದೇ ರೀತಿ ಕಲ್ಲು, ಬಂಡೆ, ಬೆಟ್ಟ, ಬ್ರಹ್ಮಾಂಡ ಎಂಬುದಾಗಿ ದೇಶದ ಅಂಶಗಳು ಅನಂತವಾಗಿವೆ, ಅನಂತಬಗೆಯಾಗಿವೆ.

ಈ ಲೆಕ್ಕದಿಂದ ಅವ್ಯಾಕೃತಾಕಾಶದಲ್ಲಿ ಪರಮಾಣುವನ್ನಾರಂಭಿಸಿ ಎಷ್ಟೆಷ್ಟು ಪದಾರ್ಥಗಳು ಇರುವವೋ ಅಷ್ಟಷ್ಟು ಬಗೆಯ ಆಕಾರಗಳು ಇವೆ ಎಂದರ್ಥ.

ಇಷ್ಟೆಲ್ಲ ದೇಶಾಂಶಗಳನ್ನು, ಅವುಗಳ ಪರಿಮಾಣವನ್ನು, ಅನಾದಿತ್ವ ನಿತ್ಯತ್ವಗಳನ್ನು, ಆ ದೇಶ ಮತ್ತು ಅಂಶಗಳ ಅಭಿಮಾನಿಗಳನ್ನೂ ನಿಯಾಮಿಸುತ್ತಿವೆ ಭಗವಂತನ ರೂಪಗಳು.

ಪ್ರತಿಯೊಂದು ಪದಾರ್ಥಕ್ಕೂ ಇರಲು ಅವಕಾಶ ಬೇಕು. ಅವಕಾಶವಿಲ್ಲದಿದ್ದರೆ ಇರಲು ಸಾಧ್ಯವಿಲ್ಲ. ಎಲ್ಲ ಪದಾರ್ಥಗಳಿಗೆ ಅವಕಾಶಗಳನ್ನು ಕೊಡುವದು ಆಕಾಶ. ಇದನ್ನೇ ಅವಕಾಶಪ್ರದ ಎಂದು ಕರೆಯುತ್ತಾರೆ. ಈ ಅವಕಾಶಪ್ರದತ್ವವನ್ನು ನೀಡಿದವನು ದೇವರೇ.

ಹಿಂದೆ (ಕಾಲಪ್ರಕರಣದಲ್ಲಿ ಹೇಳಿದಂತೆ) ದೇವರು ಸ್ವಾಖ್ಯದೇಶ ರೂಪಗಳಿಂದ ದೇಶದಲ್ಲಿ ವ್ಯಾಪಿಸಿರುವ.

ಹಿಂದೆ ಹೇಳಿದಂತೆಯೇ ಪರಮ ಅಣುತಮ ದೇಶಾಂಶವನ್ನೂ ಭಗವಂತನು ಅನುಭವಿಸುತ್ತಾನೆ. ಅಂತೆಯೇ ದೇಶಭೋಕ್ತಾ ಎಂದು ಕರೆಯುವರು.

ದೇಶಕ್ಕೆ ವ್ಯಾಪ್ತತ್ವವನ್ನು, ದೇಶಾಂಶಗಳಿಗೆ ನಾನಾ ಪರಿಮಾಣಗಳನ್ನು, ಅನಾದಿನಿತ್ಯತ್ವವನ್ನು, ನಿಮಿತ್ತಕಾರಣತ್ವವನ್ನು, ಅವಕಾಶಪ್ರದತ್ವವನ್ನು ಕೊಟ್ಟ ಸರ್ವದೇಶಾಂಶಗಳನ್ನು ಅನುಭವಿಸುವ, ಸಕಲದೇಶನಿಯಾಮಕ ಪ್ರೇರಕ ಸ್ವಾಮ್ಯದೇಶರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೩) ಶಬ್ದ

ವೇದಗಳು ಅನಂತ. ಅವುಗಳಲ್ಲಿಯ ಅಂಶಗಳೂ ಅನಂತ. ಅವಾಂತರವೇದ, ಉಪವೇದ, ಶಾಖಾವೇದ, ಅಷ್ಟಕ, ಅಧ್ಯಾಯ, ಸೂಕ್ತ, ವರ್ಗ, ಋಕ್, ಅರ್ಧಋಕ್, ಪಾದ, ಪದ ಇತ್ಯಾದಿಗಳು ಅಂಶಗಳು.

ಈ ಎಲ್ಲ ಅಂಶಗಳಿಗೆ ಅಭಿಮಾನಿಗಳಿರುವರು. ಆ ಅಭಿಮಾನಿಗಳಲ್ಲಿ ತಾರತಮ್ಯವಿದೆ.

ಪದದ ಅಭಿಮಾನಿಗಿಂತಲೂ ಪಾದದ ಅಭಿಮಾನಿದೇವತೆ ಉತ್ತಮ. ಪಾದಾಭಿಮಾನಿಗಿಂತಲೂ ಅರ್ಧಋಕ್ಕಿನ ಅಭಿಮಾನಿದೇವತೆ ಉತ್ತಮ ಇತ್ಯಾದಿ.

ಇದಲ್ಲದೆ ಅನಾದಿನಿತ್ಯವಾದ ಎಲ್ಲದೇಶದಲ್ಲಿ ತುಂಬಿರುವ ಎಂದಿಗೂ ವಿಕೃತವಾಗದ ಐವತ್ತು ವರ್ಣಗಳೂ ಅಂಶಗಳೇ. ಅದಕ್ಕೆ ಅಭಿಮಾನಿನಿ ರಮಾದೇವಿ.

ಹೀಗೆ ವೇದರಾಶಿ ಒಂದು ಅನಂತವಾಙ್ಮಯ ಪ್ರಪಂಚ.

ಅಲ್ಲದೆ ಪಂಚರಾತ್ರಾಗಮಗ್ರಂಥ ನೂರುಕೋಟಿ. ಪುರಾಣಗಳೂ ನೂರುಕೋಟಿ. ರಾಮಾಯಣವೂ ನೂರುಕೋಟಿ. ಬ್ರಹ್ಮತರ್ಕ ಐವತ್ತುಕೋಟಿ. ಬೃಹತ್ತರ್ಕಾದಿ ಗ್ರಂಥಗಳು ನೂರುಕೋಟಿ.

ಬ್ರಹ್ಮಸೂತ್ರಗಳಲ್ಲಿ ನಾಲ್ಕು ಅಧ್ಯಾಯಗಳು. ಒಂದೊಂದರಲ್ಲಿ ನಾಲ್ಕು ಪಾದಗಳು.

ಇದಲ್ಲದೆ ಅಪಾರ ಲೌಕಿಕವಾಙ್ಮಯ.

ಜೊತೆಗೆ ಸಮುದ್ರಘೋಷ, ಘಂಟಾನಾದ, ಪ್ರಾಣಿಪಕ್ಷಿಗಳ ದನಿ, ಹಲ್ಲಿಯ ಲೊಚಗುಟ್ಟುವ ಶಬ್ದ ಮುಂತಾದ ಅಸಂಖ್ಯ ಧ್ವನಿಗಳು.

ಈ ಎಲ್ಲ ವರ್ಣಧ್ವನಿಗಳಲ್ಲೂ ವಾಙ್ಮಯಪ್ರಪಂಚದಲ್ಲೂ ಭಗವಂತ ಸ್ವಾಮ್ಯ ಧ್ವನಿ ವರ್ಣಾದಿರೂಪಗಳಿಂದ ವ್ಯಾಪಿಸಿದ್ದು ನಿಯಾಮಕ, ಪ್ರೇರಕ, ಜನಕ, ಆಧಾರನಾಗಿರುವನು.

ಈ ವರ್ಣಗಳು ಅನಾದಿ, ನಿತ್ಯ, ವ್ಯಾಪ್ತ, ಅವಿಕಾರಿ ಆಗಿರುವದು ಭಗವಂತನಿಂದಲೇ. ಇವೆಲ್ಲವನ್ನು ಸ್ವತಂತ್ರವಾಗಿ ಉಚ್ಚರಿಸುವವನು ಅವನೇ.

ಇವುಗಳಲ್ಲಿ ತತ್ತ್ವವನ್ನು ಬೋಧಿಸುವ, ಅರ್ಥವನ್ನು ತಿಳಿಸುವ ಶಕ್ತಿಯನ್ನು ದಯಪಾಲಿಸುವವನು ಆತನೇ. ಈ ಎಲ್ಲ ವರ್ಣಧ್ವನಿಗಳು ಭಗವಂತನ ಅನಂತಗುಣಮಾಹಾತ್ಮ್ಯಗಳನ್ನು ಸ್ತುತಿಸುತ್ತವೆ.

ವರ್ಣಗಳನ್ನು ವ್ಯಾಪ್ತವನ್ನೂ, ಅನಾದಿನಿತ್ಯವನ್ನೂ, ಅವಿಕಾರಿಯನ್ನೂ, ಅರ್ಥಬೋಧಕವನ್ನೂ ಮಾಡಿದ, ಅವೆಲ್ಲವನ್ನೂ ಅನುಭವಿಸುವ, ಅವೆಲ್ಲದಕ್ಕೆ ನಿಯಾಮಕ ಪ್ರೇರಕ ಸ್ವಾಮ್ಯ ವರ್ಣ ಧ್ವನಿರೂಪಗಳು ಹಾಗೂ ಆ ಎಲ್ಲ ವರ್ಣ ಧ್ವನಿಗಳಿಂದ ವರ್ಣಿಸಲ್ಪಡುವ ಭಗವದ್ರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೪) ಪ್ರಕೃತಿ

ಸತ್ವ, ರಜಸ್, ತಮಸ್, ಮಹತ್, ಅಹಂ, ಬುದ್ಧಿ, ಪ್ರಾಣ, ಮನಸ್ಸು, ಹತ್ತು ಇಂದ್ರಿಯ, ಐದು ತನ್ಮಾತ್ರಾ, ಐದು ಭೂತ ಇವೆಲ್ಲವುಗಳ ಪರಮಸೂಕ್ಷ್ಮವಾದ ಅವಸ್ಥೆಗೆ ಪ್ರಕೃತಿ ಎಂದು ಹೆಸರು.

ಇವು ಅನಾದಿನಿತ್ಯ. ಇವುಗಳು ಸ್ವಲ್ಪಸ್ಥೂಲವಾಗಿ ಹುಟ್ಟಿದಾಗ ಪರಮಾಣುಗಳೆಂದು ಹೆಸರಾಗುತ್ತವೆ.

ಅನಾದಿಕಾಲದಿಂದ ಅನಂತಕಾಲದವರೆಗೆ ನಡೆಯುತ್ತಲೇ ಇರುವ ಪ್ರತಿಯೊಂದು ಸೃಷ್ಟಿಕಾಲದಲ್ಲಿ ಅನಂತಾನಂತಪರಮಾಣುಗಳು ಹುಟ್ಟುತ್ತವೆ.

ಕಾರಣ ಸೃಷ್ಟಿಕಲ್ಪಗಳು ಹಿಂದೆ ಅನಂತ. ಮುಂದೆಯೂ ಅನಂತ. ಆ ಆ ಕಲ್ಪಗಳಲ್ಲಿ ಜನಿಸುವ ಪರಮಾಣುಗಳು ಅನಂತಾನಂತ. ಅವುಗಳಿಂದ ಮುಂದೆ

ದ್ವ್ಯಣುಕ, ತ್ರ್ಯಣುಕ, ಮಣ್ಣು ಕಲ್ಲು, ಬೀಜ, ಸಸಿ, ಗಿಡ, ಕೊಂಬು, ಚಿಗುರು, ಎಲೆ, ಹೂ, ಹಣ್ಣು ಮನೆ, ಊರು, ನಗರ, ಕಾಡು, ಬೆಟ್ಟ ನದಿ, ಸಮುದ್ರ,

ಮೇರು, ಮಂದರ, ಹಿಮಾಲಯ, ಸಹ್ಯ ಮುಂತಾದ ಬೆಟ್ಟಗಳು,

ಇಲಾವೃತ ಭದ್ರಾಶ್ವ, ಹರಿವರ್ಷ, ಕೇತುಮಾಲ, ರಮ್ಯಕ, ಹಿರಣ್ಮಯ, ಕಿಂಪುರುಷ, ಭರತ ಎಂಬ ಒಂಬತ್ತು ವರ್ಷಗಳು,

ಜಂಬೂ, ಪ್ಲಕ್ಷ, ಶಾಲ್ಮಲ, ಕುಶ, ಕ್ರೌಂಚ, ಶಾಕ ಪುಷ್ಕರ ಎಂಬ ಸಪ್ತದ್ವೀಪಗಳು,

ಲವಣ, ಇಕ್ಷು, ಸುರಾ, ಸರ್ಪಿ, ಕ್ಷೀರ, ದಧಿ, ಸ್ವಾದೂದಕ ಎಂಬ ಸಪ್ತಸಾಗರಗಳು

ಸೂರ್ಯ, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ ಎಂಬ ಗ್ರಹಗಳು, ಅಸಂಖ್ಯಜ್ಯೋತಿರ್ಮಂಡಲಗಳು,

ಅತಲ, ವಿತಲ, ಸುತಲ, ತಲಾತಲ, ರಸಾತಲ, ಮಹಾತಲ, ಪಾತಾಲ ಎಂಬ ಏಳು ಅಧೋಲೋಕಗಳು,

ಭೂಃ, ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯಂ ಎಂಬ ಏಳು ಮೇಲು ಲೋಕಗಳು

ಇಷ್ಟೆಲ್ಲಕ್ಕೂ ಆಧಾರವಾದ ಐವತ್ತು ಕೋಟಿ ಯೋಜನವಿಸ್ತೀರ್ಣವಾದ ಬ್ರಹ್ಮಾಂಡ,

ಅದರಾಚೆ ಒಂದರಹೊರಗೊಂದರಂತೆ ಇರುವ ನೂರುಕೋಟಿಯೋಜನ

ವಿಸ್ತೀರ್ಣವಾದ ಪೃಥಿವೀತತ್ತ್ವ

ಸಾವಿರಕೋಟಿ ಯೋಜನವಿಸ್ತೀರ್ಣವಾದ ಜಲತತ್ತ್ವ

ಹತ್ತುಸಾವಿರಕೋಟಿ ಯೋಜನವಿಸ್ತೀರ್ಣವಾದ ಅಗ್ನಿತತ್ತ್ವ

ಲಕ್ಷಕೋಟಿ ಯೋಜನವಿಸ್ತೀರ್ಣವಾದ ವಾಯುತತ್ತ್ವ

ದಶಲಕ್ಷಕೋಟಿ ಯೋಜನವಿಸ್ತೀರ್ಣವಾದ ಆಕಾಶತತ್ತ್ವ

ಅದಕ್ಕೆ ಹೊರಗೆ ಲಕ್ಷಾಂತರ ಯೋಜನವಿಸ್ತೀರ್ಣ ಪಂಚತನ್ಮಾತ್ರಾ,

ದಶೇಂದ್ರಿಯಾದಿ ತತ್ತ್ವ

ಕೋಟಿ ಕೋಟಿ ಯೋಜನವಿಸ್ತೀರ್ಣ ಅಹಂಕಾರತತ್ತ್ವ

ದಶಕೋಟಿಕೋಟಿ ಯೋಜನವಿಸ್ತೀರ್ಣವಾದ ಮಹತ್ತತ್ತ್ವ

ಶತಕೋಟಿಕೋಟಿ ಯೋಜನವಿಸ್ತೀರ್ಣವಾದ (ತಮೋರಜಸತ್ತ್ವಗಳೆಂಬ) ಗುಣತ್ರಯ

ಅದರ ಹೊರಗೆ ಅನಂತಮಡಿ ಮಿಗಿಲಾದ ಅಪರಿಚ್ಛಿನ್ನ ಅನಾದಿನಿತ್ಯ ಪರಮಸೂಕ್ಷ್ಮ, ಮೂಲಪ್ರಕೃತಿ ಎಂಬುದಾಗಿ ವಿಶ್ವದ ವಿಸ್ತಾರವಿದೆ.

ಈ ಅಣುತಮ ಅನಂತಾನಂತ ಅಂಶಗಳಾರಂಭಿಸಿ ಮಹತ್ತಮ ತತ್ತ್ವಗಳವರೆಗಿರುವ ಎಲ್ಲ ಪದಾರ್ಥಗಳಲ್ಲಿ ಸ್ವಾಖ್ಯಪರಮಾಣು, ಸ್ವಾಖ್ಯಮಹತ್, ಸ್ವಾಖ್ಯಪ್ರಕೃತಿ ಮುಂತಾದ ರೂಪಗಳಿಂದ ಭಗವಂತನು ವ್ಯಾಪಿಸಿರುವ.

ಈ ರೂಪಗಳೇ ಆ ಎಲ್ಲ ಪದಾರ್ಥಗಳಿಗೆ ನಿಯಾಮಕ, ಜನಕ, ಪಾಲಕ, ವಿನಾಶಕ, ಪ್ರೇರಕ, ಪ್ರವರ್ತಕ, ನಿವರ್ತಕ, ಆಶ್ರಯ, ಆಧಾರ, ಸ್ವಾಮಿ, ಅಸ್ತಿತ್ವ ಕೊಡುವವು, ಪರಿಣಾಮಾದಿ ಶಕ್ತಿಯನ್ನು ಕೊಡುವವು ಆಗಿವೆ.

ಆ ಆ ಪದಾರ್ಥಗಳಿಗಿರುವ ಗುಣಧರ್ಮಗಳಿಗೆ ಸದೃಶವಾದ ಆದರೂ ಸ್ವತಂತ್ರ ಚಿನ್ಮಯ ಆನಂದಮಯವಾಗಿರುವ ಕಾರಣ ಆ ಪದಾರ್ಥಗಳ ಗುಣ ಧರ್ಮಗಳಿಗಿಂತ ತೀರ ಭಿನ್ನವಾದ ಗುಣಧರ್ಮಗಳು ಭಗವಂತನಲ್ಲಿ ಇವೆ.

ಉದಾಹರಣೆಗಾಗಿ ಬೆಂಕಿಯಲ್ಲಿ ದಹನಶಕ್ತಿ ಇರುವದು. ಬೆಂಕಿಯ ದಹನಶಕ್ತಿಯಂಥ ದಹನಶಕ್ತಿ ದೇವರಲ್ಲೂ ಇದೆ.

ಆದರೆ ಬೆಂಕಿಯಲ್ಲಿರುವ ದಹನಶಕ್ತಿ ಜಡ, ಅಸ್ವತಂತ್ರ. ಆ ಶಕ್ತಿ ಹುಟ್ಟುವದು, ನಾಶವಾಗುವದು. ಆ ಶಕ್ತಿಗೆ ಅವಧಿ ಇದೆ, ಪರಿಮಿತಿ ಇದೆ, ಭಂಗವಿದೆ.

ಆದರೆ ದೇವರಲ್ಲಿರುವ ದಹನಶಕ್ತಿ ಮಾತ್ರ ಚೇತನ, ಚಿನ್ಮಯ, ಆನಂದಮಯ, ಸ್ವತಂತ್ರ, ಅನಾದಿ, ಅವಿನಾಶಿ, ಅಪರಿಮಿತ, ಭಂಗ, ಅವಧಿಗಳು ಇಲ್ಲದಿರುವಂಥದ್ದು.

ಆದ್ದರಿಂದ ಬೆಂಕಿಯ ದಾಹಶಕ್ತಿಗೆ ಸದೃಶವಾಗಿದ್ದರೂ ಅದರಿಂದ ತೀರ ವಿಲಕ್ಷಣ ಎಂದು ಶಾಸ್ತ್ರ ಹೇಳುತ್ತದೆ.

ಇದೇ ತರನಾಗಿ ಎಲ್ಲ ಪದಾರ್ಥಗಳ ಸ್ವತಂತ್ರವಾಗಿ ನಿರವಧಿಕವಾದ ಶಕ್ತಿ(ಗುಣಧರ್ಮ)ಶಾಲಿಯಾದವನು ದೇವರು.

ಈ ಎಲ್ಲ ಪದಾರ್ಥಗಳಲ್ಲಿ ವ್ಯಾಪಿಸಿರುವ ಸ್ವಾಖ್ಯಪ್ರಕೃತಿ ಮುಂತಾದ ರೂಪಗಳು ಅನಾದಿ, ಅನಂತ, ವ್ಯಾಪ್ತ, ಹಾಗೂ ಗುಣಪೂರ್ಣ ಆಗಿವೆ.

೫) ಕಾರ್ಯಕಾರಣಾದ್ಯಂತರ್ಗತರೂಪಗಳು

ಭಗವಂತನ ರೂಪಗಳ ಕುರಿತಾಗಿ ಇನ್ನೊಂದು ಮಹತ್ವದ ತತ್ವವನ್ನು ತಿಳಿಯೋಣ.

ಅಕ್ಕಿಯಿಂದ ಅನ್ನವಾಗುವದು. ಬೀಜದಿಂದ ಮರವಾಗುವದು. ಅಕ್ಕಿ, ಬೀಜ ಕಾರಣ; ಅನ್ನ, ಮರ ಕಾರ್ಯ.

ಅಕ್ಕಿ ಅನ್ನಕ್ಕೆ ಕಾರಣವಾದುದು ಸ್ವತಂತ್ರವಾಗಿ ಅಲ್ಲ. ದೇವರ ಹೊರತಾಗಿ ಯಾರೂ ಸ್ವತಂತ್ರರಲ್ಲ. ಆದುದರಿಂದ ದೇವರ ಇಚ್ಛೆಯಿಂದ, ದೇವರ ಸನ್ನಿಧಾನದಿಂದ ಅಕ್ಕಿ ಕಾರಣವಾಯಿತು, ಅನ್ನ ಕಾರ್ಯವಾಯಿತು.

ಅಕ್ಕಿಯನ್ನು ಕಾರಣಗೊಳಿಸಲು ಅವಶ್ಯವಾದ ಎಲ್ಲ ಗುಣಸ್ವಭಾವಗಳನ್ನು ಭಗವಂತ ಅಕ್ಕಿಯಲ್ಲಿಟ್ಟ. ಕಾರ್ಯವಾಗಲು ಆವಶ್ಯಕವಾದ ಗುಣಸ್ವಭಾವಗಳನ್ನು ಅನ್ನದಲ್ಲಿಟ್ಟ.

ಆಯಾ ಗುಣಸ್ವಭಾವಗಳನ್ನು ಇಡುವದು ಮಾತ್ರವಲ್ಲ, ಅವುಗಳನ್ನು ನಿಯಮಿಸುವದು, ಜೊತೆಗೆ ಅವುಗಳನ್ನು ಕ್ರಿಯಾಶೀಲವಾಗಿಯೂ, ಕಾರ್ಯಕಾರಿಯಾಗಿಯೂ ಮಾಡುವದು ಅಷ್ಟೇ ಅಗತ್ಯ.

ಇಷ್ಟೆಲ್ಲವನ್ನು ಮಾಡುವದು ಭಗವಂತನ ಅಕ್ಕಿಯಲ್ಲಿರುವ ಕಾರಣರೂಪ ಅನ್ನದಲ್ಲಿರುವ ಕಾರ್ಯರೂಪ.

ಇದೇ ರೀತಿ ಪ್ರಕೃತಿ-ಮಹತ್, ಪರಮಾಣು-ಘಟ, ಲೋಹ-ಪಾತ್ರೆ, ಕಲ್ಲುಕಬ್ಬಿಣ-ಮನೆಸೇತುವೆ.

ಇದೇ ಬಗೆಯಾಗಿ ಶಿಷ್ಯ ದಾಸ ಪುತ್ರರು ಪ್ರೇರ್ಯರಾಗಿದ್ದಾರೆ. ಗುರು, ಸ್ವಾಮಿ, ತಂದೆಗಳು ಪ್ರೇರಕರಾಗಿದ್ದಾರೆ. ಅವರನ್ನು ಪ್ರೇರ್ಯರನ್ನಾಗಿ ಇವರನ್ನು ಪ್ರೇರಕರನ್ನಾಗಿ ಮಾಡಿರುವದು ಭಗವಂತನ ಅಲ್ಲಲ್ಲಿರುವ ಪ್ರೇರ್ಯಪ್ರೇರಕರೂಪಗಳು.

ಪ್ರಜೆಗಳು ನಿಯಮ್ಯರು, ರಾಜನು ನಿಯಾಮಕ.

ನೂಲು ಅಂಶ, ಬಟ್ಟೆ ಅಂಶಿ.

ಶಿಶು ಪೋಷ್ಯ, ತಾಯಿ ಪೋಷಕ.

ದುರ್ಬಲರು ಬಾಧ್ಯರು, ಪ್ರಬಲರು ಬಾಧಕರು.

ಇವುಗಳಲ್ಲೆಲ್ಲಾ ಪ್ರೇರ್ಯ ಪ್ರೇರಕ, ನಿಯಮ್ಯ ನಿಯಾಮಕ, ಅಂಶ ಅಂಶಿ, ಪೋಷ್ಯ ಪೋಷಕ, ಬಾಧ್ಯ ಬಾಧಕನಾಗಿರುವನು.

ಜೀವರು ಭೋಕ್ತೃಗಳು. ಅನ್ನಾದಿಗಳು ಭೋಗ್ಯಗಳು. ಭೋಕ್ತೃಗಳಲ್ಲಿ ಪ್ರದ್ಯುಮ್ನ ಸಂಕರ್ಷಣರು, ಭೋಗ್ಯಗಳಲ್ಲಿ ಅನಿರುದ್ಧ ನಾರಾಯಣರು ಭೋಕ್ತೃ ಭೋಗ್ಯಶಕ್ತಿಪ್ರದರಾಗಿ ಇರುವರು.

ಇದಲ್ಲದೇ ಅಲ್ಲಲ್ಲಿ ಇರುವ ಅಹಿತ ಸಹಜ ವಿಭೂತಿ ಎಂಬ ಅನಂತ ರೂಪಗಳು.

೫) ಜೀವ

ಪ್ರತಿಯೊಂದು ಸೃಷ್ಟಿಕಲ್ಪದಲ್ಲಿ ಅನಂತಪರಮಾಣುಗಳು ಹುಟ್ಟಿ ಸಾಯುವವು. ಹೀಗೆ, ಹಿಂದೆ ಅನಂತಸೃಷ್ಟಿಕಲ್ಪಗಳು ಆಗಿ ಹೋಗಿವೆ. ಮುಂದೆ ಅನಂತಸೃಷ್ಟಿಕಲ್ಪಗಳು ಬರುವವಿವೆ.

ಆದುದರಿಂದ ಅವುಗಳಲ್ಲಿ ಹುಟ್ಟಿ ಸಾಯುವ ಪರಮಾಣುಗಳು ಅನಂತಾನಂತ. ಇದು ಒಂದು ಮೊತ್ತ.

ಅಲ್ಲದೆ ಹಿಂದೆ ಸಂದುಹೋದ ಕ್ಷಣಗಳು ಅನಂತ. ಮುಂದೆ ಬರುವ ಕ್ಷಣಗಳು ಅನಂತ. ಹಿಂದುಮುಂದಿನ ಕ್ಷಣಗಳು ಒಟ್ಟು ಅನಂತಾನಂತ. ಇದು ಒಂದು ಮೊತ್ತ.

ಆ ಈ ಎರಡೂ ಮೊತ್ತಗಳೂ ಸೇರಿ ಮಹತ್ತರ ಅನಂತಾನಂತ ಸಂಖ್ಯೆಯಾಗುವದು. ಈ ಸಂಖ್ಯೆಗಿಂತಲೂ ಚೇತನರ ಸಂಖ್ಯೆ ಅನಂತಮಡಿ ಹೆಚ್ಚು.

ಈ ಜೀವರಾಶಿಗಳನ್ನು ಅಂಡಜ, ಉದ್ಭಿಜ್ಜ, ಸ್ವೇದಜ, ಜರಾಯುಜ ಎಂದು ಸ್ಥೂಲವಾಗಿ ವಿಂಗಡಿಸಬಹುದು.

ಅಂಡಜ ಎಂದರೆ ಮೊಟ್ಟೆಯಿಂದ ಹುಟ್ಟುವ ಪಕ್ಷಿ ಮುಂತಾದವು.

ಉದ್ಭಿಜ್ಜ ಎಂದರೆ ಬೀಜ ಒಡೆದು ಹುಟ್ಟುವ ಗಿಡ ಮುಂತಾದವು.

ಸ್ವೇದಜ ಎಂದರೆ ಬೆವರಿನಿಂದ ಜನಿಸುವ ಕ್ರಿಮಿ ಮುಂತಾದವು.

ಜರಾಯುಜ ಎಂದರೆ ಗರ್ಭಕೋಶದಿಂದ ಹುಟ್ಟುವ ಮನುಷ್ಯ ಮುಂತಾದವರು.

ಈ ಮೇಲೆ ಹೇಳಿದ ಗುಂಪಿನಲ್ಲಿ ಜೀವರು ಅತ್ಯಲ್ಪರು, ಅತಿಸ್ಥೂಲರು ಇರುವರು. ನೊಣ, ಇರುವೆ, ನೊರಜು, ಸ್ತಂಬಗಳು ಇತ್ಯಾದಿಗಳು ಅತ್ಯಲ್ಪರಾದರೆ, ಕುದುರೆ, ಕೋಣ, ಒಂಟೆ, ಆನೆ, ತಿಮಿ ಇತ್ಯಾದಿಗಳು ಅತಿಸ್ಥೂಲರು.

ಈ ಎಲ್ಲ ಜೀವರನ್ನು ಪಾರ್ಥಿವ, ಆಪ್ಯ, ತೈಜಸಶರೀರ ಉಳ್ಳವರೆಂದೂ ವಿಂಗಡಿಸಬಹುದು.

ಈ ಎಲ್ಲ ಜೀವರ ಯೋನಿಗಳನ್ನು ಎಂಬತ್ತು ನಾಲ್ಕು ಲಕ್ಷವೆಂದು ಹೇಳಿರುವರು.

ಇದಲ್ಲದೆ ದಾನವ, ಮಾನವ, ದೇವ ಎಂಬ ವಿಭಾಗವೂ ಶಾಸ್ತ್ರದೃಷ್ಟ

ಈ ಗುಂಪಿನಲ್ಲಿ ಅನಂತಕಲಿ, ಅನಂತಕಾಲನೇಮಿ, ಅನಂತವಿಪ್ರಚಿತ್ತಿ, ಅನಂತ ಇಂದ್ರ, ಅನಂತರುದ್ರ, ಅನಂತಬ್ರಹ್ಮರು ಇರುವರು.

ಈ ಎಲ್ಲ ಅಸಂಖ್ಯಜಾತಿಯ, ಅಗಣಿತ ಆಕಾರದ, ಭಿನ್ನ ಭಿನ್ನ ಯೋನಿಜ, ನಾನಾಜಾತಿಯ ಶರೀರಗಳುಳ್ಳ ಅನಂತಾನಂತ ಜೀವರಾಶಿಗಳಲ್ಲಿ ಅನಂತಾನಂತ ಸ್ವಾಮ್ಯರೂಪಗಳಿಂದ ಭಗವಂತನು ಇದ್ದು ನಿಯಮಿಸುವನು.

ಅನಾದಿಕಾಲದಿಂದ ಅನಂತಕಾಲದವರೆಗೆ ಅವರಲ್ಲಿಯ ಒಬ್ಬೊಬ್ಬರಿಗೂ ಇರುವ ಅನಂತಾನಂತ ದೇಹ, ಇಂದ್ರಿಯ, ಮನಸ್ಸು ಮುಂತಾದವುಗಳನ್ನು ಸ್ವಾಮ್ಯರೂಪಗಳಿಂದ ವ್ಯಾಪಿಸಿ ನಿಯಮಿಸುವವನು ಭಗವಂತ.

ಆ ದೇಹಗಳಲ್ಲಿ ಶಿರಸ್ಸು ಮುಖ, ಬಾಹು, ತೊಡೆ, ಕಾಲು, ಮಸ್ತಿಷ್ಕ, ಹೃದಯ, ಪ್ಲೀಹ, ಯಕೃತ್, ಉದರ, ಕರಳು, ತ್ವಕ್, ಚರ್ಮ, ಮಾಂಸ, ರಕ್ತ, ಮೇದಸ್, ಮಜ್ಜಾ, ಸ್ನಾಯು, ಅಸ್ಥಿ ನಾಡಿಗಳೆಂಬ ಅವಯವ, ಅಂಗ, ಅಂಶಗಳಲ್ಲಿ ಸ್ವಾಮ್ಯರೂಪಗಳಿಂದ ಆಯಾ ಆಕಾರವಾಗಿ ಇರುವ.

ಆ ಆ ಪದಾರ್ಥಗಳ ಆಶ್ರಯ, ಚೇಷ್ಟಕ, ಶಕ್ತಿಪ್ರದ, ಶಕ್ತಿಪ್ರೇರಕ ಆಗಿವೆ ಭಗವಂತನ ಆ ರೂಪಗಳು.

ಅಲ್ಲದೆ, ಆ ಆ ಜೀವರಾಶಿಗಳಿಗೆ ಇರವು, ಅರಿವು, ಹಸಿವು, ತೃಷೆ, ರೋಗ, ಆರೋಗ್ಯ, ಚಿಂತೆ, ಸಂತಾಪ, ಶ್ರಮ, ಕ್ಲೇಶ, ನೋವು, ತೃಪ್ತಿ, ತೃಷ್ಣಾ ಬಲ, ದೌರ್ಬಲ್ಯ, ಸ್ವಾದರ, ಪ್ರೇಮ, ದ್ವೇಷ, ಸಿಟ್ಟು ಸಹನೆ, ಕಾಮ, ವೈರಾಗ್ಯ, ವಿನಯ, ಅಹಂಕಾರ, ವಿವೇಕ, ಅವಿವೇಕ, ಸ್ಥಿರತೆ, ಚಾಂಚಲ್ಯ, ಭೋಗ, ತ್ಯಾಗ, ದಯೆ, ನಿರ್ದಯತೆ, ಔದಾರ್ಯ, ಕ್ಷುದ್ರತೆ, ನಿಪುಣತೆ, ಸೌಜನ್ಯ, ದೌರ್ಜನ್ಯ, ಸತ್ಯ, ಸುಳ್ಳು, ದಮ ಶಮ, ಭಯ, ಅಭಯ, ಹಿಂಸೆ, ಅಹಿಂಸೆ, ಯಶಸ್ಸು, ಅಪಯಶಸ್ಸು, ಸಂಪತ್ತು, ಬಡತನ, ಧೈರ್ಯ, ಅಧೈರ್ಯ, ದಂಭ, ದರ್ಪ, ಜಯ, ಪರಾಜಯ, ಲಾಭ, ಹಾನಿ, ಸಿದ್ಧಿ, ಅಸಿದ್ಧಿ, ಸ್ಮೃತಿ, ವಿಸ್ಮೃತಿ, ಸಂಶಯ, ಭ್ರಾಂತಿ, ಜಾಗರ, ಸ್ವಪ್ನ, ಸುಷುಪ್ತಿ, ಮೂರ್ಛೆ, ಸಮಾಧಿ, ಕ್ಷೋಭ, ಶಾಂತಿ, ಶ್ರದ್ಧೆ, ಅಶ್ರದ್ಧೆ, ಜ್ಞಾನ, ಅಜ್ಞಾನ, ದ್ವೇಷ, ಭಕ್ತಿ ಮುಂತಾದವುಗಳನ್ನೆಲ್ಲ ನೀಡುವವನು, ದಯಪಾಲಿಸುವವನು ದೇವರು.

ಹಾಗೂ ದೇಹ, ಇಂದ್ರಿಯ, ಮನಸ್ಸು ಮತ್ತು ಜೀವರ ಈ ಅನಂತಜಾತಿಯ, ಒಂದೊಂದರಲ್ಲೂ ಅಸಂಖ್ಯಬಗೆಯ ಗುಣಧರ್ಮಗಳಲ್ಲಿ ಭಗವಂತನು ಸ್ವಾಮ್ಯರೂಪಗಳಿಂದ ವ್ಯಾಪಿಸಿ ಇರುವನು.

ಭಗವಂತನ ಆ ರೂಪಗಳು ಈ ಎಲ್ಲ ಗುಣಗಳಿಗೆ ಉತ್ಪಾದಕ, ನಿಯಾಮಕ, ಪ್ರೇರಕ, ಪಾಲಕ, ವಿನಾಶಕ, ಪ್ರವರ್ತಕ, ನಿವರ್ತಕ, ಸತ್ತಾಪ್ರದ, ಶಕ್ತಿಪ್ರದ, ಆಧಾರ, ಆಶ್ರಯಗಳಾಗಿವೆ.

ಅನಂತಾನಂತಜೀವರ ಹಾಗೂ ಅವರ ದೇಹೇಂದ್ರಿಯಮನಸ್ಸುಗಳ ಮತ್ತು ಅವುಗಳೆಲ್ಲದರ ಗುಣಧರ್ಮಗಳ ನಿಯಾಮಕಾರಿಗಳಾದ ಜೀವಾದಿನಾಮಕ ಸ್ವಾಮ್ಯರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೬) ಕರ್ಮ

ಹಿಂದೆ ಹೇಳಿದಂತೆ ಅನಂತ ಪರಮಾಣುಗಳಿಗಿಂತಲೂ ಅನಂತ ಕ್ಷಣಗಳಿಗಿಂತಲೂ ಅನಂತಮಡಿ ಮಿಗಿಲಾದ ಅನಂತಾನಂತ ಜೀವರಲ್ಲಿ ಪ್ರತಿಯೊಬ್ಬರೂ ಅನಾದಿಕಾಲದಿಂದ ಅನಂತಕಾಲದವರೆಗೆ ತಮ್ಮ ದೇಹೇಂದ್ರಿಯಮನಸ್ಸುಗಳಿಂದ ಅನಂತ ಕರ್ಮಗಳನ್ನು ಮಾಡುತ್ತಾರೆ.

ಆ ಪ್ರತಿಯೊಂದು ಕರ್ಮಗಳಿಗೂ ಒಬ್ಬ ಚೇತನ ಅಭಿಮಾನಿ ಯಾಗಿರುವನು. ಅವನೂ ತನ್ನ ದೇಹೇಂದ್ರಿಯಮನಸ್ಸುಗಳಿಂದ ಲೆಕ್ಕ ಮೀರಿ ಕರ್ಮಗಳನ್ನು ಮಾಡುವನು. ಆ ಕರ್ಮಗಳಿಗೂ ಬೇರೆ ಚೇತನರು ಅಭಿಮಾನಿಗಳು. ಅವರಿಗೂ ಅಸಂಖ್ಯ ಕರ್ಮಗಳು.

ಹೀಗೆ ಕರ್ಮಗಳು ಅನಂತ ಗುಣಿತ ಅನಂತ. ಈ ಎಲ್ಲ ಜೀವರ ಕರ್ಮಗಳಿಗೂ, ಆ ಆ ಕರ್ಮಾಭಿಮಾನಿಗಳಿಗೂ, ಅವರ ಕರ್ಮಗಳಿಗೂ, ಎಲ್ಲದಕ್ಕೂ ನಿಯಾಮಕರಾದ ವಾಯುದೇವರಿಗೂ ಕರ್ಮಾದಿನಾಮಕ ಸ್ವಾಮ್ಯ ಭಗವಂತನ ರೂಪಗಳು ನಿಯಾಮಕ, ಪ್ರೇರಕ, ಉತ್ಪಾದಕ, ಪಾಲಕ, ವಿನಾಶಕ, ಪ್ರವರ್ತಕ, ನಿವರ್ತಕ, ಸತ್ತಾಪ್ರದ, ಶಕ್ತಿಪ್ರದ, ಆಧಾರ, ಆಶ್ರಯ, ಶುದ್ಧಿಪ್ರದ, ಸಿದ್ಧಿಪ್ರದ, ಸಾಕ್ಷಿ ಅಂತಸ್ಥ ಆಗಿವೆ.

ಒಂದು ಕರ್ಮ ಇದ್ದ ಮಾತ್ರಕ್ಕೆ ಫಲವನ್ನು ಕೊಡುವದಿಲ್ಲ. ಆ ಕರ್ಮವು ಪಕ್ವವಾಗಬೇಕು. ಆಗ ಮಾತ್ರ ಫಲ ದೊರೆಯುವದು. ಈ ಕರ್ಮದ ಪಾಕ ಎನ್ನುವದು ಒಂದು ಬಗೆಯ ಅವಸ್ಥೆ.

ಈ ಅವಸ್ಥೆಯನ್ನು ತರುವವನು ಕರ್ಮಾಂತರ್ಯಾಮಿ ಕಪಿಲನಾಮಕ ಭಗವಂತ. ಈ ಕಪಿಲನಿಗೆ ಕರ್ಮಪಾಚಕ ಎಂದು ಕರೆಯುತ್ತಾರೆ.

ಅಲ್ಲದೆ ನಾವು ಮಾಡುವ ಕರ್ಮಗಳ ಫಲವನ್ನು ಭಗವಂತ ಭೋಗಿಸುತ್ತಾನೆ. ಆದುದರಿಂದ ಅವನಿಗೆ ಕರ್ಮಫಲಭೋಕ್ತಾ ಎಂದು ಕರೆಯುತ್ತಾರೆ.

ಅನಂತಾನಂತಜೀವರ ಅನಂತಾನಂತ ಕರ್ಮಗಳ ಪಾಚಕ, ಫಲಭೋಕ್ತೃ ನಿಯಾಮಕಾದಿಗಳಾದ ಕರ್ಮಾದಿನಾಮಕ ಭಗವಂತನ ಈ ಸ್ವಾಮ್ಯರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೭) ತಾರತಮ್ಯ

ಸರ್ವಜೀವರಲ್ಲಿ ಭಗವಂತನಿರುವನು. ಆದರೆ, ಎಲ್ಲ ಜೀವರಲ್ಲಿ ಭಗವಂತ ಸಮಾನವಾಗಿಲ್ಲ.

ಇದರರ್ಥ, ಉತ್ತಮ ಜೀವರಲ್ಲಿರುವ ದೇವರು ಉತ್ತಮ, ಅಧಮ ಜೀವರಲ್ಲಿರುವ ದೇವರು ಅಧಮ ಎಂದಲ್ಲ.

ಆದರೆ ಅಧಮಜೀವರಲ್ಲಿ ದೇವರ ಸನ್ನಿಧಾನ ಅಲ್ಪ, ಉತ್ತಮಜೀವರಲ್ಲಿ ದೇವರ ಸನ್ನಿಧಾನ ಹೆಚ್ಚು ಎಂದರ್ಥ.

ಭಗವಂತ ತನ್ನ ಇಚ್ಛೆಯಿಂದ ಆ ಆ ಜೀವರಲ್ಲಿ ತನ್ನ ಸಾಮರ್ಥ್ಯವನ್ನು, ಗುಣಮಾಹಾತ್ಮ್ಯಗಳನ್ನು ಪ್ರಕಟಗೊಳಿಸುವನು. ಇದುವೇ ಸನ್ನಿಧಾನ.

ಈ ಅರ್ಥದಲ್ಲಿ ದೇವರು ಯಾವ ಜೀವನಲ್ಲಿ ತನ್ನ ಹೆಚ್ಚಿನ ಸಾಮರ್ಥ್ಯವನ್ನು ಪ್ರಕಟಗೊಳಿಸುವನೋ ಆ ಜೀವನಲ್ಲಿ ದೇವರ ಸನ್ನಿಧಾನವು ಹೆಚ್ಚು ಎಂದು ಹೇಳುತ್ತೇವೆ.

ಸತ್ಯಸಂಕಲ್ಪನಾದ ಭಗವಂತನು ರಮಾ ಬ್ರಹ್ಮ ವಾಯು ಮುಂತಾದ ಉತ್ತಮ ಜೀವರಲ್ಲಿ ಉಳಿದೆಲ್ಲ ಜೀವರಾಶಿಗಳಿಗಿಂತಲೂ ಅತಿ ಹೆಚ್ಚಿನ ಮಟ್ಟದಲ್ಲಿ ತನ್ನ ಸಾಮರ್ಥ್ಯವನ್ನು ವ್ಯಕ್ತಗೊಳಿಸುವನು.

ಅಂತೆಯೇ ರಮಾ, ಬ್ರಹ್ಮ ವಾಯು ಮುಂತಾದ ದೇವತೆಗಳಲ್ಲಿ ಭಗವಂತನ ಸನ್ನಿಧಾನ ನಿರತಿಶಯ.

ಎಲ್ಲ ಜೀವರು ಶಾಲಿಗ್ರಾಮಾದಿಗಳಂತೆ ಭಗವಂತನ ಪ್ರತಿಮೆಗಳು, ಅಧಿಷ್ಠಾನರು ಎಂದೆನಿಸಿಕೊಳ್ಳುತ್ತಾರೆ. ಹಾಗಾಗಿ ಜೀವರೆಂಬ ಅಧಿಷ್ಠಾನಗಳಲ್ಲಿ (ಪ್ರತಿಮೆಗಳಲ್ಲಿ) ಭಗವಂತನನ್ನು ಪೂಜಿಸಬೇಕು.

ಭಗವಂತನ ಸನ್ನಿಧಾನವು ಯಾವ ಅಧಿಷ್ಠಾನದಲ್ಲಿ (ಪ್ರತಿಮೆಯಲ್ಲಿ) ಹೆಚ್ಚೋ, (ಅಂದರೆ ಯಾವ ಜೀವರಲ್ಲಿ ಹೆಚ್ಚೋ) ಆ ಅಧಿಷ್ಠಾನದಲ್ಲಿ (ಪ್ರತಿಮೆಯಲ್ಲಿ-(ಆ ಜೀವರಲ್ಲಿ) ಭಗವಂತನನ್ನು ಹೆಚ್ಚಿನ ಭಕ್ತಿಶ್ರದ್ಧೆಗಳಿಂದ ಪೂಜಿಸಬೇಕು.

(ಅಂತೆಯೇ ಸಾಮಾನ್ಯ ಪ್ರತಿಮೆಗಳಿಗಿಂತಲೂ ಮೂಲರಾಮ, ಕೃಷ್ಣ, ವ್ಯಾಸಶಿಲೆ, ವೇಂಕಟೇಶ, ರಂಗನಾಥ ಮುಂತಾದವುಗಳಲ್ಲಿ ಅತ್ಯಧಿಕ ಭಕ್ತಿಯಿಂದ ಸೇವೆ ಆರಾಧನೆಗಳನ್ನು ಮಾಡುವದು ಕಾಣುತ್ತದೆ.

ಏಕೆಂದರೆ ಸಾಮಾನ್ಯ ಪ್ರತಿಮೆಗಳಿಗಿಂತಲೂ ಅತಿಹೆಚ್ಚಿನ ಮಟ್ಟದಲ್ಲಿ, ಕಿಂ ಬಹುನಾ ನಿರತಿಶಯವಾಗಿ ಈ ಪ್ರತಿಮೆಗಳಲ್ಲಿ ಭಗವಂತನ ಸನ್ನಿಧಾನವಿರುವದು.)

ಈ ನಿಟ್ಟಿನಲ್ಲಿ ಅಲ್ಪಜೀವರುಗಳಿಗಿಂತ ಉತ್ತಮೋತ್ತಮ ಜೀವರಲ್ಲಿ, ಅಧಮ ದೇವತೆಗಳಿಗಿಂತ ಉತ್ತಮೋತ್ತಮ ದೇವತೆಗಳಲ್ಲಿ ಭಗವಂತನನ್ನು ಹೆಚ್ಚು ಹೆಚ್ಚು ಆದರ ಭಕ್ತಿಗಳಿಂದ ಭಜಿಸುವದು ಅತ್ಯಗತ್ಯ.

ಹೀಗೆ ಮೇಲೆ ಹೋದಂತೆ ವಾಯು, ಬ್ರಹ್ಮರು ಸರ್ವೋತ್ತಮ ಅಧಿಷ್ಠಾನರಾಗುವರು. ಈ ಬಗೆಯ ಉತ್ತಮ ಅಧಿಷ್ಠಾನಗಳಲ್ಲಿ ಅಧಿಕವಾದ ಆರಾಧನೆ ಶ್ರೀಹರಿಯ ಪರಮಪ್ರೀತಿಸಾಧನ.

ಇದರರ್ಥ ಕಡಿಮೆ ಜೀವರಲ್ಲಿ ದೇವರನ್ನು ಪೂಜಿಸಬಾರದೆಂದಲ್ಲ. ಈ ಸಮಗ್ರದೃಷ್ಟಿಯನ್ನು ಮನದಲ್ಲಿಟ್ಟುಕೊಂಡು ತಾರತಮ್ಯವನ್ನು ತಿಳಿಯುವದು ಬಹಳ ಆವಶ್ಯಕ.

ಜೀವರ ತಾರತಮ್ಯವು ಈ ತೆರನಾಗಿದೆ.

ಸ್ತಂಭ, ಗುಲ್ಮ ಲತಾ, ವೃಕ್ಷಾದಿ ಸ್ಥಾವರ, ಭೂಚರ, ಜಲಚರ, ಖೇಚರ,

೩೨) ಮನುಷ್ಯೋತ್ತಮ

೩೧) ಚಕ್ರವರ್ತಿ

೩೦) ಮನುಷ್ಯಗಂಧರ್ವ

೨೯) ದೇವಗಂಧರ್ವ

೨೮) ಚಿರಪಿತೃ

೨೭) ತೊಂಬತ್ತೊಂಬತ್ತು ಕೋಟಿ ತೊಂಬತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರದ ಒಂಬತ್ತು ನೂರು ಋಷಿಗಳು, ಗೋಪಿಕಾ, ಅಪ್ಸರಾ, ಗಂಧರ್ವ, ಅಸುರ, ವಿದ್ಯಾಧರ, ರಾಕ್ಷಸ, ಯಕ್ಷ ಚಾರಣ, ಕಿಂಪುರುಷ, ಗುಹ್ಯಕ,

ಸಾಧ್ಯ, ಸಿದ್ಧ ಆಜಾನಜ,

೨೬) ಕರ್ಮಾಭಿಮಾನಿ ಪುಷ್ಕರ,

೨೫) ಪೃಥಿವೀ, ಶನಿ,

೨೪) ನಾಮಾಭಿಮಾನಿ ಉಷಾ,

೨೩) ಜಲಾಭಿಮಾನಿ ಬುಧ,

೨೨) ಮಂತ್ರಾಭಿಮಾನಿ ಸ್ವಾಹಾ,

೨೧) ಕೂರ್ಮಾದಿ ಅನಾಖ್ಯಾತ ದೇವ,

೨೦) ಮೇಘಾಭಿಮಾನಿ ಪರ್ಜನ್ಯ, ಗಂಗಾ, ಶಾಮಲಾ, ಸಂಜ್ಞಾ, ರೋಹಿಣೀ, ವಿರಾಟ್, ಉಷಾ,

೧೯) ದಿಗಭಿಮಾನಿ, ಭೀಮಪತ್ನೀ ಅಬಭಿಮಾನಿ,

ಚಿತ್ರಗುಪ್ತ,

ಬಲಿ ಮುಂತಾದ ಸಪ್ತ ಇಂದ್ರ,

ರಾಹು, ಕೇತು, ಮಂಗಲ, ಶುಕ್ರ,

ಅರ್ಚಿರಾದಿ, ಧೂಮಾದಿ ಮಾರ್ಗಾಭಿಮಾನಿ ದೇವ,

ಯಜ್ಞ ಸಾಧನಾಭಿಮಾನಿ ದೇವ,

ಅಷ್ಟಗಂಧರ್ವ, ಇಬ್ಬರು ಅಪ್ಸರೆ, ಏಳು ಪಿತೃ, ಏಕಾದಶ ಮನು, ವಿಶ್ವಕರ್ಮ,

ಚಂಡ, ಸುಧಾಮ, ವಪ್ರ ಮುಂತಾದ ವಿಷ್ಣುಪಾರ್ಷದ,

ಸನಕ, ಸನಂದನ, ಸನತ್ಸುಜಾತರು,

ಚ್ಯವನ, ಉಚಥ್ಯ, ಕರ್ದಮ ಮುಂತಾದ ತೊಂಬತ್ತೆರಡು ಋಷಿಗಳು,

ಪ್ರಿಯವ್ರತ, ಉತ್ತಾನಪಾದ, ಗಯ, ಮಾಂಧಾತೃ, ಧ್ರುವ, ಪೃಥು, ಶಶಬಿಂದು, ಕಾರ್ತವೀರ್ಯ, ಕಕುತ್ಸ್ಥ ದುಷ್ಯಂತನ ಮಗ ಭರತ, ಪರೀಕ್ಷಿತ್, ಜನಕ, ಹೈಹಯ, ಋಷಭನ ಮಗ ಭರತ ಮುಂತಾದ ನೂರು ಚಕ್ರವರ್ತಿಗಳು,

ವಾಯುಪುತ್ರ ಮರೀಚಿ, ಅಗ್ನಿಪುತ್ರ ಪಾವಕ, ಇಂದ್ರಪುತ್ರ ಜಯಂತ,

ಜಯವಿಜಯ ಮುಂತಾದ ಏವತ್ತಾರು ದ್ವಾರಪಾಲರು,

ಕರ್ಮಜ ದೇವತೆಗಳು,

೧೮) ವಿಷ್ವಕ್ಸೇನ, ಅಶ್ವಿನಿ, ಗಣಪತಿ, ಕುಬೇರ, ಎಂಬತ್ತೈದು ಸೋಮಪಾನಾರ್ಹದೇವತೆಗಳು,

೧೭) ಮಿತ್ರ, ನಿರ್ಋತಿ, ಪ್ರಾವಹ, ತಾರಾ,

೧೬) ಪ್ರಹ್ಲಾದ, ಮರೀಚೀ, ಪುಲಸ್ತ್ಯ, ಅತ್ರಿ, ಪುಲಹ, ಅಂಗಿರಸ, ಕ್ರತು, ವಸಿಷ್ಠ, ವೈವಸ್ವತ ಮನು, ವಿಶ್ವಾಮಿತ್ರ,

೧೫) ಅಗ್ನಿ, ಭೃಗು, ಪ್ರಸೂತಿ,

೧೪) ನಾರದ,

೧೩) ವರುಣ,

೧೨) ಸೂರ್ಯ, ಚಂದ್ರ, ಯಮ, ಶತರೂಪಾ,

೧೧) ಪ್ರವಹವಾಯು,

೧೦) ಸ್ವಾಯಂಭುವ ಮನು, ದಕ್ಷ, ಬೃಹಸ್ಪತಿ, ಅನಿರುದ್ಧ, ಶಚೀ, ರತಿ,

೯) ಆಹಂಕಾರಿಕ ಪ್ರಾಣ,

೮) ಇಂದ್ರ, ಕಾಮ,

೭) ಸೌಪರ್ಣೀ, ವಾರುಣೀ, ಪಾರ್ವತೀ,

೬) ಜಾಂಬವತೀ, ಭದ್ರಾ, ನೀಲಾ, ಕಾಲಿಂದೀ, ಮಿತ್ರವಿಂದಾ, ಲಕ್ಷಣಾ,

೫) ರುದ್ರ, ಶೇಷ, ಗರುಡ,

೪) ಪರಶುಕ್ಲರಾದ ಭಾರತೀ, ಸರಸ್ವತೀ,

೩) ವಾಯು, ಬ್ರಹ್ಮಾ

೨) ಲಕ್ಷ್ಮೀ ಎಂದು.

ಈ ಎಲ್ಲ ಜೀವರ ಸ್ವರೂಪದಲ್ಲೂ, ಆ ಜೀವಸ್ವರೂಪದ ಅನಂತಾಂಶಗಳಲ್ಲೂ, ದೇಹೇಂದ್ರಿಯಮನಸ್ಸುಗಳಲ್ಲೂ ಭಗವಂತನು ಸ್ವಾಖ್ಯರೂಪಗಳಿಂದ ವ್ಯಾಪಿಸಿರುವನು.

ಹಾಗೂ ಆ ಜೀವರ ಅನಂತಶಕ್ತಿ, ಅಪರಿಮಿತ ಗುಣ, ಅದ್ಭುತ ಬಲ, ಪರಮಸೌಂದರ್ಯ, ಅಚಿಂತ್ಯ ಐಶ್ವರ್ಯ, ಅಗಾಧ ಆನಂದ, ಅಮಿತ ತೇಜಸ್ಸು, ಅಪಾರದಯೆ, ಯಥಾಯೋಗ್ಯ ಸ್ವಾತಂತ್ರ್ಯ, ಸ್ವಾಮಿತ್ವ ಹಾಗೂ ಅಭಿಮನ್ಯಮಾನವಾದ ಪದಾರ್ಥಗಳ ನಿಯಾಮಕತ್ವ, ಪ್ರವರ್ತಕತ್ವ, ನಿವರ್ತಕತ್ವ, ಕಾರಕತ್ವ, ಉತ್ಪಾದಕತ್ವ, ಪಾಲಕತ್ವ, ವಿನಾಶಕತ್ವ, ಆಧಾರತ್ವ, ತದಾಕಾರತ್ವ ಮುಂತಾದ ಗುಣ, ಕ್ರಿಯಾ ಮಾಹಾತ್ಮ್ಯಗಳಲ್ಲೂ ಆ ಆ ಹೆಸರಿನ ಸ್ವಾಖ್ಯರೂಪಗಳಿಂದ ಭಗವಂತನು ಸನ್ನಿಹಿತನಾಗಿದ್ದು ನಿಯಮನ, ಪ್ರೇರಣಾದಿಗಳನ್ನು ಮಾಡುತ್ತಲಿರುವ.

ಜೀವಸ್ವರೂಪ, ಅವುಗಳ ಅನಂತಾಂಶ, ಅವರ ದೇಹೇಂದ್ರಿಯಮನಸ್ಸು ಹಾಗೂ ಅವರ ಗುಣ ಕ್ರಿಯಾ ಮಾಹಾತ್ಮ್ಯಗಳ ನಿಯಾಮಕಾದಿಗಳಾದ ಈ ಸ್ವಾಖ್ಯರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೮) ಮುಕ್ತ

ಇಷ್ಟು ಮಾತ್ರವಲ್ಲ. ಮುಕ್ತರಾದ ಅನಂತ ಜೀವರು ಹಾಗೂ ಅನಂತ ಇಂದ್ರ, ಶೇಷ, ಬ್ರಹ್ಮರು ಮತ್ತು ನಿತ್ಯಮುಕ್ತಳಾದ ರಮಾದೇವಿ ಇವರೆಲ್ಲರಿಗೆ ಜ್ಞಾನ, ಸತ್ಯಸಂಕಲ್ಪ, ಭೋಗ, ಭಕ್ತಿ, ಆನಂದ ಮುಂತಾದ ಗುಣಗಳಿವೆ.

ಒಂದೊಂದೂ ತಾರತಮ್ಯಾನುಸಾರ ಅನಂತವಾಗಿದೆ. ಅಲ್ಲದೆ ಒಂದೊಂದು ಗುಣವೂ ನಾನಾ ಬಗೆಯಾಗಿದೆ.

ಉದಾಹರಣೆಗೆ ಒಂದು ಬಗೆಯ ಆನಂದ ಹೂವು ಕಾಣುವಾಗ ಆಗುವದು. ಇನ್ನೊಂದು ಬಗೆಯದು ಅದರ ಪರಿಮಳವನ್ನು ಸೇವಿಸುವಾಗ ಆಗುವದು. ಮತ್ತೊಂದು ಬಗೆಯದು ಹಣ್ಣು ಮೆಲುವಾಗ. ಇದೆಲ್ಲದಕ್ಕಿಂತಲೂ ತೀರ ಬೇರೆ ತೆರನಾದುದು ಆ ಭಗವಂತನ ದಿವ್ಯರೂಪವನ್ನು ಕಾಣುವಾಗ.

ಹೀಗೆ ಆನಂದವು ಬಗೆ ಬಗೆಯಾಗಿದೆ. ಮಾತ್ರವಲ್ಲ, ಸಾವಿರ, ಲಕ್ಷ, ಕೋಟಿ ಕೋಟಿ ಬಗೆಯಾಗಿದೆ. ಹೀಗೆ ಭೋಗ, ಜ್ಞಾನ ಮುಂತಾದ ಗುಣಗಳಲ್ಲೂ ನಾನಾಬಗೆಗಳನ್ನು ತಿಳಿಯಬೇಕು.

ಈ ಎಲ್ಲ ಅನಂತವಿಧವಾದ ಅನಂತ ಗುಣಗಳಲ್ಲಿ ಭಗವಂತನು ವ್ಯಾಪಿಸಿ ನಿಯಮಿಸುತ್ತಿರುವನು.

ಈ ಸ್ವಾಭ್ಯರೂಪಗಳು ಅನಾದಿ ಅನಂತ ವ್ಯಾಪ್ತ ಹಾಗೂ ಗುಣಪೂರ್ಣ ಆಗಿವೆ.

೯) (ಸ್ವತಂತ್ರ) ಭಗವದ್ರೂಪ

ಇಲ್ಲಿಯವರೆಗೆ ಅಧಿಷ್ಠಾನಗಳ ಮುಖಾಂತರ ಭಗವಂತನ ಅಂತರ್ಯಾಮಿ ರೂಪಗಳನ್ನು ಚಿಂತನ ಮಾಡಿದ್ದೇವೆ. ಇನ್ನು ಮೇಲೆ ಇದಕ್ಕೆ ಹೊರತಾಗಿ ಭಗವದ್ರೂಪಗಳನ್ನು ನೆನೆಯೋಣ.

ಮೊಟ್ಟಮೊದಲು, ಎಲ್ಲೆಡೆಯೂ ತುಂಬಿದ, ಆದರೆ ಎಲ್ಲೂ ಅಂತರ್ಯಾಮಿಯಾಗಿರದ ರೂಪವೇ ಭಗವಂತನ ಮೂಲರೂಪ. ಈತನ ಹೆಸರು ನಾರಾಯಣ.

ಒಂದು ದೃಷ್ಟಿಯಿಂದ, ಬ್ರಹ್ಮಾಂಡದ ಒಳಗೆ ಅಗಾಧಜಲರಾಶಿಯ ಮೇಲೆ ಶೇಷಶಾಯಿಯಾದ ಪದ್ಮನಾಭನಾಗಲಿ, ಅಥವಾ ಆ ಪದ್ಮನಾಭನಿಂದ ಹೊರಹೊಮ್ಮಿ ಶ್ವೇತದ್ವೀಪದಲ್ಲಿ ನೆಲಸಿದ ವಾಸುದೇವನಾಗಲಿ ಮೂಲರೂಪವೆಂದು ಹೇಳುವದುಂಟು.

ಆದರೆ ಇದು ಬ್ರಹ್ಮಾಂಡದ ಒಳಗಿರುವ ಮೂಲರೂಪ. ಅಂತೆಯೇ ಔಪಚಾರಿಕ ಮೂಲರೂಪ. ಆದರೆ ಬ್ರಹ್ಮಾಂಡದ ಹೊರಗಿರುವ ನಾರಾಯಣ ನಿರುಪಚರಿತ ಮೂಲರೂಪ.

ಸೃಷ್ಟಿಯ ಆದಿಯಲ್ಲಿ ಪ್ರಳಯ ಮುಗಿದಾಗ ಇರುವ ಈ ನಾರಾಯಣನು ಒಂದವಸ್ಥೆಯಲ್ಲಿರುವನು. ಆಗ ಅವನಿಗೆ ಪುರುಷ ಎಂದು ಹೆಸರು.

ಅಲ್ಲದೇ ವಾಸುದೇವನೆಂಬ ಪುರುಷ. ಸಂಕರ್ಷಣ ಪ್ರದ್ಯುಮ್ನ, ಅನಿರುದ್ಧ, ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ ಕೇಶವಾದಿ ಹನ್ನೆರಡು ರೂಪಗಳು.

ಕೇಶವಾದಿ ಇಪ್ಪತ್ತನಾಲ್ಕು ರೂಪಗಳು.

ಮತ್ಸ್ಯಾದಿ ಹತ್ತು ರೂಪಗಳು.

ಕ್ರುದ್ಧೋಲ್ಕಾದಿ ಐದು ರೂಪಗಳು.

ಅನ್ನಮಯಾದಿ ಐದು ರೂಪಗಳು.

ಅಜ ಆನಂದಾದಿ ಐವತ್ತು ರೂಪಗಳು.

ನರನಾರಾಯಣಾದಿ ನೂರು ರೂಪಗಳು.

ವಿಶ್ವಾದಿ ಸಹಸ್ರ ರೂಪಗಳು.

ಪರಾದಿ ಬಹುರೂಪಗಳು.

ಅಜಿತಾದಿ ಅನಂತ ರೂಪಗಳು.

ಬೃಹತೀನಾಮಕ ಎಪ್ಪತ್ತೆರಡುಸಾವಿರರೂಪಗಳು.

ಗಾಯತ್ರೀ, ಭೂತ, ವಾಕ್, ಪೃಥಿವೀ, ಶರೀರ, ಹೃದಯಗಳೆಂಬ ಆರು ರೂಪಗಳು.

ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿರುವ (ಹಾಗೂ ಸರ್ವಜೀವಸ್ಥಿತ) ಮೂರು (ನಾಲ್ಕು) ರೂಪಗಳು.

ಲೋಕ, ವೇದ, ಸಮೀರ, ರಮಾಂತರ್ಗತ ಅನಿರುದ್ಧಾದಿ ನಾಲ್ಕು ರೂಪಗಳು.

ಪ್ರಾಣಾಪಾನಾದಿ ಐದು ರೂಪಗಳು.

ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ ಅನುಗ್ರಹಾ ಎಂಬ ಒಂಬತ್ತು ರೂಪಗಳು.

ಮೋಚಿಕಾ, ಸೂಕ್ಷ್ಮಾ, ಸೂಕ್ಷ್ಮಾಮೃತಾ, ಜ್ಞಾನಾಮೃತಾ, ಧ್ಯಾಯಂತೀ, ವ್ಯಾಪಿನೀ ವ್ಯೋಮರೂಪಿಣೀ, ಅನಂತಾ, ಎಂಬ ಎಂಟು ರೂಪಗಳು.

ಅಣಿಮಾದಿಗಳೆಂಬ ಎಂಟು ರೂಪಗಳು.

ಹಂಸ, ಶುಚಿಷತ್, ವಸು, ಅಂತರಿಕ್ಷಸತ್, ಹೋತಾ, ವೇದಿಷತ್, ಅತಿಥಿ, ದುರೋಣಸತ್, ನೃಷತ್, ವರಸತ್, ಋತಸತ್, ವ್ಯೋಮಸತ್, ಅಬ್ಜಾ, ಗೋಜಾ, ಋತಜಾ, ಅದ್ರಿಜಾ, ಋತಂ, ಬೃಹತ್ ಎಂಬ ಹದಿನೆಂಟು ರೂಪಗಳು.

(ದ್ಯು, ಪರ್ಜನ್ಯ, ಪೃಥಿವೀ, ಪುರುಷ, ಸ್ತ್ರೀ ಎಂಬಲ್ಲಿ ನಡೆಯುವ) ಐದು ಕ್ರತು(ಯಜ್ಞ)ಗಳಲ್ಲಿರುವ ಮೂವತ್ತು ರೂಪಗಳು.

ಸರ್ವಭಕ್ಷಕ ಅದಿತಿ ರೂಪ.

ಸಪ್ತಾನ್ನಜನಕ ಅಕ್ಷಿತಿ ರೂಪ.

ಅಲ್ಲದೇ ನಾರಾಯಣ, ಹರಿ, ಕೃಷ್ಣ ತಾಪಸಮನು, ಯಜ್ಞ, ಧನ್ವಂತರಿ, ಹಂಸ, ದತ್ತಾತ್ರೇಯ, ಕಪಿಲ, ಮಹಿದಾಸ,

ನಾರಯಣೀ, ಮೋಹಿನೀ, ಹಯಗ್ರೀವ, ವೇದವ್ಯಾಸ, ಉಪೇಂದ್ರ, ಅಜಿತ, ಶ್ರೀಕರ, ತ್ರಿವಿಕ್ರಮ, ಶಿಂಶುಮಾರ, ಸನತ್ಕುಮಾರ, ವೈಶ್ವಾನರ, ವಾಮನಿ, ಭಾಮನಿ, ಅರ್ಧನಾರೀನಾರಾಯಣ,

ಮೂರು ಶಿರಸ್ಸುಗಳಲ್ಲಿ ಮೂರು ಧಾಮಗಳನ್ನು ಹೊತ್ತ ತ್ರಿಮೂರ್ಧಾ, ಪದ್ಮನಾಭ, ಬ್ರಹ್ಮಾಂಡದ ಒಳಗೆ ವ್ಯಾಪಿಸಿದ ವಿರಾಟ್, ಬ್ರಹ್ಮಾಂಡದಲ್ಲಿ ವ್ಯಾಪಿಸಿದ ವಿಷ್ಣು ಬ್ರಹ್ಮಶಿವರಲ್ಲಿರುವ ಬ್ರಹ್ಮಶಿವನಾಮಕ.

ಅಗ್ನಿದೇವತೆಯಲ್ಲಿ ಅಗ್ನಿನಾಮಕನಾದ ಭಗವಂತನಿರುವ. ಇದು ಒಂದು ಅಗ್ನಿನಾಮಕರೂಪ. ಇದಲ್ಲದೆ, ಭಗವಂತನಿಗೆ ಅಗ್ನಿನಾಮಕವಾದ ಅನಂತರೂಪಗಳಿವೆ. ಅವೆಲ್ಲ ಅಗ್ನಿದೇವತೆಯಲ್ಲಿ ಸನ್ನಿಹಿತವಾದವುಗಳಲ್ಲ.

ಹೀಗೆ ಅಗ್ನ್ಯಂತರ್ಗತ ಒಂದು ಮತ್ತು ಅಗ್ನ್ಯನಂತರ್ಗತವಾದ ಅನಂತ ಅಗ್ನಿನಾಮಕ ಭಗವದ್ರೂಪಗಳಿವೆ.

ಇದೇ ತೆರವಾಗಿ ರಮಾ, ಬ್ರಹ್ಮ ರುದ್ರ ಮುಂತಾದವುಗಳ ವಿಷಯದಲ್ಲೂ ತಿಳಿಯಬೇಕು.

ದೇವರಿಗೆ ರಾಮ, ಕೃಷ್ಣ ವೇದವ್ಯಾಸ ಎಂಬ ರೂಪಗಳಂತೆ ಜ್ಞಾನ, ಆನಂದ, ಬಲ ಎಂಬ ಹೆಸರಿನ ರೂಪಗಳೂ ಇವೆ.

ಅಂತೆಯೇ ಸೃಜನ, ಪಾಲನ, ಹನನ ಎಂಬ ಹೆಸರಿನ ರೂಪಗಳೂ ಇವೆ.

ರಾಮ ಕೃಷ್ಣಾದಿಗಳಿಗೆ ದ್ರವ್ಯಾತ್ಮಕವೆಂತಲೂ, ಜ್ಞಾನ ಆನಂದರೂಪಗಳಿಗೆ ಗುಣಾತ್ಮಕರೂಪಗಳೆಂತಲೂ, ಸೃಜನ ಪಾಲನಾದಿಗಳಿಗೆ ಕ್ರಿಯಾತ್ಮಕವೆಂತಲೂ ಹೆಸರಿಸಲಹುದು.

ಹೀಗೆ ಆನಂದ, ಜ್ಞಾನ, ಬಲ, ಧೃತಿ, ಶೌರ್ಯ, ಧೈರ್ಯ ಸಾಹಸ, ಪರಾಕ್ರಮ, ವೀರ್ಯ, ತೇಜಸ್ಸು, ದಯಾ, ಕ್ಷಮಾ, ಸಹಸ್, ಕಾಂತಿ, ಸೌಂದರ್ಯ, ಗಾಂಭೀರ್ಯ, ಔದಾರ್ಯ, ವೈರಾಗ್ಯ, ಉತ್ಸಾಹ, ಲೀಲಾ, ಪ್ರಾಗಲ್ಭ್ಯ, ಅಣಿಮಾ, ಮಹಿಮಾ, ವ್ಯಾಪ್ತಿ, ಸ್ವಾತಂತ್ರ್ಯ ಎಂಬ ಅನಂತ ಗುಣಾತ್ಮಕರೂಪಗಳು ಇವೆ.

ಹಾಗೇಯೇ ಸೃಜನ, ಪಾಲನ, ಹನನ, ನಿಯಮನ, ಬಂಧನ, ಉತ್ಸರ್ಜನ, ನಿಗ್ರಹಣ, ಮೋಚನ ಎಂಬ ಅನಂತ ಕ್ರಿಯಾತ್ಮಕರೂಪಗಳೂ ಇವೆ.

ಇದಲ್ಲದೆ, ರಾಮನಿಗೆ ಕೃಷ್ಣ ವೇದವ್ಯಾಸ, ರಾಮ, ಕಪಿಲ ಮುಂತಾದ ಅನಂತರೂಪಗಳಿವೆ. ಅಂದರೆ ರಾಮಕೃಷ್ಣ ರಾಮವೇದವ್ಯಾಸ, ರಾಮರಾಮ, ರಾಮಕಪಿಲ ಎಂದು ಆ ರೂಪಗಳಿಗೆ ಹೆಸರು.

ಇವುಗಳು ರಾಮನಿಂದ ಹೊರಹೊಮ್ಮಿದ ರೂಪಗಳಾದುದರಿಂದ ರಾಮೋದ್ಭೂತ ಕಪಿಲ ವೇದವ್ಯಾಸ ಎಂಬುದಾಗಿ ಕರೆಯಬಹುದು.

ಈ ರಾಮಕಪಿಲನಿಗೆ ಕೇಶವನಾರಾಯಣಾದಿ ರೂಪಗಳಿವೆ. ಹೀಗೆ ಅನಂತ ರೂಪಗಳಾಗುವವು.

ಅಂತೆಯೇ ರಾಮನಿಗೆ ಜ್ಞಾನ, ಆನಂದ, ಸೃಜನ ಪಾಲನವೆಂಬ ರೂಪಗಳು.

ಆ ರಾಮಜ್ಞಾನನಿಗೆ ಆನಂದಾದಿ ಕೇಶವಾದಿ ರೂಪಗಳು. ಅವುಗಳೂ ಅನಂತವೇ.

ಇದೇ ತೆರನಾಗಿ ಜ್ಞಾನನಿಗೆ ಜ್ಞಾನ, ಆನಂದ, ಸ್ಪದನ, ಪಾಲನ ಗೋವಿಂದ, ಕೇಶವ ಮುಂತಾದ ರೂಪಗಳು. ಅಂದರೆ ಜ್ಞಾನಜ್ಞಾನ, ಜ್ಞಾನಗೋವಿಂದ, ಜ್ಞಾನಪಾಲನ. ಇವೂ ಅನಂತವೇ.

ಇವುಗಳಲ್ಲದೆ ಇನ್ನನೇಕ ಬಗೆಯ ರೂಪ ಮಹಿಮೆಗಳನ್ನು ಸರ್ವಮೂಲಾದಿ ಗ್ರಂಥಗಳಲ್ಲಿ ನಾವು ಕಾಣುತ್ತೇವೆ. ಅದರಲ್ಲಿಯ ಕೆಲವನ್ನು ಮಾತ್ರ ಇಲ್ಲಿ ಸಂಗ್ರಹಿಸೋಣ.

ಮನುಷ್ಯನ ದೇಹದ ಮಜ್ಜಾಗಳಲ್ಲಿ ಇರುವ ಒಂದು ಸಾವಿರದ ಎಂಬತ್ತು ರೂಪಗಳು.

ಅಸ್ಥಿಗಳಲ್ಲಿರುವ ಮೂರುನೂರ ಅರವತ್ತು ರೂಪಗಳು.

ಪೂರ್ವವರ್ಣ ಉತ್ತರವರ್ಣ, ಸಂಧಿ, ಸಂಧಾನನಿಯಾಮಕ ತದ್ವಾಚ್ಯ, ಲೋಕ ಜ್ಯೋತಿ ವಿದ್ಯಾ ಪ್ರಜಾ ದೇಹ ಎಂಬ ಐದು ಅಧಿಷ್ಠಾನಗಳಲ್ಲಿರುವ ನಾರಾಯಣಾದಿಗಳ ವಾಸುದೇವಾದಿ ಇಪ್ಪತ್ತು ರೂಪಗಳು.

ಅಥವಾ, ಪೂರ್ವವರ್ಣ ಉತ್ತರವರ್ಣ, ಸಂಧಿ ನಿಯಮಾಕರಾದ ತದ್ವಾಚ್ಯರಾದ ವರಾಹ, ವಾಮನ ನರಸಿಂಹ ಅಥವಾ ವರಾಹ, ವಾಮನ, ವೇದವ್ಯಾಸರೂಪಗಳು.

ಸಂಹಿತೆಗೆ ನಿರ್ಭುಜ ಎಂದು ಹೆಸರು. ಪದಪಾಠಕ್ಕೆ ಪ್ರತೃಣ್ಣ ಎಂದು ಹೆಸರು. ಇವುಗಳಿಗೂ ಹಾಗೂ ಕ್ರಮಪಾಠಕ್ಕೂ ನಿಯಾಮಕನಾದ ಪೃಥಿವೀ ಸ್ವರ್ಗ ಅಂತರಿಕ್ಷಗಳಲ್ಲಿರುವ ವರಾಹ ವಾಮನ ನರಸಿಂಹರೂಪಗಳು.

ಪ್ರಸ್ತಾವ, ಉದ್ಗೀಥ, ಪ್ರತಿಹಾರ, ಉಪದ್ರವ, ನಿಧನ ಎಂಬ ಐದು ಸಾಮಗಳಿಂದ -ಆದಿ ಹಿಂಕಾರ ಸಹಿತ ಏಳು ಸಾಮಗಳಿಂದ- ಪ್ರತಿಪಾದ್ಯವಾದ ನಾರಾಯಣಾದಿ ಐದು -ವರಾಹನರಸಿಂಹಸಹಿತ ಏಳು- ರೂಪಗಳು.

ಸಾಮಗಾನದಲ್ಲಿ ಬರುವ 'ಹಾವ್ರೂಹಾ' ಮುಂತಾದ ಕೋಟಿ ಕೋಟಿ ಸ್ತೋಭಾಕ್ಷರಗಳಿಂದ ಪ್ರತಿಪಾದ್ಯವಾದ ಕೋಟಿ ಕೋಟಿ ರೂಪಗಳು.

ಐದುವಿಧ ಸ್ತೋಮ (ಮಂತ್ರಗಳ ಗುಂಪು) ಪ್ರತಿಪಾದ್ಯ ಅನಿರುದ್ಧನ ಅನಿರುದ್ಧಾದಿ ಐದು ರೂಪಗಳು.

ಏಳು ಛಂದಸ್ಸುಗಳಿಗೆ ಆಶ್ರಯವಾದ ಲೋಮ, ತ್ವಕ್, ಮಾಂಸ, ಸ್ನಾಯು, ಅಸ್ಥಿ ಮಜ್ಜಾ ಪ್ರಾಣ ಎಂಬ ರೂಪಗಳು.

ಸತ್ಯ, ವಿಜ್ಞಾನ, ಮತಿ, ಶ್ರದ್ಧಾ, ನಿಷ್ಠಾ, ಕೃತಿ, ಸುಖ, ಭೂಮಾ, ಅಹಂಕಾರ, ಆತ್ಮ ಎಂಬ ರೂಪಗಳು.

ಪ್ರಾತಃಸವನ, ಮಾಧ್ಯಂದಿನಸವನ, ಸಾಯಂಸವನಗಳಲ್ಲಿ ಬರಬಹುದಾದ ಯಜಮಾನನ ರೋಗಗಳನ್ನು ಪರಿಹರಿಸುವ ವಸು ರುದ್ರ ಆದಿತ್ಯಾಂತರ್ಗತ ತನ್ನಾಮಕ ಮೂರು ರೂಪಗಳು.

ಆದಿತ್ಯಸ್ಥ ಮಧುನಾಮಕ ರೂಪ.

ದೇವರ ನಾಲ್ಕು ಕೈಗಳಿಂದ ವಾಯುದೇವರು ಜನಿಸಿದರು. ಆ ವಾಯುದೇವರಿಗೆ (ಜುಹೂ) ಚಕ್ರವು ಧರ್ಮವನ್ನು, (ಸಹಮಾನ) ಶಂಖವು ಜ್ಞಾನವನ್ನು, (ರಾಷ್ಟ್ರಿ)

ಗದೆಯು ವೈರಾಗ್ಯವನ್ನು, (ಸುಭೂತಾ) ಪದ್ಮವು ಐಶ್ವರ್ಯವನ್ನು ದಯಪಾಲಿಸಿವೆ. ಹೀಗೆ ವಾಯುದೇವರಲ್ಲಿ ಧರ್ಮ, ವಿಜ್ಞಾನ, ವೈರಾಗ್ಯ, ಐಶ್ವರ್ಯಗಳನ್ನು ತುಂಬಿರ ಚಕ್ರಾದಿಗಳನ್ನು ಧರಿಸುವ ಬಾಹುಗಳುಳ್ಳ ರೂಪ.

ಈ ರೀತಿಯಲ್ಲಿ ಶ್ರೀಮದಾನಂದತೀರ್ಥರು ಭಕ್ತಾನುಗ್ರಹದಿಂದ ನಿರೂಪಿಸಿದ ರೂಪಗುಣಕ್ರಿಯೆಗಳನ್ನು ಸಾಧ್ಯವಿದ್ದಷ್ಟು ಹೆಚ್ಚು ಸ್ಪಷ್ಟವಾಗಿ ಬಿಡಿ ಬಿಡಿಯಾಗಿ ನೆನದು, ಆ ಎಲ್ಲ ರೂಪಗಳಿಂದ ಅಭಿನ್ನನಾದ ಭಗವಂತನೇ,

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಪದ್ಮನಾಭತೀರ್ಥ ಜಯತೀರ್ಥ ಮುಂತಾದ ಸಮಸ್ತ ಯತಿವರೇಣ್ಯರ, ತ್ರಿವಿಕ್ರಮಪಂಡಿತಾಚಾರ್ಯ ನಾರಾಯಣಪಂಡಿತಾಚಾರ್ಯ ಯಾದವಾರ್ಯ ಮುಂತಾದ ಸಮಸ್ತ ಜ್ಞಾನಿವರೇಣ್ಯರ ಹಾಗೂ ಪುರಂದರ ವಿಜಯದಾಸಾದಿ ದಾಸವರೇಣ್ಯರ ಬಿಂಬರೂಪನಾಗಿರುವ.

ಅವರೆಲ್ಲರಿಗೆ ಅವರವರ ಯೋಗ್ಯತಾನುಸಾರವಾಗಿ ಗುಣಗಳನ್ನು ಕೊಟ್ಟು ಅವರಿಂದ ಅಸಂಖ್ಯ ಕ್ರಿಯೆಗಳನ್ನು ಮಾಡಿಸುವನು.

ಇದೇ ದೇವ ನಮ್ಮ ಪರಮಗುರುಗಳಲ್ಲಿ ಮಹಿಮೆಗಳನ್ನು ತೋರಿ ಅಸಾಧಾರಣ ಕಾರ್ಯವನ್ನು ಮಾಡಿಸಿದ ಬಿಂಬರೂಪನಾಗಿರುವ.

ಆ ದೇವನೇ ನಮ್ಮ ಸ್ವರೂಪೋದ್ಧಾರಕ ಗುರುಗಳಲ್ಲಿರುವನು.

ಅವನೇ ನಮಗೆ ನಮ್ಮ ಗುರುಗಳ ಸಮಾಗಮವನ್ನು ಮಾಡಿಸಿ, ಅವರಿಂದ ಉಪದೇಶಗೈಸಿ, ಅವರ ಆದೇಶಗಳನ್ನು ಕಿಂಚಿತ್ತಾದರೂ ಬದುಕಿನಲ್ಲಿ ತರುವಂತೆ ಮಾಡಿ, ಭಕ್ತಿಬೀಜವನ್ನಂಕುರಗೊಳಿಸಿ, ಅದರಿಂದ ಜ್ಞಾನವನ್ನು ಬೆಳೆಸಿ, ತಾನೇ ತುಷ್ಟನಾಗಿ ಕಿಂಚಿದಧಿಕ ಶ್ರವಣ, ಮನನ, ನಿದಿಧ್ಯಾಸನಗಳಿಗಾಗಿ ನನ್ನನ್ನು ಅನುಗ್ರಹಿಸಿದ್ದಾನೆ.

ಹೀಗೆ ಮೂಲರೂಪ, ಅವತಾರ, ವಿಭೂತಿ, ರಮಾದೇವಿಯಲ್ಲಿರುವ, ಸಮಸ್ತ ಮುಕ್ತಾಮುಕ್ತಜೀವರಲ್ಲಿ, ದೇಶ, ಕಾಲ, ಶಬ್ದ, ಪ್ರಕೃತಿ ಮುಂತಾದವುಗಳಲ್ಲಿ ಸಮಸ್ತ ಯತಿವರೇಣ್ಯ, ಜ್ಞಾನಿವರೇಣ್ಯ, ದಾಸವರೇಣ್ಯರಲ್ಲಿ ನಮ್ಮ ಪರಮಗುರುಗಳಲ್ಲಿ ನಮ್ಮ ಸ್ವರೂಪೋದ್ಧಾರಕ ಗುರುಗಳಲ್ಲಿ ಇರುವ ಅಂತರ್ಯಾಮಿ, ಬಿಂಬರೂಪನಿಂದ ಅಭಿನ್ನನಾಗಿರುವನು ನನ್ನ ಬಿಂಬರೂಪ.

ಇಂಥ, ನಿರವಧಿಕಾನಂತಶಕ್ತಿಶಾಲಿ, ಅಂತೆಯೇ ನಿರವಧಿಕಾನಂತ ಸ್ವಾತಂತ್ರ್ಯಪೂರ್ಣವೂ, ಅನಂತದೇಶಕಾಲವ್ಯಾಪ್ತವೂ, ಆದುದರಿಂದಲೇ ದೇಶ ಕಾಲ ವಸ್ತು ಸ್ವಭಾವಗಳಿಂದ ಉಂಟಾಗಬಹುದಾದ ವ್ಯವಧಾನಶೂನ್ಯವೂ ಆದ ಭಗವಂತನ ನಿರವಧಿಕಾನಂತಾನಂತ ರೂಪಗಳು -ಸ್ವಭಾವತಃ ತಾವು ಇರುವ ದೇಶಕಾಲಗಳಲ್ಲಿ ಸನ್ನಿಹಿತವಾಗಿದ್ದೇ- ತಮ್ಮ ಅಚಿಂತ್ಯಾದ್ಭುತಶಕ್ತಿಯಿಂದ ಈ ಪ್ರತಿಮೆಯಲ್ಲಿರುವ ರೂಪದೊಡನೆ ಅಭಿನ್ನವಾಗಿದ್ದು ಪ್ರತಿಷ್ಠಿತವಾಗಲಿ ಎಂದು ಪ್ರಾರ್ಥಿಸಬೇಕು.

ಪಂಚಾತ್ಮಕಃ ಸ ಭಗವಾನ್ ದ್ವಿಷಡಾತ್ಮಕೋಽಭೂತ್
ಪಂಚದ್ವಯೀ ಶತಸಹಸ್ರಪರೋಽಮಿತಶ್ಚ
ಏಕಃ ಸಮೋಽಪ್ಯಖಿಲದೋಷಸಮುಜ್ಝಿತೋಽಪಿ
ಸರ್ವತ್ರ ಪೂರ್ಣಗುಣಕೋಽಪಿ ಬಹೂಪಮೋಽಭೂತ್ ।

ನಮೋಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟಿಯುಗಧಾರಿಣೇ ನಮಃ ।

ಭಕ್ತನ ಭಕ್ತಿಪೂರ್ವಕ ಆಗ್ರಹದ ಪ್ರಾರ್ಥನೆಗೆ ಮನಕರಗಿದ ದಯಾಘನ ಸ್ವಾಮಿ ನಾವು ಪೂಜಿಸುವ ಪ್ರತಿಮೆಯಲ್ಲಿ ಸನ್ನಿಹಿತನಾಗುವ; ಸಂದೇಹವಿಲ್ಲ.

ಅಭಿಷೇಕವಿಧಿ

ಇಷ್ಟಾದ ಬಳಿಕ ಭಗವಂತ ಧರಿಸಿದ ಚಕ್ರಾದಿ ಆಯುಧಗಳಿಗೆ ಹಾಗೂ ಆಭರಣಗಳಿಗೆ ವಂದಿಸಿ, ಅದನ್ನು ಕೆಳಗಿಳಿಸಬೇಕು.

ನಂತರ 'ಭೋ ಸ್ವಾಮಿನ್! ಸ್ನಾನಕ್ಕಾಗಿ ಮಜ್ಜನಾಲಯಕ್ಕೆ ಬಾ' ಎಂದು ಬಿನ್ನೈಸಿ '**ಇದಂ ವಿಷ್ಣುರ್ವಿಚಕ್ರಮೇ...**' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರದಿಂದ ಚಿನ್ನದ ಪಾದುಕೆಗಳನ್ನು ಒಪ್ಪಿಸಬೇಕು.

ಛತ್ರಚಾಮರಾದಿ ವೈಭವಗಳಿಂದ ಕೈಹಿಡಿದು ಕರೆತರಬೇಕು. '**ಭದ್ರಂ ಕರ್ಣೇಭಿಃ...**' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರದಿಂದ ಸ್ನಾನಪೀಠದಲ್ಲಿ ಕುಳ್ಳಿರಿಸಬೇಕು.

ಪುನಃ ಆವಾಹನಾದಿ ಆರು ಮುದ್ರೆಗಳನ್ನು ತೋರಿಸಬೇಕು. ಮೃತ್ತಿಕಾಶೌಚ (ಮೃತ್ತಿಕೆಯಿಂದ ಕೈಕಾಲು ತೊಳೆಯುವದು), ಗಂಡೂಷ (ನೀರಿನಿಂದ ಬಾಯಿ ಮುಕ್ಕಳಿಸುವದು), ದಂತಧಾವನ (ಹಲ್ಲು ಉಜ್ಜುವದು) ಹಾಗೂ ಮುಖಪ್ರಕ್ಷಾಲನೆ (ಮುಖ ತೊಳೆಯುವದು)ಗಳಿಗಾಗಿ ನಾರಾಯಣಮಂತ್ರದಿಂದ ಜಲವನ್ನು ಸಮರ್ಪಿಸಬೇಕು.

ವಾಯುದೇವರ ಕೈಯಿಂದ ಛತ್ರ, ಚಾಮರ, ದರ್ಪಣ, ಪೀಠಗಳನ್ನು ಕೊಡಿಸುವದಕ್ಕಾಗಿ ಪ್ರತ್ಯೇಕವಾಗಿ ನಾರಾಯಣಮಂತ್ರದಿಂದ ತುಲಸಿಯನ್ನಾಗಲೀ, ಜಲವನ್ನಾಗಲೀ ಸಮರ್ಪಿಸಬೇಕು.

ಹಾಗೆಯೇ ರಮಾದೇವಿಯ ಕೈಯಿಂದ ಕೇಶಸಂಸ್ಕಾರ (ಕೂದಲನ್ನು ಬಾಚುವದು), ಅಂಗಮರ್ದನ (ಎಣ್ಣೆ ಹಚ್ಚಿ ಮೈ ಕೈಗಳನ್ನು ಒತ್ತುವದು) ಸುಗಂಧ ತೈಲ ಹಾಗೂ ಕಸ್ತೂರಿ ಮುಂತಾದವುಗಳ ಕಲ್ಕ (ಎಣ್ಣೆ ಹೋಗಿಸುವದಕ್ಕೆ ಬೇಕಾದ ಪುಡಿ) ಇವುಗಳಿಂದ ಅಭ್ಯಂಗ, ಚಿನ್ನದ ಪಾತ್ರೆಯಲ್ಲಿ ಉಷ್ಣೋದಕಸ್ನಾನ ಇವುಗಳಿಗಾಗಿ ತುಲಸೀದಲಗಳನ್ನು ಸಮರ್ಪಿಸಬೇಕು.

ಅರ್ಘ್ಯ ಲಕ್ಷ್ಮೀ ಹಸ್ತದಿಂದ ಮೂಲಮಂತ್ರ '**ಆಪೋಹಿಷ್ಠಾ...**',
ಪಾದ್ಯ ಸರಸ್ವತೀ ಹಸ್ತದಿಂದ ಮೂಲಮಂತ್ರ '**ಅಸ್ಮಿನ್ ರಾಷ್ಟ್ರೇ...**',
ಆಚಮನ ರತಿಯ ಕೈಗಳಿಂದ ಮೂಲಮಂತ್ರ '**ಶಂನೋ ದೇವೀಃ...**',
ಮಧುಪರ್ಕ ಬ್ರಹ್ಮನಿಂದ ಮೂಲಮಂತ್ರ '**ಮಧುವಾತಾ...**',
ಪುನರಾಚಮನ ಶಾಂತಿಯಿಂದ ಮೂಲಮಂತ್ರ '**ಶಂನೋ ದೇವೀಃ...**',
ಸ್ನಾನ ವರುಣನಿಂದ ಮೂಲಮಂತ್ರದಿಂದ ಸಮರ್ಪಿಸಬೇಕು.
'**ಅಸ್ಮಿನ್ ರಾಷ್ಟ್ರೇ...**', (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ)

ಪಂಚಾಮೃತಾಭಿಷೇಕ

ಬಳಿಕ ಹಾಲು, ಮೊಸರು, ತುಪ್ಪ, ಜೇನು, ಶರ್ಕರ, ಇವುಗಳ ಅಭಿಷೇಕಗಳನ್ನು ಮಾಡಬೇಕು.

ನೀರಿನ ಅಭಿಷೇಕವನ್ನು ಮಾಡಿದಾಗ ಭಗವಂತ ಹತ್ತು ಅಪರಾಧಗಳನ್ನು ಕ್ಷಮಿಸುತ್ತಾನೆ.

ಕ್ಷೀರಾಭಿಷೇಕದಿಂದ ನೂರು ಅಪರಾಧಗಳನ್ನು, ಮೊಸರಿನ ಅಭಿಷೇಕದಿಂದ ಸಾವಿರ, ತುಪ್ಪದಿಂದ ಹತ್ತುಸಾವಿರ, ಜೇನಿನಿಂದ ಲಕ್ಷ ಕಬ್ಬಿನಹಾಲಿನಿಂದ ಹತ್ತು ಲಕ್ಷ ತೆಂಗಿನ ನೀರಿನಿಂದ ಕೋಟಿ, ಸುಗಂಧ ಸ್ವಾದೂದಕದಿಂದ ಅನಂತ ಅಪರಾಧಗಳನ್ನು ಕ್ಷಮಿಸುವ ಎಂದು ಶಾಸ್ತ್ರವಚನ.

ಪ್ರತಿಯೊಂದು ಅಭಿಷೇಕವಾದ ಮೇಲೆ ಶುದ್ಧೋದಕದಿಂದ ಅಭಿಷೇಕ ಮಾಡಿ, ವಸ್ತ್ರ ಆಭರಣ, ಯಜ್ಞೋಪವೀತ ಆಸನ, ಗಂಧ, ಪುಷ್ಪ, ಧೂಪ, ದೀಪ, ಫಲ ನೈವೇದ್ಯ, ನಮಸ್ಕಾರಗಳೆಂಬ ಹತ್ತು ಉಪಚಾರಗಳನ್ನು ಸಮರ್ಪಿಸಬೇಕು.

ಇದರ ಜೊತೆಗೆ ಅನುಸಂಧಾನ. ಭಗವಂತನಿಗೆ ನಾವು ಎರೆಯುವ ಹಾಲು ಅಪರೂಪವಲ್ಲ. ನಾವು ಕೊಡುವ ಹಾಲಿಗಾಗಿ ಕಾದು ಕೂತಿರುವ ಎಂದು ತಿಳಿಯುವ ಅಗತ್ಯವಿಲ್ಲ. ಈ ಹಾಲು ಎರೆದು ನಾವು ಅವನಿಗೆ ಬಹಳ ದೊಡ್ಡ ಉಪಕಾರವನ್ನೂ ಮಾಡುತ್ತ ಇಲ್ಲ.

ಏಕೆಂದರೆ ಹಾಲುಗಡಲಿನಲ್ಲಿ ಎಂದೆಂದಿಗೂ ವಿಹರಿಸುವವನಾತ. ಮೇಲಾಗಿ ನಿತ್ಯರಲ್ಲೂ ಆಪ್ತಕಾಮ. ಆದರೂ ನಾವು ಸಲ್ಲಿಸುವ ಈ ಪದಾರ್ಥಗಳನ್ನು ಪರಮಸ್ನೇಹದಿಂದ ಸ್ವೀಕರಿಸುತ್ತಾನೆ. ಇದೇ ನಮ್ಮ ಮಹಾಭಾಗ್ಯವೆಂದು ತಿಳಿಯಬೇಕು.

ಅಲ್ಲದೇ- ಹಸು ತಿನ್ನುವ ನಾನಾ ಬಗೆಯ ತೊಪ್ಪಲು, ಹಾಗೂ ಕಾಳು ಕಡಿಗಳೆಲ್ಲಿ? ಅದರಿಂದ ನಿಷ್ಪನ್ನವಾಗುವ ಪೌಷ್ಟಿಕ ಹಾಲೆಲ್ಲಿ? ಇದೆಷ್ಟು ಅದ್ಭುತ! ಇದಕ್ಕೆಲ್ಲ ಪ್ರಾಣಪತಿ ಪರಮೇಶ್ವರನ ಕೃಪೆಯೇ ಕಾರಣವಲ್ಲವೇ?

ಜೇನಿನ ಬಗೆಗೂ ಹೀಗೆಯೇ. ದುಂಬಿ ಕುಸುಮಪ್ರೇಮಿ. ಹೂವನ್ನು ಹಿಂಡುವದಿಲ್ಲ, ಕೆಡಿಸುವದಿಲ್ಲ, ಬಾಡಿಸುವದೂ ಇಲ್ಲ.

ಆದರೆ ಯಾರ ಕೈಗೂ ಸುಲಭವಾಗಿ ಸಿಗದಷ್ಟು ಸೂಕ್ಷ್ಮವಾಗಿರುವ ಮಕರಂದವನ್ನು ತನ್ನ ನಿರ್ಮಲ ಮುಖದಿಂದ ಹೊರಸೆಳೆಯುತ್ತದೆ. ಜೋಪಾನವಾಗಿ ತನ್ನ ಅಂಗದಲ್ಲಿಡುತ್ತದೆ. ಬಳಿಕ ತಾನು ಕಟ್ಟಿದ ಹುಟ್ಟಿನಲ್ಲಿ ಭದ್ರವಾಗಿ ಕಾದಿರಿಸುತ್ತದೆ.

ಇದು ಎಷ್ಟು ಆಶ್ಚರ್ಯ! ಇದೆಲ್ಲ ದೇವರ ಲೀಲೆಯಲ್ಲವೇ? ಈ ಮೇಲೆ ಹೇಳಿದ ಅನುಸಂಧಾನಗಳನ್ನೆಲ್ಲ ಮನದಲ್ಲಿ ಮಾಡುತ್ತಾ ದೇವರಿಗೆ ಅಭಿಷೇಕಗೈಯಬೇಕು. ಹಾಲಿನಲ್ಲಿ ಹಾಲಿನ ರೂಪದಿಂದ ಮೊಸರಿನಲ್ಲಿ ಮೊಸರಿನ, ಜೇನಿನಲ್ಲಿ ಜೇನಿನ, ತುಪ್ಪದಲ್ಲಿ ತುಪ್ಪದ, ಹಣ್ಣಿನಲ್ಲಿ ಹಣ್ಣಿನ ರೂಪಗಳಿಂದಿರುವ ಭಗವಂತನು -ನಾವು (ನಮ್ಮಂತರ್ಯಾಮಿ) ಆ ಆ ಪದಾರ್ಥಗಳನ್ನು ಅಭಿಷೇಕ ಮಾಡುತ್ತಿರುವಾಗ- ಪ್ರತಿಮೆಯಲ್ಲಿರುವ ದೇವರಿಗೆ ಅಭಿಷೇಕವಾಗಿ ಸುರಿಯುತ್ತಾನೆ. ಇದು ಸ್ವಾಮಿ ಕ್ಷೀರಾದ್ಯಭಿಷೇಕ.

ಶುದ್ಧಾಭಿಷೇಕ

ಇದಾದ ಬಳಿಕ ಶುದ್ಧೋದಕಸ್ನಾನವನ್ನು ಕಲಶಜಲದಿಂದ ತುಂಬಿದ ಶಂಖದಿಂದಲೇ ಮಾಡಿಸಬೇಕು.

ಅಭಿಷೇಕಕಾಲದಲ್ಲಿ ಘಂಟಾನಾದವನ್ನು ತಾನು ಮಾಡಬೇಕು. ಅಥವಾ ಇನ್ನೊಬ್ಬರಿಂದ ಮಾಡಿಸಬೇಕು.

ಆಗ ಪುರುಷಸೂಕ್ತ, ವಿಷ್ಣುಸೂಕ್ತ, ಘರ್ಮಸೂಕ್ತ, ಸಮುದ್ರಸೂಕ್ತ, 'ಅತ್ಯಾಹಾರ್ಷಸೂಕ್ತ', 'ವಿಶ್ವಕರ್ಮಸೂಕ್ತ', ಪವಮಾನ, ಕೊನೆಯ ಪಕ್ಷ 'ಪವಸ್ವ' ಎಂಬ ವರ್ಗತ್ರಯ, 'ಯಇಂದೋ' ಎಂಬ ಒಂದು ವರ್ಗ, 'ಜಿತಂತೇ ಸ್ತೋತ್ರ' 'ಸುವರ್ಣ ಘರ್ಮಾನುವಾಕ', 'ನಾರಾಯಣವರ್ಮ', 'ಬ್ರಹ್ಮಸೂತ್ರ', 'ಅಷ್ಟಮಹಾಮಂತ್ರ' 'ಅಣುಭಾಷ್ಯ'ಗಳನ್ನು ಪಠಿಸಬೇಕು. ಹೀಗೆ ಸ್ನಾನಕುಂಭದಿಂದ ಅಭಿಷೇಕ.

ಬಳಿಕ ಪೂರ್ಣಕುಂಭವನ್ನೇ ಎತ್ತಿ 'ಓಂ ಅಂ ಅಜಾಯ ನಮಃ' ಎಂದು ಮೊದಲು ಮಾಡಿ 'ಓಂ ಶಿಂಶುಮಾರಾಯ ನಮಃ' ಎನ್ನುವದರವರೆಗೆ ಎಲ್ಲ ಕಲಶದೇವತೆಗಳ ನಾಮವನ್ನುಚ್ಚರಿಸಿ ಅಭಿಷೇಕಮಾಡಬೇಕು.

ಕಲಶಗಳಲ್ಲಿರುವ ಅಜಾದಿ ಭಗವದ್ರೂಪಗಳು ಪ್ರತಿಮೆಯಲ್ಲಿರುವ ಬಿಂಬರೂಪದೊಡನೆ ಐಕ್ಯವನ್ನು ಹೊಂದುತ್ತಿರುವರು ಎಂದು ಅನುಸಂಧಾನಿಸಬೇಕು.

ಈ ಹಿಂದೆ ತಿಳಿದಂತೆ ಚಿದ್ಘನ, ಆನಂದಮಯ, ಗುಣಮಯನಾದ ಭಗವಂತ ಪ್ರತಿಮೆಯಲ್ಲಿ ಇರುವ. ಆತನೇ ಅಭಿಷೇಕಜಲದಲ್ಲೂ ಇರುವ.

ಜಡಜಲದಲ್ಲೂ ಅದಕ್ಕಭಿಮಾನಿಗಳಾದ ಗಂಗಾದಿ ದೇವತೆಗಳಲ್ಲೂ ಬುಧ, ವರುಣ, ಮುಖ್ಯಪ್ರಾಣ, ರಮಾದೇವಿಯರಲ್ಲೂ ಜಲರೂಪದಿಂದ ಇರುತಿರುವ.

ನೀರು 'ಅಸ್ತಿ'ಯಾದುದು, ದ್ರವವಾದುದು, ಜಲವಾದುದು ದೇವರಿಂದ. ಇದಕ್ಕೆ ಮೇಲಾಗಿ ನೀರಿನಲ್ಲಿಯ ರಸಾದಿ ಗುಣಗಳಿಗೆ ಕಾರಣನಾದವನೂ ದೇವರು.

ರಸಾದಿಗುಣಗಳು ನೀರಿನಲ್ಲಿಯ ಉಳಿದೆಲ್ಲ ಗುಣಗಳಿಗಿಂತ ಶ್ರೇಷ್ಠ ಗುಣ. ತೃಪ್ತಿಪಡಿಸುವ ಗುಣ. ಅಂತೆಯೇ ಅದನ್ನು ಸಾರಗುಣವೆನ್ನುವರು.

ರಸಾದಿ ಗುಣಗಳು ಶ್ರೇಷ್ಠ, 'ಸಾರ' ವಾಗಿರುವದಕ್ಕೂ ದೇವರೇ ಮೂಲ.

ಇಂಥ ದೇವರು ತನ್ನ ಅಸಂಖ್ಯಗುಣಗಳಿಂದಾಗಿ ಅನಂತಾನಂದಮಯ. ಅಂತೆಯೇ ಆಪ್ತಕಾಮ.

ಕಾರಣ, ನಮ್ಮಿಂದ ಅವನಿಗೇನೂ ಬೇಕಿಲ್ಲ. ಮಾತ್ರವಲ್ಲ, ಸಿರಿ, ವಿಧಿ ಮುಂತಾದ ಯಾರಿಂದಲೂ.

ಆದುದರಿಂದಲೇ ಯಾವ ವ್ಯಕ್ತಿ ಹಾಗೂ ವಸ್ತುವಿನ ಬಗೆಗೂ ಆದರ ಇರುವ ಅಗತ್ಯ ಇಲ್ಲ.

ಹೀಗಿದ್ದರೂ ಜಲದಲ್ಲಿಯ ದೇವರು ಪ್ರತಿಮೆಯಲ್ಲಿಯ ದೇವರನ್ನು ಅರ್ಚಿಸುವನು. ಅಂದರೆ ತನ್ನನ್ನು ತಾವೇ ಪೂಜೆ ಮಾಡಿಕೊಂಬ.

ಈ ಬಗೆಯ ಪೂಜೆ ಮಾಡಿಕೊಳ್ಳಲು ಭಗವಂತ ಪೂರ್ಣ ಸ್ವತಂತ್ರ. ಅವನಿಗೆ ಯಾರ ಹಂಗೂ ಇಲ್ಲ. ಅಂತೆಯೇ ಯಾರೂ ಮಧ್ಯಸ್ಥರಾಗಬೇಕಿಲ್ಲ.

ಆದರೂ ಕರುಣಾಮಯ ಶ್ರೀಹರಿಯು ನನ್ನನ್ನು ಮಧ್ಯಸ್ಥನನ್ನಾಗಿ ಮಾಡಿ -ಅರ್ಥಾತ್ ಸಿರಿ, ವಿಧಿ, ವಾಯುಗಳ ಮುಖಾಂತರ ಸ್ವಾಧೀನ ಕರ್ತೃತ್ವವನ್ನು ನನಗೆ ನೀಡಿ- ಅಭಿಷೇಕ, ಪೂಜಾದಿ ಕರ್ಮಗಳನ್ನು ನನ್ನಿಂದ ಮಾಡಿಸುತಲಿವ್ಯ

ನನಗೆ ಕಿಂಚಿತ್ತಾದರೂ ಸ್ವಾತಂತ್ರ್ಯವಿಲ್ಲದಿರುವಾಗ ತಾನೇ ನನ್ನಿಂದ ಕರ್ಮವನ್ನು ಮಾಡಿಸಿ ಫಲವನ್ನು ದಯಪಾಲಿಸಿದ ಆತ ದಯಾಘನನೇ ಸರಿ, ಇತ್ಯಾದಿಯಾಗಿ ಚಿಂತಿಸಬೇಕು.

ಬಳಿಕ ನಾರಾಯಣ ಮಂತ್ರವನ್ನು ಜಪಿಸುತ್ತಾ ಬಟ್ಟೆಯಿಂದ ಪ್ರತಿಮೆಯನ್ನು ಒರಿಸಬೇಕು.

'ಅಭಿವಸ್ತ್ರಾ...' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರದಿಂದ ಸಂಪುಟದಲ್ಲಿ ವಸ್ತ್ರವನ್ನು ಹಾಸಿ ಶಾಲಿಗ್ರಾಮ, ಚಕ್ರಾಂಕಿತಗಳನ್ನು ಅಲ್ಲಿ ಇಡಬೇಕು.

'ಓ ದೇವ ಅಲಂಕಾರ ಪೀಠವನ್ನು ಕುರಿತು ಆಗಮಿಸು' ಎಂದು ವಿಜ್ಞಾಪಿಸಬೇಕು.

ಪಾದುಕೆಗಳನ್ನು ನೀಡಿ ಛತ್ರಚಾಮರಾದಿ ವೈಭವಗಳಿಂದ ಬರುತ್ತಿರುವ ಭಗವಂತನ ಕೈಹಿಡಿದು ಕರೆತಂದು ಕೂಡಿಸಬೇಕು.

ಸ್ನಾನಾಂಗ ಪಾದ್ಯವನ್ನೂ ಆಚಮನವನ್ನೂ ಅರ್ಪಿಸಬೇಕು.

'ಯುವಂ ವಸ್ತ್ರಾಣಿ...' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರದಿಂದ ಎರಡು ಬಟ್ಟೆಗಳನ್ನು ಸಮರ್ಪಿಸಬೇಕು. ಕೂದಲುಗಳನ್ನು ಬಾಚಬೇಕು.

ವಿಭೂಷಣ- 'ಹಿರಣ್ಯರೂಪಃ...' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರದಿಂದ ಅಡಿಯಿಂದ ಮುಡಿಯವರೆಗಿನ ಅಂಗಾಂಗಗಳಿಗೆ ಆಭರಣಗಳನ್ನು ತೊಡಿಸಬೇಕು.

ಕಾಲ್ಬೆರಳುಗಳಿಗೆ ಉಂಗುರಗಳು, ಕಾಲಿಗೆ ಕಿರುಗೆಜ್ಜೆ

ಸೊಂಟಕ್ಕೆ ಉಡಿದಾರ, ಝುಲಿರೆಂದು ಶಬ್ದಮಾಡುವ ಕಂಚಿ,

ಕೈಬೆರಳುಗಳಿಗೆ ಉಂಗುರ, ಮಣಿಗಂಟಿಗೆ ಕಂಕಣ,

ಅದರ ಹಿಂದೆ ಕಡಗ, ಸ್ವಲ್ಪ ಮೇಲೆ ನಾಗಮುರಿಗೆ,

ಅದಕ್ಕೆ ಮೇಲೆ ತೋಳುಬಂದಿ,

ಬಗೆ ಬಗೆಯ ರತ್ನಗಳಿಂದ ಶೋಭಿಸುವ ವೈಜಯಂತೀ ಮಾಲೆ, ಕೋಟಿಸೂರ್ಯಚಂದ್ರರ ಕಾಂತಿಯಂತೆ ಹೊಳೆಯುವ ಕೌಸ್ತುಭಮಣಿ,

ಯಜ್ಞೋಪವೀತ, ಕಿವಿಗೆ ಮಕರಕುಂಡಲ, ತಲೆಗೆ ಕಿರೀಟ.

ಇವೆಲ್ಲವನ್ನು ನಮ್ಮ ಹೃದಯ ಸಾಮ್ರಾಜ್ಯದ ಅಧಿದೈವನಿಗೆ ಭಕ್ತಿ ಶ್ರದ್ಧೆಗಳಿಂದ ಸಮರ್ಪಿಸಬೇಕು.

ಅನೇಕ ರತ್ನಗಳಿಂದ ಮಾಡಿದ ತುಲಸೀದಲ ಸೇರಿಸಿದ ಮಾಲೆಯೇ ವೈಜಯಂತೀಮಾಲೆ. ಇದಕ್ಕೆ ಸಿರಿ ಅಭಿಮಾನಿನೀ.

ಕೋಟಿಸೂರ್ಯ ಕೋಟಿಚಂದ್ರಮರನ್ನು ಮೀರಿಸುವ ಹೊಳಪಿನ ಕಂಠಮಣಿ ಕೌಸ್ತುಭ. ಇದಕ್ಕೆ ಬ್ರಹ್ಮ ಅಭಿಮಾನಿ.

ಭಗವಂತನಿಗೆ ಭಗವಂತನೇ ಭೂಷಣನಾಗಿರುವ. ಅಂದರೆ ಕಾಲಿನ ಗೆಜ್ಜೆಯಿಂದ ತಲೆಯ ಕಿರೀಟದವರೆಗಿನ ಎಲ್ಲ ಆಭರಣಗಳ ರೂಪದಲ್ಲಿ ತಾನೇ ತನ್ನನ್ನು ಭೂಷಿಸಿರುವ.

ಇದರಂತೆ ಸಿರಿಯು ಶ್ರೀಹರಿಯನ್ನು ಒಡವೆಗಳಾಗಿ ಸಿಂಗರಿಸಿದ್ದಾಳೆ. ಈ ಎರಡು ಬಗೆಯ ಅಲಂಕಾರಗಳಿಗೆ ಹೊರತಾಗಿ ಜಡ ಆಭರಣಗಳೂ ದೇವರಿಗುಂಟು.

ಆ ಆಭರಣಗಳಿಗೆ ರಮಾ ಬ್ರಹ್ಮಾದಿದೇವತೆಗಳು ಅಭಿಮಾನಿ ಗಳಾಗಿರುವರು.

ಇನಿತು ದೇವತಾಸಾರ್ವಭೌಮನಾದ ಸಿರಿಯರಸನಿಗೆ ನಮ್ಮ ಈ ಕಿರು ಅಲಂಕಾರಗಳನ್ನು ಅರ್ಪಿಸಿ ಮೆಚ್ಚಿಸಿ ನಾವು ತೃಪ್ತಿಪಡಬೇಕು.

ಗಂಧ- 'ಭೋ ಸ್ವಾಮಿನ್! ಭೋಗಸಿಂಹಾಸನಕ್ಕೆ ಬಾ' ಎಂದು ಪ್ರಾರ್ಥಿಸಿ ಕರೆತಂದು ಆಸನದಲ್ಲಿ ಕೂರಿಸಬೇಕು. ಆಮೇಲೆ ಅಗರು, ತುಲಸಿಕಾಷ್ಠ, ಕದಂಬ, ದೇವದಾರು, ಬಿಲ್ವ, ಅಗಸ್ತಿ, ಚಂದನ ಕುಂಕುಮಗಳಿಂದ ನಿರ್ಮಿಸಿದ ಗಂಧವನ್ನು ತುಲಸೀದಲಸಹಿತವಾಗಿ ಶಂಖಕ್ಕೆ ಸ್ಪರ್ಶಮಾಡಿಸಿ ದೇವರಿಗೆ ಸಮರ್ಪಿಸಬೇಕು. ಆಗ 'ಗಂಧದ್ವಾರಾಂ.....' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) 'ಶ್ರೀಖಂಡಂ ಚಂದನಂ...' ಎಂಬ ಮಂತ್ರಗಳನ್ನನ್ನಬೇಕು. ಬಳಿಕ ತುಲಸೀ ಅರ್ಚನೆ.

ತುಲಸೀದಲಗಳನ್ನು ಒಂದೊಂದಾಗಿ ಏರಿಸಬೇಕು. ತುಲಸಿ ಅರ್ಚನೆಗೆ ಮಹಾ ಫಲವನ್ನು ಹೇಳಿದ್ದಾರೆ. ಭಗವಂತನ ಸಾಮೀಪ್ಯವೇ ಇದರ ಮಹಾ ಫಲ.

ಅದರಲ್ಲೂ ಒಂದೊಂದು ನಾಮಗಳನ್ನು ಸ್ಮರಿಸುತ್ತ ತುಲಸೀ ಅರ್ಚನೆಯ ಫಲ ಹೇಳಲು ಅಳವಲ್ಲ. ಇಂಥ ಮಹತ್ತರವಾದ ಶ್ರೀಹರಿಪೂಜಾಸಾಧನವಾಗಿದೆ ಶ್ರೀತುಲಸಿ.

ತುಲಸೀ ಸಮರ್ಪಣೆಯಂತೆ ದೂರ್ವಾಂಕುರ, ಬಿಲ್ವ, ಶಮೀ, ಭೃಂಗಾರಕ, ಮಾಲತೀ, ಕುಶ ಮುಂತಾದವುಗಳ ಎಲೆಗಳನ್ನು ಸಮರ್ಪಿಸುವದು ಶಾಸ್ತ್ರಸಿದ್ಧ.

ಸರ್ವಯಜ್ಞಗಳಿಂದ ಲಭಿಸದ ಪುಣ್ಯವನ್ನು ದೂರ್ವಾಂಕುರಗಳಿಂದ ಪೂಜಿಸಿದರೆ ಭಗವಂತ ನೀಡುವ. ಕಾರಣ ದೂರ್ವಾಂಕುರಗಳನ್ನು ಏರಿಸಬೇಕು.

ಬಿಲ್ವಪತ್ರಸಮರ್ಪಿಸಿದವ ಮುಕ್ತಿಯಲ್ಲಿ ಪೂಜಿತನಾಗುವ. ಆದ್ದರಿಂದ ಬಿಲ್ವಪತ್ರವನ್ನು ಸಮರ್ಪಿಸಬೇಕು.

ತಪ್ಪಿಯಾದರೂ ಮಾನವ ಶಮೀಪತ್ರವನ್ನು ದೇವರಿಗರ್ಪಿಸಿದಲ್ಲಿ ಅವನ ಪ್ರಸಾದದಿಂದ ಪರಗತಿಯನ್ನು ಹೊಂದುವದರಲ್ಲಿ ಸಂದೇಹವಿಲ್ಲ.

ಭೃಂಗಾರಕದಿಂದ ಭಗವಂತನನ್ನರ್ಚಿಸಿದವ ಜರಾ ರೋಗಗಳಿಂದ ಮುಕ್ತನಾಗಿ ದೇವರನ್ನು ಹೊಂದುವ.

ತುಲಸೀಪುಷ್ಪಗಳನ್ನು ಸಮರ್ಪಿಸುವಾಗ ಮತ್ಸ್ಯಾದಿ ಹತ್ತು, ಕೇಶವಾದಿ ಇಪ್ಪತ್ನಾಲ್ಕು, ನಾರಾಯಣಾದಿ ನೂರು, ವಿಶ್ವಾದಿಸಹಸ್ರ, ನಾಮಗಳನ್ನು ಬ್ರಹ್ಮಸೂತ್ರಗಳನ್ನು ಪಠಿಸಬೇಕು.

ದೇವರಿಗೆ ಮಾಲಾಸಮರ್ಪಣೆಯಿಂದ ಅನ್ನಲಾಭವಾಗುವದು ನಿಶ್ಚಿತ.

ಇಲ್ಲಿ ಕೆಲ ಅನುಸಂಧಾನಗಳು. ವಿಶ್ವದಲ್ಲಿ ಅನಂತ ಪದಾರ್ಥಗಳು. ಅದರ ಬಗೆಗಳೂ ಅನಂತ. ಅವುಗಳಿಗಿರುವ ಗಂಧವೂ ಅನಂತ. ಗಂಧದ ಜಾತಿಗಳೂ ಅನಂತ.

ಒಂದು ಹೂವಿನಂತೆ ಇನ್ನೊಂದಕ್ಕೆ ಪರಿಮಳವಿಲ್ಲ. ಅಗರು, ತುಲಸಿ, ಕದಂಬ, ಚಂದನ ಮುಂತಾದ ಕಟ್ಟಿಗೆಗಳಿಗೂ, ಸಂಪಿಗೆ, ಮಲ್ಲಿಗೆ, ಕೇದಿಗೆ, ಜಾಜಿ, ಕೇಶರ ಮುಂತಾದ ಹೂಗಳಿಗೂ ತನ್ನದೇ ಆದ ಅಸಾಧಾರಣ ಪರಿಮಳವಿದೆ.

ಈ ಪರಿಮಳವನ್ನು ನಾವು ಕೊಟ್ಟಿಲ್ಲ, ಅದು ಆಯಾ ಹೂಗಳ ಸ್ವಂತ ಆಸ್ತಿಯೂ ಅಲ್ಲ. ಇದಕ್ಕೆಲ್ಲ ದೇವರು ಸ್ವತಂತ್ರ ಕಾರಣ.

ಹೂಗಳಲ್ಲಿ ಚಿನ್ಮಯ ಹೂವಾಗಿ ಅವುಗಳ ಪರಿಮಳಗಳಲ್ಲಿ ಚಿನ್ಮಯಪರಿಮಳನಾಗಿ ಇದ್ದು ನಿಯಮಿಸುತ್ತಲಿರುವ.

ದೇವರಿಗೆ ಅನಂತ ಅನಂತ ಬಗೆಯ ಪರಿಮಳಗಳಿವೆ. ಆ ತನ್ನ ಅನಂತ ಪರಿಮಳಗಳಲ್ಲಿಯ ಒಂದೊಂದನ್ನು ಒಂದೊಂದು ಜಾತಿಯ ಹೂವಿನಲ್ಲಿರಿಸಿ, ತನ್ನ ಪರಿಮಳದಂಥ ಗಂಧವನ್ನು ಆ ಹೂವಿನ ಜಾತಿಗೇ ಕೊಟ್ಟು ಆ ಹೂವಿನ ಸ್ವಭಾವವನ್ನಾಗಿ ಮಾಡಿರುವ.

ಹೀಗಾಗಿ ಇಡಿಯ ವಿಶ್ವದಲ್ಲಿರುವ ಅನಂತ ಗಂಧಗಳ ಮೂಲ ಶ್ರೀಹರಿಯೇ. ಇಷ್ಟೇ ಏನು? ವಿಶ್ವದಲ್ಲಿ ಎಲ್ಲಿಯೂ ಕಾಣಸಿಗದ, ಸಿರಿವಿಧಿಗಳಿಗೂ ಗೋಚರವಾಗದ ಅನಂತಾನಂತಗಂಧರೂಪ 'ಸರ್ವಗಂಧಃ' 'ಪುಣ್ಯೋ ಗಂಧಃ' ಭಗವಂತ.

ಆದರೆ ದೇವರ ಈ ಯಾವ ಗಂಧವೂ ಹೂವಿನ ಗಂಧದಂತಲ್ಲ. ಹೂವಿನ ಗಂಧ ಜಡ, ಚಿನ್ಮಯವಲ್ಲ. ಬೀಜದಿಂದ ಹುಟ್ಟುವದು, ಅನಾದಿಯಲ್ಲ. ಕೆಲಕಾಲದ ಬಳಿಕ ವಿಕಾರಗೊಳ್ಳುವದು, ಅವಿಕಾರಿಯಲ್ಲ. ಮುಂದೆ ನಾಶವಾಗುವದು ಅವಿನಾಶಿಯಲ್ಲ. ಪಂಚಮಹಾಭೂತಗಳಿಂದ ಬಂದಿರುವದು, ಅಪ್ರಾಕೃತವಲ್ಲ. ಕೊನೆಯದಾಗಿ ದೇವರಿಗಧೀನವಾದುದು, ಸ್ವತಂತ್ರವಲ್ಲ.

ಆದರೆ ದೇವರ ಗಂಧ ಚಿನ್ಮಯ, ಜಡವಲ್ಲ; ಅನಾದಿ, ಹುಟ್ಟುವದಲ್ಲ; ಅವಿಕಾರಿ, ಅವಿನಾಶಿ, ಅಪ್ರಾಕೃತ, ಕೊನೆಗೆ ಸ್ವತಂತ್ರ.

ಇದಲ್ಲದೇ ಹೂವಿನ ಪರಿಮಳದ ಕುರಿತಾಗಿ ಒಂದು ಆಶ್ಚರ್ಯ.

ವಿಜ್ಞಾನ 'ಹೇಗೆ?' ಎನ್ನುವ ಪ್ರಶ್ನೆಯನ್ನು ಉತ್ತರಿಸಿದರೂ 'ಹೀಗೇಕೆ?, ಹೀಗೇ ಏಕೆ?' ಎನ್ನುವ ಪ್ರಶ್ನೆಗಳಿಗೆ ಉತ್ತರಿಸುವದಿಲ್ಲ. ಆದುದರಿಂದ ಈ ಆಶ್ಚರ್ಯವನ್ನು ಇಲ್ಲವಾಗಿಸಲು ಸಾಧ್ಯವಿಲ್ಲ.

ಹೂವಿನಲ್ಲಿಯ ಪರಿಮಳ ಮಣ್ಣಿನಲ್ಲಿ, ನೀರಿನಲ್ಲಿ, ಬೇರಿನಲ್ಲಿ, ಮರದಲ್ಲಿ, ಕೊಂಬಿನಲ್ಲಿ, ಎಲೆಯಲ್ಲಿ, ಕಿಂ ಬಹುನಾ ಮೊಗ್ಗೆಯಲ್ಲೂ ಇಲ್ಲ.

ಆದರೆ ಕೇವಲ ಹೂವಿನ ಆಸ್ತಿ, ಹೂವಿನ ಹಿರಿಮೆ.

ಗಿಡ, ಎಲೆ, ಮೊಗ್ಗೆಗಳಲ್ಲೆಲ್ಲೂ ಕಾಣದೇ ಹೂವಿನಲ್ಲಿ ಮಾತ್ರ ಆ ಪರಿಮಳ ಮನೆ ಮಾಡಿರುವದು ಆಶ್ಚರ್ಯ, ದೇವರ ಅಚಿಂತ್ಯ ಮಹಿಮೆ.

ಪ್ರಖರ ವಿಕಟ ಪ್ರಪಂಚದಲ್ಲಿ ಎಲ್ಲೆಲ್ಲೂ ತುಂಬಿರುವ ದೇವರ ನಗೆಯ ರಸವನ್ನು, ಮಂದಹಾಸವಿಲಾಸವನ್ನು ಹೊರಸೂಸಲು ಹೂವೇ ಮಾಧ್ಯಮವೆಂದು ತೋರುತ್ತದೆ. ಅಂತೆಯೇ 'ಪುಷ್ಪಹಾಸಃ' ಎಂದು ಕರೆದರೇ?

ಆಯುಧಗಳ ಪೂಜೆ- ಚಕ್ರಕ್ಕೆ ದುರ್ಗೆ ಅಭಿಮಾನಿದೇವತೆ. ಶಂಖಕ್ಕೆ ಶ್ರೀದೇವಿ, ಗದೆಗೆ ವಾಯು, ಪದ್ಮಕ್ಕೆ ಭೂದೇವಿ, ಖಡ್ಗಕ್ಕೆ ದುರ್ಗೆ, ಧನುಸ್ಸಿಗೆ ಸರಸ್ವತಿ, ಪಂಚಬಾಣಗಳಿಗೆ ಪಂಚ ಪ್ರಾಣರು ಎಂದು ಧೇನಿಸಿ ಆಯುಧಗಳನ್ನು (ಮನಸಾ) ಸಮರ್ಪಿಸಬೇಕು.

ಇದರ ಜೊತೆಗೆ ಕೌಸ್ತುಭಕ್ಕೆ ವಿರಿಂಚ, ವನಮಾಲೆಗೆ ಶ್ರೀದೇವಿ, ಶ್ರೀವತ್ಸಕ್ಕೆ ಶ್ರೀ ಅಭಿಮಾನಿ ದೇವತೆಗಳೆಂದು ತಿಳಿಯಬೇಕು. ಇವರೆಲ್ಲರೆನ್ನು ಪೂಜಿಸಬೇಕು.

ಆಭರಣಗಳ ಕುರಿತಾಗಿ ಹೇಳಿದಂತೆ ಆಯುಧಗಳ ಬಗೆಗೂ ತಿಳಿಯುವದು ಅಗತ್ಯ.

ಭಗವಂತನೇ ಚಕ್ರಾದಿ ಆಯುಧಗಳಾಗಿರುವ. ಅವು ಚಿನ್ಮಯ ಆಯುಧಗಳು.

ಈ ಆಯುಧಗಳಾಗಿರುವ ಭಗವಂತನೇ ಸ್ವತಂತ್ರನಾಗಿ ಶತ್ರುಗಳ ಸಂಹಾರಾದಿಗಳನ್ನು ಮಾಡುವನು. ರಮೆಯೂ ಆಯುಧಗಳಾಗಿರುವಳು. ಅವೂ ಚಿನ್ಮಯ.

ಜಡ ಆಯುಧಗಳೂ ಇವೆ. ಅವುಗಳಲ್ಲಿ ಬೇರೆ ಬೇರೆ ಅಭಿಮಾನಿ ದೇವತೆಗಳಿರುವರು.

ಆವರಣದೇವತಾ-ಪೂಜೆ.

೧) ಮಧ್ಯದಲ್ಲಿರುವ ದೇವರ ಎಡದಲ್ಲಿ ಶ್ರೀದೇವಿ. ಬಲದಲ್ಲಿ ಭೂದೇವಿ.

೨) ಪೂರ್ವ ಕ್ರುದ್ಧೋಲ್ಕ, ದಕ್ಷಿಣ ಮಹೋಲ್ಕ, ಪಶ್ಚಿಮ ವೀರೋಲ್ಕ, ಉತ್ತರ ದ್ಯೂಲ್ಕ.

ಆಗ್ನೇಯ, ನೈರ್ಋತ್ಯ, ವಾಯವ್ಯ, ಈಶಾನ್ಯಗಳೆಂಬ ನಾಲ್ಕೂ ಕೋಣಗಳಲ್ಲಿ ಸಹಸ್ರೋಲ್ಕ.

೩) ಪೂರ್ವ ವಾಸುದೇವ, ಆಗ್ನೇಯ ಮಾಯಾ,

ದಕ್ಷಿಣ ಸಂಕರ್ಷಣ ನೈರ್ಋತ್ಯ ಜಯಾ,

ಪಶ್ಚಿಮ ಪ್ರದ್ಯುಮ್ನ ವಾಯವ್ಯ ಕೃತಿ,

ಉತ್ತರ ಅನಿರುದ್ಧ ಈಶಾನ್ಯ ಶಾಂತಿ

೪) ಪೂರ್ವ ಕೇಶವ ನಾರಾಯಣ, ಆಗ್ನೇಯ ಮಾಧವ,

ದಕ್ಷಿಣ ಗೋವಿಂದ ವಿಷ್ಣು, ನೈಋತ್ಯ ಮಧುಸೂದನ,
ಪಶ್ಚಿಮ ತ್ರಿವಿಕ್ರಮ ವಾಮನ, ವಾಯವ್ಯ ಶ್ರೀಧರ,
ಉತ್ತರ ಹೃಷೀಕೇಶ ಪದ್ಮನಾಭ, ಈಶಾನ್ಯ ದಾಮೋದರ.
೫) ಪೂರ್ವ ಮತ್ಸ್ಯ ಕೂರ್ಮ, ಆಗ್ನೇಯ ವರಾಹ,
ದಕ್ಷಿಣ ನರಸಿಂಹ ವಾಮನ, ನೈಋತ್ಯ ಭಾರ್ಗವ,
ಪಶ್ಚಿಮ ರಾಮ ಕೃಷ್ಣ ವಾಯವ್ಯ ಬುದ್ಧ
ಉತ್ತರ ಕಲ್ಕಿ ವಿಶ್ವರೂಪ, ಈಶಾನ್ಯ ಅನಂತ.
೬) ಪೂರ್ವ ಬ್ರಹ್ಮ ಆಗ್ನೇಯ ಸರಸ್ವತೀ,
ದಕ್ಷಿಣ ವಾಯು ನೈರ್ಋತ್ಯ ಭಾರತೀ,
ಪಶ್ಚಿಮ ಶೇಷ ವಾಯವ್ಯ ವಾರುಣೀ,
ಉತ್ತರ ರುದ್ರ ಈಶಾನ್ಯ ಪಾರ್ವತೀ.
ಎದುರಿನಲ್ಲಿ ಗರುಡ ಸೌಪರ್ಣೀ.
೭) ಪೂರ್ವ ಇಂದ್ರ, ಆಗ್ನೇಯ ಅಗ್ನಿ,
ದಕ್ಷಿಣ ಯಮ, ನೈರ್ಋತ್ಯ ನಿರ್ಋತಿ,
ಪಶ್ಚಿಮ ವರುಣ, ವಾಯವ್ಯ ವಾಯು,
ಉತ್ತರ ಸೋಮ, ಈಶಾನ್ಯ ಈಶಾನ
ಎದುರಿನಲ್ಲಿ ಬ್ರಹ್ಮ ಮತ್ತು ಶೇಷ.

ದೇವತಾ ಮಹಿಮೆ

ದೇವತೆಗಳ ಕುರಿತಾಗಿ ಕೆಲ ಮಹತ್ವದ ಅನುಸಂಧಾನಗಳು. ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ವಿಷ್ಣುವಿನ ಪಾರಮ್ಯವನ್ನು ಸಾರುವ ಅನುಪಮ ವೈಷ್ಣವಾಚಾರ್ಯರು.

ಆಚಾರ್ಯರು ಹೇಳಿರಂತಹ ವಿಷ್ಣುಪಾರಮ್ಯವನ್ನು ಯಾವ ಯಾವ ವೈಷ್ಣವ ಆಚಾರ್ಯರೂ ಹೇಳಿಲ್ಲವೆನ್ನುವುದು ಶಾಸ್ತ್ರಮಗ್ನಮತಿಗಳಿಗೆ ಗೊತ್ತು.

ಆದರೆ ಆಚಾರ್ಯರು ವಿಷ್ಣುವಿನ ಸರ್ವೋತ್ತಮತ್ವವನ್ನು ಸಾರುವ ಭರದಲ್ಲಿಯೋ, ಭಾವೋದ್ವೇಗದಲ್ಲಿಯೋ ಬೇರೆ ಯಾವ ದೇವತೆಯನ್ನೂ ಕಡೆಗಣಿಸಲಿಲ್ಲ.

ತಮ್ಮ ಅನುಯಾಯಿಗಳಿಗೆ ಪರದೇವನ ಹಾಗೂ ದೇವತೆಗಳ ಕುರಿತಾಗಿ ಮಾಡಿದ ಉಪದೇಶಗಳಲ್ಲಿ ಕಾಣುವ ತೂಕ ಪರಮಾದ್ಭುತ.

ತೀರ ಸಣ್ಣ ಸಂಗತಿ, ಅತಿ ಕ್ಷುದ್ರ ಮಾತು ಎಂದು ನಮಗೆ ಅನಿಸಿದುದನ್ನೂ ಆಚಾರ್ಯಪಾದರು ವೇದಾಂತದ ತಾತ್ವಿಕ ಹಿನ್ನಲೆಯಲ್ಲಿ ಗಂಭೀರವಾಗಿ ವಿಮರ್ಶಿಸುತ್ತಾರೆ.

ಅದಕ್ಕೆ ತಕ್ಕುದಾದ ಪರಮ ಸಮಂಜಸ ನಿರ್ಣಯವನ್ನೂ ಕೊಡುತ್ತಾರೆ. ಯಾವ ದೇವತೆಗೂ, ಯಾವ ದೇವತೆಯ ಮಾಹಾತ್ಮ್ಯಕ್ಕೂ ತಿಲಮಾತ್ರವೂ, ಅಲ್ಲ ಅಣುಮಾತ್ರವೂ ಅಪಾಯವಾಗದಂತೆ ಅವರ ಸ್ವರೂಪವನ್ನು ನಿರೂಪಿಸುತ್ತಾರೆ.

ಶ್ರೀಮದಾಚಾರ್ಯರು ಹೀಗೆ ನಿರೂಪಿಸದಿದ್ದಲ್ಲಿ ಯಾವ ದೇವತೆಯೂ -ವೇದಪುರಾಣೇತಿಹಾಸಗಳ ಮೇಲುನೋಟವನ್ನೇ ಹಿಂಬಾಲಿಸಿ ಓದುವ ಮಾನವನ ದೃಷ್ಟಿಯಲ್ಲಿ- ತನ್ನ ದೇವತ್ವವನ್ನು ಕಾದಿರಿಸಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ.

ಆ ಮಟ್ಟಿಗೆ ವೇದಪುರಾಣೇತಿಹಾಸಗಳು ಸಂಕೀರ್ಣ, ಅಪೂರ್ಣ, ಪ್ರಕ್ಷಿಪ್ತ ವ್ಯತ್ಯಸ್ತವಾಗಿ ಉಪಲಬ್ಧವಾಗಿವೆ ಎಂದಭಿಪ್ರಾಯ.

ಶ್ರೀಮದಾಚಾರ್ಯರು ವಿಷ್ಣುಸರ್ವೋತ್ತಮತ್ವವನ್ನು ಸಮರ್ಥಿಸಿ ಉಪದೇಶಿಸುವಲ್ಲಿ, ಎಷ್ಟು ಭಕ್ತಾನುಕಂಪೆಯನ್ನು ತೋರಿದ್ದಾರೆಯೋ ಹೆಚ್ಚು ಕಡಿಮೆ ಅಷ್ಟೇ ಮಟ್ಟದಲ್ಲಿ ಎಲ್ಲ ದೇವತೆಗಳ ತಾರತಮ್ಯವನ್ನು ಸಮರ್ಥಿಸಿ ಉಪದೇಶಿಸುವಲ್ಲೂ ಕಾರುಣ್ಯವನ್ನು ಹರಿಸಿದ್ದಾರೆ ಎಂದರೆ ಬಹಳ ದೊಡ್ಡ ತಪ್ಪಾಗಲಿಕ್ಕಿಲ್ಲ.

ಈ ಬಗೆಯ ತೂಕವನ್ನು ಯಾವ ಗ್ರಂಥಕಾರರಲ್ಲೂ ನಾವು ಕಾಣೆವು.

ಅಸಂಖ್ಯ ಜೀವರು ಅಪ್ಪಟ ನಾಸ್ತಿಕರು. ಆಸ್ತಿಕರಾದ ಭಕ್ತರಲ್ಲೂ ಕೆಲವರು ದೇವತೆಗಳನ್ನೇ ಪೂಜಿಸುತ್ತಾರೆ, ದೇವರನ್ನು ಕೈಬಿಡುತ್ತಾರೆ.

ಇನ್ನು ಕೆಲವರು ದೇವರನ್ನೇ ಮೊರೆ ಹೋಗಿ ಎಲ್ಲ ದೇವತೆಗಳನ್ನೂ ತಮ್ಮ ಆರಾಧನೆಯ ಚೌಕಟ್ಟಿನ ಹೊರಗಡೆ ನೂಕುತ್ತಾರೆ.

ಎರಡೂ ಮಹಾ ಅಪಾಯಕಾರಿ ಎಂದು ಶ್ರೀಮದಾಚಾರ್ಯರ ಸಂದೇಶ.

ಮೊದಲನೆಯವರು ಸರ್ವೋತ್ತಮ ಭಗವಂತನನ್ನೇ ನಂಬದಿದ್ದ ಮೇಲೆ ಸದ್ಗತಿಯನ್ನು ಹೊಂದುವದು ತೀರ ಅಸಾಧ್ಯ.

ಎರಡನೆಯವರೂ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಇದರ ಕಾರಣವಿವರ.

ದೇವತೆಗಳು ಭಕ್ತಿಯೋಗಿಗಳು. ವಿಷ್ಣುಭಕ್ತರಲ್ಲಿ ಸರ್ವೋತ್ತಮರು. ಅವರಿಗೆ ಪರಮಾಣುವಿನಿಂದಾರಂಭಿಸಿ ಬ್ರಹ್ಮಾಂಡ ಹಾಗೂ ಅದರಾಚೆ ಇರುವ -ತಾವು ಅಭಿಮಾನಿಗಳಾಗಿರುವ- ತತ್ತ್ವಗಳವರೆಗೆ ಯಾವುದೂ ಅವರಿಗೆ ಬೇಕಿಲ್ಲ.

ಆಸ್ತಿ, ಅಂತಸ್ತು, ಅಧಿಕಾರ, ಸೌಖ್ಯ, ಸೌಭಾಗ್ಯ, ಸಾಮರ್ಥ್ಯ, ಮಡದಿ ಮಕ್ಕಳು ಅಷ್ಟೇ ಅಲ್ಲ ಮುಕ್ತಿಯೆಂಬ ಪರಮಪದವೂ, ಕಿಂ ಬಹುನಾ ಸ್ವಂತ ಅಸ್ತಿತ್ವವೂ ಅವರಿಗೆ ಬೇಕಿಲ್ಲ.

ಇದೆಲ್ಲವೂ ದೇವರಿಗಾಗಿ ಬೇಕು. ಇಲ್ಲದಿದ್ದರೆ ಯಾವುದೂ ಬೇಡ. ಅಂತೆಯೇ ಇವರನ್ನು ಏಕಾಂತಿಗಳು ಎಂದು ಗುರುತಿಸುತ್ತಾರೆ.

ಇಂಥ ಪರಮಭಕ್ತಾಗ್ರೇಸರ ದೇವತೆಗಳ ಮೇಲೆ ಪರಮಾತ್ಮನ ಪ್ರಸಾದ, ಸ್ನೇಹ, ಪ್ರೇಮವೂ ಪರತರವಾಗಿದೆ.

ದೇವರಿಗೆ ದೇವತೆಗಳ ಮೇಲಿರುವ ಈ ಸ್ನೇಹದ ಪರಾಕಾಷ್ಠೆಯನ್ನು 'ಯಸ್ತಾನ್ ದ್ವೇಷ್ಟಿ ಸ ತಂ ದ್ವೇಷ್ಟಿ ಯಸ್ತಾನನು ಸ ಚಾನು ತಂ' ಎಂಬ ಒಂದೇ ಮಾತಿನಲ್ಲಿ ತಿಳಿಯಬಹುದು.

ದೇವತೆಗಳನ್ನು ದ್ವೇಷಿಸುವವನು ಇಲ್ಲವೇ ಉಪೇಕ್ಷಿಸುವವನು ದೇವರನ್ನು ದ್ವೇಷಿಸುವವ ಉಪೇಕ್ಷಿಸುವವ.

ಹೀಗಾಗಿ ತನ್ನ ಪರಮಭಕ್ತರಲ್ಲಿ ಮಾಡುವ ಉಪೇಕ್ಷೆ ಅಥವಾ ದ್ವೇಷ ತನ್ನ ದ್ವೇಷ ಉಪೇಕ್ಷೆಗಳೆಂದೇ ಭಗವಂತ ಬಗೆಯುತ್ತಾನೆ. ಇದೇ ಮಹಾಭಾರತದ ಸಾರ.

ಅಂದ ಮೇಲೆ ದೇವತಾದ್ವೇಷವೇ ವಿಷ್ಣುದ್ವೇಷವಾಯಿತು. ಅದರಿಂದ ಅಂಧತಾಮಿಸ್ರ ನಿಶ್ಚಿತ.

ದೇವತಾ ಉಪೇಕ್ಷೆಯೇ ವಿಷ್ಣುವಿನ ಉಪೇಕ್ಷೆ ಅವರಿಗೆ ನಿತ್ಯಸಂಸಾರವೂ ನಿಶ್ಚಯ.

ಈ ನಿಟ್ಟಿನಲ್ಲಿ ದೇವತೆಗಳಲ್ಲಿ ಭಕ್ತಿ ಶ್ರದ್ಧೆಗಳನ್ನು ಮಾಡುವದು ಮುಕ್ತಿಗೆ ಅನಿವಾರ್ಯ.

ಕೆಲವರು ಶ್ರೀಮದಾಚಾರ್ಯರ ಆದೇಶದಂತೆ ದೇವರಲ್ಲಿ ಸರ್ವೋತ್ತಮವಾದ ಭಕ್ತಿಯನ್ನೂ ಉಳಿದವರಲ್ಲಿ ಕಡಿಮೆ ಭಕ್ತಿಯನ್ನೂ ಮಾಡುತ್ತಾರೆ.

ಆದರೆ ಅನೇಕರಿಗೆ ದೇವತೆಗಳ ಮಹಿಮೆಯೇ ತಿಳಿದಿಲ್ಲ. ಆಯಾ ದೇವತೆಗಳ ಮಹಿಮೆಯನ್ನೇ ತಿಳಿಯದೆ ಮೂಢ ಭಕ್ತಿಯನ್ನು ಮಾಡುತ್ತಾರೆ.

ಶ್ರೀಮದಾನಂದತೀರ್ಥರೇ ಅನೇಕ ಶಾಸ್ತ್ರಗಳ ಆಧಾರದಿಂದ ದೇವತೆಗಳ ಅದ್ಭುತ ಮಹಿಮೆಯನ್ನು ತಿಳಿಹೇಳಿದ್ದಾರೆ.

ಅದನ್ನು ಸ್ವಲ್ಪವಾದರೂ ತಿಳಿಯುವ ಪ್ರಯತ್ನ ಮಾಡುವ.

ಒಬ್ಬೊಬ್ಬ ದೇವತೆಯ ಮಹಿಮೆಯೂ ಅತ್ಯಗಾಧ. ತೀರ ಸಣ್ಣ ದೇವತೆಯೂ ಮಾನವರಿಗಿಂತ ಕೋಟಿ ಕೋಟಿ ಮಡಿ ಮಿಗಿಲಾದವನು.

ದೇವತೆಯ ಯೋಗ್ಯತೆ, ಅದಕ್ಕೆ ತಕ್ಕ ಭಕ್ತಿ, ಜ್ಞಾನ, ಬಲ, ಆನಂದ, ಅಧಿಕಾರ, ಗುಣಗಳು, ಅಣಿಮಾದಿ ಶಕ್ತಿಗಳು ಮುಂತಾದವೆಲ್ಲ ಸಾಮಾನ್ಯರಿಗಿಂತಲೂ ಅತ್ಯಧಿಕ.

ಇನ್ನು ತತ್ತ್ವಾಭಿಮಾನಿಗಳ ಮಹಿಮೆಯಂತೂ ಮಾನವನ ಊಹೆಗೂ ಎಟುಕುವದಿಲ್ಲ.

ಸಿರಿ, ವಿಧಿ, ವಾಯು, ಗರುಡ, ಶಿವ, ಇಂದ್ರ, ಕಾಮ ಮುಂತಾದ ದೇವತೆಗಳಿಗೆ ಅನಂತ ಗುಣಗಳಿವೆ.

ಎಲ್ಲ ದೇವತೆಗಳೂ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡವರು. ಪರಮಾತ್ಮನ ಪರಮಭಕ್ತರು. ಅಂತೆಯೇ ಆತನ ಪರಮಪ್ರಿಯರೂ ಹೌದು.

ಅವರಿಗೆ ಸಂಚಿತ ಆಗಾಮಿ ಕರ್ಮಗಳ ಲೇಪವಿಲ್ಲ. ಅವರು ಬೇರೆ ಬೇರೆ ತತ್ತ್ವಗಳಿಗೆ ಅಭಿಮಾನಿ ದೇವತೆಗಳು.

ಮನಸ್ಸಿಗೆ ಕಾಮ ಇಂದ್ರ ಶಿವ ಇತ್ಯಾದಿಗಳು, ಕಣ್ಣಿಗೆ ಸೂರ್ಯ, ಆಕಾಶಕ್ಕೆ ಗಣಪತಿ, ನೀರಿಗೆ ವರುಣ, ಪೃಥಿವಿಗೆ ಧರಾದೇವಿ ಅಭಿಮಾನಿಗಳು.

ಈ ಅಭಿಮಾನಿದೇವತೆಗಳು ಮನಸ್ಸು, ಕಣ್ಣು, ಪೃಥಿವೀ ಮುಂತಾದ ತತ್ತ್ವಗಳನ್ನು ನಿಯಂತ್ರಿಸುತ್ತಾರೆ.

ಅಂತೆಯೇ ತಾವು ನಿಯಂತ್ರಿಸುವ ತತ್ತ್ವಗಳಲ್ಲಿ ಎಲ್ಲೆಡೆಯೂ ವ್ಯಾಪಿಸಿ ಇರುವರು. ಅವರು ವ್ಯಾಪಿಸಿ ಇಲ್ಲದಿರುವ ಒಂದು ಕಣವೂ ಇರಲು ಸಾಧ್ಯವಿಲ್ಲ. ಒಂದೊಂದು ಕಣ, ಅಣು ಪರಮಾಣುಗಳಲ್ಲೂ ಅವರು ತಮ್ಮ ಸೂಕ್ಷ್ಮ ಸೂಕ್ಷ್ಮತರ ರೂಪಗಳಿಂದ ವ್ಯಾಪಿಸಿರುವರು.

ಹೀಗಾಗಿ ಆ ಆ ತತ್ತ್ವಗಳಲ್ಲಿ ಅತಿನಿಬಿಡವಾಗಿ ದೇವತೆಗಳು ಸನ್ನಿಹಿತರಾಗಿರುವರು.

ಒಂದೊಂದು ತತ್ತ್ವಕ್ಕೂ ಅನಂತ ಅಂಶಗಳಿವೆ. ಕಾರಣ ಈ ದೇವತೆಗಳ ಸ್ವರೂಪ ದೇಹ, ಇಂದ್ರಿಯ, ಮನಸ್ಸುಗಳ ಅಂಶಗಳೂ ಅನಂತವಾಗಿರುವದು ಆವಶ್ಯಕ.

ಈ ದೇವತೆಗಳ ಚೈತನ್ಯಸ್ವರೂಪವು ಅಣುರೂಪವಾಗಿದೆ. ಆದರೆ ಅವರ ತತ್ತ್ವಾತ್ಮಕ ಶರೀರವು ಬ್ರಹ್ಮಾಂಡವನ್ನೂ ಮೀರಿದೆ.

ಅವರಿಗೆ ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಶ್ಯ, ಈಶಿತ್ವ, ವಶಿತ್ವ ಎಂಬ ಎಂಟು ಮಹಾ ಶಕ್ತಿಗಳು ಇವೆ. ಇವುಗಳಿಗೆ ಅಷ್ಟ ಐಶ್ವರ್ಯ, ಅಷ್ಟ ಸಿದ್ಧಿ ಎಂತಲೂ ಹೆಸರಿದೆ.

ಅಲ್ಲದೆ ತತ್ತ್ವಗಳ ಆಯಾ ಅಂಶಗಳಲ್ಲಿ ನಡೆಯುವ ಕ್ರಿಯೆ, ವಿಕ್ರಿಯೆ ಮುಂತಾದವುಗಳಿಗೆಲ್ಲಾ ಇವರೇ ಹೊಣೆ.

ಅಂದರೆ ಇವರೇ ಅಲ್ಲಲ್ಲಿ ಇರುವ ತಮ್ಮ ಅಂಶಗಳ ಕ್ರಿಯೆಗಳಿಂದ ಆ ಆ ಪದಾರ್ಥಗಳಲ್ಲಿ ಕ್ರಿಯೆಗಳನ್ನು ಮಾಡಿಸಬೇಕು.

ಮಣ್ಣಿನ ಒಂದು ಕಣದ ಹಾರಾಟಕ್ಕೂ ಆ ಕಣದಲ್ಲಿರುವ ಪೃಥಿವೀ ದೇವಿಯ ಅಂಶದ ಕ್ರಿಯೆಯೇ ಕಾರಣ.

ಹೀಗೆ ಅನಂತಾಂಶಗಳಲ್ಲಿ ಆಗುವ ಅನಂತ ಕ್ರಿಯೆಗಳಿಗೆ ಈ ದೇವತೆಗಳು ನಿಮಿತ್ತರಾಗಿರುವರು.

ಇಷ್ಟೆಲ್ಲಕ್ಕೂ ಅಗತ್ಯವಾದುದು ಮಾನವಾದಿಗಳ ದೃಷ್ಟಿಯಲ್ಲಿ ಅಚಿಂತ್ಯವಾದ ಅದ್ಭುತ ಅಪ್ರತಿಹತ ಶಕ್ತಿ.

ಈ ಎಲ್ಲ ತತ್ತ್ವಗಳಿಗೆ ಈ ದೇವತೆಗಳೇ ಸ್ವಾಮಿ, ನಿಯಾಮಕರು, ಪ್ರೇರಕರು ಆಗಿರುವರು.

ಎಲ್ಲ ಸಂಸಾರಿಗಳಿಗೂ ಜಡ ದೇಹಗಳಿವೆ. ಈ ಜಡದೇಹಗಳು ಪೃಥಿವ್ಯಾದಿ ತತ್ತ್ವಗಳಿಂದ ನಿಷ್ಪನ್ನವಾಗಿರುವವು. ಅಲ್ಲದೇ ಎಲ್ಲ ಸಂಸಾರಿಗಳಿಗೆ ಮನಸ್ಸು ಹಾಗೂ ಇಂದ್ರಿಯಗಳಿವೆ.

ಈ ದೇಹಗಳಲ್ಲಿರುವ ಮನಸ್ಸು, ಇಂದ್ರಿಯ, ಪೃಥಿವ್ಯಾದಿಗಳಿಗೆಲ್ಲ ಈ ದೇವತೆಗಳು ನಿಯಾಮಕರು.

ಅರ್ಥಾತ್ ಈ ಬಗೆಯ ದೇಹ ಇಂದ್ರಿಯ ಮನಸ್ಸುಗಳನ್ನು ಹೊಂದಿದ ಎಲ್ಲ ಸಂಸಾರಿಗಳಿಗೂ ಈ ದೇವತೆಗಳು ನಿಯಾಮಕರು. ಹೀಗಾಗಿ ಅನಂತಾನಂತ ಜೀವ ನಿಯಾಮಕತ್ವವೆಂಬ ಮಹಾಮಹಿಮೆಯು ಸಿದ್ಧವಾಗುವದು.

ಇದರೊಡನೆ, ಇವರೇ ಆ ಎಲ್ಲ ಜೀವರಿಂದ ಶುಭಾಶುಭ ಕರ್ಮಗಳನ್ನು ಮಾಡಿಸುವರು.

ಸ್ವಯಂ ಈ ದೇವತೆಗಳು ಸ್ವತಂತ್ರನಾದ ಭಗವಂತನಿಂದ ಪ್ರೇರಿತರಾಗಿ ತಮ್ಮ ಅಧೀನರನ್ನು ಪ್ರೇರಿಸುತ್ತಾರೆ. ಇವರ ಪ್ರೇರಣೆಯಿಲ್ಲದೆ ಯಾವ ಜೀವನೂ ಯಾವ ಕರ್ಮವನ್ನೂ ಮಾಡುವಂತಿಲ್ಲ.

ಆದುದರಿಂದ ಜೀವರು ಮಾಡುವ ಎಲ್ಲ ಶುಭಕರ್ಮಗಳಿಂದ ಒಂದು ಫಲ ಜೀವರಿಗೆ ಬರುವುದಾದರೆ ಜೀವರ ಶುಭಕರ್ಮಪ್ರೇರಕರಾದ ಈ ದೇವತೆಗಳಿಗೆ ಸಾವಿರ ಸಾವಿರ ಪಟ್ಟು ಹೆಚ್ಚು ಫಲವು ಆ ಎಲ್ಲ ಶುಭಕರ್ಮಗಳಿಂದ ದೊರೆಯುವರು.

ಅಲ್ಲದೇ, ದೇವತೆಗಳು ಜೀವರ ಅಶುಭಕರ್ಮಗಳಿಗೂ ಪ್ರೇರಕರು ನಿಜ. ಆದರೆ ಭಗವಂತನ ಆಜ್ಞೆಯಿಂದ, ಭಗವಂತನ ಪೂಜಾರೂಪವಾಗಿ, ವೈಷಮ್ಯ ನೈರ್ಘೃಣ್ಯಗಳಿಲ್ಲದೇ, ಸ್ವಂತ ರಾಗದ್ವೇಷಗಳಿಗೆ ಒಳಪಡದೇ, ಕೇವಲ ಜೀವರ ಪೂರ್ವ ಕರ್ಮಾನುಸಾರವಾಗಿ ಜೀವರನ್ನು ಅಶುಭಕರ್ಮಗಳಲ್ಲಿ ಪ್ರೇರಿಸುವದರಿಂದ, ಅಲ್ಲದೇ ಶ್ರೀಹರಿಯ ಪರಮಪ್ರಿಯರಾದುದರಿಂದ, ಶ್ರೀಹರಿಯ ಅನುಗ್ರಹದಿಂದ ಜೀವರಿಂದ ಮಾಡಿಸಿದ ಪಾಪದ ಲೇಪವಾಗದಿರುವಂತೆ ಸ್ವಾತಂತ್ರ್ಯವಿದ್ದ ಕಾರಣವೂ ಈ ದೇವತೆಗಳಿಗೆ ತಾವು ಮಾಡಿಸಿದ ಪಾಪಕರ್ಮಗಳ ಫಲ ಸರ್ವಥಾ ತಾಕುವದಿಲ್ಲ.

ಈ ಕುರಿತಾಗಿ ಯಾರೂ ಹಗುರಾಗಿ ವಿಚಾರ ಮಾಡತಕ್ಕದ್ದಲ್ಲ. ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಅಮೋಘ ಶಾಸ್ತ್ರವನ್ನು ಅತ್ಯಂತ ಗಂಭೀರವಾಗಿ ಅಧ್ಯಯನ ಮಾಡಿ ಅರಗಿಸಿಕೊಂಡ ವಿದ್ವನ್ಮಣಿಗಳಲ್ಲಿ ಇದರ ಬಗೆಗೆ ಸಂಶಯಗಳನ್ನು ನಿವಾರಿಸಿಕೊಳ್ಳಬೇಕು.

ಈ ಪ್ರಮೇಯ ಸ್ವಲ್ಪ ಗಹನವಾದುದರಿಂದ ಹೆಚ್ಚು ವಿಸ್ತಾರವಾಗಿ ಬರೆದಿಲ್ಲ. ಶಾಸ್ತ್ರೀಯ ಎಲ್ಲ ಕಾರಣಗಳನ್ನು ಸಂಕ್ಷಿಪ್ತ ಮಾತಿನಲ್ಲಿ ಮೇಲೆ ನಿರೂಪಿಸಲಾಗಿದೆ.

ಇದೆಲ್ಲ ಉಳಿದ ದೇವತೆಗಳ ಮಹಿಮೆಯಾದರೆ ಭಾರತೀ, ಸರಸ್ವತೀ, ವಾಯು, ಬ್ರಹ್ಮರ ಮಹಿಮೆ ಇದಕ್ಕಿಂತಲೂ ನೂರಾರು ಸಾವಿರಾರು ಪಟ್ಟು ಹೆಚ್ಚು.

ಈ ನಾಲ್ವರು ಅನಾದಿಯಿಂದ ಅನಂತಕಾಲದವರೆಗೆ ಅತಿ ಸ್ವಲ್ಪ ಪಾಪವನ್ನೂ ಮಾಡಿಲ್ಲ.

ಎಂದೆಂದಿಗೂ ಇವರ ಸ್ವರೂಪಕ್ಕೆ ಅಂಟಿದಂತೆ ಅಜ್ಞಾನ, ಸಂಶಯ, ಭ್ರಾಂತಿ, ಕಾಮ, ಕ್ರೋಧ, ಅತಿಮಾನ, ಅಹಂಕಾರ, ಮಮಕಾರ, ಇಚ್ಛಾಪ್ರತಿಹತಿ ಮುಂತಾದ ದೋಷಗಳಿಲ್ಲ.

ಆದುದರಿಂದಲೇ ನಿರ್ದೋಷರಿವರು. ಅಂತೆಯೇ ಇವರನ್ನು 'ಋಜು' ಎಂದು ಕರೆಯುವರು.

ಇವರು ಸರ್ವಜೀವರ ಯೋಗ್ಯತೆಗಳಿಗೆ ಅಭಿಮಾನಿಗಳು, ನಿಯಾಮಕರು.

ದೇವರಂತೆ ದೇಹದ ಮೂವತ್ತೆರಡು ಶುಭಲಕ್ಷಣಗಳುಳ್ಳವರು. ದೇವರಂತೆ, ಅವನಾಜ್ಞೆಯಿಂದ ವಿಶ್ವದ ಸೃಷ್ಟಿ ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮೋಕ್ಷಗಳನ್ನು ಸ್ವಾಧೀನರಿಗೆ ದಯಪಾಲಿಸುವರು. ಅಂತೆಯೇ ಸರ್ವಜೀವೋತ್ತಮರು.

ಇಷ್ಟು ಮಹುಗಳ ಅತಿಸ್ಥೂಲ ಪರಿಚಯ.

ಶ್ರೀ ರಮಾದೇವಿಯ ಕುರಿತು ಎರಡು ಮಾತು. ರಮೆಯು ನಿತ್ಯಮುಕ್ತಳು. ದೇವರಂತೆ ಎಲ್ಲ ದೇಶ ಕಾಲಗಳಲ್ಲಿ ವ್ಯಾಪ್ತಳು.

ವಿಧಿ ವಾಯು ಮುಂತಾದ ಸಕಲದೇವತೆಗಳಿಗೆ ಅವರವರ ಪದವಿಯನ್ನು ತನ್ನ ಕಿರುನೋಟದಿಂದ ಕರುಣಿಸುವವಳು.

ಭಗವಂತನನ್ನು ಬಿಟ್ಟು ಉಳಿದೆಲ್ಲ ಪದಾರ್ಥಗಳಿಗೆ ನಿಯಾಮಕಳು ಅಭಿಮಾನಿನಿಯೂ.

ದೇವರಂತೆ ಇಡಿಯ ವಿಶ್ವದ ಸೃಷ್ಟಿ ಸ್ಥಿತಿ ಮೊದಲಾದ ಸಮಸ್ತ ಅವಸ್ಥೆಗಳಿಗೆ ಕಾರಣಳು, ಇತ್ಯಾದಿ ಇತ್ಯಾದಿ.

ದೇವತೆಗಳ, ವಾಯುಬ್ರಹ್ಮರ, ರಮಾದೇವಿಯ ಈ ಎಲ್ಲ ಮಹಿಮೆಯನ್ನು ನೆನೆಯುತ್ತಾ ಅವರನ್ನು 'ಆವರಣದೇವತೆ' ಗಳಾಗಿ ಪೂಜಿಸಬೇಕು.

ಈ ಅಂಶದಲ್ಲಿ ಒಂದು ಮಹತ್ತ್ವದ ತತ್ತ್ವ ಅಡಗಿದೆ. ಹಿಂದೆ ಹೇಳಿದಂತೆ ಆನಂದತೀರ್ಥರು ವಿಷ್ಣುವಿನ ಸರ್ವೋತ್ತಮತ್ವವನ್ನು ಅನಂತ ಶಾಸ್ತ್ರಗಳ, ಯುಕ್ತಿಗಳ, ಮಹಾನುಭಾವರ ಅನುಭವಗಳ ಆಧಾರದ ಮೇಲೆ ಸಂಶಯಾತೀತವಾಗಿ ಸಮರ್ಥಿಸಿದ್ದಾರೆ.

ಆದುದರಿಂದ ಶ್ರೀಹರಿಯನ್ನೇ ಸರ್ವೋತ್ತಮನೆಂದು ಪೂಜಿಸಬೇಕು. ಬೇರೆ ಯಾವ ದೇವತೆಗಳನ್ನೂ ಸ್ವತಂತ್ರವಾಗಿ ಪೂಜಿಸತಕ್ಕದ್ದಲ್ಲ.

ಅವರೆಲ್ಲರನ್ನು ಶ್ರೀಹರಿಯ ಪರಿವಾರದೇವತೆಗಳಾಗಿ ಪೂಜಿಸಬೇಕು. ಈ ಮುಖಾಂತರ ಶ್ರೀಮದಾಚಾರ್ಯರು ಒಬ್ಬರೇ ವೇದಗಳಲ್ಲಿ ಮೇಲ್ನೋಟಕ್ಕೆ ಕಾಣಸಿಗುವ ಅನೇಕದೇವತಾವಾದಕ್ಕೆ **(Polytheism)** ಹಾಗೂ ಉಪನಿಷತ್ತು ಮುಂತಾದ ವಾಙ್ಮಯಗಳಲ್ಲಿ ನಿರೂಪಿತವಾದ ಏಕಪರದೇವತಾವಾದಕ್ಕೆ **(Monotheism)** ಸಮಂಜಸ ಸ್ನೇಹದ ಸಮನ್ವಯವನ್ನು ಹಾಡಿ ಹಾಡಿ ಬಣ್ಣಿಸಿದ್ದಾರೆ.

ತಿಳಿವಿನ ಕಣ್ಣಿದ್ದವರಾದರೂ ತಿಳಿದು ವೇದವನ್ನು ದೂಷಿಸುವದು ಬಿಡಲಿ ಎಂದು ಸೂಚಿಸಿರುವೆ. ಪಾಶ್ಚಾತ್ಯರಿಗೆ ಗೊಂದಲಕ್ಕೀಡು ಮಾಡಿದ್ದೇ ಇದು.

ಇದಕ್ಕೆ ಕಾರಣವನ್ನು ಸ್ವಲ್ಪವಾಗಿ ತಿಳಿಯೋಣ.

ಇಂಥೆಲ್ಲ ಮಹಾಮಹಿಮೋಪೇತರಾದ ದೇವತೆಗಳೆಲ್ಲರೂ ಶ್ರೀಹರಿಗೆ ಅಧೀನರು.

ಇವರೆಲ್ಲರ ಹಿರಿದಾದ ಪದವಿ, ಮಿಗಿಲಾದ ಅಧಿಕಾರ, ಅದ್ಭುತ ಕರ್ತೃತ್ವ, ಅಸಾಧಾರಣ ನಿಯಾಮಕತ್ವ, ಸರ್ವಜೀವಪ್ರೇರಕತ್ವ, ನಿಸ್ಸೀಮ ಬಲ, ಜ್ಞಾನ, ವಿರಕ್ತಿ ಭಕ್ತಿ ಪ್ರವೃತ್ತಿ ಶಕ್ತಿ ಅನಾದಿತ್ವ, ನಿತ್ಯತ್ವ, ಕಿಂ ಬಹುನಾ ಶ್ವಾಸ, ಚೈತನ್ಯ, ಅಸ್ತಿತ್ವ ಇವೆಲ್ಲವೂ ಭಗವದಧೀನ.

ಇಷ್ಟೆಲ್ಲವೂ ಇದೆ ದೇವರ ಕೃಪೆಯಿದ್ದರೆ. ಏನೇನೂ ಇಲ್ಲ ದೇವರ ಕೃಪೆಯಿಲ್ಲದಿದ್ದರೆ.

ಪದವಿ, ಅಧಿಕಾರ, ಕರ್ತೃತ್ವ, ಬಲ, ಜ್ಞಾನ ಮುಂತಾದವು ಯಾವೂ ಇರಲು ಸಾಧ್ಯವಿಲ್ಲ. ದೇವನ ಕರುಣೆ ತಪ್ಪಿದಲ್ಲಿ ವಿಧಿ ವಾಯು ಮುಂತಾದವರೂ ಶ್ವಪಚನಿಗಿಂತಲೂ ಅತಿ ಕೀಳಾಗುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಅಷ್ಟೇ ಏನು? ಅವರೆಲ್ಲರ ಅಸ್ತಿತ್ವವೂ ಬುಡಮೇಲಾಗುವದು ಸಾಧ್ಯ. ಇಂತಹ ಮಹಾ ಅನರ್ಥಗಳೂ ದೇವರ ಕರುಣೆಯಿಲ್ಲದಿರುವಾಗ ಆಗುವದು ಸಂಭಾವಿತ.

ಹಾಗಾಗಿ ಶ್ರೀಹರಿಯೇ ಸರ್ವೋತ್ತಮ, ಅವನೊಬ್ಬನೇ ಸರ್ವಥಾ ಪರನಿರಪೇಕ್ಷ ಉಳಿದವರೆಲ್ಲರೂ ಹರಿಯ ಅಧೀನರು, ನಿಯಮ್ಯರು, ಕಿಂಕರರು, ದಾಸಾನುದಾಸರು ಎಂದು ತಿಳಿಯಬೇಕು.

ದೇವತೆಗಳ ಹಿಂದೆ ಹೇಳಿದ ಅದ್ಭುತ ಮಾಹಾತ್ಮ್ಯವನ್ನೂ ಈಗ ತಿಳಿಸಿದ ಸರ್ವಥಾ ಸರ್ವಥಾ ಭಗವದಧೀನತ್ವವನ್ನೂ ನೆನೆಯುತ್ತ, ಅಂಥ ಅದ್ಭುತ ಮಹಾಮಹಿಮಾಶಾಲಿಗಳಾದ ಸರ್ವಜೀವೋತ್ತಮರಾದ ದೇವತಾಚೂಡಾಮಣಿಗಳಾದ ಶ್ರೇಷ್ಠ ದೇವತೆಗಳಿಂದ ವಿನಯ, ಆದರ, ಭಕ್ತಿಪೂರ್ವಕವಾಗಿ ತನ್ನ ಕಿರಿ ಕಾರುಣ್ಯದ ನೋಟಕ್ಕಾಗಿ ನಿರಂತರ ಕೈಂಕರ್ಯವನ್ನು ಮಾಡಿಸಿಕೊಳ್ಳುವ ಆ ಸರ್ವೋತ್ತಮ ಸಾರ್ವಭೌಮ ಭಗವಂತನ ಮಹಿಮೆ ಪರಮ ಪರಮ ನಿಸ್ಸೀಮವೆಂದು ಕ್ಷಣ ಕ್ಷಣಕ್ಕೂ ಗಾಢವಾಗಿ ಮನದಲ್ಲಿ ಮೂಡಿ ಬರುವದು ಅಗತ್ಯ.

ಅಂತೆಯೇ ಈ ಎಲ್ಲ ಆವರಣದೇವತೆಗಳನ್ನು ಪೂಜಿಸಲು ಶಾಸ್ತ್ರವು ವಿಧಿಸುತ್ತದೆ.

ಈ ಆವರಣ ದೇವತೆಗಳಿಗೆ ಪ್ರತ್ಯೇಕವಾಗಿ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಪುನರಾಚಮನ, ಸ್ನಾನ, ವಸ್ತ್ರ ವಿಭೂಷಣ, ಉಪವೀತ, ಆಸನ, ಗಂಧ ಪುಷ್ಪಾದಿಗಳನ್ನು ಸಮರ್ಪಿಸಬೇಕು.

ಮುಂಬರುವ ಧೂಪದೀಪಾದಿಗಳನ್ನು ಮೂಲದೇವರೊಂದಿಗೆಯೇ ಅರ್ಪಿಸುವುದು.

ಅನಂತರ ವಜ್ರನಾಭ, ಹರೀಶ್ವರ, ಗಂಗಾತನಯ, ಶಂಖನಿಧೀಶ್ವರ, ಜಯ, ವಿಜಯ, ಧಾತಾ, ವಿಧಾತಾ, ಭದ್ರ ಸುಭದ್ರ, ಅಮೃತೇಶ್ವರ, ವಿರೂಪಾಕ್ಷರೆಂಬ ಹನ್ನೆರಡು ಜನ ವಿಷ್ಣುವಿನ ದ್ವಾರಪಾಲಕರು. ಅವರನ್ನು 'ನಮಃ' ಎಂಬ ಶಬ್ದದಿಂದ ನಮಿಸಬೇಕು. ಅದೇ ಅವರ ಪೂಜೆ.

ಧೂಪ-ದೀಪ

ಪೀಠಾವರಣ ದೇವತೆಗಳಿಗೆ ಹಾಗೂ ಮೂಲದೇವರಿಗೆ ಧೂಪವನ್ನು ತೋರಿಸುವುದು. ಧೂಪಕ್ಕೆ ದಶ ಅಂಗಗಳು. ಚಂದನ, ಅಗರು, ಕರ್ಪೂರ, ದೇವದಾರು, ಗುಗ್ಗುಲ, ಜಾಜೀಫಲ, ಶ್ರೀಫಲ, ಉಶೀರ, ಕೋಷ್ಠ, ಸಾಲನಿರ್ಯಾಸ ಎಂದು.

ಜೊತೆಗೆ ಆಕಳಿನ ತುಪ್ಪವನ್ನು ಸೇರಿಸಬೇಕು.

ಕೈಗಳಿಂದ ಬಟ್ಟೆಯಿಂದ ಗಾಳಿ ಹಾಕಿ, ಮುಖದಿಂದ ಊದಿ ದೀಪವನ್ನು ದೇವರಿಗೆ ತೋರಿಸಬಾರದು. ಧೂಪವನ್ನು ಕೈಯಲ್ಲಿ ಹಿಡಿದು ವ್ಯಜನದಿಂದ (ಬೀಸಣಿಕೆ) ಬೀಸಿ ಧೂಪತೋರಿಸಬೇಕು.

ಧೂಪಸಮರ್ಪಣೆ ಮಾಡುವಾಗ ಘಂಟೆಯನ್ನು ಬಾರಿಸಲೇ ಬೇಕು. ಭಕ್ತಿಯಿಂದ ಕಣ್ಣಾರೆ ಭಗವಂತನನ್ನು ಕಂಡರೆ ಕುಲಕೋಟಿಯು ಉದ್ಧಾರವಾಗುವುದು.

ಆ ಧೂಪದ ಪರಿಮಳವನ್ನು ನಾವು ಸೇವಿಸಿದರೂ ಅದಕ್ಕೆನಿರ್ಮಾಲ್ಯತ್ವ ದೋಷವಿಲ್ಲ. ಏಕಾರತಿ ತುಪ್ಪಹಾಕಿದ ಮೂರು ಬತ್ತಿಗಳಿಗೆ ದೀಪವನ್ನು ಹಚ್ಚಿ ದೇವರಿಗೆ ತೋರಿಸುವದು.

ಪಾದದಿಂದ ಮಸ್ತಕದವರೆಗೆ ಒಟ್ಟಾರೆ ಮೂರುವರೆ ಸಲ ತಿರುಗಿಸಿ, ದೀಪವನ್ನು ಶಾಂತಗೊಳಿಸಬೇಕು.

ಅದು ಉಳಿದರೆ ರಾಕ್ಷಸರು ಅದನ್ನೆಳೆದು ಒಯ್ಯುವರು.

ನೈವೇದ್ಯ

(ಏಕಾದಶೀ ದಿನ ಕೇವಲ ಹಣ್ಣು ತೆಂಗು ಹಾಲು ಮುಂತಾದವುಗಳನ್ನೇ ನಿವೇದಿಸಬೇಕು. ಅನ್ನಾದಿಗಳ ನೈವೇದ್ಯವನ್ನು ಮಾಡಬಾರದು.)

ದೇವರ ಎದುರಿನಲ್ಲಿ ಭೂಮಿಯನ್ನು ಶೋಧಿಸಬೇಕು. ಗೋಮಯದಿಂದ ಉಪಲೇಪಿಸಬೇಕು. ನಾಲ್ಕು ಕೋಣದ ಮಂಡಲವನ್ನು ಮಾಡಬೇಕು. ಮೇಲೆ ಶ್ರೀಬೀಜವನ್ನು ಬರೆಯಬೇಕು.

ಅದರ ಮೇಲೆ ಮೂರುಪಾದದ ಪೀಠವನ್ನು ಇಡಬೇಕು. ಅದರ ಮೇಲೆ ಬಾಳೆ ಎಲೆ. ಅದರಲ್ಲಿ ಸಾಧ್ಯವಿದ್ದರೆ ಸುವರ್ಣ ರಜತ ತಟ್ಟೆಯನ್ನು ಇಡಬೇಕು.

ಮೊದಲು ಪಾತ್ರಾಭಿಘಾರ (ಎಲೆ ಅಥವಾ ತಟ್ಟೆಯಲ್ಲಿ ಸ್ವಲ್ಪ ತುಪ್ಪವನ್ನು ಹಾಕುವದು.)

ಮೊದಲು ಅನ್ನ, ಬಳಿಕ ಉಪ್ಪು, ವ್ಯಂಜನಾದಿಗಳು ನಂತರ ಲೇಹ್ಯ (ನೆಕ್ಕಲು ಯೋಗ್ಯವಾದದ್ದು) ಪೇಯ (ಕುಡಿಯಲು ಯೋಗ್ಯವಾದದ್ದು) ಚೋಷ್ಯ (ಹೀರಲು ಯೋಗ್ಯವಾದದ್ದು) ಖಾದ್ಯ (ತಿನ್ನಲು ಯೋಗ್ಯವಾದದ್ದು) ಹೀಗೆ ನಾಲ್ಕು ಬಗೆಯ ಭೋಜ್ಯಪದಾರ್ಥಗಳನ್ನು ಬಡಿಸಬೇಕು.

ಬಳಿಕ ಪರಮಾನ್ನ, ಹರಿದ್ರಾನ್ನ, ಚಿತ್ರಾನ್ನ ಕೇವಲಾನ್ನ, ಗುಡೋದನ, ಮುದ್ಗಾನ್ನ, ಎಂಬ ಆರು ಬಗೆಯ ಅನ್ನಗಳನ್ನು ಹಾಕಬೇಕು.

ಆಗ್ನೇಯ ದಿಕ್ಕಿನಲ್ಲಿ ಭಕ್ಷ್ಯಗಳನ್ನು ಬಡಿಸುವದು. ಈಶಾನ್ಯದಲ್ಲಿ ಪಾಯಸ, ನೈರ್ಋತ್ಯದಲ್ಲಿ ಲೇಹ್ಯ ಪೇಯಗಳನ್ನು, ವಾಯವ್ಯದಲ್ಲಿ ಉಪಭೋಜನವನ್ನು ಮಧ್ಯದಲ್ಲಿ ಅನ್ನವನ್ನು, ಅನ್ನ ಪರಮಾನ್ನಗಳ ಮಧ್ಯದಲ್ಲಿ ಘೃತಪಾತ್ರ ಹೀಗೆ ಪದಾರ್ಥಗಳ ವಿನ್ಯಾಸ. ಎಲೆಯ ಬಳಿಯಲ್ಲಿ ಪಾನೀಯ.

ಈ ಅನ್ನಾದಿಪದಾರ್ಥಗಳನ್ನು ಮಾಡಿದವರು ದೇವತೆಗಳು ಎಂದು ಸ್ಮರಿಸಬೇಕು.

ಅನ್ನವನ್ನು ಸರಸ್ವತೀ, ಭಕ್ಷ್ಯವನ್ನು ವಾಯು, ಪಾಯಸವನ್ನು ಭಾರತೀ, ಸೂಪವನ್ನು ಬ್ರಹ್ಮ ಘೃತವನ್ನು ಮಹಾಲಕ್ಷ್ಮೀ ಶಾಕಾದಿಗಳನ್ನು ಇಂದ್ರ ಶಚ್ಯಾದಿಗಳು ಮಾಡಿದ್ದಾರೆಂದು ಧ್ಯಾನಿಸಬೇಕು.

ನೈವೇದ್ಯಪ್ರೋಕ್ಷಣೆಗಾಗಿ ಮೀಸಲಿಟ್ಟ ನೀರನ್ನು ಕೈಯಲ್ಲಿ ತೆಗೆದುಕೊಂಡು ಜೊತೆಗೆ ತುಲಸೀದಲವನ್ನು ಸೇರಿಸಿ ಎಂಟು ಬಾರಿ ಮೂಲಮಂತ್ರದಿಂದ ಆ ನೀರನ್ನು ಅಭಿಮಂತ್ರಿಸಿ, ವಿಷ್ಣುಗಾಯತ್ರಿಯಿಂದ ಆ ಜಲಪ್ರೋಕ್ಷಣೆಯನ್ನು ಮಾಡಿ ನಾರಾಯಣಮಂತ್ರದಿಂದಲೂ **ಸೌವರ್ಣೇ:** ಎಂಬ ಶ್ಲೋಕದಿಂದಲೂ ನೈವೇದ್ಯವನ್ನು ಮುಟ್ಟಿ ಅಭಿಮಂತ್ರಿಸಬೇಕು.

ಮುದ್ರಾಪ್ರದರ್ಶನ- ನಾವು ಮಾಡಿದ ಅನ್ನವನ್ನು

ಅಮೃತಮಯ ಗೊಳಿಸುವದಕ್ಕಾಗಿ ಧೇನುಮುದ್ರೆಯನ್ನು,

ಸಂರಕ್ಷಣೆಗಾಗಿ ಚಕ್ರಮುದ್ರೆಯನ್ನು,

(ಇರಬಹುದಾದ) ವಿಷವನ್ನು ಪರಿಹರಿಸುವದಕ್ಕೆ ಗರುಡಮುದ್ರೆಯನ್ನು,

ಪವಿತ್ರಗೊಳಿಸುವದಕ್ಕಾಗಿ ಶಂಖಮುದ್ರೆಯನ್ನು,

ಅನ್ನದ ವಿಪುಲತ್ವಕ್ಕಾಗಿ ಮೇರುಮುದ್ರೆಯನ್ನು,

ಶೀತಲತ್ವಕ್ಕಾಗಿ ಚಂದ್ರಮುದ್ರೆಯನ್ನು, ಆಯಾ ಮಂತ್ರಗಳನ್ನು (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಪಠಿಸುತ್ತಾ ತೋರಿಸಬೇಕು.

ಭೋಜನಮಂದಿರಕ್ಕೆ ಭಗವಂತನ ಸ್ವಾಗತ

ಬಳಿಕ ದೇವತೆಗಳಿಗೆ ಅಧಿದೇವನಾದ ರಮೆಯರಸ ಸರ್ವಾಂತರ್ಯಾಮಿ ಶ್ರೀಹರಿಯನ್ನು ಭೋಜನ ಮಂದಿರಕ್ಕೆ ಕರೆತರಬೇಕು.

ರತ್ನಖಚಿತ ಚಿನ್ನ ಪಾದುಕೆಗಳನ್ನು ಒಪ್ಪಿಸುವದು. ಸಿಂಹಾಸನದಲ್ಲಿ ಕುಳಿತ ಭಗವಂನತನಿಗೆ ಮನಸ್ಸಿನಿಂದಲೇ ಕರಾವಲಂಬನವನ್ನು ಕೊಡಬೇಕು.

ದೇವತೆಗಳು ಭಗವಂತನಿಗೆ ಛತ್ರವನ್ನು ಹಿಡಿದು, ಚಾಮರವನ್ನು ಬೀಸಿ, ವ್ಯಜನದಿಂದ ಗಾಳಿ ಹಾಕುತ್ತಾ ಭಗವಂತನನ್ನು ಸೇವಿಸುತ್ತಿದ್ದಾರೆ.

ಮುಂಭಾಗದಲ್ಲಿ ದೇವದೇವನಿಗೆ ಜಯವಾಗಲಿ! ಲಕ್ಷ್ಮೀನಾಥನಿಗೆ ಜಯವಾಗಲಿ! ಸರ್ವಾಂತರ್ಯಾಮಿಯಾದ ಬಿಂಬನಿಗೆ ಜಯವಾಗಲಿ! ಎಂದು ಜಯಘೋಷ ನಡೆಯುತ್ತಿದೆ.

ಸಾಲುಸಾಲಾಗಿ ದೀವಿಗೆಗಳನ್ನು ಕೈಯಲ್ಲಿ ಹಿಡಿದಿದ್ದಾರೆ. ಬದಿಯಲ್ಲಿ ರತ್ನಸ್ತಂಭಗಳು ದೇದೀಪ್ಯಮಾನವಾಗಿವೆ. ರತ್ನಗಂಬಳಿಯನ್ನು ಹಾಸಿದ್ದಾರೆ. ತಳಿರು ತೋರಣಗಳನ್ನು ಕಟ್ಟಿದ್ದಾರೆ.

ಸುಗಂಧ ಸುಮನದ ಪರಿಮಳ, ಧೂಪದ ಆಮೋದ ಎಲ್ಲೆಡೆ ಹರಡಿದೆ.

ಸ್ವಲ್ಪ ದೂರದಲ್ಲಿ ಅಪ್ಸರೆಯರು ನೃತ್ಯಮಾಡುತ್ತಿದ್ದಾರೆ. ಅನಂತಾವತಾರಗಳ ವಿವಿಧ ಲೀಲೆಗಳನ್ನು ಹಾವಭಾವಗಳಿಂದ ತೋರಿಸುತ್ತಿದ್ದಾರೆ.

ಗಂಧರ್ವರು ಕೆಲವರು ಹಾಡುತ್ತಲಿದ್ದಾರೆ. ಇನ್ನು ಹಲವರು ಪಂಚವಾದ್ಯಗಳ ಧ್ವನಿಮಾಡುತ್ತ ಭಗವಂತನನ್ನು ಸೇವಿಸುತ್ತಲಿದ್ದಾರೆ.

ದೇವರನ್ನು ಭೋಜನಮಂದಿರಕ್ಕೆ ಕರೆದು ತಂದದ್ದಾಯಿತು. ಆ ಭೋಜನಮಂದಿರದಲ್ಲಿ ಚಿನ್ನದ ನೆಲ. ಸ್ಫಟಿಕದ ಗೋಡೆ, ವಜ್ರದ ಸ್ತಂಭ, ರತ್ನದ ಸೋಪಾನ, ವೈಡೂರ್ಯದ ವಾತಾಯನ, ಮಾಣಿಕ್ಯದ ಬಾಗಿಲು, ಹವಳದ ಹೊಸ್ತಿಲು, ದಿವ್ಯ ಸುವರ್ಣ ವೇದಿಕೆ, ವಿಶಾಲವಾದ ಪೀಠ.

ಸ್ತಂಭಗಳಿಗೆ ಕದಳೀಕಂಬವನ್ನು ಕಟ್ಟಿದ್ದಾರೆ. ಬಾಳೆ, ಕಪಿತ್ಥ, ಜಂಬೀರ, ಮಾವು, ದ್ರಾಕ್ಷೆ ಮುಂತಾದ ಹಣ್ಣುಗಳ ಗೊಂಚಲುಗಳನ್ನು ತೂಗುಹಾಕಿರುವರು.

ಹಚ್ಚ ಹಸಿರಿನ ಎಲೆಗಳ ಸುತ್ತಲೂ ತೋರಣ. ಘಮಘಮಿಸುವ ಪರಿಮಳದ ಹೂಗಳನ್ನು ನೆಲದಲ್ಲಿ ಚೆಲ್ಲಿ, ಮಾಲೆಗಳನ್ನು ಗೊಡೆಗಳಿಗೆ ಕಟ್ಟಿ, ಸ್ತಂಭಗಳಿಗೆ ತೂಗುಹಾಕಿದ್ದಾರೆ.

ನಾಲ್ಕು ಸ್ತಂಭಗಳ ಈ ಮಂಟಪ ಸುವರ್ಣಪೂರ್ಣ, ರತ್ನಾಢ್ಯ, ಪರಮರಮ್ಯ, ಸುಭಾಸ್ವರವಾಗಿದೆ.

ಮಧ್ಯದ ವೇದಿಕೆಯನ್ನು ಏರುವದಕ್ಕೆ ವಜ್ರ ಸ್ಫಟಿಕ ವೈಡೂರ್ಯಗಳಿಂದ ತುಂಬಿಕೊಂಡ ಆರು ಮೆಟ್ಟಲುಗಳು ಎಂದು ಚಿಂತಿಸಬೇಕು.

ಸಾಕ್ಷಿಭೋಜ್ಯರು

ಆಮೇಲೆ, ನಮ್ಮ ಬಿಂಬಮೂರ್ತಿಯ ನೈವೇದ್ಯದ ಸಂದರ್ಭದಲ್ಲಿ ಸಾಕ್ಷಿಭೋಜನಕ್ಕಾಗಿ ಅನೇಕರನ್ನು ಆಮಂತ್ರಿಸುವದು ಅಗತ್ಯ.

ಜಗನ್ನಿಯಾಮಕ ಸರ್ವೇಶ ಸರ್ವೋತ್ತಮನಾದ ಭಗವಂತನ ಜೊತೆಗೆ ಸಾಕ್ಷಿಭೋಜನಕ್ಕಾಗಿ ಕೂಡಲು ಇನ್ನಾರೂ ಯೋಗ್ಯರಲ್ಲ.

ದೇವರಿಗೆ ಸಮಾನರೇ ದೇವರ ಪಂಕ್ತಿಯಲ್ಲಿ ಯೋಗ್ಯರು. ದೇವರೇ ದೇವರಿಗೆ ಸಮಾನನಲ್ಲವೇ? ಆದ್ದರಿಂದ ದೇವರನ್ನೇ ದೇವರ ಪಂಕ್ತಿಯಲ್ಲಿ ಸಾಕ್ಷಿಭೋಜನಕ್ಕಾಗಿ ಕೂಡಿಸಬೇಕು.

ಅದಕ್ಕೋಸ್ಕರ ಅನಂತಾಸನ ಶ್ವೇತದ್ವೀಪ ವೈಕುಂಠ ಸರ್ವಜೀವರು ಮತ್ತು ಆದಿತ್ಯ ಇವರಲ್ಲಿ ಇರುವ ಪದ್ಮನಾಭ ನಾರಾಯಣ ವಿಕುಂಠ, ಪುರುಷನಾಮಕ ಬಿಂಬರೂಪ, ಸವಿತೃನಾರಾಯಣರಿಗೆ, ಇದಲ್ಲದೇ ಕೇಶವಾದಿ ಚತುರ್ವಿಂಶತಿರೂಪಗಳಿಗೆ ಆಮಂತ್ರಣವನ್ನು ಕಳಿಸಬೇಕು.

'ನನ್ನ ಬಿಂಬಮೂರ್ತಿಯ ನೈವೇದ್ಯದ ಕಾಲದಲ್ಲಿ ಅವನಿಗೆ ಸಮಾನರಾದ (ಅಭಿನ್ನರಾದ) ತಾವೆಲ್ಲರೂ ನಿತ್ಯತೃಪ್ತರಾಗಿದ್ದರೂ ಸಾಕ್ಷಿಭೋಜನಕ್ಕಾಗಿ ದಯಮಾಡಿರಿ' ಎಂದು.

ಈ ಎಲ್ಲ ಭಗವದ್ರೂಪಗಳು ನಾವು ಮಾಡುವ ಭಕ್ತ್ಯಾದರ ಪೂರ್ವಕವಾದ ಆಗ್ರಹದ ಪ್ರಾರ್ಥನೆಗೆ ಓಗೊಟ್ಟು ದಯಮಾಡಿಸುವರು.

ಆಸನ ಪಾತ್ರ ವಿನ್ಯಾಸಕ್ರಮ

ಆ ಎಲ್ಲ ದೇವತೆಗಳನ್ನು ಈ ಕ್ರಮದಲ್ಲಿ ಕೂಡಿಸುವದು.

ವೇದಿಕೆಯ ಮೇಲೆ ಪ್ರಧಾನವಾದ ಒಂದು ಆಸನ. ಅದರ ಬಲ, ಎಡ ಬದಿಗಳಲ್ಲಿ (೧೨-೧೨) ಹನ್ನೆರಡು-ಹನ್ನೆರಡರಂತೆ ಇಪ್ಪತ್ತನಾಲ್ಕು (೨೪) ಆಸನಗಳು. ಪ್ರಧಾನ ಆಸನದ ಎದುರಿನಲ್ಲಿ ಐದು ಆಸನಗಳು.

ಪ್ರಧಾನವಾದ ಆಸನದಲ್ಲಿ ನಾವು ಆವಾಹಿಸಿದ ದೇವರು ಆಸೀನನಾಗುವ. ಅವನ ಬದಿಯಲ್ಲಿ ಶ್ರೀದೇವಿ ಭೂದೇವಿಯರು ಮಂಡಿಸುವರು.

ಬಲಬದಿಯ ಪಂಕ್ತಿಯಲ್ಲಿ ಕೇಶವಾದಿ ದಾಮೋದರಾಂತ, ಎಡಬದಿಯ

ಪಂಕ್ತಿಯಲ್ಲಿ ಸಂಕರ್ಷಣಾದಿ ಕೃಷ್ಣಾಂತ ದೇವತೆಗಳು ಕೂಡುವರು.

ಈ ಎಲ್ಲ ಭಗವದ್ರೂಪಗಳು ನೃತ್ಯ, ಗೀತ, ವಾದ್ಯ, ಜಯಘೋಷಗಳ ಮಧ್ಯದಲ್ಲಿ ಸೋಪಾನಗಳನ್ನು ಏರಿ ವೇದಿಕೆಯಲ್ಲಿ ವಿರಾಜಿಸುವರು.

ದೇವರ ಎದುರಿನಲ್ಲಿ ವಿಶಾಲವಾದ ಕುಡಿಬಾಳೆ ಎಲೆಯನ್ನು ಹಾಸಿರಬೇಕು.

ಅದರ ಮೇಲೆ ಬಂಗಾರದ ದೊಡ್ಡ ತಟ್ಟೆ ಅದರಲ್ಲಿ ದೊಡ್ಡ ಬಟ್ಟಲುಗಳು ಅನೇಕ, ಸಣ್ಣ ಬಟ್ಟಲುಗಳು ಅನೇಕ.

ಬಳಿಯಲ್ಲಿ ರತ್ನಖಚಿತವಾದ ಬಂಗಾರದ ನೀರಿನ ದೊಡ್ಡ ತಂಬಿಗೆ. ಅದರ ಹತ್ತಿರ ಉಪ(ಸಣ್ಣ)ಪಾತ್ರ.

ಎಡದಲ್ಲಿ ಹಾಗೂ ಬಲದಲ್ಲಿ ಸ್ವರ್ಣದ ದೀಪಸ್ತಂಭಗಳು. ಘಮಘಮಿಸುವ ತುಪ್ಪದ ದೀಪ.

ಇಷ್ಟೆಲ್ಲ ಸಿದ್ಧತೆ ಆದ ಬಳಿಕ ಅನ್ನ ಪರಮಾನ್ನ ಮುಂತಾದ ಪದಾರ್ಥಗಳನ್ನು ಶ್ರೀದೇವಿಯು ಒಂದು ರೂಪದಿಂದ ಬಡಿಸುವಳು.

ನಿತ್ಯತೃಪ್ತನಾದ ಶ್ರೀ ದೇವನಿಗೆ ಇದೊಂದು ಲೀಲೆ. ಶ್ರೀದೇವಿಗೆ ಇದೊಂದು ಸೇವೆ. ಮುಖ್ಯಪ್ರಾಣದೇವರು ತಂಪನೆಯ ಸುಗಂಧಗಾಳಿಯನ್ನು ಬೀಸುತ್ತಲಿದ್ದಾರೆ.

ಭಾರತೀ ಸರಸ್ವತಿಯರು ಲಗುಬಗೆಯಿಂದ ಭಗವಂತನ ಸೇವೆಯನ್ನು ಮಾಡುತ್ತಲಿದ್ದಾರೆ.

ಅನ್ನಾದಿ ದೇವತೆಗಳು

ಹೀಗೆ ಭಗವಂತನ ಎಲೆಯಲ್ಲಿ ಬಡಿಸಿದ ನಾನಾ ಬಗೆಯ ಭೋಜನ ಪದಾರ್ಥಗಳಲ್ಲಿ ಬೇರೆ ಬೇರೆ ಅಭಿಮಾನಿ ದೇವತೆಗಳು ಹಾಗೂ ಭಗವಂತನ ನಾನಾರೂಪಗಳು ಇವೆ ಎಂದು ಚಿಂತಿಸಬೇಕು.

ಅನ್ನ	ಚಂದ್ರ	ಕೇಶವ
ಪರಮಾನ್ನ	ಭಾರತೀ	ನಾರಾಯಣ
ಭಕ್ಷ್ಯ	ಸೂರ್ಯ	ಮಾಧವ
ಘೃತ	ಲಕ್ಷ್ಮೀ	ಗೋವಿಂದ
ಕ್ಷೀರ	ವಾಣಿ	ವಿಷ್ಣು
ಮಂಡ	ಬ್ರಹ್ಮ	ಮಧುಸೂದನ
ಬೆಣ್ಣೆ	ವಾಯು	ತ್ರಿವಿಕ್ರಮ
ಮೊಸರು	ಸೋಮವರುಣ	ವಾಮನ
ಸೂಪ	ಗರುಡ	ಶ್ರೀಧರ
ಸೊಪ್ಪುಪಲ್ಯೆ	ಮಿತ್ರ	ಹೃಷೀಕೇಶ

ಕಾಯಿಪಲ್ಯೆ	ಶೇಷ	ಪದ್ಮನಾಭ
ಹುಳಿದ್ರವ್ಯ	ಗಿರಿಜೆ	ದಾಮೋದರ
ಹುಳಿಅಲ್ಲದದ್ರವ್ಯ	ರುದ್ರ	ಸಂಕರ್ಷಣ
ಬೆಲ್ಲ ಸಕ್ಕರೆ	ಇಂದ್ರ	ವಾಸುದೇವ
ಬಾಡಿಸಿಕೊಳ್ಳುವಉಪಸ್ಕರ	ಬೃಹಸ್ಪತಿ	ಪ್ರದ್ಯುಮ್ನ
ಕಟುದ್ರವ್ಯ	ಯಮ	ಅನಿರುದ್ಧ
ಸಾಸಿವೆಕರ್ಪೂರಇಂಗುಯಾಲಕ್ಕಿ	ಮನ್ಮಥ	ಪುರುಷೋತ್ತಮ
ಹಾಲು,ಎಣ್ಣೆ ತುಪ್ಪ,ಪಕ್ವಪದಾರ್ಥ	ಜಯಂತ	ಅಧೋಕ್ಷಜ
ಸಂಡಿಗೆ ಇತ್ಯಾದಿ	ದಕ್ಷ	ನರಸಿಂಹ
ಉದ್ದಿನ ವಡೆ ಇತ್ಯಾದಿ	ಮನು	ಅಚ್ಯುತ
ಲವಣ	ನಿರ್ಋತಿ	ಜನಾರ್ದನ
ಫಲರಸ	ಅಹಂಕಾರಿಕಪ್ರಾಣ	ಉಪೇಂದ್ರ
ತಾಂಬೂಲ	ಗಂಗಾ	ಶ್ರೀಹರಿ
ಸ್ವಾದೂದಕ	ಬುಧ	ಶ್ರೀಕೃಷ್ಣ
ಪಾಕಶುದ್ಧಿ	ಪುಷ್ಕರ	ಹಂಸ
ಸ್ವಾದುರಸ	ರತಿ	ವಿಶ್ವ
ಎಲೆ	ಅಗ್ನಿ	ಭಾರ್ಗವ
ಕಾಷ್ಠಕುಳ್ಳಿ	ವಸಂತ	ವೃಷಭ
ಪಾಚಕ	ಮಹಾಲಕ್ಷ್ಮೀ	ವಿಶ್ವಂಭರ
ಭೋಜನವೇದಿಕೆ,ಮಂಡಲ	ಭೂದೇವಿ	ವರಾಹ
ನೈವೇದ್ಯದಟಟ್ಟೆ	ಗಣಪತಿ	ಸನತ್ಕುಮಾರ
ಜವನಿಕಾ	ವಿಶ್ವಕ್ಸೇನ	ಪುರುಷ
ತುಲಸಿ	ರಮಾ	ಕಪಿಲ
ತಟ್ಟೆ	ದುರ್ಗಾ	ಸತ್ಯ
ಪಾತ್ರರಕ್ಷಕ	ವಾರುಣಿ	ಆನಂದ

ಹೀಗೆ ಅನೇಕ ಭಗವದ್ರೂಪಗಳ ಹಾಗೂ ಅಭಿಮಾನಿದೇವತೆಗಳ ಸಂಪೂರ್ಣ ಸನ್ನಿಧಾನ ಉಳ್ಳ ಅನ್ನಾದಿಪದಾರ್ಥಗಳನ್ನು ಭಗವಂತನಿಗೆ ಬಡಿಸಿದ್ದೇವೆ ಎಂದು ತಿಳಿಯಬೇಕು.

ಕೈಯಲ್ಲಿ ನೀರು ತೆಗೆದುಕೊಂಡು 'ಸತ್ಯಂ ತ್ವಾ ಋತೇನ ಪರಿಷಿಂಚಾಮಿ' ಎಂಬ ಮಂತ್ರದಿಂದ ಪರಿಷೇಚನಮಾಡುವದು.

'ಸುಧಾರಸವೆಂಬ ಆಪೋಷನವನ್ನು ಮಹಾಲಕ್ಷ್ಮೀ ನಿನ್ನ ಬಲಗೈಯಲ್ಲಿ ನೀಡುತ್ತಿರುವಳು ಸ್ವೀಕರಿಸು. ಸುರರೊಡೆಯ! ಈ ಸುಧಾರಸವನ್ನು ಪಾನಮಾಡಿ ಯಥೇಷ್ಟವಾಗಿ ಬೋಜನಮಾಡು.' ಎಂದು ನೆನೆಸಿ 'ಅಮೃತೋಪಸ್ತರಣಮಸಿ' ಎಂಬ ಮಂತ್ರದಿಂದ ನೀರು ಬಿಡಬೇಕು.

ಬಳಿಕ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನನಾಮಕ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರಿಗೆ ಶಂಖದಿಂದ ಇಲ್ಲವೇ ಉದ್ಧರಣಿಯಿಂದ ನೀರು ಬಿಡಬೇಕು. ಇದೇ ಪಂಚ ಪ್ರಾಣಾಹುತಿ.

ಬಳಿಕ **'ಮಧುವಾತಾ...' 'ಸ್ವಾದುಃ ಪವಸ್ವ...' 'ಭೋಜ್ಯಂತ್ವಾ...' 'ಭೋಜಮಶ್ವಾ...' 'ಸ್ತವಿಷ್ಯಾಮಿ...'** (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಮುಂತಾದ ಮಂತ್ರಗಳನ್ನು ಪಠಿಸಬೇಕು.

ನೈವೇದ್ಯ ಸ್ವೀಕಾರ ಪ್ರಾರ್ಥನೆ.

ನಂತರ ಭಗವಂತನಿಗೆ ಪ್ರಾರ್ಥಿಸುವುದು.

'ಓ ದೇವ, ಇಂದು ನನ್ನ ಮನೆಯಲ್ಲಿ ಮಾಡಿದ ಅನ್ನ, ಉಪಸ್ಕರ, ಪಾನೀಯ, ಇವೆಲ್ಲವೂ ನಿನಗೆ ಸಮರ್ಪಿತ.

ಆ ಆ ಕಾಲದಲ್ಲಿ ಮನುಷ್ಯ, ನಾನಾವಿಧವಾದ ಪ್ರಾಣಿ, ಪಶು, ಸರೀಸೃಪ, ಪಕ್ಷಿ ಕ್ರಿಮಿ, ಕೀಟ, ಜಲಚರ, ಋಷಿ, ಗಂಧರ್ವ, ದೇವ, ದೇವೋತ್ತಮ ಇವರೆಲ್ಲರು ಉಣ್ಣುವ, ಭೋಗಿಸುವ ಪದಾರ್ಥವೆಲ್ಲ ನಿನಗೆ ಸಮರ್ಪಣ.

'ಓ ಸಿರಿಯೊಡೆಯ! ನೀನು ನಿತ್ಯತೃಪ್ತ, ಆಪ್ತಕಾಮ, ಅನಂತಾನಂದ ಸಂದೋಹರೂಪ, ಪರನಿರಪೇಕ್ಷ; ಆದರೆ ಭಕ್ತವತ್ಸಲನೂ ಹೌದು. ಕಾರಣ ನಾನು ಇಟ್ಟ (ನನ್ನಿಂದ ಮಾಡಿಸಿ ಇಡಿಸಿದ) ನಿನ್ನದೇ ಆದ ಈ ಮಹಾನೈವೇದ್ಯವನ್ನು ನೀನು ಸ್ವೀಕರಿಸು.'

'ಓ ಭಗವನ್, ನಿನ್ನೆದುರು ನೈವೇದ್ಯವನ್ನು ಇಟ್ಟಿರುವೆ. ಅದನ್ನು ಕಪಿಲರೂಪವಾದ ನಿನ್ನ ದಿವ್ಯಕಣ್ಣುಗಳಿಂದ ಅವಲೋಕಿಸು.

ಆ ಪದಾರ್ಥಗಳಲ್ಲಿರುವ ದಿವ್ಯಗಂಧವನ್ನು ನರಸಿಂಹರೂಪವಾದ ಅಪ್ರಾಕೃತ ನಿನ್ನ ಘ್ರಾಣೇಂದ್ರಿಯದಿಂದ ಆಘ್ರಾಣಿಸು.

ಪರಶುರಾಮರೂಪವಾದ ವಾಗಿಂದ್ರಿಯದಿಂದ ನನ್ನನ್ನು ಮೃದುಲ ಮಾತುಗಳಿಂದ ಸಾಂತ್ವನಗೊಳಿಸು. ನನ್ನಲ್ಲಿ ದಯ ತೋರು.

ನಾನು, ನನ್ನ ಮಡದಿ ಮುಂತಾದವರು ಮಾಡಿದ ಅಡಿಗೆಯನ್ನು ಪವಿತ್ರಗೊಳಿಸು. ಆಯಾ ಪದಾರ್ಥಗಳಿಗೆ ಯೋಗ್ಯವಾದ ಅಪ್ರಾಕೃತ ಸ್ವಾದುರಸದಿಂದ ಭೋಜ್ಯಪದಾರ್ಥಗಳನ್ನು ತುಂಬು.

ಬಳಿಕ ನಿನ್ನ ಕೂರ್ಮರೂಪಾತ್ಮಕವಾದ ನಾಲಿಗೆಯಿಂದ ಚಪ್ಪರಿಸಿ ಆಸ್ವಾದಿಸು.

ಎಣಿಕೆ ಇಲ್ಲದ ಎನ್ನಪರಾಧಗಳನ್ನು ಕ್ಷಮಿಸು.'

ನಮ್ಮ ಹೃದಯದಲ್ಲಿರುವ ಭಗವದ್ರೂಪವೇ ಶಾಲಿಗ್ರಾಮ ಪ್ರತಿಮೆಗಳಲ್ಲಿದೆ. ಅಚಿಂತ್ಯಾದ್ಭುತಶಕ್ತಿಯಿಂದ ಭಗವಂತನು ಪ್ರತಿಮೆ, ಶಾಲಿಗ್ರಾಮ, ಅರ್ಚಕ ಹಾಗೂ ಭೋಜ್ಯಪದಾರ್ಥಗಳಲ್ಲಿ ತುಂಬಿ ಕೊಂಡಿರುವನೆಂಬ ಅನುಸಂಧಾನ ಅಗತ್ಯ.

'ಓ ಸ್ವತಂತ್ರ ಓ ನಿರ್ದೋಷ!

ಓ ಸರ್ವವೇದಾದಿಗಳಿಂದ ತಿಳಿಯಬೇಕಾದ ಪರತತ್ತ್ವ!

ಭವಬಂಧನ ಬಿಡಿಸಿ ಮುಕ್ತಿಧಾಮವನ್ನೀಯುವ ಮುಕುಂದ! ವಾಸುದೇವ!

ಯಾವುದರ ಅಪೇಕ್ಷೆಯೂ ಇಲ್ಲದ ಆಪ್ತಕಾಮ! ನಿಸ್ಪೃಹ!

ಎಲ್ಲವನ್ನೂ ನಿಯಮಿಸುವ ಸರ್ವೇಶ್ವರ!

ಸ್ವಾಭ್ಯರಸವನ್ನೇ ಭೋಗಿಸುವ ಶುಭಸಾರಭೋಕ್ತಾ!

ಏನನ್ನು ಉಣ್ಣದಿದ್ದರೂ ನಿರ್ವಿಕಾರನಾಗಿರುವ ಅವ್ಯಯ!

ಸಿರಿ ವಿಧಿ ವಾಯುಗಳ ಎಣಿಕೆಗೆ ಎಟುಕದೇ ದೂರನಿಂತ ಅಪ್ರಮೇಯ! ಅವರೆಲ್ಲರಿಂದ ವಂದಿತ! ಎಂದಿಗೂ ಸಂಕಲ್ಪವನ್ನು ತಪ್ಪಿಸದ ಸತ್ಯಸಂಕಲ್ಪ! ಭಕ್ತರನ್ನು ಹರಸಿ ಉದ್ಧರಿಸುವ ಕಾರುಣ್ಯನಿಧೆ!

ರೋಗ, ರುಜಿನೆ, ಹುಟ್ಟು, ಸಾವು, ನೋವು, ಅಳಿವು ಮುಂತಾದ ಯಾವದೋಷಗಳಿಲ್ಲದ ನಿತ್ಯ ನಿರಾಮಯ!

ಭಕ್ತರು ಮಾಡಿದ, ಕ್ಷುದ್ರ ಸೇವೆಯನ್ನು ಹಿಗ್ಗಿಸಿ ದೊಡ್ಡದಾಗಿ ಕಾಣುವ ಭಕ್ತವತ್ಸಲ!

ನನ್ನನ್ನು ಕಾಪಿಡು. ಓ ಭಗವನ್! ನಿನ್ನ ಸ್ವಾಭ್ಯರಸವನ್ನು ಭೋಗಿಸು.

ರಸರೂಪನಾದ ನಿನ್ನನ್ನೇ ನೀನು ಉಣ್ಣು ಲಕ್ಷ್ಮೀರೂಪವಾದ ರಸವನ್ನು ಆಘ್ರಾಣಮಾಡು. ಪ್ರಾಕೃತರಸಗಳನ್ನು ಕಣ್ಣಿನಿಂದ ನೋಡು. ಶುದ್ಧಗೊಳಿಸು." ಹೀಗೆ ಪ್ರಾರ್ಥಿಸಿ, ನೈವೇದ್ಯವನ್ನು ಸಮರ್ಪಿಸಬೇಕು.

ಆ ಕಾಲದಲ್ಲಿ ದ್ವಾದಶ ಸ್ತೋತ್ರಾದಿಗಳನ್ನು ಪಠಿಸಬೇಕು.

ನೈವೇದ್ಯ ಅನುಸಂಧಾನ

ಈ ಸನ್ನಿವೇಶದಲ್ಲಿ, ವಿಶ್ವಗುರುಗಳಾದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ತಿಳಿಸಿರುವ ಅನೇಕ ಪ್ರಮೇಯಗಳಲ್ಲಿಯ ಕೆಲವನ್ನು ಇಲ್ಲಿ ಸಂಗ್ರಹವಾಗಿ ತಿಳಿಯೋಣ. ತಿಳಿದು ಅನುಸಂಧಾನ ಮಾಡಲು ಯತ್ನಿಸೋಣ.

ಭಗವಂತನ ಆನಂದಕ್ಕೆ ಕೊನೆ ಇಲ್ಲ. ಅದು ಅನಂತ, ಅನಂತವಿಧ. ಆ ತೆರನಾದ ಆನಂದ ಬೇರೆ ಯಾರೊಬ್ಬರಲ್ಲೂ ಇಲ್ಲ. ಅನಿತರಸಾಧಾರಣ. ಅದು ಅಲೌಕಿಕ ಹಾಗೂ ಅಪ್ರಾಕೃತ. ಅದು ಸ್ವತಂತ್ರ.

ಸಿರಿ, ವಿಧಿ, ವಾಯುಗಳ ಆನಂದದಂತೆ ಪರಾಧೀನವಲ್ಲ. ಅದು ಅನಾದಿ, ನಿತ್ಯ, ಶಾಶ್ವತ, ಏಕಪ್ರಕಾರ, ಸ್ವಾಭಾವಿಕ, ಅಚಿಂತ್ಯ, ಅದ್ಭುತ. ಅದು ನಿರವಧಿಕ. ನಿಶ್ಛಿದ್ರ.

ದೇವರ ಆನಂದಕ್ಕಿಂತಲೂ ಹೆಚ್ಚಿನ ಆನಂದ ಯಾರಿಗೂ ಇಲ್ಲ, ಅಂತೆಯೇ ನಿರತಿಶಯ. ಈ ಆನಂದದೊಡನೆ ದುಃಖ ಮಿಶ್ರಿತವಾಗಿಲ್ಲ.

ದೇವರ ಆನಂದ ಎಂದಿಗೂ ಹಿಗ್ಗುವುದಿಲ್ಲ. ಎಂದಿಗೂ ಕುಗ್ಗುವುದಿಲ್ಲ. ಹ್ರಾಸ, ವೃದ್ಧಿ ವಿಹೀನ.

ಇಂಥ ಆನಂದವೇ ಆ ಭಗವಂತನ ಸ್ವರೂಪ. ಅಂತೆಯೇ ಆತ ಪೂರ್ಣ ಪರಿತುಷ್ಟ, ಪರಿಪೂರ್ಣ ಆಪ್ತಕಾಮ.

ಹೀಗಿದ್ದರೂ ಇಚ್ಛಿಸುವದು ಅವನ ಕ್ರೀಡೆ, ಭೋಗಿಸುವದು ಅವನ ಲೀಲೆ. ಭೋಗವಿದ್ದಾಗ ವೃದ್ಧಿ ಇಲ್ಲದಿರುವಾಗ ಕ್ಷಯ ಎನ್ನುವದು ಇಲ್ಲ.

ಭಗವಂತ ಇಡಿಯ ವಿಶ್ವವನ್ನೇ ಭೋಗಿಸುತ್ತಾನೆ. ಅವನು ಭೋಗಿಸದಿರುವ ವಸ್ತುವೇ ಇಲ್ಲ.

ಅವನಿಗೆ ಭೋಗ್ಯವಾದದ್ದು ತನ್ನಯ ಸ್ವರೂಪ, ತನ್ನ ಗುಣ, ರೂಪ, ಕ್ರಿಯೆಗಳು. ನಂತರ ರಮಾದೇವಿಯ ರೂಪ, ಗುಣ, ಕ್ರಿಯೆಗಳು, ಬ್ರಹ್ಮ ವಾಯು ಮುಂತಾದ ಸಮಸ್ತ ದೇವತೆಗಳು, ಎಲ್ಲ ಚೇತನರು, ದೇಶ, ಕಾಲ, ಶಬ್ದ ಪ್ರಕೃತಿತತ್ವವೇ ಮೊದಲಾದ ಸಮಸ್ತ ಜಡ ಪದಾರ್ಥಗಳು, ಅಷ್ಟೇ ಅಲ್ಲ, ತಾಮಸರು, ಅವರ ದುರ್ಗುಣ, ಅವರು ಹೊಂದುವ ನರಕ, ಅಂಧಂತಮಸ್ಸು, ಅವರು ಅಲ್ಲಿ ಅನುಭವಿಸುವ ದುಃಖ ಇತ್ಯಾದಿ.

ಹೀಗಿದೆ ಶ್ರೀಹರಿಯ ಭೋಗ್ಯವಸ್ತುಗಳ ಪಟ್ಟಿ. ಅವುಗಳಲ್ಲಿ ಭಗವಂತನ ಸ್ವರೂಪ, ಗುಣ, ಕ್ರಿಯೆಗಳು ಸರ್ವೋತ್ತಮವಾಗಿವೆ.

ಸ್ವರೂಪ, ಗುಣ, ಕ್ರಿಯಾಭೋಗ

ಭಗವಂತ ತನ್ನನ್ನು ತಾನು ಭೋಗಿಸುತ್ತಾನೆ. ಇದು ಸ್ವಾತ್ಮ ಭೋಗ. ಇದು ಎರಡು ಬಗೆ.

ವಿಷಯಗಳಲ್ಲಿ ಅಧಿಷ್ಠಿತವಾಗದಿರುವ ತನ್ನ ಸ್ವರೂಪವನ್ನು ಅನುಭವಿಸುವದು ಒಂದು.

ವಿಷಯಗಳಲ್ಲಿ ಅಧಿಷ್ಠಿತವಾಗಿರುವ ತನ್ನ ಸ್ವರೂಪವನ್ನು ಅನುಭವಿಸುವದು ಮತ್ತೊಂದು.

ಇದರ ವಿವರ.

ಪರಮಾತ್ಮನಿಗೆ ಅನಂತಾನಂತ ರೂಪಗುಣಗಳು. ಅದರಲ್ಲಿ ಕೆಲವು ಮಾತ್ರ ರಮಾದಿ ಚೇತನರಲ್ಲೂ ಪ್ರಕೃತಿ ಮುಂತಾದ ಅಚೇತನಗಳಲ್ಲೂ ಅಧಿಷ್ಠಿತವಾಗಿವೆ.

ರಮಾದಿಗಳಲ್ಲಿರುವ ರೂಪಗಳು ಸ್ವಾಭ್ಯರಮಾದಿರೂಪಗಳೆಂದು ಕರೆಯಲ್ಪಡುತ್ತವೆ. (ಈ ಬಗ್ಗೆ ಇದೇ ಗ್ರಂಥದಲ್ಲಿ ಬೇರೆ ಕಡೆಗೆ ಸ್ವಲ್ಪ ವಿವರಿಸಿದಂತೆ) ಭಗವಂತನು ರೂಪದಲ್ಲಿ ರೂಪನಾಗಿ, ರಸದಲ್ಲಿ ರಸನಾಗಿ, ನೀರಿನಲ್ಲಿ ನೀರಾಗಿ, ಹಣ್ಣಿನಲ್ಲಿ ಹಣ್ಣಾಗಿ (ಅಂದರೆ ಆಯಾ ರೂಪಗಳಿಂದ) ಇರುವನು.

ಇಂಥ, ರೂಪ, ರಸ, ನೀರು, ಹಣ್ಣುಗಳಲ್ಲಿರುವ ಭಗವಂತನ ರೂಪ, ರಸ, ನೀರು, ಹಣ್ಣಿನ ರೂಪಗಳಿಗೆ ಸ್ವಾಖ್ಯರೂಪ, ಸ್ವಾಖ್ಯರಸ ಮುಂತಾಗಿ ಕರೆಯಬೇಕು.

ಇದನ್ನುಳಿದ ಅನಂತಾನಂತ ರೂಪಗಳು ಯಾವ ಅಧಿಷ್ಠಾನದಲ್ಲೂ ಇರುವವಲ್ಲ.

ಯಾವ ಅಧಿಷ್ಠಾನಗಳಲ್ಲೂ ಅಧಿಕ್ಷಿತವಾಗದಿರುವ ತನ್ನ ಅನಂತಾನಂತ ರೂಪಗಳನ್ನು ಭಗವಂತನು ಅನುಭವಿಸುತ್ತಾನೆ.

ಅಲ್ಲದೇ ತನ್ನಯ ಆನಂದ, ಜ್ಞಾನ, ದ್ಯುತಿ, ಬಲ, ಸೌಂದರ್ಯ, ಔದಾರ್ಯ, ವೀರ್ಯ, ಸ್ವಾತಂತ್ರ್ಯ, ಪ್ರಾಗಲ್ಭ್ಯ, ಇಚ್ಛಾ ದಯಾ, ಪ್ರೀತಿ, ಕ್ಷಮಾ, ಕೃತಿ, ತೇಜಸ್, ಕಾಂತಿ, ಸ್ವಾಮಿತ್ವ ಮುಂತಾದ ಅನಂತ ಗುಣಗಳನ್ನು,

ಸೃಜನ, ಪಾಲನ, ಸಂಹರಣ, ಪ್ರೇರಣ, ನಿಯಮನ, ಧಾರಣ, ಬೋಧನ, ಬಂಧನ, ಮೋಚನ, ಗಮನ ಮುಂತಾದ ಅನಂತ ಕ್ರಿಯೆಗಳನ್ನೂ ಅನುಭವಿಸುತ್ತಾನೆ.

ಈ ಎಲ್ಲ ಗುಣಗಳೂ ಕ್ರಿಯೆಗಳೂ ಭಗವಂತನಿಂದ ಅತ್ಯಂತಾಭಿನ್ನ.

ಒಂದೊಂದು ಗುಣವೂ ಒಂದೊಂದು ಕ್ರಿಯೆಯೂ ಅನಂತ. ಪ್ರತಿಯೊಂದು ಗುಣ ಹಾಗೂ ಕ್ರಿಯೆಗಳು ಅನಂತಗುಣಗಳಿಂದ ಪೂರ್ಣವಾಗಿವೆ. ಅನಂತ ಕ್ರಿಯಾಮಯವಾಗಿವೆ.

ಎಂದರೆ ಜ್ಞಾನಕ್ಕೆ ಜ್ಞಾನ, ಬಲ, ಆನಂದಾದಿ ಗುಣಗಳೂ ಹಾಗೂ ಸೃಜನ, ಪಾಲನ, ಪ್ರೇರಣ ಮುಂತಾದ ಕ್ರಿಯೆಗಳೂ ಇವೆ.

ಅಂದರೆ ಜ್ಞಾನವೆಂಬ ಹೆಸರಿನ ಭಗವಂತನ ರೂಪವೇ ವಿಶ್ವದ ಸೃಷ್ಟಿ ಸಂಹಾರ ಮುಂತಾದ ಅನಂತ ಕ್ರಿಯೆಗಳನ್ನು ಮಾಡುತ್ತದೆ ಎಂದರ್ಥ.

ಇದೇ ರೀತಿ ಆನಂದ, ಬಲ ಮುಂತಾದ ಗುಣಗಳು, ಹಾಗೂ ಪಾಲನ ಪ್ರೇರಣ ಮುಂತಾದ ಕ್ರಿಯೆಗಳೂ ಅನಂತ ಗುಣಕ್ರಿಯಾಪೂರ್ಣವಾಗಿವೆ.

ಈ ಎಲ್ಲ ಗುಣಕ್ರಿಯೆಗಳು ಭಗವಂತನಿಗೆ ಭೋಗ್ಯವಾಗಿವೆ.

ಅಲ್ಲದೇ ದೇವರು ಗುಣಗಳನ್ನು, ಕ್ರಿಯೆಗಳನ್ನು ಅನುಭವಿಸುವಂತೆ ಗುಣಗಳೂ ಗುಣಕ್ರಿಯೆಗಳನ್ನು, ಕ್ರಿಯೆಗಳೂ ಗುಣಕ್ರಿಯೆಗಳನ್ನು ಅನುಭವಿಸುತ್ತವೆ. ಆದುದರಿಂದ ಪರಸ್ಪರ ಭೋಗ್ಯವಾಗಿವೆ.

ಇದು ಎಲ್ಲ ಆ ಅನಂತನ ಅಚಿಂತ್ಯ ಲೀಲಾವಿಲಾಸ. ಮಾನವನಿಗೆ, ಛೇ, ರಮಾದಿಗಳಿಗೂ ತಿಳಿಯಲು ಅಸಾಧ್ಯ.

ಮೇಲೆ ಹೇಳಿದ ಎರಡನೇ ತರಹದ ರೂಪಗಳ ಭೋಗವನ್ನು ವಿವರವಾಗಿ ತಿಳಿಯೋಣ.

ರಮಾದಿದೇವತೆಗಳಲ್ಲಿ ಇರುವ ತನ್ನ ರೂಪಗಳನ್ನು ಅನುಭವಿಸುತ್ತಾನೆ. ಅದೇ ರೀತಿ, ಭಕ್ಷ್ಯ ಭೋಜ್ಯಗಳಲ್ಲೂ ಹಣ್ಣು ಹಾಲು ಮಧುಗಳಲ್ಲೂ ಇರುವ ತನ್ನ ರೂಪಗಳನ್ನು ಭಗವಂತ ಭೋಗಿಸುತ್ತಾನೆ. ಈ ರೂಪಗಳೇ ಸ್ವಾಖ್ಯರಸ, ಸ್ವಾಖ್ಯದ್ರವ್ಯಗಳೆಂದು ಕರೆಯಲ್ಪಡುತ್ತವೆ.

ಇನ್ನು ಭಗವದ್ರೂಪವಾದ ವಿಷಯಗಳು ಅನಂತ, ಅನಂತವಿಧ. ಹೇಗೆ ರೂಪ ಕಣ್ಣಿಗೆ ಮಾತ್ರ ತೋರುವದು ಹೊರತು ಕಿವಿಗೆ ಅಲ್ಲ, ಹಾಗೆ ಭಗವದಾತ್ಮಕ ಬಣ್ಣಗಳು ಅನಂತವಿಧವಾದುದರಿಂದ ಅನಂತ ಇಂದ್ರಿಯಗಳಿಂದ ಸಂಭೋಗ್ಯವಾಗಿವೆ.

ಅನಂತ ಇಂದ್ರಿಯಗಳು ಭಗವಂತನಿಗೆ ಮಾತ್ರವಿರುವದರಿಂದ ಅವನಿಗೆ ಮಾತ್ರ ಅವು ಸಂಭೋಗ್ಯವು.

ಈ ಭಗವದಾತ್ಮಕ ಬಣ್ಣ ರಸ ಮುಂತಾದವುಗಳನ್ನು ಸಿರಿ, ವಿಧಿ ಮುಂತಾದ ದೇವತೆಗಳು ಚಿಂತಿಸಲೂ ಸಮರ್ಥರಾಗುವದಿಲ್ಲ.

ಇವು ಪ್ರಪಂಚದಲ್ಲಿ ಅನುಭವಿಸುವಂತಹ ರೂಪ ರಸಗಳಲ್ಲ. ಲೋಕತೋ ಅತ್ಯಂತವಿಲಕ್ಷಣವಾಗಿವೆ. ಇದನ್ನು ಕಂಡು ಸಿರಿಯೂ ಪುಲಕಿತಳಾಗುತ್ತಾಳೆ, ಬೆರುಗುಗೊಂಡು ಬಾಗಿ ನಮಿಸುತ್ತಾಳೆ.

ಅಲ್ಲದೇ ಭಗವದಾತ್ಮಕ ಶಬ್ದ ರಸ ಮುಂತಾದವು ತಮ್ಮನ್ನು ತಾವು ಭೋಗಿಸುತ್ತವೆ.

ಭಗವದಾತ್ಮಕಶಬ್ದವು ರೂಪ ರಸಾದಿಗಳನ್ನೂ ಭೋಗಿಸುತ್ತದೆ. ಭಗವದಾತ್ಮಕರೂಪವೂ ಶಬ್ದ ರಸಾದಿಗಳನ್ನು ಭೋಗಿಸುತ್ತದೆ.

ಹೀಗೆ ಸ್ವಭೋಗ್ಯವೂ ಅನ್ಯೋನ್ಯಭೋಗ್ಯವೂ ಆಗಿವೆ.

ಭೂತ ಭವಿಷ್ಯ ಸುಖಭೋಗ

ನಾವು ವರ್ತಮಾನವನ್ನು ಮಾತ್ರ ಅನುಭವಿಸುತ್ತೇವೆ. ಅತೀತವನ್ನು ನೆನೆಯುತ್ತೇವೆ, ಆದರೆ ಅನುಭವಿಸಲಾರೆವು.

ಭವಿಷ್ಯವನ್ನಂತೂ ಅನುಭವಿಸಲೂ ನೆನೆಯಲೂ ಸಾಧ್ಯವಿಲ್ಲ. ಕೇವಲ ಊಹೆ, ಕಲ್ಪನೆ ಸಾಧ್ಯ.

ಆದರೆ ಭಗವಂತ ವರ್ತಮಾನದಂತೆ ಅನಂತಾನಂತ ಬ್ರಹ್ಮಕಲ್ಪಗಳ ಹಿಂದೆ ಆಗಿಹೋದ, ಅನಂತಾನಂತ ಬ್ರಹ್ಮಕಲ್ಪಗಳ ಮುಂದೆ ಬರುವ ತನ್ನಯ ಅನಂತ ಸುಖವನ್ನು ಎಲ್ಲ ಕಾಲದಲ್ಲೂ, ಕ್ಷಣದ ಅನಂತಾಂಶದಷ್ಟು ಸೂಕ್ಷ್ಮಕಾಲದಲ್ಲೂ ಭೋಗಿಸುತ್ತಾನೆ. ಇದು ಅತ್ಯದ್ಭುತ.

ರಮಾ ರೂಪ, ಗುಣ, ಕ್ರಿಯಾಭೋಗ

ಹಿಂದೆ ಹೇಳಿದಂತೆ ರಮಾ ದೇವಿಯಲ್ಲಿರುವ ತನ್ನ ರೂಪವನ್ನು ಭೋಗಿಸುತ್ತಾನೆ. ಅಲ್ಲದೇ ರಮಾದೇವಿಯನ್ನೂ ಭೋಗಿಸುತ್ತಾನೆ.

ಅವಳ ದೇಶಕಾಲವ್ಯಾಪ್ತಿ, ಭಕ್ತಿ, ಆನಂದ, ಜ್ಞಾನ, ಅವಳ ಅಸಾಧಾರಣ ಶಕ್ತಿ, ಸಾಮರ್ಥ್ಯ ಅವಳ ವಿಲಾಸ ಮಂದಹಾಸ, ನೃತ್ಯ, ಗಾನ, ಚಂಚಲಾಪಾಂಗನೀರಾಜನ ಮುಂತಾದವುಗಳನ್ನೆಲ್ಲ ದೇವರು ಅನುಭವಿಸುತ್ತಾನೆ.

ಈ ಗುಣಗಳೂ ಕ್ರಿಯೆಗಳೂ ಅನಂತ ಗುಣಕ್ರಿಯಾತ್ಮಕವಾಗಿರುವವು.

ಇದಲ್ಲದೇ ಭಗವಂತನು ಅನುಭವಿಸುವ ಬ್ರಹ್ಮಾದಿರೂಪವಾದ ಹಾಗೂ ಜಡರೂಪವಾದ ಶಬ್ದ ಸ್ಪರ್ಶಾದಿಗಳಲ್ಲೂ ಹೂ, ಹಣ್ಣು ಹಾರ, ಚಂದನ, ಆಸನ,

ಹಾಸಿಗೆ, ವಾಹನ, ಅರಮನೆ, ನದಿ, ಕಡಲು, ಬೆಟ್ಟ, ಗಿಡ, ಬಳ್ಳಿ, ದೀಪ, ಧೂಪ, ಪಾದುಕೆ, ಛತ್ರ, ಚಾಮರ, ವ್ಯಜನ, ಪರ್ಯಂಕ, ಮಣಿ, ಬೆಳ್ಳಿ, ಚಿನ್ನ ಮುಂತಾದ ಪದಾರ್ಥಗಳಲ್ಲಿ ಲಕ್ಷ್ಮಿಯು ಆಯಾ ರೂಪಳಾಗಿ ಆಯಾ ಆಕಾರಗಳಿಂದ ಇರುವಳು. ಇವು ರಮಾದೇವಿಯ ಸ್ವಾಖ್ಯರೂಪಗಳು.

ಈ ಎಲ್ಲ ರೂಪಗಳನ್ನು ಸ್ವತಂತ್ರ ಭಗವಂತ ಅನುಭವಿಸುವನು.

ಮುಕ್ತಭೋಗ್ಯ ಆನಂದಾದಿ ಭೋಗ.

ಮುಕ್ತನಾದ ಮನುಷ್ಯನಿಗೆ ಆಗುವ ಆನಂದವು ಒಂದು ಮೊತ್ತ ಎನ್ನುವುದಾದರೆ ಅದರ ನೂರು ಪಟ್ಟು ಮನುಷ್ಯಗಂಧರ್ವರ ಆನಂದ.

ಅದಕ್ಕೆ ನೂರು ಪಟ್ಟು ದೇವಗಂಧರ್ವರದು.

ಹೀಗೆ ಪಿತೃ, ಆಜಾನಜ, ಕರ್ಮದೇವ, ದೇವ, ದಕ್ಷ, ಇಂದ್ರ, ರುದ್ರ, ಬ್ರಹ್ಮ ರಮಾ ಈ ಎಲ್ಲ ದೇವತೆಗಳು ಉತ್ತರೋತ್ತರ ನೂರಾರು ಪಟ್ಟು ಹೆಚ್ಚಿನ ಆನಂದವನ್ನು ಆಸ್ವಾದಿಸುತ್ತಾರೆ.

ಹೀಗೆ ಅನಾದಿಕಾಲದಿಂದ ಅನಂತಕಾಲದವರೆಗಿನ ಮುಕ್ತರು ಅನುಭವಿಸುವ ಅನಂತ ಆನಂದವನ್ನು ಭಗವಂತ ಅನುಭವಿಸುವ.

ಇದೇ ಬಗೆಯಾಗಿ ಜ್ಞಾನ, ಬಲ, ಲಾವಣ್ಯ, ತೇಜಸ್ಸು ಮುಂತಾದ ಎಲ್ಲ ಗುಣಗಳನ್ನು ಅನುಭವಿಸುವ.

ಇವರೆಲ್ಲರ ಈ ಆನಂದಗಳ ಇಷ್ಟು ಬೃಹದ್ಮಾತ್ರದ ಮೊತ್ತವು ದೇವರ ಅನಂತವೂ, ಅಪಾರತೀರವೂ ಆದ ಆನಂದಕಡಲಿನ ಅತಿ ಕ್ಷುದ್ರವಾದ ಬಿಂದುವಿಗೂ ಕಡಿಮೆ.

ಜೊತೆಗೆ, ರಮಾ ಬ್ರಹ್ಮರೇ ಮೊದಲಾದ ಎಲ್ಲ ಮುಕ್ತಜೀವರು ನಿತ್ಯವೂ, ಪ್ರತಿಕ್ಷಣವೂ ದೇವರಿಂದ ಆನಂದವನ್ನು ಭಿಕ್ಷೆ ಬೇಡಿ ಅನುಭವಿಸುವ ಭಿಕ್ಷುಕರೇ, ಕಿಂಕರರೇ ಹೊರತು ಯಾರೂ ಸ್ವತಂತ್ರವಾಗಿ ಆನಂದವನ್ನು ಅನುಭವಿಸುವ ರಾಜರಲ್ಲ.

ದೇವತಾಭೋಗ

ಸಂಸಾರಸ್ಥರಾದ ಸಮಸ್ತಬ್ರಹ್ಮಾದಿದೇವತೆಗಳು ಜಡವಾದ ಹೂ ಹಣ್ಣು ಅನ್ನ, ಪಾಯಸ, ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯಾದಿಗಳಲ್ಲಿ ಆಯಾ ಆಕಾರ, ಗುಣ, ರಸ ಮುಂತಾದವುಗಳುಳ್ಳವರಾಗಿ ಇರುವರು.

ಅವರು ತಮ್ಮ ತಮ್ಮ ಆ ಸ್ವರೂಪಗಳನ್ನು ಸಮರ್ಪಿಸುತ್ತಾರೆ. ಅದನ್ನೆಲ್ಲ ಭಗವಂತ ಭೋಗಿಸುತ್ತಾನೆ.

ಕರ್ಮಾದಿ ಸಾಧನಭೋಗ

ದೇವರು ಬ್ರಹ್ಮಾದಿ ಸಕಲ ಜೀವರು ಮಾಡುವ ಭಕ್ತಿ, ಉಪಾಸನೆ, ಜ್ಞಾನ, ಕರ್ಮ, ಮುಂತಾದವುಗಳ ಭೋಗವನ್ನೂ ಮಾಡುತ್ತಾನೆ. ಜೀವರು ಮಾಡುವ ಯಜ್ಞ ತಪಸ್ಸು, ದಾನ ಇತ್ಯಾದಿಗಳನ್ನೂ ಭೋಗಿಸುತ್ತಾನೆ.

ತಾಮಸಜೀವಭೋಗ

ಇಷ್ಟು ಮಾತ್ರವಲ್ಲ, ದೇವರು ತಾಮಸ ಜೀವರಾಶಿಗಳ ತಮಃಸಾಧನವಾದ ಅಜ್ಞಾನ, ದ್ವೇಷ, ಭ್ರಾಂತಿ, ಕ್ರೌರ್ಯ, ಕೌಟಿಲ್ಯ, ದಂಭ, ದರ್ಪ, ಕ್ರೋಧ, ಪಾಪ, ಪಾರುಷ್ಯಗಳನ್ನೂ ಜರಾ, ಮರಣ, ರೋಗ, ಭಯ, ಶೋಕ, ನರಕ, ಯಾತನೆ ಹಾಗೂ ದುಃಖವನ್ನೂ

ಹೆಚ್ಚೇನು, ಅಂಧಂತಮಸ್ಸಿನಲ್ಲಿ ಅನುಭವಿಸುವ ಅತಿಪ್ರಖರವಾದ ನಿಬಿಡ ದುಸ್ಸಹ ದುಃಖವನ್ನೂ ಪರಮಾನಂದದಿಂದ ಅನುಭವಿಸುವ. ಅಹೋ ಅಹೋ ಆಶ್ಚರ್ಯ!

ದೇಶ ಕಾಲ ಜಡ ವಿಶ್ವ ಭೋಗ

ದೇವರು ಅನಂತ ದೇಶವನ್ನು ಅನಂತ ಕಾಲವನ್ನು ಅನುಭವಿಸುತ್ತಾನೆ. ಆ ಅನಂತ ದೇಶ ಕಾಲಗಳ ಅನಂತಾನಂತ ಅಂಶಗಳನ್ನೂ ನಿರವಧಿಕ ಸ್ಪಷ್ಟವಾಗಿ ಅನುಭವಿಸುತ್ತಾನೆ.

ಅವುಗಳಲ್ಲಿ ಸ್ವಾಖ್ಯದೇಶ ಕಾಲರೂಪಗಳಿಂದ ವ್ಯಾಪಿಸಿರುವದನ್ನೂ ನಾವು ತಿಳಿದಿರುವೆವು.

ಪ್ರಕೃತಿ, ಮಹತ್, ಅಹಂ, ಮನಸ್ಸು, ಇಂದ್ರಿಯ, ಭೂತ, ಬ್ರಹ್ಮಾಂಡ, ಲೋಕ, ದ್ವೀಪ, ಬೆಟ್ಟ, ಸಾಗರ ಮುಂತಾದವೆಲ್ಲವನ್ನೂ ಭಗವಂತನು ಭೋಗಿಸುತ್ತಾನೆ.

'...ಭೋಜನವದಾಯಿನೇ'

'ಅಲ್ಲಲ್ಲಿ ಆಹಾರವಿತ್ತವನು ಯಾರು'

ಇನ್ನೊಂದು ಮಹತ್ವದ ಅಂಶವನ್ನು ನಾವು ಗಮನಿಸಬೇಕು.

ಇಡಿಯ ವಿಶ್ವದ ಸೃಷ್ಟಿಯ ಮೊದಲ ಕ್ಷಣದಿಂದ ಕೊನೆಯ ಕ್ಷಣದವರೆಗೆ ಅನಂತಾನಂತ ಜೀವರಾಶಿಗಳು ಜನಿಸುವರು. ಈ ಜೀವರಾಶಿಗಳ ಸಂಖ್ಯೆ ಅನಂತಾನಂತ.

ಅಂದರೆ ಹಿಂದಿನ ಹಾಗೂ ಮುಂದಿನ ಅನಂತಕಾಲಕ್ಷಣಗಳ ಮತ್ತು ಹಿಂದಿನ ಹಾಗೂ ಮುಂದಿನ ಅನಂತಪರಮಾಣುಗಳ ಸಂಖ್ಯೆಗಿಂತಲೂ ಅನಂತ ಮಡಿ ಮಿಗಿಲಾದುದು ಜೀವರ ಸಂಖ್ಯೆ.

ಅವರಿಗೆ ಅನ್ನ, ಆಹಾರ ಅಗತ್ಯ. ಆದುದರಿಂದ ಆಹಾರವಿಲ್ಲದೇ ಯಾವ ಜೀವರನ್ನೂ ಎಂದಿಗೂ ಭಗವಂತ ಹುಟ್ಟಿಸುವದಿಲ್ಲ. ಹುಟ್ಟಿಸುವ ಆ ದೊರೆ ಹೊಟ್ಟೆಗೆ ಇಟ್ಟೇ ಹುಟ್ಟಿಸಿರುವ.

ಇಷ್ಟು ಮಾತ್ರವಲ್ಲ, ಎಲ್ಲರಿಗೆ ಒಂದೇ ತರಹದ ಆಹಾರ ಬೇಕಾಗುವದಿಲ್ಲ.

ಒಂದು ಜಾತಿಯ ಪ್ರಾಣಿಗೆ ಒಂದು, ಮತ್ತೊಂದು ಜಾತಿಗೆ ಮತ್ತೊಂದು.

ಕಣ್ಣಿಗೆ ಕಾಣದಷ್ಟು ಸಣ್ಣ ಕ್ರಿಮಿ, ನುಸಿ, ನೊರಜು, ನೊಣ, ಇರುವೆ, ಸೊಳ್ಳೆ ಮುಂತಾದ ಅತಿಕ್ಷುದ್ರವಾದ ಕೋಟಿಕೋಟಿ ಬಗೆಯ ಜಂತುಗಳು ಭೋಗಿಸುವ ಪದಾರ್ಥಗಳನ್ನು ಒದಗಿಸುತ್ತಾನೆ. ಭಗವಂತ,

ಇದೇ ರೀತಿ ಪಿರುಳೆ, ಹಲ್ಲಿ, ಚೇಳು, ಇಲಿ, ಹಾವು, ಮುಂತಾದ ಭೂಚರ, ಮೀನು, ಏಡಿ, ಆಮೆ, ಮೊಸಳೆ, ತಿಮಿಂಗಿಲ, ಮುಂತಾದ ಜಲಚರ, ಗುಬ್ಬಿ, ಕಾಗೆ, ಕಪೋತ, ಕೋಗಿಲೆ, ಹದ್ದು, ಹಂಸ, ಮುಂತಾದ ಖೇಚರ, ಜಿಂಕೆ, ಕುದುರೆ, ಹುಲಿ, ಸಿಂಹ, ಆನೆ, ಚಿರತ ಮುಂತಾದ ಪ್ರಾಣಿಗಳು, ಸಮಸ್ತಮಾನವರು, ನಾಗ, ಪ್ರೇತ, ಭೂತ, ಪಿಶಾಚ, ಚಾರ, ಕಿನ್ನರ, ಸಿದ್ಧ ಗಂಧರ್ವ, ಋಷಿ, ಪಿತೃ ದೇವ, ದೇವೋತ್ತಮ ಮೊದಲಾದ ಎಂಬತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಜನಿಸಿದ ಜೀವರಿಗೆ ಕೋಟಿಕೋಟಿ ತೆರನಾದ ಆಹಾರವನ್ನು ಒದಗಿಸುತ್ತಾನೆ.

ಅಲ್ಲದೇ, ಚಿಕ್ಕ ಶಿಶುವಿಗೆ ಬೇಕಾಗಿರುವದು ಬಾಲಕನಿಗೆ ಬೇಕಾಗುವದಿಲ್ಲ. ಬಾಲಕನಿಗೆ ಆಹಾರವಾದುದು ತರುಣನಿಗೆ ಸಲ್ಲ.

ಹೀಗೆ ಶಿಶು, ಬಾಲ, ತರುಣ, ವಯಸ್ಕ, ಶೀರವೃದ್ಧ ಇವರೆಲ್ಲರಿಗೆ ಒಂದೇ ತೆರನಾದ ಆಹಾರವಲ್ಲ. ನಾನಾ ಬಗೆಯ ಆಹಾರ ಅಗತ್ಯ.

ಹೀಗೆ ಆಯಾ ಜೀವನ ಆಯುಷ್ಯದವರೆಗೆ ಅವರವರಿಗೆ ಬೇಕಾದ ಆಹಾರವನ್ನು ನಿರಂತರವಾಗಿ ಭಗವಂತನು ಸೃಜಿಸುತ್ತಾನೆ.

ಹೀಗೆ ಅನಂತಾನಂತ ಜೀವರಾಶಿಗಳ ಹೊಟ್ಟೆಯ ಹೊಣೆಯನ್ನು ಹೊತ್ತ ಕರುಣಾಮಯ ಪ್ರಭುವು ಕ್ರಿಮಿಯ ಅಣುಹೊಟ್ಟೆಯನ್ನು, ತಿಮಿಯ ಮಹೋದರನ್ನು, ಚಿಕ್ಕವರ ಚಿಕ್ಕ ಹೊಟ್ಟೆಯನ್ನು ದೊಡ್ಡವರ ದೊಡ್ಡಹೊಟ್ಟೆಯನ್ನು ತುಂಬಿಸಿ ಸಂತಸಗೊಳಿಸುವನು.

ಅವರೆಲ್ಲರೂ ಉಣ್ಣುವದನ್ನು ತಾನೂ ಉಂಡು ಅವುಗಳಲ್ಲಿ ಶುಭವನ್ನು ಮಾತ್ರ ಸ್ವೀಕರಿಸಿ ಆನಂದತುಂದಿಲನಾಗಿ ಮೆರೆವ, ಸಿರಿಯರಸ.

'ಈಶಾವಾಸ್ಯಮಿದಂ ಸರ್ವಂ...'

ನಾವು ಭಗವಂತನಿಗೆ ನಿವೇದಿಸುತ್ತಿರುವ ಅನ್ನ, ಅದಕ್ಕೆ ಕಾರಣವಾದ ಧಾನ್ಯ, ನೀರು, ಬೆಂಕಿ ಪಾತ್ರೆ, ಒಲೆ, ಧಾನ್ಯಕ್ಕೆ ಕಾರಣವಾದ ಗಿಡ, ಅಂಕುರ, ಬೀಜ, ನೆಲ, ಗಾಳಿ ಇವೆಲ್ಲ ಯಾರದು?

ಯಾರು ಅದನ್ನೆಲ್ಲ ಹುಟ್ಟಿಸಿದವರು?

ಅದರಲ್ಲೆಲ್ಲ ರಸವನ್ನು ತುಂಬಿದವರಾರು?

ಅದನ್ನು ಪೌಷ್ಟಿಕಗೊಳಿಸಿದವರಾರು?

ಇದಕ್ಕೆ ಸೇರಿದಂತೆ ಭಗವಂತನಿಗೆ ಸಮರ್ಪಿಸಲು ಯಾವ ಪದಾರ್ಥವು ನಮ್ಮ ಸ್ವಂತದ್ದು?

ಪುರ, ಪ್ರಾಕಾರ, ಗೋಪುರ, ವಿಮಾನ, ನೆಲ, ಗೋಡೆ, ಸ್ತಂಭ, ವೇದಿಕೆ, ಮಂಟಪ, ಕೂಡಿಸುವ ಪೀಠ, ಅಭಿಷೇಕದ ನೀರು, ಉಡಿಸುವ ಬಟ್ಟೆ, ತೊಡಿಸುವ ಅಲಂಕಾರ, ಹಿಡಿಯುವ ಆಯುಧ, ಲೇಪಿಸುವ ಗಂಧ, ಹಚ್ಚುವ ತಿಲಕ, ಅರ್ಚಿಸುವ ತುಲಸೀ, ಏರಿಸುವ ಮಾಲೆ, ಅರ್ಪಿಸುವ ಹೂಗಳು, ತೋರುವ ಧೂಪ, ಬೆಳಗುವ ದೀಪ, ಮಾಡುವ ನೈವೇದ್ಯ, ಧರಿಸುವ ಛತ್ರ, ಬೀಸುವ ಚಾಮರ, ಹಾಕುವ ವ್ಯಜನ, ನೋಡಿಸುವ ದರ್ಪಣ, ಹಾಡುವ ಗಾನ, ಮಾಡುವ ನೃತ್ಯ, ಬಾರಿಸುವ ವಾದ್ಯ,

ಕುಣಿವ ನಾಟಕ, ಆಂದೋಲಿಕಾ, ರಥ, ಗಜ, ತುರಗ, ಗರುಡ, ಅಶ್ವ ಅನ್ನ, ಬಾಗುವ ತಲೆ, ಮುಗಿಯುವ ಕೈ, ನುಡಿವ ಮಂತ್ರ, ನಡೆಯುವ ಕಾಲಿಗೆ, ನೋಡುವ ಕಣ್ಣು, ಧ್ಯಾನಿಸುವ ಮನಸ್ಸು, ಇವೆಲ್ಲ ಮಾಡುವ ದೇಹ. ಇವೆಲ್ಲ ಯಾರು ನಿಯಾಮಕರು? ಇವೆಲ್ಲ ಯಾರ ಕೊಟ್ಟು?

ದೇವರು ಹುಟ್ಟಿಸಿದ, ಅವನೇ ನಿಯಾಮಿಸಿದ. ಅಂತೆಯೇ ಇವೆಲ್ಲ ಅವನ ಕೊಟ್ಟು. 'ತ್ವದೀಯಂ ವಸ್ತು ಗೋವಿಂದ ತುಭ್ಯಮೇವ ಸಮರ್ಪಯೇ' ಇದನ್ನೆಲ್ಲ ಭಗವಂತ ಭೋಗಿಸುವ ಕ್ರಮವೂ ತೀರ ವಿಲಕ್ಷಣ. ಅದು ತಿಳಿಗೂ ಎಟುಕದ ಮಾತು.

ಭಗವಂತ ಪ್ರಾಕೃತ ಅನ್ನವನ್ನು ತಿನ್ನುವುದಿಲ್ಲ. ಆ ಅನ್ನದಲ್ಲಿ ಅದೇ ಅನ್ನದ ಆಕಾರವಾಗಿ ಸನ್ನಿಹಿತರಾದ ದೇವತೆಗಳು ಅವರ ಅಂತರ್ಯಾಮಿಯಾಗಿ ಸ್ವೀಕರಿಸುವರು, ಅವರಲ್ಲಿ ರಮಾದೇವಿಯೂ ಅನ್ನದ ಆಕಾರದಲ್ಲಿ ಇರುವಳು.

ಆ ರಮಾದೇವಿಯಲ್ಲಿ ಸಾರ, ಅನಂತ ಮಂಗಳದ ರೂಪಗಳಿಂದ ಭಗವಂತ ಕುಳಿತಿರುವ.

ಪ್ರತಿಮೆಯಲ್ಲಿರುವ ದೇವರು ಪ್ರಾಕೃತ ಅನ್ನದಲ್ಲಿರುವ ತನ್ನ ರೂಪವನ್ನೇ ಕಾಣುವನು. ಸ್ವಾದುರಸವನ್ನು ಆಸ್ವಾದಿಸುವನು.

ಸುಗಂಧವಾದ ರಸವನ್ನು ಆಘ್ರಾಣಿಸುವನು.

ಸುಂದರ ರೂಪವನ್ನು ಕಣ್ಣಿಂದ ನೋಡುವನು.

ಆಸ್ವಾದಿಸುವ ಭಗವಂತನ ನಾಲಿಗೆ ಕಮಲ. ಆಘ್ರಾಣಿಸುವ ಘ್ರಾಣೇಂದ್ರಿಯ ಪರಿಮಳ. ನೋಡುವ ಕಣ್ಣು ಕಮಲ.

ಮೇಲೆ ಹೇಳಿದ ಭಗವಂತನ ಸ್ವಾತಂತ್ರ್ಯವನ್ನು ದೇವತೆಗಳಾಗಲಿ ಯಾರೂ ಭೋಗಿಸುವುದಿಲ್ಲ. ದೇವರು ಭೋಗಿಸುವ ಸ್ವಾತಂತ್ರ್ಯಕ್ಕೆ (ರಮಾರೂಪವಾದ ಭಗವಂತನಿಗೆ) ಅಧೀನವಾದುದರಿಂದ ನಾವು ಭೋಗಿಸುವ ಯಾವತ್ತಿರುವ ಎಲ್ಲ ಭೋಗವೂ ದೇವರಿಗೆ ನಿವೇದಿತ ಎಂದು ತಿಳಿಯುತ್ತೇವೆ.

'ಪ್ರಸಾದ ನಾ ಅಕ್ಷತೆ'

ಭಗವಂತನು ಮಾಡುವ ಭೋಗದ ಈ ಕ್ರಮದ ತಿಳುವಳಿಕೆಯ ಜೊತೆಗೆ ನಮ್ಮ ಭೋಗ, ಸಾಧನೆಗಳನ್ನು ಬೆಳೆಸುವ ಬಗೆಯನ್ನೂ ಸ್ವಲ್ಪ ನೋಡೋಣ.

ನಮ್ಮ ಜೀವಾತ್ಮರಿಗೆ ಯೋಗ್ಯವಾದ ಆಹಾರವನ್ನು ಒದಗಿಸಬೇಕು. ಅಂತೆಯೇ ಭೂಮಿಯು ಆಯಾ ಆಯಾ ಆಹಾರವನ್ನು ಹುಟ್ಟಿಸುತ್ತಲೇ ಇರುವದು.

ಒಂದೇ ಬಗೆ ಹುಟ್ಟಿದ ಆಹಾರ ಮುಂದಿನ ವರ್ಷಕ್ಕೆ ದೊರೆಯದಿರಬಹುದು.

ಹಾಗೆ ಆಹಾರವನ್ನು ಹುಟ್ಟಿಸುವ ಶಕ್ತಿಯ ದೇವರು ಹುಟ್ಟುವವರಿಗೆ ತಕ್ಕಂತೆ ಇರುವದು ಅವಶ್ಯಕ.

ಹಾಗಾ, ಹೀಗೆ ಬೆಳೆ ಭೂಮಿಯೊಂದ ಬೆಳೆಯನ್ನು ಬೆಳೆದಮೇಲೆ ಮತ್ತೆ ಭೂಮಿ ಬೆಳೆಯನ್ನು ಬೆಳೆಯುವುದಿಲ್ಲ. ಹಾಗಾಗಲು ಸಾಧ್ಯವೇ ಇಲ್ಲ. ಹಾಗಾದರೆ ಬೆಳೆಯುವ ಶಕ್ತಿ ಹಾಳೇನು?

ಹೀಗೆ ಎಷ್ಟು ತಲೆ ಬೆಳೆ ಬೆಳೆದರೂ ಭೂಮಿಯು ಶಕ್ತಿ ಉಡುಗಿ ಹೋಗುತ್ತಿಲ್ಲ, ಕ್ಷಯವಾಗುವುದಿಲ್ಲ.

ಈ ಭೂಶಕ್ತಿ ಅಕ್ಷಯ, ಶಾಶ್ವತ. ಇದನ್ನು ಕ್ಷಯವಾಗದಂತೆ ನೋಡಿಕೊಳ್ಳುವವನು 'ಪುರುಷೋ ವಾ ಅಕ್ಷರಃ'.

ಆ ಪರಮಪುರುಷ ಈ ಭೂಶಕ್ತಿಯನ್ನು ಶಾಶ್ವತವಾಗಿರಿಸದಿದ್ದಲ್ಲಿ ಇದು ಸಾಧ್ಯವಿರಲಿಲ್ಲ.

ಹೀಗೆ ಭೂಮಿಶಕ್ತಿಯನ್ನು ಅಕ್ಷಯವಾಗಿರಿಸಿದ 'ಅಕ್ಷರ' ಪರಮಪುರುಷನನ್ನು ನೆನೆಯಬೇಕು. ನೆನೆದು ನಮನ ಸಲ್ಲಿಸಬೇಕು.

'ಕೃತಜ್ಞತೆ ಬೋಧಿಸುವ ಮಂತ್ರ'

ಅಲ್ಲದೇ, ದೇವರ ಮಹೋನ್ನತ ಕಾರುಣ್ಯವನ್ನು ಅರಿತುಕೊಳ್ಳಬೇಕು.

ಧಾನ್ಯವನ್ನು ಬೆಳೆಯುವುದಕ್ಕೆ ಬೀಜವನ್ನು ಬಿತ್ತುತ್ತೇವೆ. ಬಿತ್ತಿದ ಬೀಜದಿಂದ ಧಾನ್ಯ ಬರುವುದು. ಒಂದು ಬೀಜದಿಂದ ವಿಪುಲ ಧಾನ್ಯ ಲಭ್ಯವಾಗುವುದು.

ಹೀಗಿರದೆ ಒಂದು ಬೀಜ ಬಿತ್ತಿದುದರಿಂದ ಒಂದೇ ಧಾನ್ಯದ ಕಾಳು ಲಭಿಸಿದರೆ ಯಾವುದನ್ನು ತಿಂದೇವು? ಯಾವುದನ್ನು ಬಿತ್ತೇವು?

ಒಂದು ಬೀಜದಿಂದ ಒಂದೇ ಕಾಳು ಬಂದುದರಿಂದ ತಿಂದರೆ ಬಿತ್ತಲು ಇಲ್ಲ, ಬಿತ್ತಿದರೆ ತಿನ್ನಲು ಇಲ್ಲ. ಹೀಗಾಗಿ ಮಹಾಕಷ್ಟವು.

ಈ ಕಷ್ಟದಿಂದ ಒಂದು ಬೀಜದಿಂದ ವಿಪುಲಧಾನ್ಯದ ದೇಣಿಯನ್ನು ಕರುಣಿಸುವ ಆ ದೇವರ ದಯೆಯನ್ನು ತಪ್ಪದೇ ನೆನೆಯಬೇಕು.

ನೈವೇದ್ಯ ಮಾಡುವಾಗ ಇವೆಲ್ಲ ಕೆಲಸವನ್ನು ನಾವು ಧ್ಯಾನಿಸಬೇಕು.

'ಶಿವಂ ಹಿರಣ್ಯಂ ಕೃಷಿರ್ ನ ಅಸ್ತು'

ನಾವು ಉಣ್ಣುವ ಧಾನ್ಯವನ್ನು ಭೂಮಿ ತಾನಾಗಿಯೇ ಬೆಳೆದಿದೆ, ನಾವು ಉಣ್ಣುವ ಅನ್ನವನ್ನು ಬೆಂಕಿ ತಾನಾಗಿಯೇ ಬೇಯಿಸಿದೆ ಎಂದು ನಾವು ತಿಳಿದಿರುವುದು. ಇದು ಭ್ರಾಂತಿ.

ಭೂಮಿ ಬೆಂಕಿ ಭಗವಂತನ ಮುಖದಿಂದ ಹುಟ್ಟಿದ ದೇವತೆಗಳು. ಅಂದರೆ ದೇವರ ಮುಖ ಭೂಮಿ ಬೆಂಕಿಗಳಿಗೆ ತಂದೆ.

ತಮ್ಮ ತಂದೆಯಾದ ದೇವರ ಮುಖದ ಕೈಂಕರ್ಯವನ್ನು ಮಾಡಿಕೊಂಡು ಭೂಮಿ ಧಾನ್ಯವನ್ನು ಬೆಳೆಸಿತು; ಬೆಂಕಿ ಅನ್ನವನ್ನು ಬೇಯಿಸಿತು.

ಭೂಮಿ, ಬೆಂಕಿ ದೇವತೆಗಳು ನಾವು ತಿನ್ನಬೇಕಾದ ಅನ್ನವನ್ನು, ದೇವರ ಮುಖದಲ್ಲಿರುವ ದೇವರ ಮುಖಕ್ಕೆ ಅರ್ಪಿಸಿ ಕೃತಾರ್ಥರಾಗುತ್ತಾರೆ.

ಅದನ್ನು ನಾವೇ ತಿಂದೆವು ಎಂಬ ಅಜ್ಞಾನದಲ್ಲಿ ನಾವು ಬೀಗುತ್ತೇವೆ, ದೇವರನ್ನು ಮರೆಯುತ್ತೇವೆ.

ಇನ್ನೊಂದು,

ತೆಂಗು ಮುಂತಾದ ಯಾವುದೇ ಮರಕ್ಕೆ ನೀರೆರೆಯುವದು ಕಾಲಿಗೆ. ಆ ನೀರು, ಮಣ್ಣು ಬೇರು, ಕಾಂಡ, ಚರ್ಮ, ಶಾಖೆ, ಎಲೆ, ಹೂ, ಬುಬ್ಬರ, ಪರಟೆ ಇಲ್ಲೆಲ್ಲೂ ಕಾಣಸಿಗದೆ ಕಾಯಿಯ ಮಧ್ಯದಲ್ಲೇ ಸಮೃದ್ಧವಾಗಿ, ಅದೂ ಸಿಹಿಯಾಗಿ ದೊರೆಯುವದು ದೇವರ ಸಂಕಲ್ಪದ ಮಹಿಮೆ.

ಇದೇ ರೀತಿ ಮಾವು, ಬಾಳೆ, ಹಲಸು ಮುಂತಾದ ಹಣ್ಣು ಕಾಯಿ, ತರಕಾರಿಗಳಲ್ಲಿ ತಿಳಿಯಬೇಕು.

'ಅಹಂ ವೈಶ್ವಾನರೋ ಭೂತ್ವಾ...'

ಮತ್ತೊಂದು,

ಹಲ್ಲಿನಿಂದ ಕಡಿಯಲು, ಜಗಿಯಲು, ಕಷ್ಟವಾದ ಗಟ್ಟಿಯಾದ ಕೆಲವು ಪದಾರ್ಥಗಳು ನಮ್ಮ ಹೊಟ್ಟೆಯಲ್ಲಿ ಹೋಗಿ ನಮಗೇನೂ ತಿಳಿಯದಂತೆ ಸಹಜವಾಗಿ ಪಚನವಾಗುವದು.

ಆ ಗಟ್ಟಿ ಪದಾರ್ಥ ಹೊಟ್ಟೆಗೆ ಹಾದು ಹೋಗುವ ದಾರಿ ಅತಿ ಕೋಮಲವಾದ ನಾಲ.

ಆ ನಾಲವನ್ನು ಹಾಗೂ ಉದರಕೋಶದ ಚರ್ಮವನ್ನು ಹರಿಯುವುದೂ ಇಲ್ಲ. ಮಧ್ಯದಲ್ಲೇ ಸಿಕ್ಕು ಬೀಳುವದೂ ಇಲ್ಲ.

ಹೀಗೆ ಸ್ವಾಭಾವಿಕ ಪ್ರಕ್ರಿಯೆಯಿಂದ ಪದಾರ್ಥಗಳನ್ನು ಜೀರ್ಣಗೊಳಿಸುವ ಅದ್ಭುತ ಶಕ್ತಿ ಆ ಭಗವಂತನಿಗೇ ಮೀಸಲು ಎಂದಾಗಿ ಮರೆಯದೇ ಸ್ಮರಿಸಬೇಕು.

ಇನ್ನೊಂದು,

ಯಾವುದೇ ಜೀವ, ವಿಶೇಷವಾಗಿ ಮಾನವ ಉಣ್ಣುವದಕ್ಕೆ ಯಾವ ನಿರ್ಬಂಧವೂ ಇಲ್ಲ.

ಶಾಸ್ತ್ರೀಯ ನಿಯಮಗಳು ಒತ್ತಟ್ಟಿಗಿರಲಿ. ಆಯುರ್ವೇದ ಶಾಸ್ತ್ರಕ್ಕೆ ತೀರ ವಿರುದ್ಧವಾಗಿ ಕಂಡ ಕಂಡ ಆಹಾರವನ್ನು ಮನಗಂಡಂತೆ ತಿನ್ನುತ್ತಾನೆ.

ಯಾವ ಎರಡು ಪದಾರ್ಥಗಳು ಹೊರಗೆ ಬೆರಸಿದರೆ ಕೆಡಬಹುದು, ಕೊಳೆಯಬಹುದು, ವಿಷವಾಗಬಹುದು ಅಂಥ ಎಲ್ಲ ಆಹಾರವನ್ನು ಹೊಟ್ಟೆಯಲ್ಲಿ ಬಡಿದುಕೊಳ್ಳುತ್ತಾನೆ.

ಆದರೂ ಆ ಎಲ್ಲ ಪದಾರ್ಥಗಳೂ ಉತ್ತಮ ರೀತಿಯಲ್ಲಿ ಜೀರ್ಣವಾಗುವದನ್ನು ಕಂಡಿದ್ದೇವೆ.

ಇದೆಲ್ಲ ನಮ್ಮುದರದಲ್ಲಿರುವ ವೈಶ್ವಾನರನ ಪಚನ ಪ್ರಕ್ರಿಯೆಯಲ್ಲವೇ? ಆತನ ಪ್ರಸಾದರಸವಲ್ಲವೇ?

'ತಮುಶ್ಚೇಷ್ಟಖಿಲಂಭರಂ'

ಇಂಥ ಭಗವಂತನಿಗೆ ಮಾಡುವ ನೈವೇದ್ಯ ಅವನ ಹೊಟ್ಟೆ ತುಂಬುವದಕ್ಕಲ್ಲ. ಅವನ ಹೊಟ್ಟೆ ತುಂಬಲು ಸಾಧ್ಯವೂ ಇಲ್ಲ.

ಇಡಿಯ ಅವ್ಯಾಕೃತ ಗಗನವನ್ನೇ ಉದರದಲ್ಲಿರಿಸಿಕೊಂಡ ಭಗವಂತನ ಉದರದ ಏಕದೇಶದ ಕೋಟ್ಯಂಶದ ಅನಂತಾಂಶವನ್ನೂ ಸಪ್ತಾವರಣ ಸಮೇತವಾದ ಇಡಿಯ ಬ್ರಹ್ಮಾಂಡ ತುಂಬಲಾರದು;

ಮಾತ್ರವಲ್ಲ, ಅವ್ಯಾಕೃತ ಆಕಾಶದಲ್ಲಿರಿಸಿದ ಪರಮಾಣುವಿನಂತೆ ತೋರುವದು.

ಅಂಥ ಭಗವಂತನ ಹೊಟ್ಟೆಯನ್ನು, ನಾವು ಸಲ್ಲಿಸುವ ನೈವೇದ್ಯವು ಹೇಗೆ ತುಂಬೀತು?

ಮನೆಗೆ ಬಂದ ಅತಿಥಿಯ ಹೊಟ್ಟೆ ತುಂಬದಿದ್ದರೆ ನಮಗೇ ಸಂಕೋಚವಾಗುವದು.

ಶಿಶುವಿಗೆ ಉಣಿಸುವಷ್ಟು ಆಹಾರವನ್ನು ಮಹಾ ಭೋಕ್ತೃವಾದ ದಟ್ಟಗೆ ಬಡಿಸಿದರೆ ಹೇಳಲಾರದಷ್ಟು ತೀರ ನಾಚಿಕೆಯಾಗುವದು ಸಹಜ.

ಹಾಗೇ ಸರ್ವಭುಕ್ ಆಗಿರುವ ಭಗವಂತನಿಗೆ ತೀರ ಸ್ವಲ್ಪ ಆಹಾರವನ್ನು ನಿವೇದಿಸಲು ನಮಗೆ ನಾಚಿಕೆಯಾಗಬೇಕು.

ಆದರೂ ನಿತ್ಯತೃಪ್ತ, ಆಪ್ತಕಾಮ, ನಿತ್ಯ ಅನಶನನಾದ ದೇವನಿಗೆ ಭಕ್ತಿಯಿಂದ ನಾವು ಸಮರ್ಪಿಸಿದ ಒಂದು ಕವಲ ಅನ್ನ, 'ಬಿಂದು ಗಂಗೋದಕವು' ಸಂತುಷ್ಟಿ ತರಿಸುವಲ್ಲಿ ಸಂದೇಹವಿಲ್ಲ.

'...ವಿನಾ ದ್ರವ್ಯಂ ಸುಖಾಗತಾನ್'

ಅಬ್ಬ! ಈತ ಕರುಣೆಯ ಮಹಾಸಾಗರ, ಕ್ಷಮೆಯ ಕಡಲು. ತನ್ನ ಪರಿಪೂರ್ಣ ಪೂಜೆಗಾಗಿಯೂ ದ್ರವ್ಯವನ್ನಪೇಕ್ಷಿಸುವದಿಲ್ಲ.

ದ್ರವ್ಯಸಂಪಾದನಾಯಾಸ ಬೇಡ, ಅದಕ್ಕಾಗಿ ಭಕ್ತರು ಪರದಾಡುವದು ಬೇಕಿಲ್ಲ ಎನ್ನುತ್ತಾನೆ.

ಹಣವಿಲ್ಲದೆ, ಶ್ರಮವೂ ಇಲ್ಲದೆ ಸುಲಭ ಲಭಿಸಿದ ಕಂದ, ಮೂಲ, ಫಲಗಳಿಂದ, ಎಲೆ, ಹೂ, ನೀರುಗಳಿಂದಲೇ ಅತುಲ ಆದರ, ಅನನ್ಯಭಕ್ತಿಪುರಸ್ಸರವಾಗಿ ಅರ್ಚಿಸಬಹುದು.

ಅಷ್ಟರಿಂದಲೇ 'ಆನಂದತುಂದಿಲನಾಗುವ'.

'ವಾಸನಾರೂಪಕಾನ್ ಭೋಜ್ಯಾನ್ ಭುಂಕ್ತೇ'

ಇಷ್ಟು ಮಾತ್ರವಲ್ಲ, ಈ ಕ್ಷುದ್ರ ಪ್ರಾಕೃತ, ಭೌತಿಕ, ನೀರಸ, ಕಂದ, ಮೂಲ, ಫಲ, ಎಲೆ, ಜಲಗಳನ್ನೂ ಬಯಸುವುದಿಲ್ಲ.

ಆತ್ಮತೃಪ್ತನಲ್ಲವೇ ಆತ?

ಇವೆಲ್ಲವನ್ನೂ ಭಕ್ತಿಭರಿತ ಮನಸ್ಸಿನಿಂದಲೇ ನಿರ್ಮಿಸಿ ಸಮರ್ಪಿಸಿದರೂ ಸಾಕು, ದೊರೆ ಶ್ರೀಹರಿ ಮೆಚ್ಚುವ.

ಒಂದರ್ಥದಲ್ಲಿ ಮಾನಸ ಪದಾರ್ಥಗಳೇ ಭಾರಿಯಾದ ನೈವೇದ್ಯ. ಮಾನಸ ಪದಾರ್ಥಗಳೊಡನೆ ಬಾಹ್ಯಪದಾರ್ಥಗಳನ್ನು ಸಾಟಿ ಮಾಡಿ ನೋಡುವ, ಬನ್ನಿ.

ಬಾಹ್ಯಪದಾರ್ಥಗಳಿಗೆ ಪರಿಮಿತಿ ಇದೆ. ಅವುಗಳಿಗೆ ದೇಶಕಾಲಗಳ ನಿರ್ಬಂಧವಿದೆ.

ಕಂಡಂತೆ ಕಂಡಷ್ಟು ಬಳಸಲಾಗದು.

ಪರಮಶುದ್ಧವಾಗಿರುವದಂತೂ ಇನ್ನೂ ಕಷ್ಟ ಇತ್ಯಾದಿ ಕೊರತೆಗಳನ್ನು ನಾವು ಬಾಹ್ಯ ಪದಾರ್ಥಗಳಲ್ಲಿ ಕಾಣುತ್ತೇವೆ.

ಮಹಾರಾಜರಿಗೂ ಶಾಸ್ತ್ರದಲ್ಲಿ ಹೇಳಿದಂತೆ ಪದಾರ್ಥಗಳನ್ನು ನಿರ್ಮಿಸಿ ಪೂಜೆ ಮಾಡಲು ಸಾಧ್ಯವಿಲ್ಲ.

ಅಷ್ಟು ಅದ್ಭುತವಾಗಿದೆ ಪೂಜಾವಿಧಿ.

ಆದರೆ, ಬಹಿರಂಗದಲ್ಲಿ ಬಡವನಾದರೂ ಮನದ ಭಾವಭಕ್ತಿಗಳಿಂದ, ಜ್ಞಾನ ವಿಜ್ಞಾನಗಳಿಂದ, ಅಂತರಂಗದಲ್ಲಿ ಸಿರಿವಂತನಾದವ ರಾಜಾಧಿರಾಜರಾದ ಸಾರ್ವಭೌಮರು ಯಾವುದನ್ನು ಸಮರ್ಪಿಸಲು ಸಮರ್ಥರಾಗುವದಿಲ್ಲವೋ, ಅಂಥ ಮಹಾನೈವೇದ್ಯವನ್ನು ಪರಮಾದ್ಭುತ ರೀತಿಯಲ್ಲಿ ಸಮರ್ಪಿಸಲು ಸಮರ್ಥನಾಗುವ.

ಇಲ್ಲಿ ಕೆಲ ಪ್ರಶ್ನೆಗಳು.

ಈ ಬಗೆಯ ಮನೋಮಯ ಪದಾರ್ಥಗಳ ಅರ್ಪಣೆಯಿಂದ ಶಾಸ್ತ್ರವಿಧಿಗಳನ್ನು ಪೂರೈಸಿದಂತಾಗಲು ಸಾಧ್ಯವೇ?

ಈ ಪ್ರಶ್ನೆಯ ಕುರಿತು ಚಿಂತನ ಮಾಡೋಣ.

ಮನೋಮಯ ಪದಾರ್ಥಗಳಿಂದಲೂ ಶಾಸ್ತ್ರವಿಧಿಯನ್ನು ಪೂರೈಸಲು ಸಾಧ್ಯವಿದೆ. ಅಂತೆಯೇ ಮಾನಸಪೂಜಾ ವಿಧಾನ ಶಾಸ್ತ್ರದಲ್ಲಿ ಇರುವದು.

ಆದರೆ ಬಹಿರಂಗ ಕರ್ಮವನ್ನು ಮಾಡಲು ಸಾಧ್ಯವಿರುವಾಗ ಅದನ್ನು ಬಿಟ್ಟು ಕೇವಲ ಅಂತರಂಗವನ್ನು ಆಚರಿಸಿದರೆ ಪೂರ್ಣವಾಗುವದಿಲ್ಲ.

ಯಾವನಿಗೆ ಅಶಕ್ತಿ, ದಾರಿದ್ರ್ಯ, ರೋಗ ಮುಂತಾದವುಗಳಿವೆಯೋ, ಆತ ಬಹಿರಂಗಕರ್ಮವನ್ನು ಆಚರಿಸಲು ಸಮರ್ಥನಾಗದಿರುವಾಗ ಕೇವಲ ಅಂತರಂಗವನ್ನು ಭಕ್ತಿಯಿಂದ ಮಾಡಿ ಕೃತಕೃತ್ಯನಾಗಬಹುದು.

ಆದರೆ ಬಹಿರಂಗಕರ್ಮದ ಹೊಣೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಅಂತರಂಗಕ್ಕೆ ಶರಣು ಹೋದರೆ ಅದು ಕೇವಲ ಶಾಠ್ಯವಾಗುವದು.

ಸಿರಿ, ಸಂಪತ್ತು ಸಮೃದ್ಧವಾಗಿದ್ದರೂ ತನ್ನ ಜಿಪುಣತನದಿಂದಾಗಿ,
ಬಲ, ಶಕ್ತಿಗಳು ವಿಪುಲವಾಗಿದ್ದರೂ ತನ್ನ ಜಾಡ್ಯದಿಂದಾಗಿ,

ಪ್ರಯತ್ನಿಸಿದರೆ ಸಮಯ ಸಾಕಷ್ಟು ದೊರೆಯಲು ಸಾಧ್ಯವಿದ್ದರೂ ಕೇವಲ ತನ್ನ ಆಲಸ್ಯದಿಂದಾಗಿ,

ಸೋಗು ಹಾಕಿ ಅಥವಾ ಭಕ್ತಿಯಿಂದಲೇ ಆಗಲಿ ಮಾನಸ ಪೂಜೆಯನ್ನು ಮಾತ್ರ ಮಾಡಿ ಬಹಿರಂಗವನ್ನು ತ್ಯಜಿಸಿದಲ್ಲಿ ಪಾಪ ಬರುವದು ನಿಶ್ಚಿತ.

ಈ ಕುರಿತಾಗಿ ಮಾನಸಪೂಜೆಯ ಸಂದರ್ಭದಲ್ಲಿ ಸ್ವಲ್ಪ ಪ್ರಸ್ತಾಪ ಮಾಡಿದ್ದೇವೆ.

'...ಏಷ ಪ್ರವಿವಿಕ್ತಾಹಾರತರಃ...'

ಮನೋನಿರ್ಮಿತ ವಾಸನಾಮಯ ಪದಾರ್ಥಗಳನ್ನು ದೇವರಿಗೆ ಅರ್ಪಿಸಿದಲ್ಲಿ ದೇವರು ಅದನ್ನು ಭೋಗಿಸುವ ಕ್ರಮವೇನು? ಅವುಗಳಿಂದ ದೇವರಿಗೆ ತೃಪ್ತಿ ಆಗಬಹುದೇ?

ಸ್ವತಂತ್ರ ಪ್ರಭುವಾದ ಭಗವಂತನಿಗೆ ಯಾವ ತೆರನಾದ ಪದಾರ್ಥಗಳನ್ನು ಭೋಗಿಸುವಲ್ಲೂ ಸಮಸ್ಯೆ ಇಲ್ಲ.

ಶಾಸ್ತ್ರ ತಿಳಿಸುವಂತೆ ನಮ್ಮ ಜಾಗರದಲ್ಲಿ (ಎಚ್ಚರದಲ್ಲಿ) ನಮ್ಮಂತೆ ದೇವರೂ ಬಾಹ್ಯಪದಾರ್ಥಗಳನ್ನು ವಿಶ್ವನಾಮಕನಾಗಿ ಅನುಭವಿಸುವ.

ಹಾಗೆ ನಾವು ಸ್ವಪ್ನದಲ್ಲಿ ನಾನಾ ಬಗೆಯ ಪದಾರ್ಥಗಳನ್ನು ಹೇಗೆ ಭೋಗಿಸುತ್ತೇವೆಯೋ, ಹಾಗೆಯೇ ನಮ್ಮೊಡನೆ ದೇವರೂ ತೈಜಸ ನಾಮಕನಾಗಿ ಸ್ವಪ್ನಪದಾರ್ಥಗಳನ್ನು ಭೋಗಿಸುವ.

ಸ್ವಪ್ನದಲ್ಲಿಯ ವಾಸನಾಮಯ ಪದಾರ್ಥಗಳ ಅನುಭವದಿಂದ ನಮಗೆ ತಾತ್ಕಾಲಿಕವಾಗಿ ತೃಪ್ತಿಯಾದೀತು.

ಆದರೆ ಎಚ್ಚರವಾದಮೇಲೆ ಆ ತೃಪ್ತಿ ಇರಲು ಸಾಧ್ಯವಿಲ್ಲ. ಇದಕ್ಕೆ ಕಾರಣ ಜೀವ ಬಾಹ್ಯಪದಾರ್ಥಗಳಿಂದಲೇ ತೃಪ್ತಿ ಪಡಲು ಸಾಧ್ಯ. ವಾಸನಾನಿರ್ಮಿತ ಪದಾರ್ಥಗಳಿಂದ ಸಂತೋಷಪಡಲಾರ. ಇದು ಜೀವನ ಸ್ವಭಾವ ಎನ್ನಿ, ಇಲ್ಲವೆ ದುರ್ದೈವ, ದೌರ್ಬಲ್ಯ, ಅಪರಿಪೂರ್ಣತೆ ಎಂತಾದರೂ ಅನ್ನಿ. ಅಂತೂ ಇದು ವಸ್ತುಸ್ಥಿತಿ.

ಆದರೆ, ದೇವರ ಕಥೆ ಮಾತ್ರ ಇದಕ್ಕೆ ವಿಪರೀತ. ಅದಕ್ಕೆ ಕಾರಣ ಅವನ ಪರಿಪೂರ್ಣತೆ, ಅನಂತ ಸಾಮರ್ಥ್ಯ, ಸ್ವಾತಂತ್ರ್ಯ ಎಂತೆನ್ನುವದು ತೀರ ಸ್ಪಷ್ಟ

ಹೀಗಾಗಿ ನಾವು ಅರ್ಪಿಸಿದ ವಾಸನಾನಿರ್ಮಿತ ಚಿನ್ನದ ವೇದಿಕೆ, ಸ್ಫಟಿಕದ ಮಂಟಪ, ಚಂದನದ ಗಂಧ, ಚಂಪಕಾದಿ ಪುಷ್ಪ, ಅನ್ನಾದಿ ನಾನಾ ಭೋಗ್ಯಪದಾರ್ಥಗಳನ್ನು ಭಗವಂತ ಭೋಗಿಸುತ್ತಾನೆ.

ಆದರೆ

ವಾಸನಾಮಯಪದಾರ್ಥಗಳನ್ನು ನಾವು ಭೋಗಿಸುವದಕ್ಕೂ, ದೇವರು ಭೋಗಿಸುವದಕ್ಕೂ ಮೇರು ಮಶಕಗಳಷ್ಟು ಅಂತರವಿದೆ;

ಮಾತ್ರವಲ್ಲ, ಅನಂತವಾದ ಅಂತರವಿದೆ. ಸ್ವಪ್ನದಲ್ಲಿರುವ ವಾಸನಾಮಯವನ್ನು ನಾವು ಜಾಗರವೆಂದು ಭ್ರಮಿಸಿ ಭೋಗಿಸುತ್ತೇವೆ. ದೇವರಿಗೆ ಈ ತೆರನಾದ ಭ್ರಮವೇ ಇಲ್ಲ.

ಇದಕ್ಕೂ ಮಿಗಿಲಾದ ತೀರಮಹತ್ವದ ಅಂತರವಿದೆ. ದೇವರು ವಾಸನಾಮಯ ಪದಾರ್ಥಗಳಿಂದ ಸಂತಸಪಡುವನು.

ಅದರ ಜೊತೆಗೆ ಹಣ್ಣು ಹಂಪಲು, ಅನ್ನ, ಪಾಯಸ ಮುಂತಾದವುಗಳಲ್ಲಿಯ ಸ್ವಸ್ವರೂಪವನ್ನು ಸ್ವಾಬ್ಜರಸವನ್ನು ಭೋಗಿಸುವಂತೆ, ವಾಸನಾಮಯ ಪದಾರ್ಥಗಳಲ್ಲಿರುವ

ಅಗಣಿತಗುಣಪೂರ್ಣವಾದ ತನ್ನ ಅನಂತರೂಪಗಳನ್ನು ಭೋಗಿಸುತ್ತ ಆನಂದವನ್ನನುಭವಿಸುವ.

'ವಾಸನಾರೂಪಕಾನ್ ಭೋಜ್ಯಾನ್ ಭುಂಕ್ತೇ ತತ್ ಪ್ರವಿಚಿಂತಿತಾನ್ ।
ಭುಂಕ್ತೇ ವಿಷ್ಣುಃ ಪೂರ್ಣಶಕ್ತಿಃ ಬಾಹ್ಯಭೋಗವಿಲಕ್ಷಣಾನ್
ತತ್ತದಾಕಾರಸಂಯುಕ್ತಾನ್ ಸ್ವರೂಪಾನ್ ಸ್ವೀಕರೋತ್ಯಜಃ

ಅಲ್ಲದೆ ಭಗವಂತನ ಭೋಗ ಸ್ವತಂತ್ರವಾದದ್ದು. ನಮ್ಮಂತೆ ಪರತಂತ್ರವಲ್ಲ. ಕಮಲಾ, ಕಮಲಾಸನರೂ ಆ ಭಗವಂತನ ಕರುಣೆಯ ಅಣತಿಯಂತೆ ಭೋಗ ಮಾಡುವರು.

ದೇವರ ಕರುಣೆ ತಪ್ಪಿದಲ್ಲಿ ಕಂಗಾಲಾಗುವದು ನಿಶ್ಚಿತ.

ದೇವರಿಗೆ ಮಾತ್ರ ಈ ಪರಿಯಿಲ್ಲ. ಆತನೊಬ್ಬನೇ ಸ್ವತಂತ್ರ.

ಅಲ್ಲದೇ, ನಮ್ಮಂತೆ ಅಪರಿಪೂರ್ಣನಾದುದರಿಂದ ಭಗವಂತ ಭೋಗಿಸುವದಿಲ್ಲ.

ಏಕೆಂದರೆ ಆತ 'ಪರಮಂದ್ರಸಾಂದಸ್ವಾನಂದತುಷ್ಟವಪುಃ'

ಅನಂತ ಆನಂದರೂಪನಾದುದರಿಂದ ಆಪ್ತಕಾಮ. ಆದ್ದರಿಂದಲೇ, ಬಾಹ್ಯಭೋಗಗಳಲ್ಲಿ ವಿರಕ್ತನೆಂದು ಭಗವಂತನನ್ನು ಕರೆಯುವರು.

ಜೀವರಿಗೆ ಅವರವರ ಕರ್ಮಾನುಸಾರವಾಗಿ ಅಶುಭ ಭೋಗಗಳಿವೆ. ಭಗವಂತನಿಗೆ ಮಾತ್ರ ಕರ್ಮಲೇಪವೂ ಇಲ್ಲ, ಅಶುಭಭೋಗಗಳೂ ಇಲ್ಲ. ಆ ಭಗವಂತನ ಕೃಪೆಯಿಂದಲೇ ಮುಕ್ತರು ಹಾಗೂ ನಿತ್ಯಮುಕ್ತ ಲಕ್ಷ್ಮೀ ಇವರೂ ಅಶುಭವನ್ನು ಭೋಗಿಸುವದಿಲ್ಲ.

ಈ ಎಲ್ಲ ಅನುಸಂಧಾನಗಳೊಡನೆ ನೈವೇದ್ಯವನ್ನು ಮಾಡಬೇಕು.

....

ಈ ನೈವೇದ್ಯವನ್ನು ಮೂಲರೂಪ ಪರಮಾತ್ಮನೊಡನೆ ಪೀಠದೇವತೆಗಳಿಗೂ ಆವರಣದೇವತೆಗಳಿಗೂ ತೋರಿಸಬೇಕು.

* (page) ಇಲ್ಲಿ ಕೆಲವು ಸೂಕ್ಷ್ಮಾಂಶಗಳು. ಮೂಲರೂಪ ಪರಮಾತ್ಮನೊಡನೆ ಪೀಠದೇವತೆಗಳಿಗೆ ಮತ್ತು ಆವರಣದೇವತೆಗಳಿಗೆ ನೈವೇದ್ಯವನ್ನು ಮಾಡಿದರೂ ಆ ದೇವತೆಗಳಿಗೆ ಪ್ರತ್ಯೇಕವಾಗಿಯೂ ನೈವೇದ್ಯವನ್ನು ಮಾಡತಕ್ಕದ್ದು.

ಇಲ್ಲಿ ಎರಡು ಪ್ರಶ್ನೆಗಳು.

೧- ಮೂಲರೂಪದೊಡನೆ ಈ ಎಲ್ಲ ದೇವತೆಗಳಿಗೆ ನೈವೇದ್ಯವನ್ನು ಮಾಡಿದ ಬಳಿಕ ಪುನಃ ಯಾಕೆ ನೈವೇದ್ಯವನ್ನು ಮಾಡಬೇಕು?

ಇದಕ್ಕೆ ಉತ್ತರ.

ಪರಮಾತ್ಮನೊಡನೆ ಪೀಠಾವರಣದೇವತೆಗಳಿಗೆ ಪರಿವಾರದೇವತಾತ್ವೇನ ನೈವೇದ್ಯವನ್ನು ಮಾಡುತ್ತೇವೆ.

ಎರಡನೇಬಾರಿ ಮಾಡುವ ನೈವೇದ್ಯವು ಕೇವಲ ಅವರಿಗೆ ಮಾಡಲ್ಪಡುವಂಥದು. ಅಂದರೆ ಮೊದಲು ಭಗವಂತನ ಪರಿವಾರರಾಗಿ, ಬಳಿಕ ಕೇವಲ ಭಗವಂತನ ಅಧಿಷ್ಠಾನರಾಗಿ ಅವರು ನೈವೇದ್ಯವನ್ನು ಸ್ವೀಕರಿಸುವರು.

ಈ ಮಾತಿಗೆ ''ಪರಿವಾರತಯಾ ಗ್ರಾಹ್ಯಾಃ ಅಪಿ ಹೇಯಾಃ ಪ್ರಧಾನತಃ'' ಎಂಬ ವಚನದ ವಿರೋಧವು ಬರುವದಿಲ್ಲ.

ಏಕೆಂದರೆ ಈ ಮಾತಿನ ಅಭಿಪ್ರಾಯ ಇಷ್ಟು

ಎಲ್ಲ ದೇವತೆಗಳನ್ನು ವಿಷ್ಣುವಿನ ದಾಸರೆಂದೇ ಪೂಜಿಸಬೇಕೇ ಹೊರತು ಸರ್ವೋತ್ತಮರು, ಸ್ವತಂತ್ರರು ಎಂದು ಎಂದೆಂದಿಗೂ ಪೂಜಿಸಬಾರದು. ಹೀಗರ್ಥವಿರುವ ಕಾರಣ ನಾವು ಕೊಟ್ಟ ಉತ್ತರಕ್ಕೆ ಯಾವ ವಿರೋಧವಿಲ್ಲ.

ಏಕೆಂದರೆ ಎಲ್ಲ ದೇವತೆಗಳನ್ನು ಪ್ರತ್ಯೇಕವಾಗಿ ಪೂಜಿಸುವಾಗಲೂ ಸರ್ವೋತ್ತಮರೆಂದು ಪೂಜಿಸಬೇಕೆಂದು ಹೇಳೇ ಇಲ್ಲ.

ಹಾಗಾದರೆ ಈ ಎರಡನೆಯ ನೈವೇದ್ಯಕ್ಕೆ ಏನು ಪ್ರಮಾಣ? ತಂತ್ರಸಾರ ಟಿಪ್ಪಣಿ ಛಲಾರಿ-

'ದತ್ತ್ವೈತಾನುಪಚಾರಾಂಸ್ತು ಸರ್ವೇಭ್ಯಶ್ಚ ಪೃಥಗ್ಬುದೇತ್।
ಲಕ್ಷ್ಮ್ಯಾದ್ಯಾವರಣಸ್ಥೇಭ್ಯಃ ನಮೋಂತೈಃ ಸ್ವಸ್ವನಾಮಕೈಃ॥
ಆಸನಾದಿ ತು ಪೀಠಸ್ಥ ದೇವಾನಾಂ ವಿಷ್ಣುನಾ ಸಹ
ಧೂಪದೀಪಾದಿಕಂ ಸರ್ವಂ ಸರ್ವೇಭ್ಯೋ ವಿಷ್ಣುನಾ ಸಹ।'

ಪದ್ಯಮಾಲಾ -

'ರಮಾಬ್ರಹ್ಮಾದಿ ದೇವಾನಾಂ ದತ್ವಾ ತೀರ್ಥಾದಿಕಂ ಬಲಿಂ'
''ರಮಾ-ಬ್ರಹ್ಮಾದಯೋ ದೇವಾಃ ಸನಕಾದ್ಯಾಃ ಶುಕಾದಯಃ
ಶ್ರೀನೃಸಿಂಹಃ ಪ್ರಸಾದೋಯಂ ಸರ್ವೇ ಗೃಹ್ಣಂತು ವೈಷ್ಣವಾಃ॥''

ಯೋಗದೀಪಿಕಾ-

'ಸಶ್ರೀಕಪರಿವಾರಾಯ ನೈವೇದ್ಯಂ ಹರಯೇರ್ಪಯೇತ್''.

ಅಲ್ಲದೆ ಅನುಯಾಗದಲ್ಲಿ ಮೊದಲು ಪೀಠದೇವತೆಗಳಿಗೆ ಬಳಿಕ ಮೂಲರೂಪ ನಾರಾಯಣನಿಗೆ ಆಮೇಲೆ ಆವರಣದೇವತೆಗಳಿಗೆ ಆಹುತಿಗಳನ್ನು ಕೊಡಬೇಕು ಎಂಬ ಮಾತೂ ಪೀಠಾವರಣದೇವತೆಗಳಿಗೆ ಮೂಲರೂಪದ ಜೊತೆಯಲ್ಲಿ ನೈವೇದ್ಯವನ್ನು ಮಾಡಬೇಕು ಎನ್ನುವದಕ್ಕೆ ಸೂಚಕವಾಗುತ್ತದೆ.

ಯೋಗದೀಪಿಕಾ-

'ಹುತ್ವಾ ವ್ಯಾಹೃತಿಭಿಃ ಪೀಠದೇವೇಭ್ಯೋಪ್ಯಥ ಮೂಲತಃ
ಉಕ್ತಾವರಣದೇವೇಭ್ಯೋಪ್ಯಥ ಸಮ್ಯಕ್ ಸ್ಮರನ್ ಹರಿಂ।''

ಸನ್ಯಾಸಪದ್ಧತಿ -

'ಚತುಶ್ಚತುಃ ಪೀಠದೇವಮಾನಂ ಸಪರಿವಾರಕಂ। ಹುತ್ವಾ ಪ್ರಧಾನಹವನಂ.... '

ಪೂಜಾಕಲ್ಪಲತಾ -

'ಆವರಣದೇವೇಭ್ಯಃ ಅರ್ಘ್ಯಾದಿದ್ವಾದಶೋಪಚಾರಾನ್ ಪ್ರತ್ಯೇಕಂ ಉದಕೇನ ಪುಷ್ಪೈರ್ವಾ ದದ್ಯಾತ್ ನ ತು ಪೀಠದೇವೇಭ್ಯಃ ಇವ ಭಗವತಾ ಸಾಕಮೇವ।''

'ಧೂಪದೀಪಾದಿಕಂ ಸರ್ವಂ ಸರ್ವೇಭ್ಯೋ ವಿಷ್ಣುನಾ ಸಹ ಇತಿ ತಿಲಕವಚನಾನುಸಾರೇಣ ವಾಯ್ವಾದಿಪೀಠದೇವತಾನಾಂ ರಮಾದಿ ಆವರಣದೇವತಾನಾಂ ವಿಷ್ಣುನಾ ಸಹೈವ ನೈವೇದ್ಯಭೋಗಃ ಅವಶ್ಯಮಂಗೀಕರ್ತವ್ಯಃ'' ಇತ್ಯಾದಿವಚನಗಳು.

ಪ್ರಶ್ನೆ ೨- ಮೂಲರೂಪದೊಡನೆ ಈ ಎಲ್ಲ ದೇವತೆಗಳಿಗೆ ಮಾಡಿದ ನೈವೇದ್ಯ ಅವರೆಲ್ಲರ ಉಚ್ಛಿಷ್ಟವಾಗುವದಿಲ್ಲವೇ?

ಅಂದಮೇಲೆ ಅದನ್ನು ಪುನಃ ರಮಾದಿಗಳಿಗೆ ನೈವೇದ್ಯಮಾಡುವದಾಗಲಿ, ಇತರ ದೇವತಾ ಉಚ್ಛಿಷ್ಟವನ್ನು ನಾವು ಸೇವನಮಾಡುವದಾಗಲಿ ಹೇಗೆ ಸಾಧ್ಯ?

ಉತ್ತರ - ಮೂಲರೂಪದೇವರೊಡನೆ ಪರಿವಾರದೇವತೆಗಳಿಗೆ ನೈವೇದ್ಯವನ್ನು ಮಾಡಿದ್ದರೂ ಅದು ಕೇವಲ ಭಗವಂತನ ನೈವೇದ್ಯವೆಂದೇ ತಿಳಿಯಬೇಕು.

ಪೀಠದೇವತಾ ಸಹಿತನಾದ ನಾರಾಯಣನಿಗೆ ಮಾಡಿದ ಅಭಿಷೇಕವು ಹೇಗೆ ಕೇವಲ ದೇವರ ತೀರ್ಥವೇ ಹೊರತು ಇತರ ದೇವತಾತೀರ್ಥವಾಗುವದಿಲ್ಲವೊ ಆದ್ದರಿಂದಲೇ ರಮಾದಿಗಳಿಗೂ ಆ ತೀರ್ಥವನ್ನು ಕೊಡಬಹುದೊ ಹಾಗೆಯೇ ನೈವೇದ್ಯವು ಪರಿವಾರಕ್ಕೂ ಸಮರ್ಪಣೆ ಮಾಡಿದ್ದರೂ ಅದು ದೇವರ ನೈವೇದ್ಯವೇ.

(ಅಲ್ಲದೆ ಹೇಗೆ ವಿಷ್ಣುಪ್ರತಿಮೆಗೆ ಮಾಡಿದ ಅಭಿಷೇಕವು ಕೇವಲ ವಿಷ್ಣುವಿನ ತೀರ್ಥವಾಗುವರೇ ಹೊರತು ಅಧಿಷ್ಠಾನಭೂತರಾದ ಲಕ್ಷ್ಮೀವಾಯುದೇವರ ತೀರ್ಥವು ಆಗುವದಿಲ್ಲ. ಹಾಗೆ ನೈವೇದ್ಯವನ್ನು ತಿಳಿಯಬೇಕು.)

ಆದಕಾರಣ ಪರಿವಾರತಯಾ ರಮಾದಿದೇವತೆಗಳಿಗೆ ನಿವೇದಿತವಾಗಿದ್ದರೂ ಆ ಅನ್ನಾದಿಗಳನ್ನು ಪುನಃ ಪ್ರತ್ಯೇಕವಾಗಿ ರಮಾದಿಗಳಿಗೆ ನೈವೇದ್ಯಮಾಡಬಹುದು.

ಆದ್ದರಿಂದಲೇ ಪರಿವಾರಭೂತ ಇತರ ದೇವತಾನೈವೇದ್ಯವು ಗ್ರಾಹ್ಯವಾದರೂ ಪ್ರತ್ಯೇಕವಾಗಿ ಮಾಡಿದ (ಲಕ್ಷ್ಮೀ ವಾಯುದೇವರನ್ನು ಬಿಟ್ಟು) ಇತರ ದೇವತಾನೈವೇದ್ಯವು ಗ್ರಾಹ್ಯವಲ್ಲ.

ಇದಕ್ಕೆಲ್ಲ ಹಿಂದೆ ಕೊಟ್ಟ ವಚನಗಳ ಅನ್ಯಥಾನುಪಪತ್ತಿಯೇ ಪ್ರಮಾಣ.

ಜೊತೆಗೆ, ಪಾನೀಯವನ್ನು ಸಮರ್ಪಿಸಬೇಕು. ಬಳಿಕ ತೆರೆಯನ್ನು (ಜವನಿಕೆ) ಹಾಕಿ ಭಗವಂತ ಬೋಜನಮಾಡುತ್ತಲಿರುವ ಎಂದು ಸ್ಮರಿಸಿ ೧೦೮ ಸಲ ನಾರಾಯಣಮಂತ್ರವನ್ನು ಜಪಿಸುವದು.

ಆಗಲೇ ಅನುಯಾಗವನ್ನು ಮಾಡಬೇಕು. ''ಅಮೃತಾಪಿಧಾನಮಸಿ'' ಎಂಬ ಮಂತ್ರದಿಂದ ಉತ್ತರಾಪೋಶನವನ್ನು ಕೊಡುವದು.

ಆ ನೈವೇದ್ಯವನ್ನು ವಿಶ್ವಕ್ಸೇನನಿಗೆ ಒಪ್ಪಿಸಬೇಕು.

ಪಾದುಕೆ ಕೊಟ್ಟು ಹಸ್ತಪ್ರಕ್ಷಾಲನಕ್ಕಾಗಿ ಕರೆತಂದು ಪೀಠಾಂತರದಲ್ಲಿ ಕೂಡಿಸಿ ನಾರಾಯಣಮಂತ್ರದಿಂದ ೧೨ ಬಾರಿ ಗಂಡೂಷವನ್ನು ಸಮರ್ಪಿಸುವದು.

ಕರ್ಪೂರ ಕಸ್ತೂರಿಗಳಿಂದ ಕೂಡಿದ ಚಂದನದ ನೀರನ್ನು ಕೈಗೆರೆದು ಕೈತೊಳಿಸಬೇಕು.

ಹಲ್ಲುಜ್ಜಲು, ಹಾಗೂ ಪಾದ ತೊಳೆಯಲು ಮತ್ತೊಮ್ಮೆ ೧೨ ಬಾರಿ ಗಂಡೂಷಕ್ಕೆ ನೀರು ಅರ್ಪಿಸಬೇಕು.

ಪುನಃ ಆಚಮನವನ್ನು ಮಾಡಿಸಿ ಕನಿಷ್ಟ ಮೂರು ಬಾರಿ ಹೂಗಳಿಂದರ್ಚಿಸಿ, ಛತ್ರ, ಚಾಮರ, ವ್ಯಜನಗಳಿಂದ, ಸಹಿತವಾಗಿ, ಗೀತ, ವಾದ್ಯ, ನೃತ್ಯಗಳಿಂದ ಸ್ವಾಗತಿಸುತ್ತ ತೂಗುಮಂಚದ ಪೀಠದಲ್ಲಿ ಕುಳ್ಳಿರಿಸಬೇಕು.

ಪ್ರಶಾಂತವಾಗಿ ಉರಿಯುವ ಸಾಲುದೀಪಗಳ, ಹಂಸ, ಕೋಕಿಲೆ, ನವಿಲು, ಮುಂತಾದ ಮಧುರ ಮನೋಹರ ಪಕ್ಷಿಗಳ ನಿನಾದದ ಮಧ್ಯದಲ್ಲಿ ರಮಾರಮಣನನ್ನು ಕೂಡಿಸಿ ತಾಂಬೂಲವನ್ನು ನೀಡಬೇಕು.

ಬಳಿಕ ಸುವರ್ಣದಕ್ಷಿಣೆಯನ್ನು ಸಮರ್ಪಿಸಬೇಕು.

ತಾಂಬೂಲ ತಿಂದ ಮುಖವನ್ನು ತೊಳೆಯುವದಕ್ಕೆ ಮತ್ತೊಮ್ಮೆ ೧೨ ಬಾರಿ ಗಂಡೂಷ, ದಂತಧಾವನ ಹಾಗೂ ಆಚಮನವನ್ನು ಅರ್ಪಿಸಬೇಕು.

ಪುನಃ ಮಹಾನೀರಾಜನಾದಿ ಪೂಜೆಗಾಗಿ (ಹಿಂದೆ ಹೇಳಿದಂತೆ) ಛತ್ರ, ಚಾಮರಾದಿಗಳ ವಾದ್ಯವೈಭವಗಳ ಜೊತೆಗೆ ದೇವರನ್ನು ಸ್ವಾಗತಿಸಿ ಕರೆತಂದು, ಮಹಾಪೂಜೆಯ ವಿಶಾಲವೇದಿಕೆಯ ದಿವ್ಯ ಮಂಟಪದಲ್ಲಿ ಕೂಡಿಸಬೇಕು.

ಜಗವೆಲ್ಲ ತುಂಬುವಂಥ ಘಮ-ಘಮಿಸುವ ಧೂಪವನ್ನು ಸಮರ್ಪಿಸಬೇಕು.

ಮೂರು ಲೋಕದ ಕತ್ತಲೆಯನ್ನು ಕತ್ತರಿಸುವ ಅನಂತ ತೇಜಸ್ಸಿನ ಸರ್ವೋತ್ತಮನಿಗೆ ಮಿಣುಕು ದೀಪದ ಆರುತಿಯನ್ನು ಭಕ್ತಿಯಿಂದ ಎತ್ತಿ 'ತುಷ್ಟನಾಗು ಶ್ರೀಹರಿ' ಎಂದು ಪ್ರಾರ್ಥಿಸಬೇಕು.

ನೂರು ದೀಪದ ಸಾಲು,

ಸಾವಿರ ದೀಪದ ಸಾಲು,

ಲಕ್ಷದೀಪದ ಸೇವೆ ಮಾಡಿ ಭಗವಂತನನ್ನು ಪ್ರೀತಿಗೊಳಿಸುವದು.

ನೀರಾಜನ ಮಾಡುವಾಗ ಭಗವಂತನ ಮುಖಚಂದ್ರಮವನ್ನು, ಇಡಿಯ ವಿಗ್ರಹವನ್ನು ಕಣ್ಣಾರೆ ಕಂಡು ಆನಂದ ಪುಲಕಿತನಾಗಬೇಕು.

ಬಳಿಕ, ಅಹಿಂಸಾ, ಇಂದ್ರಿಯನಿಗ್ರಹ, ಸರ್ವಭೂತದಯಾ, ಕ್ಷಮಾ, ಜ್ಞಾನ, ತಪಸ್ಸು, ಧ್ಯಾನ, ಸತ್ಯ ಎಂಬ ಎಂಟು ಭಾವ ಪುಷ್ಪಗಳನ್ನು ಅರ್ಪಿಸಿ, ಮಂತ್ರಪುಷ್ಪವನ್ನು ಸಮರ್ಪಿಸಬೇಕು.

ಆಮೇಲೆ ಛತ್ರ, ಚಾಮರ, ವ್ಯಜನ, ದರ್ಪಣ, ಪಾದುಕಾ, ಆನೆ, ಕುದುರೆ, ರಥ, ಆಂದೋಲಿಕಾ, ಶಿಬಿಕಾ, ಧ್ವಜ, ಪತಾಕಾ, ಗೀತ, ವಾದ್ಯ, ನೃತ್ಯ, ಆಭರಣಾಗಳನ್ನೆಲ್ಲ ಸಮರ್ಪಿಸಬೇಕು.

ವಿಷ್ಣು ಸಹಸ್ರನಾಮ, ಭಗವದ್ಗೀತಾ, ಅನುಸ್ಮೃತಿ, ಭೀಷ್ಮಸ್ತವರಾಜ, ಮತ್ತು ಗಜೇಂದ್ರಮೋಕ್ಷ ಎಂಬ ಪಂಚಸ್ತವಗಳನ್ನು ಭಗವಂತನು ಪ್ರೀತಿಯಾಗಲೆಂದು ಪಠಿಸಬೇಕು.

ಬಳಿಕ ದೃಷ್ಟಿದೋಷಪರಿಹಾರಕ್ಕಾಗಿ ಶಂಖಭ್ರಮಣ.

ನಮ್ಮ ಅಚ್ಚುಮೆಚ್ಚಿನ ಹೃದಯನಾಥನಿಗೆ, ಪ್ರೇಮದ ಪ್ರಾಣೇಶ್ವರನಿಗೆ ದುಷ್ಟರಾಕ್ಷಸಪಿಶಾಚರ ದೃಷ್ಟಿತಾಗೀತೇ?

ಅವನ ಚೆಲವು, ಕಾಂತಿ, ಲಾವಣ್ಯ, ಗಾಂಭೀರ್ಯ ಇವೆಲ್ಲವೂ ಅಸಾಮಾನ್ಯ ಅಲ್ಲವೇ?

ಎನ್ನುವದಕ್ಕಾಗಿ ಶಂಖಭ್ರಮಣಮಾಡಿ ದೃಷ್ಟಿದೋಷವನ್ನು ಕಳೆಯುವರು. ಶಂಖದಲ್ಲಿ ನೀರು ಹಾಕಿ, ಮುಂಭಾಗದಲ್ಲಿ ಶಂಖಮುದ್ರೆ, ಮಧ್ಯದಲ್ಲಿ ಧೇನುಮುದ್ರೆ, ಹಿಂದೆ ಚಕ್ರಮುದ್ರೆಗಳನ್ನು ತೋರಿಸಿ ೮ ಬಾರಿ ಮೂಲಮಂತ್ರದಿಂದ ಅಭಿಮಂತ್ರಿಸಿ **'ಇಮಾ ಆಪಃ ಶಿವತಮಾಃ...'** ಎಂಬ ಮಂತ್ರದಿಂದ ಶಂಖಭ್ರಮಣವನ್ನು ಮಾಡಬೇಕು.

ಮೊದಲು ಕಾಲಿನಿಂದ ತಲೆಯವರೆಗೆ, ಬಳಿಕ ನಾಭಿಯಿಂದ ತಲೆಯವರೆಗೆ, ೩ ನೇ ಸಲ ಹೃದಯದಿಂದ ತಲೆಯವರೆಗೆ ಪ್ರದಕ್ಷಿಣವಾಗಿ ತಿರುಗಿಸಿ ಪಾತ್ರಾಂತರದಲ್ಲಿ ಆ ನೀರನ್ನು ಬಿಡಬೇಕು.

ಮತ್ತೊಮ್ಮೆ ನೀರಾಜನ.

ಬಳಿಕ ಅನುಯಾಗದ ವಹ್ನಿ ಅಂತರ್ಗತ ಪರಶುರಾಮನನ್ನು ಬಾಯಿಯಿಂದ ಗಾಳಿಯನ್ನು ಸೇದಿ ಹೃದಯವನ್ನು ಪ್ರವೇಶಿಸಿದ ಎಂದು ಭಾವಿಸಬೇಕು.

ಬಳಿಕ ರಮಾ, ಬ್ರಹ್ಮ ವಾಯು, ಶೇಷ, ಗರುಡ ಈ ಪ್ರತಿಮೆಗಳನ್ನು ಆಯಾಮಂತ್ರಗಳಿಂದ ಅಭಿಷೇಕಮಾಡಿ ದೇವರ ತೀರ್ಥವನ್ನು ಮೂರು ಬಾರಿ ಕೊಟ್ಟು, ದೇವರ ನಿರ್ಮಾಲ್ಯವಾದ ಗಂಧ, ಪುಷ್ಪ, ತುಲಸಿಗಳನ್ನು ಅರ್ಪಿಸಿ ಲಕ್ಷ್ಮೀದೇವಿಗೆ ಹರಿದ್ರಾಕುಂಕುಮಗಳನ್ನು ಏರಿಸಿ ನೈವೇದ್ಯವನ್ನು ಮಾಡಬೇಕು.

ದೇವರಿಗೆ ನಿವೇದಿಸಿದ್ದನ್ನೇ ವೈಶ್ವದೇವಕ್ಕೆ ಉಪಯೋಗಿಸಬೇಕೆಂಬ ನಿಯಮವಿರುವ ಕಾರಣ ದೇವರಿಗೆ ನಿವೇದಿತವಾದ ಪದಾರ್ಥಗಳಲ್ಲಿ ಒಂದು ಭಾಗವನ್ನು ವೈಶ್ವದೇವಕ್ಕಾಗಿ ತೆಗೆದಿಟ್ಟು ರಮಾದೇವಿಯ ನೈವೇದ್ಯವನ್ನು ಮಾಡುವರು.

ಶೇಷಗರುಡಾದಿಗಳೆಲ್ಲರಿಗೂ ರಮಾ, ಬ್ರಹ್ಮ ವಾಯುದೇವರಿಗೆ ನಿವೇದಿತವಾದ ಅನ್ನಾದಿಗಳನ್ನು ನಿವೇದಿಸುವದು. ಬಳಿಕ ಪ್ರದಕ್ಷಿಣೆ ನಮಸ್ಕಾರ.

ವಿಷ್ಣುಸಹಸ್ರನಾಮವನ್ನಾಗಲೀ ಅಥವಾ ಬಿಡಿಯಾದ ನಾಮವನ್ನಾಗಲೀ ಪಠಿಸುತ್ತಾ ಒಂದು ಪ್ರದಕ್ಷಿಣೆಹಾಕಿದರೆ, ಸಪ್ತಸಾಗರಸಹಿತವಾದ ಸಮಗ್ರ ಪೃಥಿವಿಯ ಪ್ರದಕ್ಷಿಣೆಯನ್ನು ಮಾಡಿದ ಫಲವು ಬರುವುದು.

ಮೂರು ಪ್ರದಕ್ಷಿಣೆಗಳಿಂದ ಏಳು ದಿನದ ಪಾಪಗಳೆಲ್ಲವೂ ಭಸ್ಮವಾಗುವವು.

ನೂರಾ ಎಂಟು ಪ್ರದಕ್ಷಿಣೆಗಳಿಂದ ಕೋಟಿ, ಕೋಟಿ ದಕ್ಷಿಣೆಕೊಟ್ಟು ಮಾಡಿದ ಯಜ್ಞದ ಫಲವು ಲಭಿಸುವದು.

ಪ್ರದಕ್ಷಿಣೆಯ ಕ್ರಮ

ಹೆರಿಗೆ ಹತ್ತಿರದಲ್ಲಿರುವ ಹೆಣ್ಣು ನೀರು ತುಂಬಿದ ಕೊಡವನ್ನು ಎಷ್ಟು ನಿಧಾನ ಹೊತ್ತು ಸಾಗುವಳೋ ಹಾಗೆ ಪ್ರದಕ್ಷಿಣೆಮಾಡಬೇಕು.

ನಮಸಕ್ಕೆ ಅಷ್ಟಾಂಗದಂತೆ ಪ್ರದಕ್ಷಿಣೆಗೆ ಚತುರಂಗ

೧) ಕಾಲಿಗೆ ಕಾಲು ತಾಗಿಸಿ, ೨) ಕೈಗಳನ್ನು ಚಲಿಸದೇ,

೩) ನಾಲಿಗೆಯಿಂದ ಸ್ತುತಿಸುತ್ತಾ ೪) ಮನದಲ್ಲಿ ಧ್ಯಾನಿಸುತ್ತಾ

ಪ್ರದಕ್ಷಿಣೆ ಹಾಕಬೇಕು.

ನಾಲ್ಕಕ್ಕೂ ಕಡಿಮೆಯಾಗಿ ಪ್ರದಕ್ಷಿಣೆ ಹಾಕುವದು ಸರಿಯಲ್ಲ.

ಉದ್ದಂಡ ಪ್ರಣಾಮದ ಸಂಖ್ಯೆಯನ್ನು ಶಾಸ್ತ್ರವು ಹೇಳುತ್ತದೆ. ೧೦೦, ೪೮, ೩೬, ೨೪, ೧೬, ೧೨ ಅತೀ ಕೊನೆಯ ಪಕ್ಷ ೫ ಪ್ರಣಾಮಗಳನ್ನು ದೇವರನ್ನು ಸ್ಮರಿಸುತ್ತಾ ಮಾಡಬೇಕು.

ಮೊದಲು ಎಡಗಾಲು ನೆಲಕ್ಕೂರಿ ಎರೆಡುಕೈಗಳಿಂದ ಭೂಮಿಯನ್ನು ಮುಟ್ಟಿ ಬಳಿಕ ಬಲಗಾಲಿನಿಂದ ನೆಲ ಮುಟ್ಟಿ ಹಣೆಯನ್ನು ಭೂಮಿಗೆ ತಾಗಿಸಿ ಬಳಿಕ ಮುಗಿದ ಕೈ ಅಂಜಲಿಯನ್ನು ತಲೆಯಮೇಲಿಟ್ಟು ಧ್ಯಾನಮಾಡುತ್ತ ನಮಸ್ಕರಿಸಬೇಕು.

ಉಟ್ಟ ಬಟ್ಟೆಯನ್ನು ಉಳಿಸಿ ಉತ್ತರೀಯಾದಿಗಳನ್ನು ಮೈಮೇಲೆ ಇರಗೊಡದೇ ಭಗವಂತನನ್ನು ನಮಿಸಬೇಕು.

ಮೈಮೇಲೆ ಬಟ್ಟೆಯನ್ನು ಹೊದ್ದು ದೇವರಿಗೆ ನಮಸ್ಕರಿಸಿದರೆ ಮೂರು ಜನ್ಮಗಳಲ್ಲಿ ಕುಷ್ಠರೋಗಿಯಾಗುವ.

ಭಗವಂತನ ಎಡದಲ್ಲಿ ಮುಂದೆ, ಹಿಂದೆ ನಮಸ್ಕರಿಸಬಾರದು. ಬಲಭಾಗದಲ್ಲಿಯೇ ನಮಸ್ಕಾರ ಉತ್ತಮ.

ಋಗ್ವೇದಿಗಳಲ್ಲದವರು ಬಟ್ಟೆಯನ್ನು ಸೊಂಟಕ್ಕೆ ಕಟ್ಟಿ ನಮಸ್ಕರಿಸಬೇಕು. ಬಳಿಕ ಪುನಃ ವೇದಿಕೆಯನ್ನು ಏರಿ, ಮಾಡಿದ ಪೂಜೆಯ ಪರಿಪೂರ್ಣತೆಗಾಗಿ, ೧೦೮ ಸಲ ನಾರಾಯಣಮಂತ್ರವನ್ನು ಜಪಿಸಬೇಕು.

ಆಮೇಲೆ ಪ್ರತಿಮೆಯಲ್ಲಿ ತತ್ವನ್ಯಾಸ ಮಾತೃಕಾನ್ಯಾಸ ಕೃದ್ಧೋಲ್ಕಾದಿ ಪಂಚಾಂಗನ್ಯಾಸ, ಅಷ್ಟಾಂಗನ್ಯಾಸಗಳನ್ನು ಮಾಡಬೇಕು.

ಉದ್ಯದ್ಭಾಸ್ವತ್ ಇತ್ಯಾದಿಯಾಗಿ ಧ್ಯಾನಿಸಿ, 'ಆತ್ಮಾ ದೇವಾನಾಂ...' 'ಯಚ್ಚೇವ ಯಚ್ಛಂ...' (ಮಂತ್ರಾರ್ಥ ವಿವರ ಪರಿಶಿಷ್ಟದಲ್ಲಿದೆ) ಎಂಬ ಮಂತ್ರವನ್ನು ಪಠಿಸಿ, ಅವಗುಂಠನ ಸಂನಿರೋಧನ, ಸಮ್ಮುಖೀಕರಣ, ಸನ್ನಿಧಾಪನ, ಸಂಸ್ಥಾಪನ, ಆವಾಹನ ಎಂದು ವ್ಯುತ್ಕ್ರಮದಿಂದ ಮುದ್ರೆಗಳನ್ನು ತೋರಿಸಬೇಕು.

'ಓ ಎನ್ನ ಹೃದಯತಾವರೆಯ ದೊರೆ ಹೃದಯಕ್ಕೆ ದಯಮಾಡು' ಎಂದು ಬೇಡಿ, ಕೈಗಳಲ್ಲಿರುವ ತುಳಸಿ ಪುಷ್ಪದಲ್ಲಿ ಬಂದನೆಂದು ಭಾವಿಸಬೇಕು.

ಕಲಶದಲ್ಲಿ ಆವಾಹಿತ ರೂಪಗಳು ಅಭಿಷೇಕಕಾಲದಲ್ಲಿ ಪ್ರತಿಮಾಗತ ರೂಪದಲ್ಲಿ ಏಕೀಕರಿಸಲ್ಪಟ್ಟಿದ್ದವು.

ಆ ಆಜಾದಿಶಿಂಶುಮಾರಂತ ಎಲ್ಲ ಭಗವದ್ರೂಪಗಳನ್ನು ಸೂರ್ಯನಾರಾಯಣನಲ್ಲಿ ಲೀನರಾಗಲು ಪ್ರಾರ್ಥಿಸಬೇಕು.

ಹೃದಯದಿಂದ ಹೊರಬಂದ ಬಿಂಬರೂಪ (ಸಮಗ್ರ ಪೀಠಾವರಣ ದೇವತೆಗಳೊಡನೆ) ಹೃದಯದಲ್ಲಿ ನೆಲೆಗೊಳ್ಳುವನೆಂದು ತಿಳಿಯಬೇಕು.

ಕರಸ್ಥ ತುಲಸೀಪುಷ್ಪದಲ್ಲಿ ಸನ್ನಿಹಿತನಾದ ಭಗವಂತನನ್ನು, ನಾಸಿಕೆಯ ಮುಖಾಂತರ ಬ್ರಹ್ಮರಂಧ್ರವನ್ನು ಪ್ರವೇಶಿಸಿ, ಅಲ್ಲಿಂದ ಸುಷುಮ್ನಾ ನಾಡೀ ದ್ವಾರಾ, ಹೃದಯಕಮಲದಲ್ಲಿರುವ ಆಯಾರೂಪಗಳ ಜೊತೆಗೆ ಐಕ್ಯಹೊಂದಿದರೆಂದು ತಿಳಿಯಬೇಕು.

ಇದಾದ ಬಳಿಕ ತತ್ತ್ವನ್ಯಾಸ, ಮಾತೃಕಾನ್ಯಾಸಗಳನ್ನು ತನ್ನದೇಹದಲ್ಲಿ ಮಾಡಿಕೊಂಡು, ಸಮಗ್ರ ಪೂಜಾವಿಧಿಯನ್ನು ದೇವರಿಗೆ ಸಮರ್ಪಿಸುವದು.

'ನಾಹಂ ಕರ್ತಾ...'- 'ದೇವರೇ ಸರ್ವಕರ್ತೃ, ನನಗೆ ಸ್ವತಂತ್ರಕರ್ತೃತ್ವವೇ ಇಲ್ಲ, ಎಲ್ಲ ಕರ್ಮಗಳೂ ಆತನಪೂಜೆ, ಆದರೂ ಆ ಭಗವಂತನ ದಯೆಯಿಂದ ಈ ಪೂಜೆ ನಾನು ಮಾಡಿದೆ ಎಂದು ಹೆಸರಾಯಿತು.

'ನ ಜಾನೇ ಕರ್ಮ...'- ಲೌಕಿಕ ವೈದಿಕ ಎಂಬ ಯಾವಕರ್ಮಗಳನ್ನು ನಾನು ಅರಿಯೆ, ವಿಧಿಯೇನು ನಿಷೇಧವೇನು ಎಂದು ಯಾವುದೂ ತಿಳಿಯದು, ಓ ವಿಷ್ಣುದೇವ ನಾನು ನಿನ್ನ ದಾಸ ಎಂದು ಮಾತ್ರ ತಿಳಿದಿರುವೆನು.

'ಮಂತ್ರತಃ ತಂತ್ರತಃ...'- ಮಂತ್ರ ತಂತ್ರಗಳಿಂದಾಗಲಿ, ದೇಶಕಾಲಗಳಿಂದಾಗಲಿ, ಯೋಗ್ಯ ವಸ್ತುಗಳಿಂದಾಗಲಿ, ಉಂಟಾದ ನ್ಯೂನತೆಗಳನ್ನು ನಿನ್ನ ನಾಮಸಂಕೀರ್ತನ ತುಂಬುವದು.

'ಮಾದೃಶೋ ನ ಪರಃ...'- 'ನನ್ನಂಥ ಪಾಪಿಯಿಲ್ಲ ನಿನ್ನಂಥ ದಯಾಘನನಿಲ್ಲ. ದಾಸನೆಂದು ನನ್ನನ್ನು ಕ್ಷಮಿಸು ಸ್ವಾಮಿ.'

'ರಕ್ಷತೀತ್ಯೇವ...'- 'ಭಗವಂತನು ಅವಶ್ಯವಾಗಿ ರಕ್ಷಿಸುವ ಎಂಬ ವಿಶ್ವಾಸ, ನಾನವನ ದಾಸ ಎಂಬ ನೆನಹು. ಇದೇ ವಿಷ್ಣುವಿಗೆ ಶರಣಾಗತಿ. ಬಂಧನ ಬಿಟ್ಟು ವೈಕುಂಠ ಸೇರುವದೇ ಇದಕ್ಕೆ ಫಲ.

'ಸ್ಥಿತಿಃ ಸೇವಾ...'- 'ನಿಲ್ಲುವದು ಸೇವೆ, ನಡೆಯುವದು ಯಾತ್ರೆ, ತಿಳಿಯುವದು ಸ್ಮರಣೆ, ನುಡಿಯುವದು ಸ್ತುತಿ. ಈ ಬಗೆಯ ಸಾಧನ ಎಲ್ಲೆಡೆ ವಿಷ್ಣುವನ್ನು ಧ್ಯಾನಿಸುವವರಿಗೆ ಅತಿಸುಲಭ.'

'ಯತ್ಕರೋಷಿ...'- ನಾನು ಮಾಡುವದು, ಉಣ್ಣುವದು, ಹೋಮಿಸುವದು, ಕೊಡುವದು, ತಪಿಸುವದು ಇದನ್ನೆಲ್ಲ ದೇವರಿಗರ್ಪಿಸುವೆ.

'ಪಶ್ಯನ್ ಶೃಣ್ವನ್...'- ನೋಡುವಾಗ, ಕೇಳುವಾಗ, ಮುಟ್ಟುವಾಗ, ಮೂಸುವಾಗ, ಉಣ್ಣುವಾಗ, ಹೋಗುವಾ, ಮಲಗುವಾಗ, ಶ್ವಸಿಸುವಾಗ, ನುಡಿವಾಗ, ಬಿಡುವಾಗ, ಹಿಡಿವಾಗ, ರೆಪ್ಪೆ ತೆರೆವಾಗ, ಮುಚ್ಚುವಾಗ, ದೇವರ ಪ್ರೇರಣೆಯಿಂದ ಇಂದ್ರಿಯಗಳ ವ್ಯಾಪಾರವಾಗುವದು ಎಂದು ಅಸಂಗನಾಗಿ ಕರ್ಮಗಳನ್ನರ್ಪಿಸಿದರೆ ತಾವರೆ ಎಲೆಯಂತೆ ಅಲಿಪ್ತನಾಗುವ.

'ಕಾಯೇನ ವಾಚಾ...'- 'ದೇಹ, ಮಾತು, ಇಂದ್ರಿಯ, ಮನಸ್ಸು, ಬುದ್ಧಿ ಅಂತಃಕರಣಗಳಿಂದ ನನ್ನ ಯೋಗ್ಯತೆಯನ್ನನುಸರಿಸಿ ಸ್ವತಂತ್ರನಾದ ದೇವರ ಪ್ರೇರಣೆಗನುಗುಣವಾಗಿ ನಾನು ಮಾಡಿದ (ನನ್ನಿಂದಾದ) ಕರ್ಮಗಳನ್ನೆಲ್ಲ ದೇವರಿಗೆ ಸಮರ್ಪಿಸುವೆ.'

'ಮಹಾಕಾರುಣಿಕೋ...'- 'ಭಗವಂತ ನಿಜವಾಗಿಯೂ ಅನಂತ ಕರುಣಾಮಯಿ. ನಾವು ಅನಂತ ಜನ್ಮಗಳ ಹಿಂದಿನ ಅಥವಾ ಅನಂತ ಕಾಲದ ಮುಂದಿನ ಅನಂತಾನಂತ ಕರ್ಮಗಳನ್ನು, ಅನಂತಾನಂತ ದೇಹ, ಮಡದಿ ಮಕ್ಕಳು ಹಣ ಹೊನ್ನು ಭೋಗ, ಸಾಧನೆ, ಹಾಗೂ ಇವುಗಳೆಲ್ಲದರ ಅಭಿಮಾನಿ ದೇವತೆಗಳನ್ನು -ಅಂದಂದು ಸಮರ್ಪಿಸಬೇಕಾಗಿದ್ದರೂ ಅಜ್ಞಾನ, ದೌರ್ಜನ್ಯಗಳಿಂದಾಗಿ ಸಮರ್ಪಿಸದಿದ್ದರೂ -ಇಂದು ಈಗ ಸಮರ್ಪಣೆಯ ಮಹಿಮೆ ಆವಶ್ಯಕತೆಗಳನ್ನು ತಿಳಿದ- ವರ್ತಮಾನ ಜನ್ಮದಲ್ಲಿ ಒಮ್ಮೆ ಸಮರ್ಪಿಸಿದರೂ ದೇವರು ಅನಂತಫಲವನ್ನೀವ, ಕಾವ.'

'ಯಸ್ಯ ಸ್ಮೃತ್ಯಾ...'- 'ಯಾವನ ನೆನಹು ನಾಮೋಚ್ಚಾರಣಗಳನ್ನು ಮಾಡಿದ ಕ್ಷಣವೇ ತಪಸ್ಸು, ಪೂಜೆ, ಯಜ್ಞ ದಾನ ಮುಂತಾದ ಸಕಲ ಸಾಧನಗಳಲ್ಲಿಯ ನ್ಯೂನತೆಯೆಲ್ಲ ತೊಲಗಿ ಪರಿಪೂರ್ಣತೆ ಒದಗುವದೊ ಆ ಅಚ್ಯುತನಿಗೆ ನನ್ನ ಅನಂತ ನಮನ.'

'ಮಂತ್ರಹೀನಂ...'- ಶಾಸ್ತ್ರೋಕ್ತ ಮಂತ್ರ, ಕ್ರಿಯೆ, ಭಕ್ತಿಗಳನ್ನು ವಿಹಿತ ಕ್ರಮದಲ್ಲಿ ಮಾಡಿದರೆ ಅದು ಪರಿಪೂರ್ಣ. ಇದಕ್ಕೆ ವಿಪರೀತವಾದದ್ದು ಹೀನ.

'ಮಂತ್ರಗಳಿಲ್ಲದೇ (ಅಥವಾ ಹೀನ ಮಂತ್ರೋಚ್ಚಾರಣೆ ಗಳಿಂದ) ಕ್ರಿಯೆಗಳಿಲ್ಲದೇ (ಅಥವಾ ಹೀನ ಕ್ರಿಯಾನುಷ್ಠಾನದಿಂದ) ಭಕ್ತಿಯಿಲ್ಲದೇ (ಅಥವಾ ಹೀನಭಕ್ತಿಯಿಂದ) ನಾನು ಮಾಡಿದುದನ್ನೆಲ್ಲ ಒ ರಮೆಯರಸ, ಪರಿಪೂರ್ಣಗೊಳಿಸು.'

ಹೀಗೆಂದು ಸಮರ್ಪಿಸಿ ಪ್ರಾರ್ಥಿಸಬೇಕು.

ಬಳಿಕ ೩೨ ಅಪರಾಧಗಳನ್ನು ಪುನಃ ಪುನಃ ನೆನೆದು ಕ್ಷಮೆಯನ್ನು ಕೋರಬೇಕು. ಕೊನೆಗೆ

ಅಸ್ಮದ್ಗುರ್ವಂತರ್ಗತ ಪರಮಗುರ್ವಂತರ್ಗತ ತತ್ವಾಭಿಮಾನಿದೇವತಾಂತರ್ಗತ
ಶ್ರೀಮದ್ಭಾರತೀರಮಣಮುಖ್ಯಪ್ರಾಣಾಂತರ್ಗತ ಅನಂತಕಲ್ಯಾಣಗುಣಗಣಧಾಮಾ
ಮಮ ಬಿಂಬಮೂರ್ತಿಃ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಂ।

ಎಂದು ಸಮರ್ಪಿಸಬೇಕು.

ಶ್ರೀ ಕೃಷ್ಣಾರ್ಪಣಮಸ್ತು

ಪರಿಶಿಷ್ಟ-೧

ಮಂತ್ರಾರ್ಥ

ಪೂಜಾವಿಧಿಯಲ್ಲಿ ಬರುವ ಮಂತ್ರಗಳಿಗೆ ಅರ್ಥವನ್ನು ತಿಳಿದುಕೊಳ್ಳಬೇಕು. ಅರ್ಥ ತಿಳಿಯದೇ ಮಂತ್ರ ಉಚ್ಚರಿಸಿದರೆ ಅದು ಮಂತ್ರವೇ ಅಲ್ಲದಿದ್ದಂತೆ. ಶ್ರೀಮದಾಚಾರ್ಯರು ಈ ತತ್ತ್ವವನ್ನು ಗೀತಾತಾತ್ಪರ್ಯದಲ್ಲಿ ನಿರೂಪಿಸಿದ್ದಾರೆ.

ಅನರ್ಥಜ್ಞೋದಿತೋ ಮಂತ್ರಃ ನಿರರ್ಥಸ್ತಾತಿ ಮಾನತಃ

ಯನ್ಮಂತ್ರಸ್ತೇನ ಕಥಿತಃ ಮಂತ್ರಾರ್ಥೋ ಜ್ಞೇಯ ಏವ ತತ್ । ಪೈಂಗಿಶ್ರುತಿ

ಆದುದರಿಂದ ವೇದಮಂತ್ರಗಳಿಗೆ ಇಲ್ಲಿ ಅರ್ಥವನ್ನು ವಿವರಿಸುತ್ತಿದ್ದೇನೆ. ಪುರಾಣಾದಿ ಮಂತ್ರಗಳಿಗೆ (ಕನ್ನಡ) ಪೂಜಾರಹಸ್ಯದಲ್ಲಿಯೇ ಆಯಾ ಪ್ರಸಂಗದಲ್ಲಿ ಅರ್ಥಗಳನ್ನು ನೋಡಿಕೊಳ್ಳಬಹುದು.

ಅಲ್ಲದೆ, ಆ ಆ ಪ್ರಸಂಗಗಳಿಗೆ ಉಚಿತವಾಗುವಂತೆ ಹೊಂದಿಸಿ ಮಂತ್ರದ ಅರ್ಥಗಳನ್ನು ನಿರೂಪಿಸುವ ಪ್ರಯತ್ನ ಮಾಡಿದ್ದೇನೆ.

ಯಾವ ಮಂತ್ರಗಳಿಗೆ ಶ್ರೀಮದಾಚಾರ್ಯರ ಭಾಷ್ಯ ಅಥವಾ ಶ್ರೀ ಜಯತೀರ್ಥಾದಿ ಮಹಾನುಭಾವರ ವ್ಯಾಖ್ಯಾನಾದಿಗಳು ಉಂಟೋ ಅಲ್ಲಿ ಅವುಗಳನ್ನು ಜಿಜ್ಞಾಸುಗಳ ವಿಶೇಷ ಅಧ್ಯಯನಕ್ಕೆ ಅನುಕೂಲವಾಗಲೆಂದು ಕೊಟ್ಟಿದ್ದೇವೆ.

ಯಾವ ಮಹಾಜ್ಞಾನಿಗಳ ವ್ಯಾಖ್ಯಾನವೂ ದೊರೆಯದಿದ್ದಲ್ಲಿ ನಾನೇ ಹರಿಗುರುಗಳು ಪ್ರೇರಿಸಿದಂತೆ ವ್ಯಾಖ್ಯಾನಿಸಿದ್ದೇನೆ.

१) वायवा याहि दर्शते मे सोमा अरंकृताः। तेषां पाहि श्रुधी हवम्।

भा- दर्शतस्तत्दृष्टित्वात् सर्वज्ञोऽसौ यतो विभुः।
भत्त्याद्यलंकृताः सोमा मनांस्यन्ये हिरण्यतः।
हिरण्यालंकृता यस्माद्धूयन्ते वायवे सुताः।।
तान् पाहि श्रुधि चाऽऽनं स्वातन्त्र्ये व्यत्ययोप्ययम्।
मनोऽपि भोग्यमीशस्य प्रीतिमात्रेण केवलम् ।।

(दर्शेन दर्शनेन ज्ञानेन तत पूर्ण। तेषां-तान् स्वातन्त्र्ये व्यत्ययः तेन त्वदधीनान् तान् इत्यर्थः।)

ದರ್ಶತ- ಓ ಅರಿವಿನ ಆಗರನೇ, ವಾಯೋ- ಓ ವಾಯುವೇ ಆಯಾಹಿ- ನೀನು ಬಾ. ಇಮೇ ಸೋಮಾಃ- ನನ್ನೀ ಮನ ಹಾಗೂ ಮನದ ಒಲವುಗಳು, ಅರಂಕೃತಾಃ- ಭಕ್ತಿ ಶ್ರದ್ಧೆಗಳಿಂದ ಶೋಭೆಗೊಂಡಿವೆ. ತೇಷಾಂ (ತಾನ್)- (ನಿನ್ನಧೀನವಾದ) ಆ ಮನವನ್ನು, ಮನದ ಒಲವುಗಳನ್ನು ಪಾಹಿ (ಪಿಬ)- ಸ್ವೀಕರಿಸು. (ತೇಷಾಂ ನನ್ನ ಮನದ) ಹವಂ ಶ್ರುಧಿ- ಕರೆ ಕೇಳು, ದಯಮಾಡು.

(ದೇವಗೃಹದ ಬಾಗಿಲು ತೆರೆದು ಬರುವಂತೆ ನನ್ನ ಮನದ ಕರೆ ಕೇಳಿ ಓಡಿ ಬಾ.)

२) यच्च किञ्चिज्जगत्सर्वं दृश्यते श्रूयतेऽपि वा।
अन्तर्बहिश्च तत्सर्वं व्याप्य नारायणः स्थितः।।

किञ्चिदीषन्मनागल्पे इत्यमरः। अपि वा इत्यनेन यत् दृश्यते न श्रूयते तत् समुच्चिनोति। अपि, पञ्चभिर्वेदैः अनुक्तमश्रूयमाणं वस्तु नास्ति किल। सामान्यतोऽपीति प्रक्षिप्तं चेत् सुश्लिष्टम्।

न हि गाङ्गं वालुकं विशिष्योक्तम्। अदृश्यमानं तु शेषाद्यैरित्येव। न तु ईशाद्यैरपि । असत्वात्। चः अप्यर्थे। (गी.ता.) 'एकमपि कर्म' इतिवत् अभिव्याप्तौ। सर्वपदेन स्वस्यापि ग्रहणे बाधकाभावात् स्वस्यापि स्वयमेव अन्तर्बहिश्च। अणोरणीयांसं महतो महीयांसं च शुश्रुविम।

ಕಿಂಚಿತ್- ಕ್ಷುದ್ರವಾದುದು ಸರ್ವಂ- ಮಹತ್ತಾದುದು ಯತ್ ಜಗತ್- ಯಾವುದೆಲ್ಲ ದೃಶ್ಯತೇ- ಕಾಣುವದೋ, ಶ್ರೂಯತೇ- ಆಗಮಗಳಿಂದ (ಸಾಮಾನ್ಯವಾಗಿ) ಕೇಳಿ ಬರುವದೋ ಅಪಿ ವಾ- ಯಾವುದೆಲ್ಲ ಕಣ್ಣಿಗೂ ಕಾಣದೇ, ಆಗಮಗಳಿಂದಲೂ (ಪ್ರತ್ಯೇಕವಾಗಿ, ವಿಶೇಷವಾಗಿ) ಕೇಳಿಬಾರದೇ ಇರುವದೋ, ತತ್ ಸರ್ವಂ ಅದೆಲ್ಲವನ್ನೂ ಅಂತರ್ಬಹಿಶ್ಚ ಒಳ-ಹೊರಗೆ, ವ್ಯಾಪ್ಯ (ವಿ-ತನ್ನಧೀನವಾಗಿರುವಂತೆ) ವ್ಯಾಪಿಸಿ ನಾರಾಯಣಃ- (ಪರಮ ಮಹದ್ರೂಪಿಯಾದ) ನಾರಾಯಣನು ಸ್ಥಿತಃ- ಇರುವನು.

३) अग्निनाग्निस्समिध्यते कविर्गृहपतिर्युवा। हव्यवाड्जुह्वास्यः।

भा-- यस्यास्ये हूयते सोऽग्निः परेशेन समिध्यते।

टी--यस्यास्ये हविः हूयते स जु ास्यः। जुहु हवनाधिकरणं आस्यं यस्येति। कविः सर्वज्ञः, गृहाणां पतिः गृहपतिः, युवा तरुणः, हव्यवाट्, अग्निना परेशेन त्वया समिध्यते सन्दीप्तो भवति। अग्न्यादीनां दीप्त्यादिगुणप्रदस्त्वं इति यावत्।

ಕವಿಃ- ಎಲ್ಲವನ್ನೂ ಬಲ್ಲ, ಗೃಹಪತಿಃ- ಮನೆಯನ್ನು ಕಾಪಾಡುವ, ಯುವಾ- ತರುಣನಾದ, ಹವ್ಯವಾಟ್- ಹವಿಸ್ಸನ್ನು ಒಯ್ದು ದೇವತೆಗಳಿಗೆ ತಲುಪಿಸುವ, ಜುಹ್ವಾಸ್ಯಃ- ಯಾವನ ಮುಖದಲ್ಲಿ ಹವಿಸ್ಸನ್ನು ಹೋಮಿಸುತ್ತೇವೆಯೋ ಅಂಥ, ಅಗ್ನಿಃ- ಅಗ್ನಿದೇವತೆ, ಅಗ್ನಿನಾ- ಸರ್ವೋತ್ತಮ ಅಗ್ನಿಯಾದ ಭಗವಂತನಿಂದ ಸಮಿಧ್ಯತೇ- ಬೆಳಗುತ್ತಾನೆ. (ಅಗ್ನಿಗೆ ಬೆಳಕು ಕೊಡುವ ದೇವರು ದೇವಗೃಹವನ್ನು ಬೆಳಗಲಿ ಎಂದು ಈ ಸಂದರ್ಭದಲ್ಲರ್ಥ.)

४) ॐ तेभ्यो ह वै देवा अपैवाबीभत्सन्त मनुष्यगन्धात्
त एते धाय्ये अन्तरदधत। (ऐतरेय ब्राह्मण ३-३०-३)

ಮನುಷ್ಯಗಂಧಾತ್- ಮಾನುಷ ದುರ್ಗಂಧದಿಂದಾಗಿ ದೇವಾಃ-ಸುರರೆಲ್ಲ ತೇಭ್ಯಃ- ನರರಿಂದ ಅಪ ಅಬೀಭತ್ಸಂತ- ಬೀಭತ್ಸೆಗೊಳ್ಳುತ್ತಾರೆ. ಜುಗುಪ್ಸೆ ಪಡುತ್ತಾರೆ. ಕಾರಣ ತೆ ಏತೇ ಧಾಯ್ಯೇ- ಮಧ್ಯ (ಜವನಿಕೆಯನ್ನು) ಸೇರಿಸುವ ಎರಡು ಮಂತ್ರಗಳನ್ನು ಅಂತರ್- ನಮ್ಮ ದೇವತೆಗಳ ಮಧ್ಯದಲ್ಲಿ ಅದಧತ- ಇಟ್ಟರು, ಇಡಬೇಕು.
(ಈ ಎರಡು ಮಂತ್ರಗಳು ದುರ್ಗಂಧವನ್ನು ಮರೆ ಮಾಡುವ ಮಧ್ಯದ ತೆರೆಯಂತೆ ಕೆಲಸ ಮಾಡುವವು.)

५) येभ्यो माता मधुमत् पिन्वते पयः पीयूषं द्यौरदितिरद्रिबर्हाः।
उक्थशुष्मान् वृषभरान् स्वप्नसस्ताँ आदित्याँ अनु मदा स्वस्तये।

अद्रिवत् प्रजाः बृंहयति इति अद्रिबर्हाः। द्यौः द्योतमाना। उक्थं स्तुत्यं शुष्मं बलं येषां। वृषं वर्षणीयं भक्तेभ्यो देयं हरन्ति आहरन्ति इति वृषभराः। हस्य भः छन्दसि। स्वप्नसः शोभनानि अप्नानि आपः कर्माणि येषाम्। सुखमेव आप्नुवन्ते वा। मद मादय।

ಅದ್ರಿಬರ್ಹಾಃ- ತಾನು ಬೆಳೆಸಿದ ವನಸ್ಪತಿಯಿಂದ ಜೀವರೆಲ್ಲರನ್ನು ಪೋಷಿಸುವ ಬೆಟ್ಟದಂತೆ ತಾನು ಹೆತ್ತ ದೇವತೆಗಳಿಂದ ಜೀವರೆಲ್ಲರನ್ನು ಪೋಷಿಸುವ ದ್ಯೌಃ-

ಕಾಂತಿಮತಿಯಾದ ಮಾತಾ-ತಾಯಿ ಅದಿತಿಃ- ಅದಿತಿಯು ಯೇಭ್ಯಃ- ಯಾವ ದೇವತೆಗಳಿಗೆ ಪೀಯೂಷಂ ಮಧುಮತ್ ಪಯಃ- ಅಮೃತದಂತೆ ಸವಿಯಾದ ಹಾಲನ್ನು ಪಿನ್ವತೇ- ಕುಡಿಸುತ್ತಾಳೋ (ಎಂದೆಂದಿಗೂ ದಿವ್ಯ ಸೌಖ್ಯದಲ್ಲೇ ಬೆಳೆದ (ಮಾನವರ ಅಸಹ್ಯವನ್ನು ಅನುಭವಿಸದ) ಉಕ್ಥಶುಷ್ಮಾನ್- ಶ್ಲಾಘನೀಯ ಶಕ್ತಿಶಾಲಿಗಳಾದ ವೃಷಭರಾನ್ - (ಭಕ್ತರಿಗೆ) (ಸುರಿಯಬೇಕಾದುದರನ್ನು) ಕೊಡಬೇಕಾದುದರನ್ನು ತರುವ ಸ್ವಪ್ನಸಃ- ಉನ್ನತ ಕರ್ಮಗಳನ್ನಾಚರಿಸುವ, ಸುಖವನ್ನೇ ಹೊಂದಿದ ತಾನ್ ಆದಿತ್ಯಾನ್- ಆ ದೇವತೆಗಳನ್ನು ಸ್ವಸ್ತಯೇ- ನಮ್ಮ ಸುಖಕ್ಕಾಗಿ ಅನುಮದ- ಸಂತೋಷಗೊಳಿಸು. (ನಮ್ಮ ದುರ್ಗಂಧದಿಂದ ಅವರಿಗೆ ಪೀಡೆಯಾದರೆ, ಶಾಪ ನೀಡುವರು. ಕಾರಣ, ನಮ್ಮ ಒಳಿತಿಗಾಗಿ ನಮ್ಮ ದುರ್ಗಂಧದಿಂದ ಅವರಿಗೆ ಪೀಡೆಯಾಗದಂತೆ ಮಾಡು)

೬) एवा पित्रे विश्वदेवाय वृष्णे यज्ञैर्विधेम नमसा हविर्भिः।
बृहस्पते सुप्रजा वीरवन्तो वयं स्याम पतयो रयीणाम्।।

वृष्णे कामितस्य वर्षयित्रे। विधेम विदधातिः परिचरणकर्मा। बृहतां पते बृहस्पते। प्रकृष्टत्वेन जननात् प्रजा इति ज्ञानम् । इति ऐतरेयभाष्ये। पुत्रसंयुक्तं वीर्यवत्तममेव वा। इति ऋग्भाष्यम् ।

ವಿಶ್ವದೇವಾಯ- ಜಗದೊಡೆಯ ವೃಷ್ಣೇ- ಕಾಮಿತವನ್ನು ಕರುಣಿಸುವ ಪಿತ್ರೇ- ಎಲ್ಲರ ತಂದೆಯಾದ ದೇವರನ್ನು ಯಜ್ಞೈಃ- ಯಾಗಪೂಜೆಗಳಿಂದ (ಕ್ರಿಯೆಗಳಿಂದ) ಹವಿರ್ಭಿಃ- ಹವಿಸ್ಸುಗಳಿಂದ (ದ್ರವ್ಯಗಳಿಂದ) ನಮಸಾ- ನಮಸ್ಕಾರಗಳಿಂದ (ಮನಸ್ಸಿನಿಂದ) ವಿಧೇಮ- ಸೇವೆ ಮಾಡುವೆವು. ಬೃಹಸ್ಪತೇ- ಹಿರಿಯೊಡೆಯ ಸರ್ವೋತ್ತಮ, ವಯಂ- ನಾವು ವೀರವಂತಃ- (ಕ್ರಿಯೆಯಲ್ಲಿ) ಬಲವಂತರು, ರಯೀಣಾಂ ಪತಯಃ- (ದ್ರವ್ಯದಲ್ಲಿ) ಸಿರಿವಂತರು ಸುಪ್ರಜಾಃ- (ಮನಸ್ಸಿನಲ್ಲಿ) ಉನ್ನತ ಜ್ಞಾನವಂತರು ಸ್ಯಾಮ- ಆಗಬೇಕು.
(ದೇವತೆಗಳು ನಮ್ಮನ್ನು ದೂರಮಾಡಿದರೆ ಇದು ಸಾಧ್ಯವಿಲ್ಲ.)

೭) सक्तुमिव तितउना पुनन्तो यत्र धीरा मनसा वाचमक्रत।
अत्रा सखायः सख्यानि जानते भद्रैषां लक्ष्मीर्निहिताधि वाचि।

चालनी तितउः पुमान् इत्यमरः। तनोतेर्डउः सन्वच्च इत्युणादिसूत्रम्। भद्रा कल्याणकरी। मुक्तिदा इति यावत् ।

ತಿತಉನಾ ಸಕ್ತುಮಿವ- ಜರಡಿ(ಚಾಲನಿ)ಯಿಂದ ಹಿಟ್ಟು ಸ್ವಚ್ಛ ಮಾಡುವಂತೆ ಮನಸಾ- ಮನನಶೀಲಬುದ್ಧಿಯಿಂದ ವಾಚಂ ಪುನಂತಃ- ಮಾತುಗಳನ್ನು ಶೋಧಿಸಿ ಧೀರಾಃ- ಧೀಮಂತರು ಯತ್ರ- ಯಾವ ದೇವರ ಕುರಿತಾಗಿ ಮನಸಾ- ತುಂಬು ಮನಸ್ಸಿನಿಂದ ವಾಚಂ- (ಮಾತುಗಳನ್ನು) ಉಪದೇಶವನ್ನು ಅಕ್ರತ- ಮಾಡಿದರೋ, ಅತ್ರಾ ಆ ಭಗವಂತನ ಬಗೆಗೆ ಸಖಾಯಃ- (ಈ ಮೊದಲೇ) ದೇವರಲ್ಲಿ ಸ್ನೇಹ ಉಳ್ಳ ಜನ ಸಖ್ಯಾನಿ ಜಾನತೇ- ಭಗವಂತನ ನಾನಾ ಬಗೆಯ (ಗೆಳೆತನವನ್ನು) ಉಪಕಾರಗಳನ್ನು ತಿಳಿಯುತ್ತಾರೆ.

ಏಷಾಂ ವಾಚಿ- ಆ ಧೀಮಂತರ ಮಾತಿನಲ್ಲಿ ಭದ್ರಾ ಲಕ್ಷ್ಮೀಃ- ಮುಕ್ತಿಯನ್ನು ದಯಪಾಲಿಸುವ ಸಿರಿಯು ನಿಹಿತಾ- ಸನ್ನಿಹಿತಳಾಗಿರುವಳು.
(ಮನನದಿಂದ ಮಾತಿನ ಕೊಳೆ ಕಳೆದಾಗ ದೇವರ ತಿಳಿವು ಮೂಡುವಂತೆ ದೇವರ ಮೇಲಿನ ಬಟ್ಟೆಯ ತೆರೆ ತೆರೆದಾಗ ದೇವರು ಕಾಣುವನು.)

८) हिरण्यवर्णां हरिणीं सुवर्णरजतस्रजाम्।
चन्द्रां हिरण्मयीं लक्ष्मीं जातवेदो म आवह।।

'साक्षात् श्रीस्तु हरे रूपं इन्दिरा तु तदाश्रयात् ।' इति भागवततात्पर्ये। हिरण्यवर्णां इत्यनेन 'उद्यच्चन्द्रास्वत्समाभासः' इत्याह। हरिणी हरिसम्बन्धिनी। 'चदि आह्लादने। हिरण्मयीं 'हिरुक्सुखं हिरण्यं स्यात्' इति ऐ.भाष्यम्। हिरुक् (लोक) विलक्षणं णं सुखम् । जातं जातं वेत्ति इति जातवेदाः।

ಲಕ್ಷ್ಮೀಂ ಎಂದರೆ ದೇವರ ಮೈಯ್ಯ ಸ್ವರೂಪ ಕಾಂತಿಯು ಎಂದರ್ಥ. ಲಕ್ಷ್ಮೀಂ- ಕಾಂತಿಯು ಹಿರಣ್ಯವರ್ಣಾಂ- ಚಿನ್ನದ ಬಣ್ಣ ಉಳ್ಳದ್ದು. ಸುವರ್ಣರಜತಸ್ರಜಾಂ- ಚಿನ್ನಬೆಳ್ಳಿಗಳ ಹಾರದಿಂದ ಚೆನ್ನು ಆಗಿರುವದು, ಚಂದ್ರಾಂ- ನೋಡುವರ ಮನ ಆಹ್ಲಾದಿಸಿ ತಣಿಸುವದು, ಹಿರಣ್ಮಯೀಂ- ಲೋಕಾತೀತ ಆನಂದಮಯವಾದುದು. ಹರಿಣೀಂ- ಹರಿಯ ಸ್ವರೂಪಭೂತವಾದುದು. ಜಾತವೇದಃ- ಎಲ್ಲವನ್ನೂ ತಿಳಿದ ಓ ಭಗವನ್ ಆ ನಿನ್ನ ಕಾಂತಿಯನ್ನು ಮೇ ಆವಹ- ನನ್ನೆದುರಿಗೆ ತಾ. ನನಗೆ ದರ್ಶನ ಮಾಡಿಸು.
(ಪ್ರತಿಮೆಗಾಗಿ ಪ್ರತಿಮೆಯನ್ನು ನೋಡುತ್ತಿಲ್ಲ. ದೇವರ ದರ್ಶನಕ್ಕಾಗಿ ಪ್ರತಿಮೆಯಲ್ಲಿ ಪ್ರತೀಕ್ಷಿಸುತ್ತಿರುವದು ಅಲ್ಲವೇ? ಕಾರಣ, ದೇವರ ಸ್ವರೂಪ ಕಾಂತಿ ಕಣ್ಣಿಗೆ ಕಾಣುವಂತೆ ಕರುಣೆಯಾಗಲೆಂದು ಕೋರಿಕೆ.)

९) पक्षिराजाय विद्महे वक्रतुण्डाय धीमहि। तन्नो गरुडः प्रचोदयात्।

राज्ञः स्वामिनः विष्णोः पक्षः युद्धे वादे वा अस्य अस्ति इति राजपक्षी एव पक्षिराजः। पक्षिणां सिद्धान्तिनां विहगानां च राजा इति वा। वक्रं तुण्डं यस्य, वक्रान् कुटिलान् भुजगान् वा तुण्डतीति वा। तुडिघातोरेव कमडः तुण्डुशब्दः।

ವಕ್ರತುಂಡಾಯ- ಡೊಂಕು ಚುಂಚಿನ, ಅಂಕುಡೊಂಕಾಗಿ ನಡೆವ ಹಾವುಗಳನ್ನು ತುಂಡರಿಸುವ, ಕುಟಿಲರನ್ನು ಕೊಲ್ಲುವ ಪಕ್ಷಿರಾಜಾಯ ತನ್ನೊಡೆಯನ (ಕಾಳಗದ) ಪಕ್ಷದಲ್ಲಿ (ವಾದದ) ಸಿದ್ಧಾಂತದಲ್ಲಿ ಸ್ಥಿರನಾದ, ಹಕ್ಕಿಗಳರಸನಾದ ಗರುಡನನ್ನು ತಿಳಿಯೋಣ, ಧ್ಯಾನಿಸೋಣ. ತತ್- ಅದಕ್ಕಾಗಿ ಗರುಡಃ- ಗರುಡನು ನಃ- ನಮ್ಮನ್ನು ಪ್ರಚೋದಯಾತ್- ಪ್ರೇರಿಸಲಿ.

१०) तत्पुरुषाय विद्महे सुवर्णपक्षाय धीमहि। तन्नो गरुडः प्रचोदयात्।

'ॐ तत्सदिति' इत्युक्तस्य तस्य पुरुषः। ततं ऊढ्वा पुरु सरति उह्यते । न भूमौ सरति। तेन देवेनैव उपोद्बलितः पुरु सरति। तस्य पुरः सरणं उ शीलमस्य। सुवर्णः वेदः। 'छन्दोमयेन गरुडेन' इति भागवतम्। 'गरुडो वेदपूरुषः' इति ऐ.भाष्यम्।

ತತ್ಪುರುಷಾಯ- ಆ ದೇವನ ಪಾರ್ಷದಪುರುಷನಾದ, (ತತ್) ವ್ಯಾಪಿಸಿದ ದೇವನನ್ನು (ಪುರು) ಚೆನ್ನಾಗಿ (ಸ) ಎತ್ತಿ ಹಾರುವ, (ತತ್) ಆ ದೇವನಿಂದಲೇ (ಪುರು) ಹೊರಲು ಸಾಧ್ಯವಿಲ್ಲದಷ್ಟು ದೊಡ್ಡ ದೇವನನ್ನು (ಸ) ಹೊತ್ತು ಒಯ್ಯುವ, (ತತ್ಪುರಃ) ದೇವರ ಎದುರಲ್ಲಿ (ಸ) ನಿಲ್ಲುವ (ಉ) ಸ್ವಭಾವದ, ಸುವರ್ಣಪಕ್ಷಾಯ ಚಿನ್ನದ ಪಕ್ಕವಿರುವ (ಸುವರ್ಣ) ವೇದಗಳ ಸಿದ್ಧಾಂತ ಉಳ್ಳ ಗರುಡನನ್ನು ತಿಳಿಯೋಣ, ಧ್ಯಾನಿಸೋಣ. ತತ್- ಅದಕ್ಕಾಗಿ ಗರುಡಃ- ಗರುಡನು ನಃ- ನಮ್ಮನ್ನು ಪ್ರಚೋದಯಾತ್- ಪ್ರೇರಿಸಲಿ.

११) निषुसीद गणपते गणेषु त्वामाहुर्विप्रतमं कवीनाम्।
न ऋते त्वत् क्रियते किंचनारे महामर्कं मघवञ्चित्रमर्च।।

तत्त्वप्रकाशिका २-२-४- इन्द्रियगणपते घनवान् यशस्विन् मखपते त्वमिन्द्रियगणेषु निषुसीद। तत्र च स्थित्वा महान्तं परमानन्दमाश्चर्यतमं त्वां त्वमेव पूजय। यतस्त्वमेव विशेषेण ज्ञानिनां प्रकृष्टतममाहुरतस्तवैव पूज्यत्वम् । यतश्च त्वदृते दूरे समीपे वा न केनचित्किंचित्क्रियते अतस्त्वमेव पूजक इत्यर्थः।

तत्त्वप्रदीप २-२-४- 'निषुसीदे'त्यादेरयमर्थः। इन्द्रियादिगणेषु त्वं सुनिषीद। ज्ञानिनां विशेषेण प्रकृष्टतमं त्वामाहुः। त्वदृते स्पन्दनमपि न क्रियते। आरे दूरे च। त्वन्नियत्यैव सर्वं सर्वत्र। महान्तं अधिकानन्दं त्वां त्वमेवार्चय मघवन्सामर्थ्ययुक्तेति । न च स्वातन्त्र्येणान्यस्यार्च्यत्वं युज्यते। अस्वातन्त्र्योक्तेः। स्तोत्रा स्वेन्द्रियेषु स्थित्वा भगवन्तं प्रति स्वार्चकत्वं प्रार्थ्यत इति युक्तम् ।

ಈ ಮಂತ್ರದ ಅರ್ಥವನ್ನು ಪೂಜಾರಹಸ್ಯದಲ್ಲಿ ನೋಡಬಹುದು.

१२) ॐ नमो भगवते पाञ्चजन्याय महाशङ्खाय
सर्वपातालवासिनां विक्षोभकाय हुं फट् स्वाहा।

पापतलमेव पातलं तदेव पातालम्। 'देवर्षिपितृपनराः इति मुक्तास्तु पञ्चधा।' इति त.सङ्ख्यानम्। 'यस्मिन् पञ्च पञ्च जनाः' इति हि श्रुतिः। सहमानानामा शङ्खः वायवे ज्ञानं प्रादात् इति छन्दोगाः। 'श्रियोऽपि च। ज्ञानस्फूर्तिः' इति।

' तस्य हितं ' 'पञ्चजनात् उपसङ्ख्यानं' इति खो विहितः। तथाऽपि छान्दसत्वात् साधुः। यद्वा पञ्च जन्यानि अस्मात् इति पञ्चः प्रपञ्चः जन्यः अस्मात् इति पञ्चः वायोः ज्ञानविस्तारः जन्यः अस्मात् इति वा। अत एव पावमानः इत्यपि वचनम्।

शाम्यतीति शङ्खः। योग्यतया पातकम्। 'शमेः खः' इति उणादेः। खे छिद्रे विवरे पाताले वसतां शं शान्तिं खं शून्यं करोति इति शङ्खः पातालवासिविक्षोभकः। शं सुखप्रदं खं ज्ञानं यस्मात्। 'बलज्ञानसमाहारः पूर्णं खं इति शब्दितम्।' इति छान्दोग्यभाष्यात्। 'खं स्वः संविदि व्योमनीन्द्रिये। शून्ये बिन्दौ' इति हैमः।

ಸರ್ವಪಾತಾಲವಾಸಿನಾಂ- ಪಾತಾಲವಾಸಿಗಳಾದ ಅಥವಾ ಪಾಪತಲದಲ್ಲಿ ನೆಲೆಸುವ ಎಲ್ಲ ಪಾಪಿಗಳಿಗೆ ವಿಕ್ಷೋಭಕಾಯ- ವಿಕ್ಷೋಭಗೊಳಿಸುವ ಭಗವತೇ- ಪೂಜ್ಯವಾದ, ಷಡ್ಗುಣಗಳುಳ್ಳ ಪಾಂಚಜನ್ಯಾಯ-

ದೇವ, ಋಷಿ, ಪಿತೃ, ಚಕ್ರವರ್ತಿ, ಮನುಷ್ಯೋತ್ತಮ ಎಂಬ ಐದುಜನರಿಗೆ

ಅಥವಾ ಪ್ರಾಣ,ಚಕ್ಷು,ಶ್ರೋತ್ರ,ಅನ್ನ,ಮನೋದೇವತೆಗಳೆಂಬ ಐದುಜನರಿಗೆ

ಪ್ರಾಣಾಪಾನವ್ಯಾನೋದಾನಸಮಾನರೆಂದು ಐದಾಗಿ ಅವತರಿಸಿದ ವಾಯುದೇವರಿಗೆ,

ಭಾರತೀ, ವಾಣೀ, ವಾಯು, ಬ್ರಹ್ಮ ರಮೆಯರೆಂಬ ಐದು ಜನರಿಗೆ

ಮುಕ್ತಿಗಾಗಿ, ನಿತ್ಯಾನಂದಕ್ಕಾಗಿ ಜ್ಞಾನ ನೀಡಿ ಹಿತ ಮಾಡುವ, ಮಹಾಶಂಖಾಯ- ಶಂಖೋತ್ತಮಕ್ಕೆ ನಮನಗಳು. ಇದರಿಂದ ಹುಂಫಟ್ ಶತ್ರುಗಳ ನಿವಾರಣೆಯಾಗಲಿ.

१३) इमं मे गङ्गे यमुने सरस्वति शुतुद्रि स्तोमं सचता परुष्ण्या।
असिक्न्या मरुद्वृधे वितस्तया ऽऽर्जीकीये शृणुह्या सुषोमया।।

सचस्वा नः स्वस्तये इत्यत्र रक्ष सन्तत सौख्यस्य इति भाष्यम्। सच समवाये।

ಓ ಗಂಗೆ, ಯಮುನೆ, ಸರಸ್ವತಿ, ಶುತುದ್ರಿ, ಪರುಷ್ಣಿ ಮತ್ತು ಅಸಿಕ್ನಿಗಳಿಂದ ಸಂಗಮಿಸುವ ಮರುದ್ವೃಧೆ, ವಿತಸ್ತೆ ಸುಷೋಮೆಯರಿಂದ ಸಂಗಮಿಸುವ ಆರ್ಜೀಕೀಯೆ, ಮೇ- ನನ್ನ ಇಮಂ ಸ್ತೋಮಂ - ಈ ಸ್ತುತಿಯನ್ನು ಶೃಣುಹ- ಕೇಳಿರಿ. ಸಚತ- ನನ್ನನ್ನು ಕಾಪಾಡಿರಿ. ನನ್ನೀ ಪೂಜಾಕಲಶದಲ್ಲಿ ಸಮವೇತರಾಗಿರಿ.

१४) इदं विष्णुर्वि चक्रमे त्रेधा नि दधे पदम्। समूळ्हमस्य पांसुरे।

भा-रमन्ति पांसवो यत्र पांसुरं पदमीरितं। समूढं तत्र विश्वं हि पांसुवज्जगतः पतेः।

टी- रमन्ति शोभन्ते। पांसुं आश्रिताः देवाः पांसवः। विष्णुः भगवान् इदं विश्वं विचक्रमे विक्रान्तवान्। कथम् । त्रेधा पदं निदधे। तदा अस्य जगतः पतेः पांसुरे पदे इदं विश्वं समूढं प्रतिष्ठितं।

सं वहेः क्तप्रत्यये समूढम् । रमेः डप्रत्यये रम् ।

ವಿಷ್ಣು- ವಿಷ್ಣುವು ಇದಂ- ಈ ವಿಶ್ವವನ್ನು ವಿಚಕ್ರಮೇ- ಆಕ್ರಮಿಸಿದನು. ಹೇಗೆ? ಪದಂ ಪಾದವನ್ನು ತ್ರೇಧಾ ಮೂರಾಗಿ ನಿದಧೇ- ಇಟ್ಟನು. ಆಗ ಅಸ್ಯ- ಈ ಜಗದೊಡೆಯನ ಪಾಂಸುರೇ- ಎಲ್ಲಿ ಧೂಳಿಗಳು ಶೋಭಿಸುತ್ತವೋ ಅಥವಾ ಧೂಳಿಯಲ್ಲಿಯ ದೇವತೆಗಳು ಎಲ್ಲಿ ಸಂತಸ ಪಡುವರೋ ಆ ಪಾದದಲ್ಲಿ ಈ ವಿಶ್ವವು ಸಮೂಢಂ ಪ್ರತಿಷ್ಠಿತವಾಗಿತ್ತು. (ಇಡಿಯ ವಿಶ್ವವನ್ನೇ ಅಳೆದ, ಆಳಿದ ಹಾಗೂ ಅದಕ್ಕೆ ಆಸರೆ ನೀಡಿದ ಪಾದಗಳಿಗೆ ಪಾದುಕೆ ಸಲ್ಲಿಸುತ್ತಲಿರುವೆ. ಅಹೋ ಭಾಗ್ಯ!)

१५) भद्रं कर्णेभिः शृणुयाम देवा भद्रं पश्येमाक्षभिर्यजत्राः।
स्थिरैरङ्गैस्तुष्टुवांसस्तनूभिर्व्यशेम देवहितं यदायुः।।

'आश्रयं भद्रमीक्षतः' 'भद्रं हरिम् ।' इति भागवते तात्पर्ये च (२/१/२१)। यद्यपि शृणुयाम इति बहुवचनात् कर्णेभिः इति बहुत्वं साधु। तथाऽपि 'गुणाधिक्यं येन भवेत् वेदस्यार्थः स एव हि। प्रयोजकत्वात् नान्यस्य फलाभावात् तदर्थता।' इत्याचार्यचरणादेशात् कर्णेभिः इति बहुत्वस्य एकैकस्मिन्नपि पर्याप्तिविवक्षा। तेन आकर्णनीयस्य महिम्नो भूमा सूच्यते। एवं अक्षभिरिति।

ದೇವಾಃ- ಓ ದೇವತೆಗಳೇ, ಭದ್ರಂ- ಪರಮಮಂಗಲಮಯ ಭಗವಂತನನ್ನು ಅವನ ಮಹಿಮೆಯನ್ನು ಕರ್ಣೇಭಿಃ ಶೃಣುಯಾಮ- ದೇವರು ಕೊಟ್ಟ ಕಿವಿಗಳನ್ನು ಮೈ ಎಲ್ಲ ಮಾಡಿ ಕೇಳಬೇಕೆಂಬ ಆಸೆಯಿದೆ. ಹೇ ಯಜತ್ರಾಃ- ಯಜನೀಯರೇ, ಭದ್ರಂ- ದೇವರನ್ನು ಅಕ್ಷಭಿಃ - ದೇವರು ದಯಪಾಲಿಸಿದ ಕಣ್ಗಳನ್ನು ಮೈ ಎಲ್ಲ ಮಾಡಿ ನೋಡಬೇಕೆಂಬ ಹಂಬಲವಿದೆ. ಸ್ಥಿರೈಃ ಅಂಗೈಃ ತನೂಭಿಃ- ಸ್ಥಿರವಾದ ಅಂಗ ಹಾಗೂ ದೇಹಗಳಿಂದ ತುಷ್ಟುವಾಂಸಃ- ದೇವರನ್ನು ಸ್ತುತಿಸುತ್ತಾ ಯತ್ ದೇವಹಿತಂ ಆಯುಃ- ದೇವರು ದಯಪಾಲಿಸಿದ ಆಯುಷ್ಯವನ್ನು ವ್ಯಶೇಮ- ಇಡಿಯಾಗ ಬದುಕಬೇಕೆಂಬ ಬಯಕೆಯಿದೆ.

(ದೇವರನ್ನು ಕಾಣಬೇಕೆಂಬ ತೀವ್ರ ಹಂಬಲದಿಂದ ಪೀಠದಲ್ಲಿ ಸ್ಥಿರವಾಗಿ ಕೂಡಿಸಬೇಕು.)

१६) अस्मिन् राष्ट्रे श्रियमावेशयाम्यतो देवीः प्रतिपश्याम्यापः।
दक्षिणं पादमवनेनिजेऽस्मिन् राष्ट्र इन्द्रियं दधामि।
सव्यं पादमवनेनिजेऽस्मिन् राष्ट्र इन्द्रियं वर्धयामि।
पूर्वमन्यं अपरमन्यं पादाववनेनिजे।
देवा राष्ट्रस्य गुप्त्या अभयस्यावरुद्ध्यै।
आपः पादावनेजनीः द्विषन्तं निर्दहन्तु मे।'

प्रभुर्हि जीवो जडमपेक्ष्य इति गीताभाष्योक्तेः देहेन्द्रियमनसां इन्द्रः स्वामी खलु जीवः। तस्मै यद्धितं तदिन्द्रियं। अतः इन्द्रियमिति न केवलं करणानि इत्यर्थः। अपि तु जीवहितानि विष्णुभक्त्यादीनि निखिलानि। ' तद्विद्धि प्रणिपातेन ...सेवया', 'महीयसां पादरजोभिषेकं', 'महत्सेवां द्वारमाहुर्विमुक्तेः', 'मुकुन्दभक्त्यै गुरुभक्तिजायै' इत्यादिवचनसिद्धः खलु अयं प्रमेयः।

ಅಸ್ಮಿನ್ ರಾಷ್ಟ್ರೇ - ಈ ರಾಷ್ಟ್ರದಲ್ಲಿ, ಈ ಜನರಲ್ಲಿ, ಈ ದೇಹದಲ್ಲಿ, ಶ್ರಿಯಂ- ಶ್ರೀಯನ್ನು ನಿವೇಶಯಾಮಿ- ಇರಿಸುತ್ತೇನೆ. ಅತಃ- ಆ ಉದ್ದೇಶ್ಯದಿಂದ ಆಪಃ ದೇವೀಃ- ಜಲದೇವತೆಗಳನ್ನು ಪ್ರತಿಪಶ್ಯಾಮಿ- ಕಾಂಕ್ಷಾಪೂರ್ಣ ಕಣ್ಣಿನಿಂದ ನೋಡುತ್ತೇನೆ. ದಕ್ಷಿಣಂ ಪಾದಂ- ಬಲಗಾಲನ್ನು ಅವನೇನಿಜೇ- ಪ್ರಕ್ಷಾಲಿಸುವೆ. ಆದರಿಂದ ಅಸ್ಮಿನ್ ರಾಷ್ಟ್ರೇ ಇಂದ್ರಿಯಂ ದಧಾಮಿ- ಇಂದ್ರಿಯವನ್ನು ಪೋಷಿಸುವೆ.

ಶರೀರ, ಕರಣ, ಮನಸ್ಸುಗಳಿಗೆ ಒಡೆಯನಾದವ ಜೀವ. ಅಂತೆಯೇ ಆತ ಇಂದ್ರ. ಅವನಿಗೆ ಹಿತವಾದುದು ಇಂದ್ರಿಯ. ಜೀವನಿಗೆ ಹಿತವಾದ ವಿಷ್ಣು ಭಕ್ತಿ, ಜ್ಞಾನ, ಸತ್ಕರ್ಮಾನುಷ್ಠಾನ, ಗುರ್ವನುಗ್ರಹ ಮುಂತಾದವುಗಳನ್ನು ನಾನು ಇಡುವೆ ಪೋಷಿಸುವೆ.

ಸವ್ಯಂ ಪಾದಂ- ಎಡಗಾಲನ್ನು ಅವನೇನಿಜೇ- ಪ್ರಕ್ಷಾಲಿಸುವೆ. ಆದರಿಂದ ಅಸ್ಮಿನ್ ರಾಷ್ಟ್ರೇ ಇಂದ್ರಿಯಂ ವರ್ಧಯಾಮಿ- ಇಂದ್ರಿಯಸಾಮರ್ಥ್ಯವನ್ನು ಬೆಳೆಸುವೆ. ಜೀವನಿಗೆ ಹಿತವಾದ ವಿಷ್ಣು ಭಕ್ತಿ ಮುಂತಾದವುಗಳನ್ನು ನಾನು ಹೆಚ್ಚಿಸುವೆ.

ಜ್ಞಾನಿಗಳ ಪಾದಧೂಳಿಯಲ್ಲಿ ಅವಗಾಹನೆಯೇ ಜೀವನಿಗೆ ಹಿತವಾದ ಸಕಲಸಾಧನಗಳನ್ನೆಲ್ಲ ಒದಗಿಸುವದು.

ಪೂರ್ವಂ ಅನ್ಯಂ ಅಪರಂ ಅನ್ಯಂ ಪಾದೌ ಅವನೇನಿಜೇ- ಮೊದಲಿಗೊಂದು ನಂತರ ಮತ್ತೊಂದು ಹೀಗಾಗಿ ಎರಡೂ ಪಾದಗಳನ್ನು ತೊಳೆಯುವೆ. ರಾಷ್ಟ್ರಸ್ಯ- ರಾಷ್ಟ್ರದ, ಜನರ, ದೇಹದ ಗುಪ್ತ್ಯೈ- ರಕ್ಷಣೆಗಾಗಿ ಅಭಯಸ್ಯ ಅವರುದ್ಧ್ಯೈ- ನ್ಯಾಯದ ಅಭಯವನ್ನು ಸ್ಥಿರಗೊಳಿಸುವದಕ್ಕಾಗಿ ದೇವಾಃ ದೇವತೆಗಳು ಸಮರ್ಥರಾಗಿರುವರು. ಪಾದಾವನೇಜನೀಃ- ಪಾದ ತೊಳೆದ ಆಪಃ- ನೀರು ಮೇ ದ್ವಿಷಂತಂ- ನನ್ನ ಶತ್ರುವನ್ನು ನಿರ್ದಹಂತು- ಸುಟ್ಟು ಹಾಕಲಿ.

१७) आपो हि ष्ठा मयोभुवस्ता न ऊर्जे दधातन। महे रणाय चक्षसे।

संसारो हि महान् रणः। मयः इति सुखनाम। रणः रमणीयः इति निरुक्तोक्तं वा।

ಆಪಃ- ಓ ಜಲದೇವತೆಗಳೇ, ನೀವು ಮಯೋಭುವಃ ಸ್ಥ - ನಮ್ಮ ಸಂತಸದ ಸೆಲೆಯಾಗಿರಿ. ತಾಃ- ಆ ನೀವು, ಊರ್ಜೇ- ಅನ್ನವನ್ನು ಹಾಗೂ ಮಹೇ ರಣಾಯ- ಸಂಸಾರವೆಂಬ ಸಂಘರ್ಷಕ್ಕಾಗಿ, (ಅಗತ್ಯವಾದ) ಚಕ್ಷಸೇ- ಮಿಗಿಲಾದ ಜ್ಞಾನವನ್ನು, ನಃ ದಧಾತನ- ನಮಗೆ ದಯಪಾಲಿಸಿರಿ.

१८) 'मधु वाता ऋतायते मधु क्षरन्ति सिन्धवः। माध्वीर्नः सन्त्वोषधीः।
मधु नक्तमुतोषसो मधुमत् पार्थिवं रजः। मधु द्यौरस्तु नः पिता।
मधुमान्नो वनस्पतिर्मधुमाँ अस्तु सूर्यः। माध्वीर्गावो भवन्तु नः।'

ऋतं विष्णुं आत्मनः इच्छति स्वीयसर्वस्वदानेन इति विष्णुकामो भक्तः ऋतायन्। 'सुप आत्मनः क्यच्' इति पाणिनिः। मध्वित्यानन्द उद्दिष्टः इत्युक्तेः। 'सुखदा सर्वभूतानां पृथिवी मधुवदुच्यते' (बृहद्भाष्यं)। 'किमलभ्यं भगवति प्रसन्ने श्रीनिकेतने'।

ನಮ್ಮ ತುಂಬ ಪ್ರೀತಿಯವರಿಗೆ ನಾವು ನಮ್ಮ ತೀರ ಮೆಚ್ಚಿನ ಪದಾರ್ಥವನ್ನು ಕೊಡುತ್ತೇವೆ. ಸುಖ ನಮಗೆ ತೀರ ಮೆಚ್ಚಿನದು. ಸಿಹಿಯೇ ಸುಖದ ಸಂಕೇತ. ಸಿಹಿ ಮಧುವೇ ಸುಖದ ಹರಿಯ ಸಂಕೇತ.

ಕಾರಣ, ದೇವರನ್ನು ಮಿಗಿಲಾಗಿ ಪ್ರೀತಿಸುವನು ದೇವರಿಗೆ ತನ್ನ ಸುಖವನ್ನು ಅರ್ಪಿಸುವನು. ಮಧು ಸಮರ್ಪಣೆ ಇದಕ್ಕೆ ಪ್ರತೀಕ. ಹೀಗೆ ದೇವರನ್ನು ಪ್ರೀತಿಸಿದವನಿಗೆ ಜಗವೆಲ್ಲ ಸುಖದಾಯಕ. ಈ ತತ್ತ್ವ ಈ ಮಂತ್ರದಲ್ಲಿ ಅಡಗಿದೆ.

ಋತಾಯತೇ- (ಋತ- ಜ್ಞಾನರೂಪನಾದ, ಏಕಪ್ರಕಾರನಾಗಿರುವ, ವೇದವೇದ್ಯನಾದ) ದೇವರನ್ನು ಪರಿಪರಿಯಿಂದ ಹಂಬಲಿಸಿ ಪ್ರೀತಿಸುವ ಭಕ್ತನಿಗೆ ವಾತಾಃ- ಗಾಳಿ, ಸಿಂಧವಃ- ಕಡಲು, ಓಷಧೀಃ- ಓಷಧಿಗಳು, ನಕ್ತಂ ಉತ ಉಷಸಃ- ರಾತ್ರಿ ಮತ್ತು ಹಗಲುಗಳು, ಪಾರ್ಥಿವಂ ರಜಃ- ಭೂಮಿಯ ಪ್ರತಿಯೊಂದು ಕಣ, ನಃ ಪಿತಾ- ನಮ್ಮನ್ನು ಪಾಲಿಸುವ ದ್ಯೌಃ- ಅಮರ ಲೋಕ (ಅಮರರು), ವನಸ್ಪತಿಃ- ವನಸ್ಪತಿಯು, ಸೂರ್ಯಃ- ಸೂರ್ಯನು, ಗಾವಃ- ಹಸುಗಳು ನಮಗೆ ಆನಂದಪ್ರದನಾಗಲಿ.

२०) आ प्यायस्व समेतु ते विश्वतः सोम वृष्ण्यं।
भवा वाजस्य सङ्गथे।

पयः शुभ्रतया पवित्रतया देवप्रियतया च सोमसदृशम् । अतः गौण्या सोमशब्दः। यद्वा 'पुष्णामि चौषधीः सर्वाः सोमः' इत्यतः ओषधयः सोमपुष्टाः। पयः ओषधिनिष्पन्नं इत्यतः पयसि सोमशब्दस्य लक्षितलक्षणा। वृष्ण्यं भावव्युत्पत्त्या बलं, कर्तृव्युत्पत्त्या अभीष्टवर्षिता इत्युभयं अर्थः।

ಸೋಮ- ಸೋಮರಸದಂತೆ ಪವಿತ್ರ, ದೇವಪ್ರಿಯವಾದ, ಚಂದ್ರನಂತೆ ಬೆಳ್ಳಗಿನ ಅಥವಾ ಚಂದ್ರಪುಷ್ಟ ಸಸ್ಯಗಳಿಂದ ನಿಷ್ಪನ್ನವಾದ ಹಸುವಿನ ಹಾಲಿನಲ್ಲಿ ತೇ ವೃಷ್ಣ್ಯಂ- ಪೌಷ್ಟಿಕತೆಯ ಸಮಸ್ತ ಶಕ್ತಿ ಸಾಮರ್ಥ್ಯಗಳು ವಿಶ್ವತಃ- ಎಲ್ಲೆಡೆಯಿಂದ ಬಂದು ಸಮೇತು- ಒಂದುಗೂಡಲಿ. ಸೋಮ, (ತ್ವಂ)- ಆ ಹಾಲು ವೃಷ್ಣ್ಯಂ- ಅಭೀಷ್ಟವರ್ಷಿಯಾದ ದೇವರನ್ನು ಆಪ್ಯಾಯಸ್ವ- ಬೆಳೆಸು, ಸುಖಪಡಿಸು. (ದೇವರನ್ನು ತೃಪ್ತಿಪಡಿಸುವ ಮುಖಾಂತರ) ವಾಜಸ್ಯ- ಅನ್ನದ, ಭೌತಿಕ ಹಾಗೂ ಆಧ್ಯಾತ್ಮಿಕ ಆಹಾರದ ಸಂಗಥೇ- ಸಂಪ್ರಾಪ್ತಿಗೆ ಭವ- ಕಾರಣನಾಗು.

(ಇದು ಸೋಮಮಂತ್ರ. ಕ್ಷೀರಾಭಿಷೇಕಕ್ಕೆ ವಿನಿಯೋಗ. ಮೇಲೆ ಹೇಳಿದ ಅರ್ಥದಿಂದ ಸಂಗತಿ, ಔಚಿತ್ಯ ಸ್ಪಷ್ಟ)

२०) दधिक्राव्णो अकारिषं जिष्णोरश्वस्य वाजिनः।
सुरभि नो मुखा करत् प्र ण आयूंषि तारिषत्।

ननु मन्त्रेऽत्र अश्वः श्रूयते। दधिक्रावादीनां अश्ववचनत्वात् । सत्यम् । रूढ्या। ईषद्योगेनापि। महायोगस्तु महतो देवस्यैव। अनुसृत्यापि यास्कं देवपरतां साधयामः। सह्याह 'दधत् क्रामति, दधत् क्रन्दति' इति। बलिं दधत् विश्वं क्रामति, पदानि दधत् वेदं क्रन्दति उच्चारयति। 'वामनश्चैव सम्प्रोक्तः पददेवता' इति ऐतरेयभाष्यम्। आशु वातीति वा 'अशू व्याप्तौ' इत्यतो वा अश्वशब्दः। भाषोक्तार्थेषु 'निगमवाक्पटवे' 'दधिमिश्रान्नकवलं' 'वामनो बुद्धिदाता च' 'तरति सकलदुःखात् वामनं' 'वामनस्तारकोभाभ्यां' इति मानानि।

ದಧಿಕ್ರಾವ್ಣ- (ತನಗೆ ಅಂದು ಅಯೋಗ್ಯವಾದ ಇಂದ್ರಪದವಿಯನ್ನು ಆಕ್ರಮಿಸಲು ಹೊರಟ ಬಲಿಯನ್ನು) (ದಧತ್-) ತಡೆಗಟ್ಟಿ (ಮೂರು ಪಾದ ದಾನ ಬೇಡಿ ವಿಶ್ವವನ್ನೇ) (ಕ್ರಾಮತಿ-) ಆಕ್ರಮಿಸಿದ

(ವೇದಗಳ ಪದಗಳನ್ನು) (ದಧತ್-) ನಿಲ್ಲಿಸಿ ನಿಲ್ಲಿಸಿ (ಕ್ರಂದತಿ-) ಉಚ್ಚರಿಸುವ (ಪದಪಾಠದ ನಿಯಾಮಕ)

ಜಿಷ್ಣೋಃ- ಬಲಿಯನ್ನು ಗೆಲ್ಲುವ ಅಶ್ವಸ್ಯ- (ಆಶು ವಾ) (ಅಶೂ) ವೇಗದಿಂದ ಎಲ್ಲೆಡೆ ಹರಡಿ ವ್ಯಾಪಿಸಿದ, ವಾಜಿನಃ- ದಧಿಮಿಶ್ರ ಅನ್ನದ ಸ್ವಾಮಿಯಾದ (ದಧಿಕ್ರಾವ್ಣ- ಮೊಸರಿನಲ್ಲಿ ಸನ್ನಿಹಿತನಾದ) ವಾಮನದೇವರ ಸೇವೆ, ಪೂಜೆ, ಸ್ಮರಣೆಗಳನ್ನು ಅಕಾರಿಷಂ- ಮಾಡಿದೆನು.

(ದೇವರ ಸನ್ನಿಧಾನವಿರುವ ಪೂಜಾಸಾಧನ, ಪದಾರ್ಥಗಳನ್ನು -ನೀಚ ಕ್ಷುದ್ರ ಪ್ರಯೋಜನಗಳಿಗೆ ಉಪಯೋಗಿಸದೇ- ಉತ್ತಮ ಪ್ರಯೋಜನಗಳಿಗೆ ಶಾಸ್ತ್ರೋಕ್ತ ರೀತಿಯಲ್ಲಿ ಬಳಸುವದೇ ಆ ಪದಾರ್ಥಗಳಲ್ಲಿ ಸನ್ನಿಹಿತನಾದ ದೇವರ ಸೇವೆ. ಪ್ರಕೃತ, ವಾಮನದೇವರ ಸನ್ನಿಧಾನವಿರುವ ಮೊಸರನ್ನು ಅಭಿಷೇಕಾದಿಗಳಲ್ಲಿ ಬಳಸುವದರಿಂದ ವಾಮನನ ಸೇವೆ ಮಾಡಿದಂತಾಗುವದು.)

ಆ ಭಗವಾನ್ ವಾಮನನು ನಃ- ನಮ್ಮ ಮುಖಾ- ಮುಖಗಳನ್ನು ಸುರಭಿ ಕರತ್- (ದಧಿಮಿಶ್ರಾನ್ನ ಮೊದಲಾದುದನ್ನು ಮತ್ತು ಪೀಯೂಷವನ್ನು ದಯಪಾಲಿಸಿ) ಪರಿಮಳಗೊಳಿಸಲಿ. ಅಥವಾ ನಃ ಮುಖಾ- ನಮ್ಮ (ಮುಖಗಳನ್ನು) ವಾಣಿಯನ್ನು ಸುರಭಿ ಕರತ್- (ಬುದ್ಧಿ ಜ್ಞಾನಗಳ ಪ್ರದಾನದಿಂದ) ಸುಂದರಗೊಳಿಸಲಿ. ನಃ- ನಮಗೆ ಆಯೂಂಷಿ- ಆಯುಸ್ಸನ್ನು ಪ್ರ ತಾರಿಷತ್- ಹೆಚ್ಚಾಗಿ ನೀಡಲಿ. ಅಥವಾ ನಃ ಆಯೂಂಷಿ- ನಮ್ಮ ಜನ್ಮಗಳನ್ನು ಪ್ರ ತಾರಿಷತ್- ಚನ್ನಾಗಿ ನಡೆಸುವಂತೆ ಮಾಡಿ ಕೊನೆಗಾಣಿಸಲಿ. ಅಥವಾ ನಃ ಆಯೂಂಷಿ- ನಮ್ಮ ಜನ್ಮಗಳನ್ನು ಪ್ರ ತಾರಿಷತ್- ದಾಟಿಸಿ ಮುಕ್ತಿಗೆ ಸೇರಿಸಲಿ.

ದಧಿಸನ್ನಿಹಿತ ವಾಮನದೇವರನ್ನು ಈ ರೀತಿ ಪ್ರಾರ್ಥಿಸಬೇಕು.

२१) घृतं मिमिक्षे घृतमस्य योनिर्घृते श्रितो घृतम्वस्य धाम।
अनुष्वधमा वह मादयस्व स्वाहाकृतं वृषभ वक्षि हव्यम्।।

'योनिष्ट इन्द्र निषदेऽकारि' इत्यादौ इव योनिशब्दः स्थानार्थः। घृतदेवस्य श्रीकरस्य घृतं स्थानम्। यद्वा 'दिव्यपयो घृताधिकं' क्षीरसागरं आधिक्यात् घृतमित्युच्यते। तदस्य स्थानम् । 'मिह सेचने'।

घृतस्थं देवं मन्त्रोऽयमुपश्लोकयति। स एव श्रियं तनोतीति श्रितः अपि। ‘घृ क्षरणदीप्त्योः’ इत्यतः घृतं दीप्तम् । धाम तेजः। स्वाहा पूज्यार्थोऽपि। सु पूजनशब्दः आह आह्वानं स्वाहा। पूजनमिति यावत् । स्वधा स्वधा अनुष्वधं प्रत्याहुति। मादयस्व स्वार्थे णिच् ।

ಘೃತಂ- ಅಧಿಕ ಘೃತವಿರುವ ಹಾಲುಗಡಲು ಅಸ್ಯ- ಈ ದೇವನ ಯೋನಿ- ಮನೆ. ಶ್ರೀತಃ- ಸಿರಿಯನ್ನು ಹೆಚ್ಚಿಸುವ ದೇವನೇ ಘೃತೇ- ತುಪ್ಪದಲ್ಲಿರುವ, ಅದರ ನಿಯಾಮಕ. ಇಂಥ ದೇವನಿಗೆ ವಿಪುಲವಾಗಿ ಕೊಟ್ಟು ತೃಪ್ತಿ ಪಡಿಸುವಷ್ಟು ನನಗೆಲ್ಲಿದೆ ತುಪ್ಪ? ಆದುದರಿಂದ ನಾನು ಘೃತಂ ಮಿಮಿಕ್ಷೆ- ಕೇವಲ ತುಪ್ಪವನ್ನು ಸಿಂಚನ ಮಾಡುವೆ. ಅಷ್ಟರಿಂದ ಅವನು ಭಕ್ತನಾದ ನನ್ನ ಮೇಲೆ ತುಷ್ಟನಾಗಲಿ. ಅಸ್ಯ ಧಾಮ- ಆತನ ತೇಜಸ್ಸು ಘೃತಂ ಉದ್ದೀಪ್ತವಾದುದು. ವೃಷಭ- ಬಯಸಿದ್ದನ್ನು ವರ್ಷಿಸುವ (ಕರುಣಿಸುವ) ಹೇ ಭಗವನ್ ಸ್ವಾಹಾಕೃತಂ ಹವ್ಯಂ- ಪೂಜ್ಯ ಬುದ್ಧಿಯಿಂದ ಸಮರ್ಪಿಸಿದ ಹವಿಸ್ಸನ್ನು ಅಲ್ಪವಾಗಿದ್ದರೂ ವಕ್ಷಿ- ಸ್ವೀಕರಿಸುವಿ. ಅನುಷ್ವಧಂ- ಪ್ರತಿ ಆಹುತಿಗೆ ಮಾದಯಸ್ವ- ಸಂತೋಷಗೊಳ್ಳು ಆವಹ- ನಮಗೂ ಸಂತಸ ತಾ.

२२) स्वादुः पवस्व दिव्याय जन्मने स्वादुरिन्द्राय सुहवीतुनाम्ने।
स्वादुर्मित्राय वरुणाय वायवे बृहस्पतये मधुमाँ अदाभ्यः।

विष्णुनामानं मन्त्रोऽयं उपश्लोकयति। ‘वासुदेवात् । सत्त्वात्मिकायां स बभूव तस्मात् स विष्णुनामैव निरन्तरोऽपि।’ इति निर्णयात् स्वस्मादेव स्वस्य जन्म दिव्यम् । हवीतुः आह्वानम्। शोभनं सर्वोत्कृष्टं आह्वानं येन तत् । सुहवीतु नाम यस्य सः। ‘विष्णुनामोदितो योऽर्थः तद्व्याख्याऽन्यद्वचोऽखिलम् ।’ ‘किमन्याध्ययनाद्भवेत्’ इत्यादेः विष्णुनाम सुहवीतु सर्वोत्कृष्टमाह्वानम्। विष्णुरेव हि मित्रम् । मिनोति उत्पादयति, त्राति रक्षति इति मित्रम् । ‘विष्णुनामा श्रियमाप सृष्टये। सुषाव सैवाण्डं’ इति निर्णयेन ‘ब्रह्मविष्ण्वीशरूपाणि त्रीणि विष्णोः’ इति भागवततात्पर्येण च सिद्धमिदम् । ‘मानं ज्ञानं.... । उत्पादनं च।’ इति बृहद्भाष्योक्तेः। विष्णुशब्दे षणकारौ। ‘णकारो बलं षकारः प्राण आत्मा।’ इत्युपनिषदर्थमाह। तत्र णार्थं बलं वायुशब्द आह। वं बं बलम् । तथा च णः बलरूपः वायुशब्दार्थोऽपि स एव। षकारार्थं प्राणशब्दितं प्रणेतृत्वं वरुणशब्द आह। प्र प्रकृष्टान् वरान् रमाब्रह्मादीन् प्र प्रकर्षेण वरं यथा स्यात् तथा प्र प्रकर्षं उ उत् उत्कर्षं नयति रमां नित्यं, ब्रह्मादीन् क्रमशः। स एव प्राणः वरुणश्च। षकारार्थं आत्मत्वं देशतो व्याप्तत्वं, कालतो नित्यत्वं, गुणैः पूर्णत्वं च बृहस्पतिशब्दः आह। बृहन् व्याप्तः, नित्यः, पूर्णश्च। आत्मत्वं नाम स्वामित्वमपि तदाह पतिशब्दः।

ದಿವ್ಯಾಯ ಜನ್ಮನೇ- (ತನ್ನ ವಾಸುದೇವ ರೂಪದಿಂದ ತಾನೇ ವಿಷ್ಣುವಾಗಿ ಜನಿಸಿರುವ ಕಾರಣ) ಅಲೌಕಿಕವಾಗಿ, ದಿವ್ಯವಾಗಿ ಹುಟ್ಟಿದ ವಿಷ್ಣುವಿಗೆ ಸ್ವಾದುಃ ಪವಸ್ವ- (ಸೋಮರಸವು, ಪ್ರಸ್ತುತ) ಸಕ್ಕರೆಯು ಸವಿಯಾಗಿ ರಸ ಸುರಿಸಲಿ. ಇಂದ್ರಾಯ- ಅವನೇ ಎಲ್ಲರೊಡೆಯ. ಸುಹವೀತು ನಾಮ್ನೇ- ಸರ್ವೋತ್ತಮ ನಾಮಧಾರೀ. ಮಿತ್ರಾಯ- ವಿಶ್ವವನ್ನು ಹೆತ್ತು ರಕ್ಷಿಸುವವ. ವರುಣಾಯ- ಉನ್ನತರಿಗೂ ಉನ್ ನಾಯಕನಾದವ. ವಾಯವೇ- ಅತುಲ ಬಲಶಾಲಿಯಾದವ. ಬೃಹಸ್ಪತಯೇ- ದೇಶ ಕಾಲ ಗುಣಗಳಿಂದ ಬೃಹತ್ ಆದವ, ಹಾಗೂ ಎಲ್ಲರೊಡೆಯನಾದವ. ಈತನಿಗೆ ಮಧುಮಾನ್- ಸವಿಯಾದ, ಅದಾಭ್ಯ- (ಹಿಂಸಿತವಾಗದ) ಕೊಳೆಯಿಂದ ದೂಷಿತವಾಗದ ನಮ್ಮ ಮನದ ಸಿಹಿ ರಸವು ಹರಿದು ತೃಪ್ತಿ ಪಡಿಸಲಿ.

२३) याः फलिनीर्या अफला अपुष्पा याश्च पुष्पिणीः।
बृहस्पतिप्रसूतास्ता नो मुञ्चन्त्वंहसः।।

येषां न सन्ति पुष्पाणि प्रशस्तान्यर्चने हरेः।
पल्लवान्यपि तेषां स्युः शस्तान्यर्चाविधौ हरेः। (पु.क.लता)
योग्ये स्वेषां स्वामिमन्यमानानां वा विनियोगेन देवतास्तुष्यन्ति।

'न ह्यचेतनकं किञ्चित् फलदं स्यात् कदाचन।
औषधादिषु चैतस्मात् देवा एव वरप्रदाः।
औषधादिस्थिता देवाः तेऽज्ञे दृष्टफलप्रदाः।
ज्ञानिन्यदृष्टदाश्च स्युः नादैवं किञ्चिदिष्यते।' इति छान्दोग्यभाष्ये।

ಯಾಃ ಫಲಿನೀಃ- ಹಣ್ಣು ಕೊಡುವ, ಅಫಲಾಃ- ಕೊಡದಿರುವ (ಕಾಯಿ ಬೀಜಗಳನ್ನು ಮಾತ್ರ ಕೊಡುವ) ಯಾಶ್ಚ ಪುಷ್ಪಿಣೀಃ- ಹೂ ಬಿಡುವ, ಅಪುಷ್ಪಾಃ- ಬಿಡದಿರುವ (ಅರಳದ ಹೂಗಳನ್ನು ಅರ್ಥಾತ್ ಮೊಗ್ಗೆಗಳನ್ನು ಮಾತ್ರ ಬಿಡುವ) ಬೃಹಸ್ಪತಿಪ್ರಸೂತಾಃ- ಬೃಹಸ್ಪತಿಯಿಂದ ಹುಟ್ಟಿದ ಎಲ್ಲ ಓಷಧಿಗಳು (ಓಷಧಿದೇವತೆಗಳು) (ಅವುಗಳ- ಇದ್ದರೆ ಹಣ್ಣು, ಇಲ್ಲದಿದ್ದರೆ ಕಾಯಿ, ಬೀಜ, ಇದ್ದರೆ ಹೂವು, ಇಲ್ಲವೇ ಮೊಗ್ಗೆ, ಎಲೆ, ಚಿಗುರು ಮುಂತಾದವನ್ನು ಭಗವಂತನ ಕೈಂಕರ್ಯದಲ್ಲಿ ಬಳಸುವದರಿಂದ) ನಮ್ಮನ್ನು ಪಾಪದಿಂದ ಬಿಡುಗಡೆ ಮಾಡಲಿ.

२४) अभि वस्त्रा सुवसनान्यर्षाऽभि धेनूः सुदुघाः पूयमानः।
अभि चन्द्रा भर्तवे नो हिरण्याऽभ्यश्वान् रथिनो देव सोम।।

भवते मे वस्त्रदित्सा। नास्ति मे आत्मतन्त्रं वस्त्रम् । अतो मे देहि; मया दापय; स्वमेव स्वीकुरु। मयि दयस्व इत्यभिप्रैति अत्र मन्त्रसङ्गमः। 'नाविन्दं यज्ञसम्भारान् पुरुषावयवादृते।' इति विरिञ्चिर्विचचक्षे।

ಸುವಸನಾನಿ- ಚೆಲುವಾಗಿ ಮೈ ಮುಚ್ಚುವ ವಸ್ತ್ರಾ- ಬಟ್ಟೆಗಳನ್ನು ಅಭಿ ಅರ್ಷ- ನಮಗೆ ದಯಪಾಲಿಸು. ಸುದುಘಾಃ- ಶುದ್ಧ ಹಾಲು ಕರೆವ ಧೇನೂಃ- ಹಸುಗಳನ್ನು ಕೊಡು. ನಃ ಭರ್ತವೇ- ನಮ್ಮನ್ನು ಪೋಷಿಸಲು (ತೊಡಗಿದ ಓ ದೇವ) ಚಂದ್ರಾ- ಆಹ್ಲಾದ ಕೊಡುವ ಹಿರಣ್ಯಾ- ಚಿನ್ನವನ್ನು ನೀಡು. ಅಶ್ವಾನ್- ಕುದುರೆಗಳನ್ನು ರಥಿನಃ- ರಥಗಳನ್ನು, ರಥಿಗಳನ್ನು ಕರುಣಿಸು.

(ವಸ್ತ್ರಗಳನ್ನರ್ಪಿಸುವ ಕಾಲದಲ್ಲಿ ಬೇಡುವದೇಕೆ? ದೇವರನ್ನು ಬೇಡದೇ ಇದ್ದರೆ, ಅವನಿಗೆ ಅರ್ಪಿಸಲು ನಮಗೆಲ್ಲಿ ಸ್ವಂತ ಬಟ್ಟೆಗಳು?

ಬೇಡಿ, ಪಡೆದು ಅರ್ಪಿಸೋಣ. ನಾನು ನಿನಗೆ ಕೊಡುವದಕ್ಕಾಗಿ ನೀನು ನನಗೆ ಕೊಡು, ಎಂದು ನಿಷ್ಕಾಮರ ಮಂತ್ರಾಭಿಪ್ರಾಯ.

ನನಗೆ ಬಟ್ಟೆ ಬೇಕು; ಅದಕ್ಕೆಂದೇ ನಾನು ನಿನಗೆ ಕೊಡುವೆ, ಎಂದು ಸಕಾಮರ ಮಂತ್ರಾಭಿಪ್ರಾಯ.)

२५) **युवं वस्त्राणि पीवसा वसाथे युवोरच्छिद्रा मन्तवो ह सर्गाः।**
अवातिरतमनृतानि विश्व ऋतेन मित्रावरुणा सचेथे।

मन्तवः मन्त्रणानि। ऋतं सत्यवचनं, पुण्यं, पुण्यसाधनं कर्म च। असत्यवचनं पापं पापसाधनं कर्म च अनृतम्। अवातिरतं तिरस्करिणीं अपसारयतं इति यावत्। 'षच समवाये'।

ಮಿತ್ರಾವರುಣಾ- ಓ ಮಿತ್ರ ವರುಣರೇ, ವಿಶ್ವವನ್ನು (ಮಿ) ಹುಟ್ಟಿಸಿ (ತ್ರ) ಕಾಪಾಡುವ, ಕೊನೆಯಲ್ಲಿ (ವರ) ಪರಮ ಪದವಿಗೆ (ಉನ) ಉನ್ನಯನ ಮಾಡುವ ದೇವರೇ, ಯುವಂ- ನೀವು ಪೀವಸಾ- ಪೀತವಾದ ವಸ್ತ್ರಾಣಿ- ಬಟ್ಟೆಗಳನ್ನು ವಸಾಥೇ- ಉಟ್ಟಿರುವಿರಿ.

(ಭಕ್ತನು ದೇವರನ್ನು ಅಡಿಯಿಂದ ಮುಡಿಯವರೆಗೆ ಕಂಡು ಬಣ್ಣಿಸುತ್ತಿರುವ. ಆಗ ಬಟ್ಟೆಯನ್ನು ಕಂಡು ಬಣ್ಣಿಸುವಾಗ ಆಚ್ಛಾದನೆಯ ನೆನಪಾಯಿತು. ದೇವರಿಗೆ ಜಗತ್ತಿನ ಜನರಿಂದ ತನ್ನನ್ನೇ ಮುಚ್ಚುವದು ಅಗತ್ಯವಾಗಿದೆ. 'ವಿವೃಣುತೇ ತನೂಂ ಸ್ವಾಂ' ಭಕ್ತರಿಗೆ ಮಾತ್ರ ತನ್ನ ನಿಜವನ್ನು ತೋರುವನು. ಆದರೆ ಮಾನವರು ಮಾತ್ರ ತಮ್ಮ ಕೊಳೆ ಕಪ್ಪುಗಳನ್ನು, ಪಾಪ ತಪ್ಪುಗಳನ್ನು ಸಮಾಜದಿಂದಲೂ ದೇವರಿಂದಲೂ ಮುಚ್ಚಬೇಕೆಂದು ಬಯಸುತ್ತಾರೆ. ಇದಕ್ಕೆ ತೀರ ಹೊರತಾಗಿ ಭಕ್ತನ ಬಯಕೆ.)

ಓ ದೇವ, ಮಂತವಃ- ನಿನ್ನ ಮಂತ್ರಣಗಳು, ಕಿವಿಮಾತುಗಳು, ಉಪದೇಶಗಳು ಹಾಗೂ ಸರ್ಗಾಃ- ನೀನು ನಿರ್ಮಿಸಿದ ಪದಾರ್ಥಗಳ ಈ ಇಡಿಯ ವಿಶ್ವ ಅಚ್ಛಿದ್ರಾಃ- ನಿರ್ದೋಷ, ಕೊಳಕು ಕೆಡಕು ಇಲ್ಲದಿರುವದಾಗಿದೆ.

(ನಿನ್ನ ಉಪದೇಶವನ್ನು ಕೇಳಿ, ನಿನ್ನೀ ಸೃಷ್ಟಿಯನ್ನು ಕಂಡು ನಾನು ತಪ್ಪಾಗಿ ನಡೆಯಬಾರದಿತ್ತು. ಅಂದಿನಿಂದ ಇಂದಿನವರೆಗೆ ಎಣಿಕೆ ಮೀರಿದಷ್ಟು ಹುಸಿ ತಪ್ಪುಗಳನ್ನು ಮಾಡಿರುವೆ. ಪಾಪಗಳನ್ನು ಆಚರಿಸಿರುವೆ)

ವಿಶ್ವಾ ಅನೃತಾನಿ- ಆ ಎಲ್ಲ ನನ್ನ ಹುಸಿಗಳನ್ನು ಪಾಪಗಳನ್ನು ಅವಾತಿರತಂ- ಬಯಲಿಗೆಳೆ. ನಾಕಿನ್ನು ಮುಚ್ಚಿಡುವದು ಪಾಪಗಳನ್ನು. ಇನ್ನು ಮುಂದೆ ಓ ದೇವ, ನನ್ನನ್ನು ಋತೇನ ಸಚೇಥೇ- ಸತ್ಯ ಧರ್ಮಗಳ ಜತೆಗೆ ಗಂಟು ಹಾಕು, ನಂಟುತನ ಮಾಡಿಸು, ನಾನು ಅದನ್ನು ಬಿಡದಂತೆ ನೋಡಿಕೋ.

२६) **हिरण्यरूपस्स हिरण्यसन्दृगपां नपात् सेदु हिरण्यवर्णः।**
हिरण्ययात् परि योनेर्निषद्या हिरण्यदा ददत्यन्नमस्मै।

'हितत्वात् रमणीयत्वात् हिरण्यं वर्णतोऽपि च।' 'व्यक्तत्वात् पार्थिवे देहे सोऽपां नपा जनार्दनः।' इत्युभयत्र ब्राह्मवाक्यम्। 'हिरुक् सुखं हिरण्यं स्यात्।' इत्युक्तं हिरण्यं विलक्षणं सुखं सन्दृशः सन्दर्शनात् यस्य सः। स इत् उ इति छेदः।

ಸಃ- ಆ ದೇವರು ಹಿರಣ್ಯರೂಪಃ- ಹಿತ ರಮಣೀಯ ರೂಪ ಉಳ್ಳವ. ಲೋಕವಿಲಕ್ಷಣ ಆನಂದಮಯ. ಸಃ- ಅವನು ಅಪಾಂ ನಪಾತ್- ನೀರಿನ ಮೊಮ್ಮಗ. (ನೀರಿನಿಂದ ಜನಿಸುದುದು ಪೃಥಿವೀ ಅರ್ಥಾತ್ ಪಾರ್ಥಿವ ದೇಹ. ಆ ದೇಹದಲ್ಲಿ ದೇವರು ಪ್ರಕಟನಾಗುವ)

ಹಿರಣ್ಯಸಂದೃಕ್- ಅಂತರ್ಯಾಮಿಯಾದ ಅವನ ಅಂತಃಸಂದರ್ಶನವೇ ಲೋಕಾತೀತ ಲೋಕವಿಲಕ್ಷಣ ಆನಂದವನ್ನು ದಯಪಾಲಿಸುವದು. ಹಿರಣ್ಯವರ್ಣಃ- ಬಂಗಾರದ ಬಣ್ಣದವ. ಹಿರಣ್ಯಯಾತ್ ಯೋನೇಃ ಪರಿ (ಉಪರಿ) - ಹಿರಣ್ಯಯವಾದ ಪೀಠದ ಮೇಲೆ

ನಿಷದ್ಯ- ಆಸೀನನಾಗಿ ಅಸ್ಮೈ- ಈ ಜೀವನಿಗೆ ಚಿರಭ್ಯಾದಾಃ- ಲೋಕೋತ್ತರ ಸುಖವನ್ನು ನೀಡುವವನು, ಅಲ್ಲದೇ ಚಿನ್ನವನ್ನೂ ಅನ್ನಂ- ಅನ್ನವನ್ನೂ ಜ್ಞಾನರಸಾನ್ನವನ್ನೂ ದದಾತು- ದಯಪಾಲಿಸುವನು.

२७) गन्धद्वारां दुराधर्षां नित्यपुष्टां करीषिणीम्।
ईश्वरीं सर्वभूतानां तामिहोपह्वये श्रियम्।

'हृदि व्यक्तं तु यद्रूपं हरेर्गन्धः स उच्यते।' (भा.ता ३/१०५) 'पुण्यो गन्धः पृथिव्यां च' इत्युक्तस्य विष्णुगन्धस्य पृथिव्यां प्रतिष्ठापने इयं द्वारम् ।

ಗಂಧದ್ವಾರಾಂ- (ಹೂ, ಹಣ್ಣು, ಎಲೆ ಮುಂತಾದ ಭೂಮಯ ಪದಾರ್ಥಗಳಲ್ಲಿ ಪರಿಮಳವಿದೆ. ಅದು ಭೂಮಿಯ ಸ್ವಂತ ಗುಣವಲ್ಲ. ದೇವದತ್ತ ಗುಣ. ದೇವನಿಯಂತ್ರಿತ ಗುಣ. ದೇವರ ಪರಿಮಳವೇ ಭೂಮಿಯ ಪರಿಮಳಕ್ಕೆ ನಿಮಿತ್ತ.)

ದೇವರ ಪರಿಮಳದಂಥ ಪರಿಮಳ ಭೂಮಿಯಲ್ಲಿ ಬರಲು ಸಿರಿಯೇ ಮಧ್ಯದ ದ್ವಾರ. ಆದುದರಿಂದ ಅವಳು ಗಂಧದ್ವಾರಾ.

ಅಥವಾ, ನಮ್ಮ ಹೃದಯದಲ್ಲಿ ಪ್ರಕಟವಾಗಿ ಕಾಣುವ ದೇವರ ರೂಪವನ್ನು ಗಂಧವೆನ್ನುತ್ತಾರೆ. ಈ ದೇವರ ರೂಪ ಹೃದಯದಲ್ಲಿ ಪ್ರಕಟವಾಗಲು ರಮೆಯೇ ಮಧ್ಯದ ದ್ವಾರ.

ಅಥವಾ, ಅವಳ ದೇಹದ ಸರ್ವಾಂಗಗಳೂ ಪರಿಮಳಪೂರ್ಣ. ಅಥವಾ, ಅವಳ ಮಂದಿರದ ಬಾಗಿಲು ಗಂಧಮಯವಾಗಿರಬೇಕು.

ದುರಾಧರ್ಷಾಂ- ಅಬಲೆಯಾದರೂ ಯಾವ ದಾನವ, ಮಾನವ, ದೇವತೆಗಳಿಗೂ ಧರ್ಷಣೆ ಮಾಡಲು ಅಸಾಧ್ಯಳಾದವಳು. ನಿತ್ಯಪುಷ್ಟಾಂ- ಅನಾದ್ಯನಂತಕಾಲದಲ್ಲಿ ಗುಣಪೂರ್ಣೆ. ನಿತ್ಯನಾದ ದೇವರಿಂದಾಗಿ ಪುಷ್ಟಳು. ನಿತ್ಯರಾದ ಮುಕ್ತರನ್ನು ಪೋಷಿಸುವವಳು. ಕರೀಷಿಣೀಂ- ಇಡಿಯ ವಿಶ್ವದ ಹುಟ್ಟು, ಇರವು, ಅಳಿವುಗಳನ್ನು ಮಾಡುವ ಶೀಲೆ. ಸರ್ವಭೂತಾನಾಂ- ಎಲ್ಲ ಜೀವರ ಎಲ್ಲ ಪದಾರ್ಥಗಳ ಈಶ್ವರೀಂ- ಒಡತಿ. ಇಹ- ಗಂಧವನ್ನು ಸಮರ್ಪಿಸುವಾಗ ಇಹ- ಈ ಗಂಧದಲ್ಲಿ ತಾಂ ಶ್ರಿಯಂ- ಆ ಸಿರಿಯನ್ನು ಉಪ- ದೇವರಿಗೆ ಉಪಚಾರ ಸಮರ್ಪಣೆಗಾಗಿ ಹ್ವಯೇ- ಬರಲು ಪ್ರಾರ್ಥಿಸುವೆ.

२८) भोजं त्वामिन्द्र वयं हुवेम ददिष्ट्वमिन्द्रापांसि वाजान्।
अविड्ढीन्द्र चित्रया न ऊती कृधि वृषन्निन्द्र वस्यसो नः।

भुङ्क्ते भोजयति च इति भोजः। स्वयं भोगक्रियाऽभिव्याप्तत्वाच्च। इदं दधाति ईं इदं द्रवतीति वा इन्द्रः। अपांसि कर्माणि। 'तस्मिन्नपो मातरिश्वा दधाति' इतिवत् । कर्मापसी इति श्रुत्यन्तरे। अविड्ढि अवतेः वैदिकम् । ऊती ऊत्या। अवति एभिरिति करणे क्तिः। अवनस्य साधनैः मार्गैरित्यर्थः। वस्यसः वसीयसः। वासिनां श्रेयसः।

ಹೇ ಇಂದ್ರ- ನಮ್ಮತ್ತ ಇಷ್ಟವನ್ನು ಹರಿಸುವ ಓ ದೇವರೇ, ಭೋಜಂ- ಎಲ್ಲವನ್ನು ಭೋಗಿಸುವ, ಭಕ್ತರಿಗೆ ಭೋಗ ಮಾಡಿಸುವ, ಎಲ್ಲ ಜೀವರನ್ನು ಉಣಿಸುವ ತ್ವಾಂ- ನಿನ್ನನ್ನು ವಯಂ- ನಾವು ಹುವೇಮ- ನಾವರ್ಪಿಸುವ ನೈವೇದ್ಯವನ್ನು ಸ್ವೀಕರಿಸಲು ಕರೆಯುತ್ತೇವೆ. ತ್ವಂ- ನೀನೇ ವಾಜಾನ್- ಅನ್ನ ಆಹಾರಗಳನ್ನು ದದಿಃ- ಕೊಟ್ಟಿರುವಿ. ಅಪಾಂಸಿ- ಪೂಜೆ, ನಿವೇದನ ಮುಂತಾದ ಕರ್ಮಗಳನ್ನು ದದಿಃ- ಮಾಡಿಸುವಿ. ಹೇ ಇಂದ್ರ- ಸಮರ್ಥ ಜಗದೊಡೆಯನೇ ಚಿತ್ರಯಾ ಊತೀ- ಮಾನವರಿಗೂ, ದೇವತೆಗಳಿಗೂ,

ದೇವೋತ್ತಮರಿಗೂ ತಿಳಿಯಲಾಗದಷ್ಟು ವಿಚಿತ್ರವಾದ ರೀತಿಗಳಿಂದ ರಕ್ಷಣೆಯ ಸಾಧನ, ವಿಧಾನಗಳಿಂದ ನಃ- ನಮ್ಮನ್ನು ಅವಿಡ್ಢಿ- ರಕ್ಷಿಸು. ಹೇ ವೃಷನ್ ಇಂದ್ರ- ಬಯಸಿದ್ದನ್ನು ವರ್ಷಿಸುವ ದೇವರೇ ನಃ- ನಮ್ಮನ್ನು ವಸ್ಯಸಃ ಕೃಧಿ- ಉತ್ತಮವಾಗಿ ಬಾಳಿದವರನ್ನಾಗಿ ಮಾಡು. ಎಲ್ಲರೂ ಬದುಕುವರು. ಅದಕ್ಕೆ ಉಸಿರು ಮಾತ್ರ ಬೇಕು. ಅದಕ್ಕೆ ವಿವೇಕ, ಉಪಕಾರ, ಸಹನೆ, ಭಕ್ತಿ, ಜ್ಞಾನ ಮುಂತಾದವು ಬೇಕಿಲ್ಲ. ಆದರೆ ಬಾಳಿನ ಉತ್ತಮಿಕೆಗೆ ಇದೆಲ್ಲ ಅಗತ್ಯ. ಅದನ್ನು ಕರುಣಿಸು. (ವಿಚಿತ್ರ ತುಂಬ ಅದ್ಭುತವಾಗಿದೆ. ವಿಸ್ತಾರಕ್ಕೆ ಅವಕಾಶವಿಲ್ಲ.)

२९) भोजमश्वा सुष्ठुवाहो वहन्ति सुवृद्रथो वर्तते दक्षिणायाः।
भोजं देवासोऽवता भरेषु भोजः शत्रून्त्समनीकेषु जेता।

भुज्यते भु` इति भोजः भोज्यमन्नादिकं भोक्ता ईश्वरो वा । सुष्ठुवाहः सुष्ठु परमप्रीत्या वहन्ति प्रापयन्ति प्रार्पयन्ति च इति। 'वह प्रापणे' प्रार्पणे इत्यपि वक्तव्यम् । भोजं अन्नं विष्णुं वहन्ति। भोजं भोक्तारं विष्णुं भक्तगृहं वहन्ति। दक्षे इनः यस्याः सा रमा। सर्वसमर्था इत्यपि। षष्ठ्याः आधीन्यमर्थः। सु सुखेन वृद्धं पूर्णं इति सुवृध् । सुवृधेव सुवृत् । यद्वा सु शोभनैः नियमैः सुष्ठु च वर्तते इति भौतिकाध्यात्मिकादिनियमैः नियतं वर्तते इति विश्वं सुवृत् । रथो देहः। रः रमणीया ईश्वरस्य परमप्रियतया नित्यमुक्ततया सर्वेश्वरतया देशकालव्याप्तिगुणपूर्णत्वादिभिश्च थः स्थितिः रथः। सा स्थितिरपि देवभोग्या। रं रमणीयं थं अन्नं 'अत्यन्नश्चातिथिः प्रोक्तः' इति काठकभाष्यात् । 'अव्यक्तमात्मनोऽन्नं च महदादि विनाशि च' इति भागवततात्पर्यात् (२/६/१७) वर्तते सार्वकालिको लट्। तव इत्यध्याहारः। षष्ठी आधीन्ये अर्पितत्वे भोग्यत्वे च। भरेषु 'प्रभृथे हविर्भिः' इत्यत्रेव भरः समर्पणम् । निमित्ते सप्तमी। बहुवचनं समर्पणस्य बहुवारतां सूचयति। न हि सकृदेव समर्पणम् । अहङ्कारममकारादयः निवेदनशत्रवः। जेता अन्तर्णीतणिजपि। भरेषु क्रियमाणेषु सत्सु । भरेषु निवेद्येषु अन्नादिषु । भरेषु कृतेषु सत्सु । 'अव रक्षणे दाने प्रवेशे याचने अवाप्तौ ।

ಸುಷ್ಠುವಾಹಃ- ಪರಮಪ್ರೀತಿಯಿಂದ ಒಯ್ದು ಅರ್ಪಿಸುವ ಅಶ್ವಾಃ- ವೇಗದಿಂದ ಅರ್ಚನೆಗಾಗಿ ದೇವರತ್ತ ಧಾವಿಸುವ ದೇವತೆಗಳು ಭೋಜಂ- ನಿನ್ನ ಭೋಗ್ಯ ನೈವೇದ್ಯವನ್ನು ವಹಂತಿ- ತರುತ್ತಾರೆ. ಅಥವಾ ಭಕ್ತಿಯಿಂದ ನಿನ್ನನ್ನು ಹೊರುವ ದೇವತೆಗಳು ಸರ್ವಭೋಜಿಯಾದ ನಿನ್ನನ್ನು ನನ್ನ ಮನೆಗೆ ಕರೆತರುತ್ತಾರೆ. ದಕ್ಷಿಣಾಯಾಃ- ಸರ್ವಸಮರ್ಥಳಾದ ದಕ್ಷಿಣಾ ಎಂಬ ಹೆಸರಿನ ರಮೆಯ ಸುವೃತ್- ಅತಿವಿಪುಲ ಸುಖಪೂರ್ಣವಾದ ರಥಃ- (ದೇಹವು) ಸ್ವರೂಪವು, ಹಾಗೂ ಅವಳ ರಮ್ಯ ಇರುವಿಕೆಯು ಅಥವಾ ದಕ್ಷಿಣಾಯಾಃ- ಆ ರಮೆಯ ಅಧೀನವಾಗಿ ಆಸ್ತಿಯಾಗಿರುವ ಸುವೃತ್- ನಿಯತಿ ನಿಯಮಗಳಿಂದ ಸುಬದ್ಧವಾಗಿ ಇರುವ ರಥಃ- ರಮಣೀಯವಾದ ಇಡಿಯ ವಿಶ್ವವೆಂಬ ಅನ್ನವು ವರ್ತತೇ- ಹಿಂದೆ ಇಂದು ಮುಂದೆ ಎಂದೆಂದಿಗೂ ನಿನ್ನಧೀನವಾಗಿ ನಿನಗರ್ಪಿತವಾಗಿ ನಿನ್ನ ಭೋಗ್ಯವಾಗಿ ಇದೆ. ಹೇ ದೇವಾಸಃ- ಓ ದೇವತೆಗಳೇ, ಸಮನೀಕೇಷು- ಯುದ್ಧಗಳಲ್ಲಿ ಶತ್ರೂನ್ - ಶತ್ರುಗಳನ್ನು ಜೇತಾ- ಗೆಲ್ಲುವ ನೀವು ಭರೇಷು- ದೇವರಿಗರ್ಪಿಸುವದಕ್ಕಾಗಿ ಭೋಜಂ- ಭೋಗ್ಯವನ್ನು ಅವತ- ಕಾಪಾಡಿರಿ.

ಅನ್ನ ಮುಂತಾದುದು ದೇವರ ನೈವೇದ್ಯ. ಆದರೆ, ಅದು ಹಾಳಾಗಿ, ಕೊಳೆಯಾಗಿ, ಕೀಳಾಗಿ ಹೋಗದಂತೆ ಕಾಪಾಡಬೇಕು. ಅದನ್ನು ಹಾಳು, ಕೊಳೆ, ಕೀಳು ಮಾಡುವವರೇ ಶತ್ರುಗಳು.

ಆ ಶತ್ರುಗಳೇ ನಮ್ಮ ಮನದ ದುರ್ವೃತ್ತಿಗಳು. ನಾನೇ ಸ್ವತಂತ್ರ ಎಂಬ ಅಸ್ಮಿತೆ, ನನ್ನದೀ ಅನ್ನ ಎಂಬ ಮಮತೆ, ನಾನು ಅರ್ಪಿಸಿದಾಗ ದೇವರ ಹೊಟ್ಟೆ ತುಂಬುವದು ಎಂಬ ಸೊಕ್ಕು, ದೇವರಿಗೆ ಹಸಿವಾಗಿದೆ ಎಂಬ ಭ್ರಾಂತಿ, ನೈವೇದ್ಯ ಮಾಡಿ ದೇವರಿಗೆ ನಾನು ಉಪಕಾರ ಮಾಡುತ್ತಿರುವೆ ಎಂಬ ಮದ, ಈ ಉಪಕಾರಕ್ಕಾಗಿ ದೇವರು ನನ್ನಾಳಿನಂತೆ ನನ್ನೆಲ್ಲ ಕೆಲಸಗಳನ್ನು ಮಾಡಬೇಕೆಂಬ ದೌರ್ಜನ್ಯ ಇತ್ಯಾದಿ ಭಾವಗಳೇ ಶತ್ರುಗಳು.

ಈ ಶತ್ರುಗಳು ನೈವೇದ್ಯವನ್ನು ಸ್ಪರ್ಶಿಸಿದರೆ ಸಾಕು, ದೇವರು ಅದನ್ನು ಸ್ವೀಕರಿಸುವದಿಲ್ಲ.

ಕಾರಣ, ಈ ನಮ್ಮ ಭಾವಶತ್ರುಗಳನ್ನು ದೇವತೆಗಳೇ ಗೆಲ್ಲಬೇಕು, ನಮಗೆ ಬಲ ನೀಡಿ ಗೆಲ್ಲಿಸಲೂ ಬೇಕು. ಅಲ್ಲದೇ ಓ ದೇವತೆಗಳೇ ನೀವೇ ಭರೇಷು- ನೈವೇದ್ಯ ಮಾಡುವಾಗ ಅವತ- ಸಮರ್ಪಿಸಿರಿ. ನೀವೇ ಭರೇಷು- ನೈವೇದ್ಯಗಳಲ್ಲಿ ಅವತ- ಪ್ರವೇಶಿಸಿರಿ. ಭರೇಷು- ನೈವೇದ್ಯವಾದ ಬಳಿಕ ಭೋಜಂ- ಭೋಗ್ಯವನ್ನು ಅವತ- ದೇವರಿಂದ ಯಾಚಿಸಿ ಪಡೆದು ಭೋಗಿಸಿರಿ. ನಂತರ ನಮಗೆ ಭೋಜಂ ಅವತ- ನೈವೇದ್ಯವನ್ನು ದಯಪಾಲಿಸಿರಿ.

३०) स्तविष्यामि त्वामहं विश्वस्यामृत भोजन।
अग्ने त्रातारममृतं मियेध्य यजिष्ठं हव्यवाहन।।

ವಿಶ್ವಸ್ಯ- ಇಡಿಯ ಪ್ರಪಂಚಕ್ಕೆ ಭೋಜನ- ಹೊಟ್ಟೆಗೆ ಹಾಕುವ ಓ ಕರುಣಾಮಯ, ಮಾತ್ರವಲ್ಲ, ಅಮೃತ- ಸರ್ವಥಾ ಸಾವಿಲ್ಲದ, ಓ ನಿತ್ಯ, ಶಾಶ್ವತ ದೇವ, ಅಂತೆಯೇ ಅಮೃತಭೋಜನ- ಮುಕ್ತರಿಗೂ ಭೋಗ ಮಾಡಿಸುವ ಓ ದೊರೆ, ಮಿಯೇಧ್ಯ- ಓ ಯಜ್ಞನಿಯಾಮಕನೇ, ಹವ್ಯವಾಹನ- ನಿವೇದಿಸಲು ಯೋಗ್ಯವಾದುದನ್ನು ಎಂಥದನ್ನೇ ಕೊಟ್ಟರೂ ಪ್ರೀತಿಯಿಂದ ಸ್ವೀಕರಿಸುವ, ಅರ್ಪಿಸಿದ ಹವಿಸ್ಸನ್ನು ಆ ಆ ದೇವತೆಗಳಿಗೆ ದಯಪಾಲಿಸುವ ಅಗ್ನೇ- ಓ ದೇವನೇ ಅಮೃತಂ ತ್ರಾತಾರಂ- ಮುಕ್ತರನ್ನೆಲ್ಲ ಕಾಪಾಡುವ ಅಥವಾ, ಅಮೃತಂ- ಸಾವಿರದ ತ್ರಾತಾರಂ- ಎಲ್ಲರನ್ನು ಕಾಪಾಡುವ ಯಜಿಷ್ಠಂ- ಯಜ್ಞಗಳಿಂದ ಪೂಜಿತರಾಗುವ ದೇವತೆಗಳಲ್ಲಿ ಸರ್ವೋತ್ತಮನಾದ ತ್ವಾಂ- ನಿನ್ನನ್ನು ಅಹಂ- ನಾನು ಸ್ತವಿಷ್ಯಾಮಿ- ಅನಂತಕಾಲದವರೆಗೆ ನಿರಂತರವಾಗಿ ಸ್ತುತಿಸುವೆ.

३१) अर्चत प्रार्चत प्रियमेधासो अर्चत।
अर्चन्तु पुत्रका उत पुरं न घृष्ण्वर्चत।

कर्मनिर्णय:- अर्चनं यज्ञादि। प्रार्चनं ज्ञानध्यानादि। 'श्रेयान् द्रव्यमयाद् यज्ञाज्ज्ञानयज्ञ: परन्तप' इति भगवद्वचनात्। प्रिययज्ञा अर्चत, प्रियज्ञाना: प्रार्चत। पुत्रका: अल्पज्ञा अप्यर्चत।

'न बुद्धिभेदं जनयेदज्ञानां कर्मसङ्गिनाम् । जोषयेत् सर्वकर्माणि विद्वान् युक्त: समाचरन् ' इति च। उतशब्दात् ज्ञानिनामप्यर्चनं युक्तं स्वाश्रमानुसारेणेति। 'अधा ते विष्णो विदुषा चिदर्घ्य: स्तोमो यज्ञश्च राध्यो हरिष्मता' इति श्रुते:।

किं तदर्चनीयम्। घृष्णु घृष्टं परं ब्रह्म वासुदेवाख्यम् । पुरं देहं नार्चत।

'प्रत्युद्गमप्रश्रयणाभिवादनं विधीयते साधु मिथः सुमध्यमे। प्राज्ञैः परस्मै पुरुषाय चेतसा गुहाशयायैव न देहमानिने' इति भागवते।

सदेहमानिहरये प्रणमेत् केवलाय वा। न देहाय न तन्मानपराय च कथञ्चन' इति व्यासस्मृतौ। पुनरर्चतेति तात्पर्यार्थे।

टीका- अर्चत। अर्चनमित्यादिनाऽनुपसर्गसोपसर्गप्रकृत्यर्थावुक्तौ। तत्र कुतो यज्ञादितो ज्ञानादेः प्रकर्ष इत्यत आह ।।**श्रेयानिति**।। प्रियमेधास इत्येतद् व्यर्थम् । प्रियो मेधो यज्ञो येषामिति 'आजसेरसुक्' । प्रिया मेधा ज्ञानं येषामिति वा। 'नित्यमसिच् प्रजामेधयोः'। द्वयमपि तन्त्रेणोपात्तमिति भावेन यथायोग्यं योजयति ।।**प्रियेति**।।

ननु प्रिययज्ञाः कर्मिणोऽल्पकास्तेऽनादरणीया एव न विधेया इत्याशङ्कानिरासार्थत्वात् 'अर्चन्तु पुत्रकाः' इति न पुनरुक्तमिति भावेनाह ।।**पुत्रका इति**।। अर्चतेत्यनेन पुरुषव्यत्ययोऽयमित्युक्तम् । ननु तेऽनादरणीया इत्युक्तमिति नेत्याह ।।**न वृद्धीति**।।

ननु प्रियमेधासः पुत्रकाः अर्चत अर्चतेत्यादरार्थाभ्यासतया कुतो न व्याख्यायते । एवं व्याख्यानेऽपि शब्दश्च नाध्याहर्तव्य इत्यत आह ।।**उतशब्दादिति**।। समुच्चयार्थस्योतशब्दस्य विद्यमानत्वात् नैकवाक्यता। तस्यैवाप्यर्थत्वाच्च नाध्याहार इति भावः।

ननु प्रिययज्ञा एव तावदल्पकाः। तेषां कैः सह समुच्चयः। न च ज्ञानिभिः। तेषां प्रार्चनाधिकारिणामर्चनाभावात् । समानविषय एव समुच्चय इत्यत आह ।।**ज्ञानिनामपीति**।। युक्तं प्रमितम् । 'तस्मात् कर्म न कुर्वन्ति यतयः' इत्यादिविरोधादित्यत उक्तम् ।।**स्वाश्रमेति**।। असवकीयकर्मविषयं तदिति भावः। इति हेतोः समुच्चयो युज्यत इति शेषः। युक्तमित्युक्तमुपपादयति ।।**अथेति**।।

परं ब्रह्म भगवतोऽन्यदिति केचित् अत उक्तम् ।।**वासुदेवाख्यमिति**।। पुरशब्देन केवलस्तदभिमानी चोच्यते। धृष्णुशब्देन निर्भयत्वसमयत्वयुक्तिरुक्ता। आगमसम्मितिं चाह ।।**प्रत्युद्गमेति**।। नन्वेवमप्यर्चतेत्युक्तं पदमवशिष्टमित्यत आह ।।**पुनररिति**।।

ಪ್ರಿಯಮೇಧಾಸಃ- ಓ ಕರ್ಮಪ್ರೇಮಿಗಳೇ, ಅರ್ಚತ- ಯಜ್ಞಗಳನ್ನು ಮಾಡಿ ಭಗವಂತನನ್ನರ್ಚಿಸಿ. ಪ್ರಿಯಮೇಧಾಸಃ- ಓ ಜ್ಞಾನಪ್ರೇಮಿಗಳೇ, ಪ್ರಾರ್ಚತ- ಜ್ಞಾನಧ್ಯಾನಗಳಿಂದ ಭಗವಂತನನ್ನರ್ಚಿಸಿ.

ಪುತ್ರಕಾಃ- ಅಲ್ಪಜ್ಞಾನಿಗಳಾದ ಜನರೆಲ್ಲ ಅರ್ಚಂತು- ಯಜ್ಞಯಾಗಾದಿಗಳಿಂದ ಭಗವಂತನನ್ನು ಅರ್ಚಿಸಬೇಕು. ಉತ- ಅಲ್ಲದೇ ಮಹಾಜ್ಞಾನಿಗಳೂ ತಮ್ಮ ತಮ್ಮ ಸಂನ್ಯಾಸ ಗೃಹಸ್ಥಾದಿ ಆಶ್ರಮಗಳಿಗೆ ಅನುಗುಣವಾಗಿ ಭಗವಂತನನ್ನರ್ಚಿಸಲಿ. ಧೃಷ್ಣು- ಸಕಲರನ್ನು ಧರ್ಷಣ ಮಾಡುವ ಸಾಮರ್ಥ್ಯವುಳ್ಳ, ಎಲ್ಲರ ಧರ್ಷಣವನ್ನು ಎದುರಿಸುವ ಸರ್ವೋತ್ತಮ ಭಗವಂತನನ್ನು ಅರ್ಚತ- ಪೂಜಿಸಿರಿ. ಪುರಂ ನ- ದೇಹವನ್ನು ಅಥವಾ ದೇಹವನ್ನು ಜೀವನನ್ನು ಪೂಜಿಸಬೇಡಿ.

३२) वयः सुपर्णा उप सेदुरिन्द्रं प्रियमेधा ऋषयो नाधमानाः।
अप ध्वान्तमूर्णुहि पूर्धि चक्षुर्मुमुग्ध्यस्मान् निधयेव बद्धान्।

भागवततात्पर्य (११-४-१९)- सुपर्णा ऋषयो व्यासं नाथमाना ययुः सदा। भ्रान्तिं निवारयास्माकं मुमुग्धीति च वादिनः।

ವಯಃ- ಉತ್ತಮರಾದ, ವಿಲಕ್ಷಣರಾದ, ನಾನಾಯೋಗ್ಯತೆಯ, ಸುಪರ್ಣಾಃ- ಉತ್ತಮ ಸಿದ್ಧಾಂತಗಳುಳ್ಳ, ಆನಂದಮಯ ಭಗವಂತನ ಭಕ್ತರಾದ, ಪ್ರಿಯಮೇಧಾಃ- ಜ್ಞಾನಮಯ ಭಗವಾನ್ ವೇದವ್ಯಾಸರನ್ನು ಪ್ರೀತಿಸುವ, ಜ್ಞಾನಮಯ ವೇದವ್ಯಾಸರಿಗೆ ಪ್ರಿಯರಾದ, ಭಗವಂತನ ಜ್ಞಾನವನ್ನೇ ಪ್ರೀತಿಸುವ, ಭಗವಂತನ ಜ್ಞಾನಕ್ಕಾಗಿಯೇ ಎಲ್ಲವನ್ನೂ ಸ್ವೀಕರಿಸುವ ಋಷಯಃ- ಸ್ವಯಂ ಮಹಾಜ್ಞಾನಯೋಗ್ಯರಾದ ಋಷಿಗಳು ಇಂದ್ರಂ- ಸರ್ವಸ್ವಾಮಿಯಾದ ವೇದವ್ಯಾಸದೇವರನ್ನು ನಾಧಮಾನಾಃ-ಪರಿ ಪರಿಯಿಂದ ಯಾಚಿಸುತ್ತ ಉಪಸೇದುಃ- ಸಮೀಪಿಸಿದರು, ಮೊರೆ ಹೊಕ್ಕರು.
ಮೊರೆ ಹೋದ ಮಾತು ಇದು-

'ಧ್ವಾಂತಂ ಅಪ ಊರ್ಣುಹಿ- ಓ ಸ್ವಾಮಿ, ನಮ್ಮನ್ನು ಕವಿದ ಕತ್ತಲನ್ನು ಕಳೆ. ಚಕ್ಷುಃ ಪೂರ್ಧಿ- ನಮ್ಮ ಕಣ್ಣು ತುಂಬು, ನಮ್ಮ ಮನಗಣ್ಣನ್ನು ಜ್ಞಾನ ಸುರಿದು ತುಂಬು. ನಿಧಯಾ ಇವ ಬದ್ಧಾನ್- ಹಗ್ಗದಿಂದ ಕಟ್ಟಿದಂತೆ ಸಂಸಾರದ ಸಂಕೋಲೆಯಿಂದ ಬದ್ಧರಾದ ಅಸ್ಮಾನ್ ಮುಮುಗ್ಧಿ- ನಮ್ಮನ್ನು ಮುಕ್ತರಾಗಿಸು."

३३) श्रिये जातः श्रिय आ निरियाय श्रियं वयो जरितृभ्यो दधाति।
श्रियं वसाना अमृतत्वमायन् भवन्ति सत्या समिथा मितद्रौ।।

न्याय दीपिका- यः पुरुषः श्रीसमाराधनार्थं जातोऽसौ तदर्थमेव गृहान्निर्गतो भवति स श्रियं उपदेष्टृभ्यो गुरुभ्य एव स्वस्य वयो धत्ते। एवं श्रियमुपासीनाः पुरुषा अमृतत्वं यान्ति। तस्मिन् गुरुशिष्याख्ये मिथुने समीहितानि सत्यानि भवन्तीत्यर्थः।

प्रमेयदीपिका- श्रियं प्रति वसाना वसन्तः तामाच्छाद्य स्थिता वा उपासीना इति यावत्। तेषां समिथा समीहितानि सत्यानि भवन्ति। मितद्रौ समुद्रे क्षीराब्धौ।

ಈ ಪ್ರಸಂಗದಲ್ಲಿಯ ಈ ಮಂತ್ರಕ್ಕೆ ಹೀಗೂ ಅರ್ಥವನ್ನು ಹೇಳಬೇಕೆಂದು ತೋರುತ್ತದೆ.

ಶ್ರೀ ಎನ್ನುವುದಕ್ಕೆ ಭಗವಂತನ ಸ್ವರೂಪಭೂತವಾದ ಕಾಂತಿ ಎಂದು ಪರಮ ಮುಖ್ಯವಾದ ಅರ್ಥ. ಭಗವಂತನ ಕಾಂತಿಯನ್ನು ಆರಾಧಿಸುವದಕ್ಕೇ ಹುಟ್ಟಿದ ಮನುಷ್ಯನು ಆ ಭಗವಂತನ ಕಾಂತಿಯನ್ನು ಕಾಣುವದಕ್ಕೆಂದೇ ಧ್ಯಾನ ತಪಸ್ಸುಗಳನ್ನು ಮಾಡಲೋಸುಗ ಮನೆ ಬಿಟ್ಟು ಅಡವಿಯನ್ನು ಸೇರಿದ. ಆ ಭಗವಂತನ ರೂಪ, ಲಾವಣ್ಯ, ಮಹಿಮೆಗಳನ್ನು ಉಪದೇಶಿಸುವ ಗುರುಗಳಿಗಾಗಿ (ಗುರುಗಳು ಮಾಡುವ ದೇವರ ಮಹಿಮೆಯ ಉಪದೇಶಕ್ಕಾಗಿ) ಇಡಿಯ ಜೀವನವನ್ನು ತೆತ್ತ.

ಶ್ರೀಯಂ- ಹೀಗೆ ದೇವರ ರೂಪ, ಕಾಂತಿ, ಸೌಂದರ್ಯಗಳನ್ನು ವಸಾನಾಃ- ಉಪಾಸನೆ ಮಾಡುವ ಭಕ್ತರು ಅಮೃತತ್ವಮಾಯನ್- ಮುಕ್ತಿಯನ್ನು ಪಡೆದರು. ಹೀಗೆ ಮಿತದ್ರೌ- ಗುರುಶಿಷ್ಯರ ಮಿಥುನದಲ್ಲಿ ಸಮಿಥಾ-ಅವರು ಬಯಸಿದ್ದೆಲ್ಲ ಸತ್ಯಾ- ಸತ್ಯವಾಗುವದು.

३४) श्रिय एवैनं तच्छ्रियमादधाति सन्ततमृचा वषट्कृत्यं
सन्तत्यै सन्धीयते प्रजया पशुभिः य एवं वेद।

ದೇವರು ಶ್ರೀಯಃ- ತನ್ನ ಮೈ ಕಾಂತಿಯಿಂದ ಏನಂ (ಏನಾಂ) ತಚ್ಛ್ರಿಯಂ- ಸಿರಿಯನ್ನು ಆದಧಾತಿ- ಪೋಷಿಸುವನು. (ಲಕ್ಷ್ಮಿಯಿಂದಲೇ ಸಂಪತ್ತಿಯನ್ನು ಪಡೆಯುವದು.) ಆದುದರಿಂದ ಸಂತತ್ಯೈ- ಸಂತತ ಸಂಪತ್ತಿಗಾಗಿ ಸಂತತಂ- ಯಾವಾಗಲೂ ಋಚಾ- ಮಂತ್ರಗಳಿಂದ ವಷಟ್ಕೃತ್ಯಂ- ಸ್ತುತಿಸಬೇಕು. ಯ ಏವಂ ವೇದ- ಈ ತತ್ತ್ವವನ್ನು ತಿಳಿದವ ಪ್ರಜಯಾ ಪಶುಭಿಃ ಸಂಧೀಯತೇ-ಜ್ಞಾನವಂತ ವೇದಸಂಪನ್ನ ಆಗುವ, ಮಕ್ಕಳು ಪಶುಸಂಪತ್ತಗಳು ಸಮೃದ್ಧವಾಗಿ ಆಗುವವು.

३५) **नमो महद्भ्यो नमो अर्भकेभ्यो नमो युवभ्यो नम आशिनेभ्यः।**
यजाम देवान् यदि शक्नवाम मा ज्यायसः शंसमा वृक्षि देवाः।

ऋग्भाष्यम् नारायणब्रह्मपुरःसरास्तु देवाः महान्तः शिशवः स्कन्दपूर्वाः।
वटुस्वरूपाश्च त एव कुत्रचिद् युवान इन्द्रादय एत एव च।
महत्त्वमेषां गुणतोऽपि यूनां इन्द्रादयो मध्यगुणा युवानः।
आपेक्षिकाल्पैश्च गुणैस्तदीयैः समीरिता आशिना अर्भकाश्च।
कृतं नमः शक्तिमन्तो यजाम न ज्यायसां स्तुतिमात्रं लुपामः।
एकस्य विष्णोरपि रूपभेदाः अणीयांसः सन्त्यथवा महान्तः।
युवत्वसाम्येऽपि महत्त्वभेदात् युवा महानित्यपि भेद उक्तः।

टीका- अत्र महदादिशब्दनिर्दिष्टान् देवानाह ।।नारायणेति।। वटुस्वरूपाश्च इत्यनेन आशिनशब्दो वटुवाचीत्युक्तम्। 'नम आवटुभ्य' इति पुराणसमख्यानात्। एत एव अर्भकत्वादिनैवोक्ता एव। स्कन्दपूर्वा इत्युक्तानेव इन्द्रादय इति परामृशति। कथमेकत्रैव त्रिप्रकारत्वमित्यत उक्तम्। कुत्रचिद्रूपविशेषे।

एतदुक्तं भवति। नारायणादय इन्द्रान्ता अवान्तरपित्रादिसम्बन्धप्रसिद्धिशून्या महान्तः। शिवादिपित्रादिसम्बन्धवत्त्वेन प्रसिद्धाः स्कन्देन्द्रादायोऽर्भकाः। त एव रूपविशेषे युवान आशिनाश्चेति। एतेन नारायणादीनां सर्वेषामपि देवानां निर्जरत्वात् कथं महत्त्वमित्याशङ्काऽपास्ता भवति। युवत्वेऽपि प्रकारभेदेन महत्त्वाद्युक्तेः।

प्रकारान्तरेण यूनामपि नारायणादीनां महत्त्वं व्याख्याति ।।महत्त्वमिति।। यूनामप्येषां महत्त्वं युज्यते यतो गुणतो महत्त्वमुच्यते न जरसा इत्यर्थः। तर्हि वयःप्रकारणविरोधः स्यादित्यतो युवत्त्वादिकमपि गुणत एवेत्याह ।।इन्द्रादय इति।। त एव तदीयैः स्वैः स्वैरापेक्षिकाल्पैः गुणैः आशिना अर्भकाश्च समीरिताः। नारायणादिवदनन्तगुणत्वस्य अस्मदादिवत् अत्यल्पगुणत्वस्य च आभावात् मध्यगुणत्वात् युवान एव इन्द्रादयो ब्रह्मादीन् मध्यमगुणान् यूनोपेक्षया अल्पगुणत्वात् अस्मदादिभ्योऽत्यल्पगुणेभ्योऽधिकगुणत्वादाशिनाः। नारायणादिभ्योऽल्पगुणत्वात् अर्भका इति।

एवं महदादिपदार्थान् उक्त्वा पूर्वार्धवाक्यार्थमाह ।।कृतमिति।। महदादिभ्यो देवेभ्यो नमः अस्माभिर्नमस्कृतम् । उत्तरार्धं व्याख्याति ।।शक्तिमन्त इति।। देवैर्यूपान् मोचिता वयं यदि शक्नवाम यजने शक्तिमन्तो भवामतर्हि देवान् यजाम। शक्त्यभावेऽपि ज्यायसो ज्यायसं जेवानाम् । शंसं शंसनमात्रं माऽऽवृक्षि। 'व्रश्चू छेदने' इत्यस्येदं रूपम् । न लुपामः। न लुप्तं करिष्यामो हे देवा इति।

अस्त्वेवं महत्वादिव्याख्यनं यदा समस्ता देवा विवक्षिताः स्युः। यदा तु विष्णुरेक एव विवक्षितस्तदा कथमित्यत आह ।।एकस्येति।। रूपभेदा रूपविशेषाः। वाशब्दात् मध्यमप्रकारद्वयोपेता. ततः किमित्यत आह ।।युवत्वेनेति।। महत्त्वभेदात्। अपिशब्देन अर्भकाशिनयोः समुच्चयः।

ಮಹದ್ಭ್ಯಃ- ಗುಣಗಳಿಂದ ಉತ್ತಮರಾದ, ನಾರಾಯಣ, ಬ್ರಹ್ಮ, ರುದ್ರ ಮುಂತಾದ ದೇವತೆಗಳಿಗೆ ಯುವಭ್ಯಃ- ಗುಣಗಳಿಂದ ಮಧ್ಯಮರಾದ ಇಂದ್ರಾದಿ ದೇವತೆಗಳಿಗೆ ಆಶಿನೇಭ್ಯಃ- ಗುಣಗಳಿಂದ ವಟುಗಳಂತಿರುವವರಿಗೆ ಅರ್ಭಕೇಭ್ಯಃ- ದೇವರ ದೃಷ್ಟಿಯಲ್ಲಿ ಗುಣಗಳಿಂದ ಚಿಕ್ಕವರಾದ ದೇವತೆಗಳಿಗೆ ನಮಃ- ನನ್ನ ನಮನ.

ಅಥವಾ, ನಾರಾಯಣನ ಮಹಾ, ಯುವ, ವಟು ಹಾಗೂ ಬಾಲ ರೂಪಗಳಿಗೆ ನನ್ನ ಪ್ರಣಾಮಗಳು.

ಯದಿ ಶಕ್ನವಾಮ- ನಮಗೆ ಸಾಧ್ಯವಿದ್ದರೆ ದೇವಾನ್ ಯಜಾಮ- ದೇವತೆಗಳನ್ನು ಕುರಿತು ಯಜ್ಞ ಮಾಡೋಣ. ಸಾಧ್ಯವಿಲ್ಲದಿದ್ದರೆ ಜ್ಯಾಯಸಃ- ನಮಗಿಂತಲೂ ತುಂಬ ಉತ್ತಮರಾದ ದೇವತೆಗಳ ಶಂಸಂ- ಸ್ತುತಿಯನ್ನಾದರೂ ಕೊನೆಯ ಪಕ್ಷ ಮಾ ಆವೃಕ್ಷಿ- ತಪ್ಪಿಸುವದು ಬೇಡ.

३६) ममत्तु नः परिज्मा वसर्हा ममत्तु वातो अपां वृषण्वान्।
शिशीतमिन्द्रापर्वता युवं नस्तन्नो विश्वे वरिवस्यन्तु देवाः।।

'परितो ज्मां यतश्चरेत् । परिज्माऽतो रथः।' इति ऋग्भाष्ये। 'शरीरं रथमेव च' इत्यतो देहो रथ इति अध्यत्मविदां दर्शनम्। वासस्य अर्हः वसर्हः। 'परावनात् पर्वतनाम' इति निर्णयोक्तनिरुक्तेः।

ವಸರ್ಹಾ- ವಾಸಯೋಗ್ಯವಾದ, ಪರಿಜ್ಮಾ- ಭೂಮಿಯ ಮೇಲಿರುವ, ನಮ್ಮ ಈ ದೇಹದ ಅಭಿಮಾನಿ ದೇವತೆಯು ನಃ ಮಮತ್ತು- ನಮ್ಮನ್ನು ಸುಖ ಪಡಿಸಲಿ. ಅಪಾಂ- ಕರ್ಮಗಳನ್ನು ವೃಷಣ್ವಾನ್- (ಸುರಿಸುವ) ನಮ್ಮಿಂದ ಮಾಡಿಸುವ ವಾತಃ- ವಾಯುದೇವರು ನಮ್ಮನ್ನು ಮಮತ್ತು- ಸಂತೋಷಗೊಳಿಸಲಿ.

ಇಂದ್ರಾ ಪರ್ವತಾ- ಓ ಸಕಲ ಚೇತನಸ್ವಾಮಿಯಾದ ಭಗವಂತ, ಓ ಉತ್ತಮ ಜೀವರನ್ನು ಕಾಪಾಡಿದ ದೇವನೇ ಯುವಂ- ನೀವು ನಃ- ನಮ್ಮನ್ನು, ನಮ್ಮ ಬುದ್ಧಿಗಳನ್ನು ಶಿಶೀತಂ- ತೀಕ್ಷ್ಣಗೊಳಿಸಿರಿ. ವಿಶ್ವೇ ದೇವಾಃ- ಓ ಎಲ್ಲ ದೇವತೆಗಳೇ ನಃ- ನಮ್ಮನ್ನು ವರಿವಸ್ಯಂತು- ಸಲಹಿರಿ.

३७) कथा ते अग्ने शुचयन्त आयोर्ददाशुर्वाजेभिराशुषाणाः।
उभे यत्तोके तनये दधाना ऋतस्य सामन् रणयन्त देवाः।

कथा इत्यस्य कथमित्यर्थः। कथा इत्यप्यर्थो भवति। बहुवचनस्य 'सुपां' इत्यनेन लुक्। शुचिं कुर्वन्तः। 'यु मिश्रणे' इत्यतः भावे क्विप् । तुगभावः छान्दसः। तेन सख्यं सहवासः सायुज्यं इत्यर्थत्रयप्रसवः। 'वज गतौ' इत्यतो वाजं ज्ञानम् । आशु सनन्ति 'सन सम्भक्तौ' इत्यतः ददति इति आशुषाणाः। तोकः पुत्रः। तनयः तत्पुत्रः। 'तनु विस्तारे' इत्यतः वंशविस्तारकः। सामन् साम्नि। सप्तम्याः लुक्। 'रण शब्दे'। 'रमु क्रीडायां ' इत्यस्य वा वर्णविपर्ययेण रणयन्त।

ಅಗ್ನೇ- ಭಗವನ್, ತೇ ಕಥಾ- ನಿನ್ನ ಕಥೆಗಳು ಶುಚಯಂತಃ- ಕೇಳುವವರ ದೇಹ, ಇಂದ್ರಿಯ, ಮನಸ್ಸು, ಚೈತನ್ಯಗಳನ್ನು ಶುಚಿ ಮಾಡುವವು. ವಾಜೇಭಿಃ- ಜ್ಞಾನವನ್ನು ಆಶುಷಾಣಾಃ- ತುಂಬ ಬೇಗನೇ ನೀಡುವವು. ಆಯೋಃ- ದೇವರ ಸಖ್ಯವನ್ನು, ಒಡನಾಟವನ್ನು ಕೊನೆಯಲ್ಲಿ ಸಾಯುಜ್ಯವನ್ನು ದದಾಶುಃ- ದಯಪಾಲಿಸುವವು.

ದೇವಾಃ- ದೇವತೆಗಳು ಉಭೇ ತೋಕೇ- ತಮ್ಮ ಮಕ್ಕಳಲ್ಲೂ (ಅಂದರೆ ಋಷಿ ಮುನಿಗಳಲ್ಲೂ) ತನಯೇ- ಅವರ ಸಂತತಿಯಲ್ಲೂ (ಅಂದರೆ ಮಾನವಾದಿಗಳಲ್ಲೂ) ಕಥಾಃ ದಧಾನಃ- ಭಗವಂತನ ಕಥೆಗಳನ್ನು ಉಪದೇಶಿಸುತ್ತ ಋತಸ್ಯ- ಭಗವಂತನ ಸಾಮನ್- ಕಥೆಯ ಗಾನಗಳಲ್ಲಿ ರಣಯಂತ- ರಾಗ ತೆಗೆದರು, ಹಾಡಿ ಹಾಡಿ ಸಂತಸ ಪಟ್ಟರು.

परिशिष्टम्-२

प्रमाणानि

तुलसी

-नखस्पर्शेन रहितं चिनुयात् शुचिना स्वयं ।

ಸ್ವಯಂ ಶುದ್ಧನಾಗಿ ಉಗುರು ತಾಕಿಸದೆ ತುಲಸಿಯನ್ನು ತೆಗೆಯಬೇಕು.

-येन स्नानेन तुलस्याहरणं तेनैव पूजादिकं न कार्यं ।

इत्याहृत्य ततः स्नात्वा पूजयेत् पुरुषोत्तमं ।अस्नात्वा पूजयेद्यस्तु तस्य पूजा वृथा भवेत् ।

ಸ್ನಾನಮಾಡಿ ತುಲಸಿ ತೆಗೆದು ಮತ್ತೊಮ್ಮೆ ಸ್ನಾನಮಾಡಿ ಪೂಜಿಸಬೇಕು.

-वर्ज्यं पर्युषितं पुष्पं वर्ज्यं पर्युषितं जलं ।

ಬಾಡಿದ ಹೂ, ಹಳಿತ ನೀರು ನಿಷಿದ್ಧ.

निर्माल्यविसर्जनम्

घटिकाया अतिक्रान्तौ क्षुद्रपातकमुच्यते । प्रहरे पूर्णतां याते प्रायश्चित्तं ततो न हि । ।

ನಿರ್ಮಾಲ್ಯವಿಸರ್ಜನವನ್ನು ಸೂರ್ಯೋದಯವಾದ ಒಂದು ಘಟಿಕೆಯ ನಂತರ ಮಾಡಿದರೆ ಕ್ಷುದ್ರಪಾತಕ. ಮೂರು ಗಂಟೆಯಾದ ಬಳಿಕ ಮಾಡಿದರೆ ಪ್ರಾಯಶ್ಚಿತ್ತವೇ ಇಲ್ಲ.

शङ्खः

-उध्दरिण्या जलं ग्राह्यं नाप्सु शंखं निमज्जयेत् ।

शंखस्य पृष्ठसंस्पृष्टं पयः पापकरं ध्रुवं । न तेन स्नापयेद्देवं पूजनात्पापसंभवः।।

ಉದ್ಧರಿಣೆಯಿಂದ ಕಲಶದ ನೀರನ್ನು ಎತ್ತಿ ಶಂಖದಲ್ಲಿ ತುಂಬಬೇಕು. ಶಂಖವನ್ನು ನೀರಿನಲ್ಲಿ ಎದ್ದಬಾರದು. ಶಂಖದ ಬೆನ್ನು ತಾಕಿದ ನೀರು ಪಾಪಿಷ್ಠ. ಆ ಜಲದಿಂದ ಅಭಿಷೇಕ ಪಾಪಸಾಧನ.

-अत्र भूमौ शंखो न स्थापनीयः ।

यस्तु शंखं भुवि स्थाप्य पूजयेन्माधवं प्रभुं । तस्य पूजां न गृह्णाति तस्मात्पीठं प्रकल्पयेत्।।

ಶಂಖವನ್ನು ಪೀಠಮೇಲೆ ಇರಿಸಬೇಕು. ಕೆಳಗೆ ಇರಿಸಬಾರದು. ದೇವರು ಆ ಪೂಜೆಯನ್ನು ಸ್ವೀಕರಿಸುವದಿಲ್ಲ.

-शिवं वाप्यन्यदेवं वा यः पुमान् शंखवारिणा । पूजयेत्तु प्रमादेन सोऽपराधी भवेद्ध्रुवं।।

ಶಿವನನ್ನಾಗಲಿ ಬೇರೆ ಯಾವ ದೇವರನ್ನೇ ಆಗಲಿ ಶಂಖದಿಂದ ಪೂಜಿಸಬಾರದು. ತಪ್ಪಿ ಪೂಜಿಸಿದರೂ ಮಹಾಪಾಪ.

द्वारपालदेवाः

-प्राणश्चक्षुस्तथाऽऽदित्य इत्येको देवता स्मृता। पूर्वद्वारपतिर्विष्णोः, व्यानः श्रोत्रं च चन्द्रमाः। दक्षिणद्वारपस्त्वेको, वागपानोऽग्निरेव च। पश्चिमद्वारपोऽप्येकः समानो मन एव च। इन्द्र इत्येक एवोक्तः उत्तरद्वाररक्षकः। (उदानो वायुरित्येकं ऊर्ध्वद्वाराधिपश्च सः। स

एवाकाशनामा च लक्ष्म्याविष्टो विशेषतः। पृथिवीनामिका श्रीस्तु द्यौः, दिशो विद्युदेव च। वायुपत्नी समुद्दिष्टा तत्तद् द्वाराधिपाश्च ते।

ವಿಷ್ಣುವಿನ ಮಂದಿರಕ್ಕೆ ಒಂದೊಂದು ದಿಕ್ಕಿನಲ್ಲಿ ನಾಲ್ಕು ದ್ವಾರಗಳು. ಈಗ ಮೂರನೆಯ ದ್ವಾರದ ದೇವತೆಗಳನ್ನು ಹೇಳುತ್ತಿದ್ದಾರೆ.

ಪ್ರಾಣಾಭಿಮಾನೀ ಚಕ್ಷುರಭಿಮಾನೀ ಆದಿತ್ಯ ಎಂಬ ಮೂರು ರೂಪಗಳು ಪೂರ್ವದಿಕ್ಕಿನ ಮೂರನೆಯ ದ್ವಾರಕ್ಕೆ ಪಾಲಕರು.

ವ್ಯಾನಾಭಿಮಾನೀ ಶ್ರೋತ್ರಾಭಿಮಾನೀ ಚಂದ್ರ ಎಂಬ ಮೂರುರೂಪಗಳು ದಕ್ಷಿಣದಿಕ್ಕಿನ ಮೂರನೆಯ ದ್ವಾರಕ್ಕೆ ಪಾಲಕರು.

ಅಪಾನಾಭಿಮಾನೀ ವಾಗಭಿಮಾನೀ ಅಗ್ನಿ ಎಂಬ ಮೂರು ರೂಪಗಳು ಪಶ್ಚಿಮದ ಮೂರನೆಯ ದ್ವಾರಕ್ಕೆ ಪಾಲಕರು.

ಸಮಾನಾಭಿಮಾನೀ ಮನೋಭಿಮಾನೀ ಇಂದ್ರ ಎಂಬ ಮೂರು ರೂಪಗಳು ಉತ್ತರದ ಮೂರನೆಯ ದ್ವಾರಕ್ಕೆ ಪಾಲಕರು.

ಉದಾನಾಭಿಮಾನೀ ಆಕಾಶನಾಮಕ ವಾಯುದೇವರೊಬ್ಬರೇ ಊರ್ಧ್ವದ್ವಾರದ ಪಾಲಕರು. ಅವರಲ್ಲಿ ಲಕ್ಷ್ಮಿಯ ವಿಶೇಷ ಆವೇಶವಿದೆ.

ಪೂರ್ವದ ಎರಡನೆಯ ದ್ವಾರಕ್ಕೆ ದ್ಯುನಾಮಕ ಭಾರತೀ.

ದಕ್ಷಿಣದ ಎರಡನೆಯ ದ್ವಾರಕ್ಕೆ ದಿಕ್ ನಾಮಕ ಭಾರತೀ.

ಪಶ್ಚಿಮದ ಎರಡನೆಯ ದ್ವಾರಕ್ಕೆ ಪೃಥಿವೀ ನಾಮಕ ಮಹಾಲಕ್ಷ್ಮೀ.

ಉತ್ತರದ ಎರಡನೆಯ ದ್ವಾರಕ್ಕೆ ವಿದ್ಯುತ್ ನಾಮಕ ಭಾರತೀ.

घण्टा

– स्नाने धूपे तथा दीपे नैवेद्ये शयने तथा। बोधने भूषणे चैव कुर्याद् घोषं सदा नरः।

ದೇವರ ಅಭಿಷೇಕ, ಧೂಪ, ದೀಪ, ನೈವೇದ್ಯ, ಅಲಂಕಾರ, ಬೋಧನ ಹಾಗೂ ದೇವರನ್ನು ಮಲಗಿಸುವದಕ್ಕೆ ಮುನ್ನ ಅವಶ್ಯವಾಗಿ ಗಂಟೆಯನ್ನು ಬಾರಿಸಬೇಕು.

–वैनतेययुता घण्टा सुदर्शनयुता यदि। ममाग्रे स्थापयेद्यस्तु देहे तस्य वसाम्यहम् ।

ಗರುಡ ಅಥವಾ ಸುದರ್ಶನಚಕ್ರ ಇರುವ ಗಂಟೆಯನ್ನು ನನ್ನ ಮುಂದೆ ಇಟ್ಟವನ ದೇಹದಲ್ಲಿ ನಾನು ವಾಸಿಸುವೆ.

–स्नानकाले विशेषेण घण्टानादं करोति यः । पुरतो वासुदेवस्य तस्य पुण्यमनन्तकम्।

ದೇವರಿಗೆ ಅಭಿಷೇಕಮಾಡುವಾಗ ಗಂಟೆಯನ್ನು ಬಾರಿಸುವದು ಮಹಾಪುಣ್ಯಸಾಧನ.

दिग्व्यवस्था

–देवसाधकयोरन्तः पूर्वा सा दिगिहोच्यते ।। इत्युक्तेः देवस्य पूजकस्य मध्यभागं प्राचीत्वेन गृह्णीयात् । तदनुसारेण आग्नेयादिकंग्राह्यम्।

– देवस्य मुखमारभ्य दिशं प्राचीं प्रकल्पयेत्। तदादिपरिवाराणां अङ्गावरणसंस्थितिः।

ದೇವರ ಎದುರು ಯಾವುದೇ ದಿಕ್ಕಾದರೂ ಅದನ್ನು ಪೂರ್ವವೆಂದು ಗ್ರಹಿಸಬೇಕು. ಈ ಲೆಕ್ಕದಿಂದ ಆವರಣದೇವತೆಗಳನ್ನು ಇರಿಸಬೇಕು.

प्रतिमा- आवाहनम्

-तेजस्सारमयीं दिव्यां प्रतिमां प्रतिमागतां। ध्यात्वा प्राणाधिपं तत्र प्रतिमारूपिणं प्रभुं ।।

ನಾವು ಪೂಜಿಸುವುದು ಜಡಲೋಹಾದಿ ಪ್ರತಿಮೆಯನ್ನು. ಅಲ್ಲಿ (ವಿಶ್ವಕರ್ಮನಿರ್ಮಿತ) ತೇಜೋಮಯವಾದ ದಿವ್ಯಪ್ರತಿಮೆ ಇದೆ ಎಂದು ತಿಳಿಯಬೇಕು. ಅದರಲ್ಲಿ ಪ್ರತಿಮಾರೂಪರಾಗಿ ವಾಯುದೇವರು ಗೋಲಕರಾಗಿ ಇರುವರು ಎಂದು ಚಿಂತಿಸಬೇಕು.

तन्मध्ये रमया सार्धं आसीनं क्षीरनीरवत्। प्रतिमारूपिणं सम्यग्ध्यात्वैवावाहयेत् सुधीः।

ಆ ವಾಯುದೇವರಲ್ಲಿ ರಮಾದೇವಿ ಇರುವಳು. ಅವಳೊಡನೆ ಹಾಲುನೀರಿನಂತೆ ದೇವರು ಬೆರೆತು ಇರುವ. ಆ ದೇವರಿಗೆ ಪ್ರತಿಮೆಯಂತೆ ರೂಪ. ಹೀಗೆಂದು ಚೆನ್ನಾಗಿ ಧ್ಯಾನಿಸಿ ಆವಾಹಿಸಬೇಕು.

तत्र तत्र स्थितं विष्णुं तत्तन्मूर्तिगतेन वै। एकीभूतं चिन्तयित्वा तद्रूपं व्याप्तरूपतः।।
व्याप्तं तद्बिम्बरूपेण बिम्बमर्चागतेन वै। एकीभूतं चिन्तयित्वा भक्तिमान् पूजयाम्यहं ।।

ಅಲ್ಲಲ್ಲಿ ಇರುವ ದೇವರನ್ನು ಮೂರ್ತಿಗತದೇವರೊಡನೆ ಅಭಿನ್ನನಾಗಿರುವ ಎಂದು ಭಾವಿಸಬೇಕು. ಆ ಪ್ರತಿಮಾಗತರೂಪವು ವ್ಯಾಪ್ತರೂಪದಿಂದ ಅಭಿನ್ನವಾಗಿದೆ. ಆ ಇಡಿಯ ವಿಶ್ವವ್ಯಾಪ್ತಭಗವದ್ರೂಪವು ನನ್ನ ಬಿಂಬರೂಪದೊಡನೆ ಅಭಿನ್ನ. ನನ್ನ ಬಿಂಬರೂಪವು ಪ್ರತಿಮಾಗತರೂಪದ ಜೊತೆಯಲ್ಲಿ ಅಭಿನ್ನವಾಗಿರುವದೆಂದು ಭಾವಿಸಬೇಕು. ಒಟ್ಟಾರೆ ಬಿಂಬರೂಪಕ್ಕೂ ವ್ಯಾಪ್ತರೂಪಕ್ಕೂ ಪ್ರತಿಮಾಗತರೂಪಕ್ಕೂ ಪರಸ್ಪರವಾಗಿ ಅತ್ಯಂತ ಅಭೇದವನ್ನು ಮನದಲ್ಲಿ ಭಾವಿಸುವುದು ತೀರ ಅಗತ್ಯ.

स्वातन्त्र्याद्देशकालादिव्यवधानोज्झितत्त्वतः। स्थित्वैव तत्तत्स्थानेषु स्वपूज्यप्रतिमागतं।

ಬ್ರಹ್ಮಾಂಡದ ಆಚೆ ಈಚೆ ಎಲ್ಲೆಲ್ಲೂ ವ್ಯಾಪ್ತನಾದ ಪರಮಾತ್ಮನು ಆ ಆ ಸ್ಥಾನಗಳಲ್ಲಿ ಆ ಆ ರೂಪಗಳಿಂದ ಪೂರ್ಣವಾಗಿ ಪ್ರತಿಷ್ಠಿತನಾಗಿದ್ದೇ ನಾನು ಪೂಜಿಸುವ ಈ ಪ್ರತಿಮೆಯಲ್ಲಿ ಸನ್ನಿಹಿತನಾಗಿರುವ. ಇದು ಸಾಧ್ಯವಾಗುವದಕ್ಕೆ ಕಾರಣ ಭಗವಂತನ ನಿರವಧಿಕವಾದ ಸ್ವಾತಂತ್ರ್ಯ. ದೇವರು ನಿರವಧಿಕಸ್ವತಂತ್ರನಾದುದರಿಂದ ಯಾವ ಯಾವ ವ್ಯವಧಾನಗಳೂ ಸರ್ವಥಾ ಅವನನ್ನು ಕಟ್ಟುವದಿಲ್ಲ.

ವ್ಯವಧಾನ ನಾಲ್ಕು ಬಗೆಯಾದುದು.

1. ದೇಶದಿಂದ, 2. ಕಾಲದಿಂದ, 3. ವಸ್ತುಗಳಿಂದ 4.ಸ್ವಭಾವದಿಂದ.

1. ದೂರವಿದ್ದ ಪದಾರ್ಥವನ್ನು ನಾವು ನೋಡಲಾರೆವು. ಅದಕ್ಕೆ ದೇಶದಿಂದ ವ್ಯವಧಾನವಿದೆ.

2. ಅತೀತವಾದ ಪದಾರ್ಥವನ್ನು ಕಾಣಲಾರೆವು. ಕಾಲದ ವ್ಯವಧಾನವಿದೆ.

3. ಗೋಡೆಯ ಆಚೆ ಇರುವ ಪದಾರ್ಥವನ್ನು ನೋಡಲು ಸಾಧ್ಯವಿಲ್ಲ, ವಸ್ತುವಿನ ವ್ಯವಧಾನವಿದೆ.
4. ಗುರುತ್ವ, ಪುಣ್ಯ, ಪಾಪ ಮುಂತಾದವುಗಳನ್ನು ಕಾಣಲಾರೆವು. ಕಾಣದಿರುವಿಕೆ ಅದರ ಸ್ವಭಾವ. ಇದನ್ನೇ ಸ್ವಭಾವದಿಂದ ವ್ಯವಧಾನವೆಂದು ಕರೆಯುತ್ತಾರೆ.

ನಿರವಧಿಕಸ್ವತಂತ್ರನಾದುದರಿಂದ ದೇವರಿಗೆ ಈ ಯಾವತರಹದ ವ್ಯವಧಾನಗಳೂ ಕಟ್ಟುವದಿಲ್ಲ, ಕಾಡುವದಿಲ್ಲ.

भावयेत् सच्चिदानन्दसान्द्रसुन्दरविग्रहं। नखादिकेशपर्यन्तं स्नानान्तेन संयुतं ।
मद्गुरूक्तानुसारेण चिन्तयेहं यथामति ।।

ಸತ್, ಚಿತ್, ಆನಂದಪೂರ್ಣನಾದ ಲಾವಣ್ಯಮಯ ದೇವರ ಸ್ವರೂಪವನ್ನು ಕಾಲುಗುರಿನಿಂದ ತಲೆಗೂದಲಿನವರೆಗೆ ನನ್ನ ಗುರುಗಳು ಪರಮಕರುಣೆಯಿಂದ ಉಪದೇಶಿಸಿದಂತೆ ನನ್ನ ಭಾವಬುದ್ಧಿಗಳಿಗೆ ಎಟುಕುವಷ್ಟು ಧ್ಯಾನಿಸುವೆ.

उपचाराः

– तत्तद्द्रव्यं तु सङ्कल्प्य पुष्पैर्वापि समर्चयेत्। अर्चनेषु विहीनं यत् तत्तोयेन प्रकल्पयेत्।

ಛತ್ರ ಚಾಮರ ನೃತ್ಯ ಗೀತ ಆಭರಣ ಮುಂತಾದ ಪದಾರ್ಥಗಳನ್ನು ವಾಸ್ತವಿಕವಾಗಿ ಸಮರ್ಪಿಸಲು ಸಮರ್ಥನಾಗದ ಪ್ರಾಮಾಣಿಕ ಭಕ್ತ ಆ ಆ ಪದಾರ್ಥಗಳನ್ನು ಹಾಗು ಉಪಚಾರಗಳನ್ನು ಮನಸ್ಸಿನಲ್ಲಿ ಸಂಕಲ್ಪಿಸಿ ಹೂಗಳಿಂದ ಅಥವಾ ನೀರಿನಿಂದ ಸಮರ್ಪಣೆ ಮಾಡಬಹುದು.

– प्रत्येकं उपचारेषु मध्ये हस्तं तु क्षालयेत् ।

ಪ್ರತಿಯೊಂದು ಉಪಚಾರಸಮರ್ಪಣೆಯಾದ ಬಳಿಕ ಕೈ ತೊಳೆಯಬೇಕು. ಇಲ್ಲವಾದರೆ ಮುಂದಿನ ಉಪಚಾರಗಳು ನಿರ್ಮಾಲ್ಯವೆಂದೆನಿಸಿಕೊಳ್ಳುವವು.

विभूषणम्-

यावच्चन्द्रश्च सूर्यश्च यावत्तिष्ठन्ति देवताः। न निर्माल्यं भवेत् तावत्स्वर्णवस्त्रविभूषणम्॥

ಚಂದ್ರಸೂರ್ಯರಿರುವವರೆಗೆ ದೇವತೆಗಳ ಆಯುಷ್ಯದವರೆಗೆ ಚಿನ್ನದ ಆಭರಣಗಳು ಹಾಗೂ ಬಟ್ಟೆ ನಿತ್ಯದಲ್ಲಿ ಸಮರ್ಪಿಸಿದರೂ ನಿರ್ಮಾಲ್ಯವಾಗುವದಿಲ್ಲ.

गन्धः-

घनीभूतं चन्दनं च कस्तूरीकुंकुमादिकं। तुलसीमिश्रितं सर्वं विष्णवे तु समर्पयेत्।

ಕಸ್ತೂರಿ ಕೇಶರಮಿಶ್ರವಾದ ತುಲಸಿ ಸಹಿತವಾದ ಘನೀಭೂತ ಗಂಧವನ್ನು ದೇವರಿಗೆ ಸಮರ್ಪಿಸಬೇಕು.

पुष्पम् -

स्नानं कृत्वा तु ये केचित्पुष्पं गृह्णन्ति वै द्विजाः। देवतास्तत्र गृह्णन्ति भस्मीभवति काष्ठवत्।

ಸ್ನಾನಮಾಡಿ ತೆಗೆದ ಹೂಗಳನ್ನು ದೇವತೆಗಳು ಸ್ವೀಕರಿಸುವದಿಲ್ಲ.

पल्लव-

येषां न सन्ति पुष्पाणि प्रशस्यान्यर्चने हरेः। पल्लवान्यपि तेषां स्युः शस्तान्यर्चविधौ हरेः।

ಯಾವವನಸ್ಪತಿಗಳಿಗೆ ಹೂಗಳಿಲ್ಲವೋ ಅವುಗಳ ಚಿಗುರುಗಳಿಂದ ದೇವರನ್ನರ್ಚಿಸಬಹುದು.

धूपः- गन्धाज्येन युतं दद्यात् धूपं विष्णोर्मनोरमम् ।

ಚಂದನ ಅಗರು ಕರ್ಪೂರ ದೇವದಾರು ಗುಗ್ಗುಲ ಜಾಜಿಕಾಯಿ ಶ್ರೀಫಲ ಉಶಿರ ಕೋಷ್ಠ ಸಾಲನಿರ್ಯಾಸ ಇವು ಧೂಪದ ದಶಾಂಗ. ಧೂಪವನ್ನು ಸಮರ್ಪಿಸುವಾಗ ಆಕಳಿನ ತುಪ್ಪವನ್ನು ಸೇರಿಸಬೇಕು.

देवताः-

-सस्नुषा च हरेर्लक्ष्मीः स्नानं कारयति प्रभोः। पीताम्बरे च गरुड आसने शेष उच्यते।

ಸೊಸೆ ಸರಸ್ವತೀಯಿಂದೊಡಗೂಡಿ ಸಿರಿ ಹರಿಗೆ ಅಭಿಷೇಕಮಾಡುವಳು. ಗರುಡ ಪೀತಾಂಬರಕ್ಕೆ ಅಭಿಮಾನೀ, ಶೇಷ ಆಸನಕ್ಕೆ.

इन्द्रस्तु कलशे गोपीचन्दने मन्मथस्तथा। रुद्रस्तु शङ्खचक्रादेर्धारणाय जगत्पतेः।
ಕಲಶಕ್ಕೆ ಇಂದ್ರ, ಗೋಪೀಚಂದನಕ್ಕೆ ಮನ್ಮಥ. ಶಂಖಚಕ್ರಗಳನ್ನು ಅರ್ಪಿಸುವಲ್ಲಿ ರುದ್ರ ಸನ್ನಿಧ್ಯ,
आदर्शे च ततो विद्यात् सूर्यचन्द्रौ रमापतेः। श्रीगन्धे तु श्रियं विद्यात् भूदेवीमक्षतान् स्मरेत्।
ಕನ್ನಡಿಗೆ ಸೂರ್ಯಚಂದ್ರರು. ಶ್ರೀಗಂಧದಲ್ಲಿ ಶ್ರೀದೇವಿ. ಭೂದೇವಿ ಅಕ್ಷತೆಗಳಲ್ಲಿ,
दुर्गामङ्गारके विद्यात् वैजयन्त्यां सदाशिवम् ।वायुं तु वनमालायां लक्ष्मीं श्रीवत्सके तथा।
ಅಂಗಾರದಲ್ಲಿ ದುರ್ಗೆ, ವೈಜಯಂತಿಯಲ್ಲಿ ಸದಾಶಿವ, ವನಮಾಲೆಯಲ್ಲಿ ವಾಯು, ಶ್ರೀವತ್ಸದಲ್ಲಿ ಲಕ್ಷ್ಮೀ .

पादुके तु मरुद्देवः कौस्तुभे तु विधिः स्मृतः। चक्रे तु कटिसूत्रे च कुण्डले शेष एव च।
पूजाकाले तु देवस्य चेति ध्येयं हि चाञ्जसा।
ಪಾದುಕೆಯಲ್ಲಿ ವಾಯುದೇವ, ಕೌಸ್ತುಭದಲ್ಲಿ ಬ್ರಹ್ಮ , ಚಕ್ರ ಕಟಿಸೂತ್ರ ಕುಂಡಲಗಳಲ್ಲಿ ಶೇಷ.

–ताम्बूलं सुभगं विष्णोः दत्वा स्वर्गमवाप्नुयात्। सौभाग्यमतुलं लोके तथा रूपमनुत्तमम

ಇಪ್ಪತ್ತೊಂದು ದ್ರವ್ಯಗಳಿಂದ ಸುಭಗವಾದ ತಾಂಬೂಲವನ್ನು ದೇವರಿಗರ್ಪಿಸುವವ ಇಹಲೋಕದಲ್ಲಿ ಅತುಲಸೌಭಾಗ್ಯವನ್ನು ಪರದಲ್ಲಿ ಸ್ವರ್ಗವನ್ನು ಜನ್ಮಾಂತರದಲ್ಲಿ ಪರಮಸೌಂದರ್ಯವನ್ನು ಪಡೆಯುವನು.

– दर्पणस्य प्रदानेन रूपवान् दर्पवान् भवेत्।

ದೇವರಿಗೆ ದರ್ಪಣ ಸಮರ್ಪಿಸುವವನಿಗೆ ರೂಪ, ವರ್ಚಸ್ಸುಗಳು ನಿಶ್ಚಿತ.

नीराजनम्

–बहुवर्तिसमायुक्तं ज्वलन्तं केशवोपरि। कुर्यादारार्तिकं यस्तु कल्पकोटिं दिवं वसेत् ।

ಅನೇಕಬತ್ತಿಗಳಿಂದ ದಿವ್ಯವಾದ ಮಂಗಳಾರತಿಯನ್ನು ಕೇಶವನಿಗೆ ಮಾಡಿದ ಭಕ್ತ ಕೋಟಿಕಲ್ಪಗಳವರೆಗೆ ಸ್ವರ್ಗದಲ್ಲಿ ವಾಸಿಸುವ.

–नीराजनं च यः पश्येत् देवदेवस्य चक्रिणः। सप्त जन्म भवेद्विप्रो ह्यन्ते च परमं पदम्

ದೇವದೇವೋತ್ತಮ ವಿಷ್ಣುವಿನ ನೀರಾಜನವನ್ನು ಕಂಡವನು ಏಳುಜನ್ಮಗಳವರೆಗೆ ಬ್ರಾಹ್ಮಣನಾಗಿ (ಸಾಧನೆಮಾಡಿ) ಕೊನೆಯಲ್ಲಿ ಮುಕ್ತನಾಗುವ.

– कोटयो ब्रह्महत्यानां अगम्यागमकोटयः। दहत्यालोकमात्रेण विष्णोस्वारार्तिकं मुखम

ಕೋಟಿಬ್ರಹ್ಮಹತ್ಯೆಗಳು ಕೋಟಿಬಾರಿಮಾಡಿದ ಅಗಮ್ಯಗಮನಗಳು ಮಂಗಳಾರತಿಯನ್ನು ಮಾಡುವಾಗ ದೇವರಮುಖಚಂದ್ರವನ್ನು ಕಂಡಮಾತ್ರಕ್ಕೆ ನಶಿಸಿಹೋಗುವವು.

– शङ्खमध्ये स्थितं तोयं भ्रामितं केशवोपरि। अङ्गलग्नं मनुष्याणां ब्रह्महत्यादिकं दहेत् ।

ದೇವರಿಗೆ ಶಂಖಭ್ರಮಣ ಮಾಡಿದ ನೀರು ಮನುಷ್ಯರ ಬ್ರಹ್ಮಹತ್ಯಾದಿ ಪಾಪಗಳನ್ನು ಮೃಗತಾಕಿಮೊಡನೆ ಕಳೆಯುತ್ತದೆ.

नैवेद्यम्

–नैवेद्यपात्रं वक्ष्यामि केशवस्य महात्मनः। हैरण्यं राजतं कांस्यं ताम्रं मृण्मयमेव च।
पालाशं पद्मपत्रं वा पात्रं विष्णोरतिप्रियम् ।

ದೇವರ ನೈವೇದ್ಯವನ್ನು ಬಂಗಾರ, ಬೆಳ್ಳಿ, ಕಂಚು, ತಾಮ್ರ, ಮಣ್ಣು , ಪಲಾಶ, ಕಮಲದೆಲೆಗಳಲ್ಲಿ ಮಾಡಬೇಕು.

– नैवेद्यं तुलसीमिश्रं घण्टाद्यैर्जयनिःस्वनैः।

ಗಂಟೆಯನ್ನು ಬಾರಿಸುತ್ತಾ, ಜಯಘೋಷವನ್ನು ಮಾಡುತ್ತಾ, ತುಲಸೀಮಿಶ್ರಿತವಾದ ನೈವೇದ್ಯವನ್ನು ಸಮರ್ಪಿಸಬೇಕು.

तीर्थम्

वस्त्रं तु त्रिगुणीकृत्य तत्र पाणिं निधाय च। पाणौ पाणिं निधायाथ त्रिः पिबेत् तीर्थमञ्जसा।

ಬಟ್ಟೆಯನ್ನು ಮೂರುಪದರು ಮಾಡಿ, ಎಡ ಕೈಯಲ್ಲಿ ಇಟ್ಟು, ಅದರಮೇಲೆ ಬಲ ಕೈಯನ್ನು ಇಟ್ಟು, ಮೂರುಬಾರಿ ತೀರ್ಥಪ್ರಾಶನಮಾಡಬೇಕು.

प्रथमं कायशुद्ध्यर्थं द्वितीयं धर्मसाधनम्। तृतीयं मोक्षमाप्नोति एवं तीर्थं त्रिधा पिबेत् ।

ದೇಹಶುದ್ಧಿ, ಧರ್ಮಸಾಧನೆ, ಮೋಕ್ಷಪ್ರಾಪ್ತಿ ಎನ್ನುವದು ಮೂರುಬಾರಿಯ ತೀರ್ಥಪ್ರಾಶನದ ಫಲ.

विष्णुपादोदकं दिव्यं त्रिः पिबेत् सततं नरः। एकादश्यामेकवारं तीर्थं तु तुलसीं विना।

ವಿಷ್ಣುಪಾದೋದಕವನ್ನು (ತೀರ್ಥವನ್ನು) ಮೂರುಬಾರಿ ಪ್ರಾಶನಮಾಡಬೇಕು. ಏಕಾದಶೀದಿನಮಾತ್ರ ಒಂದುಬಾರಿ ಅದೂ ತುಲಸೀ ಇಲ್ಲದೇ.

–आदौ धृत्वा (नत्वा) ततः पीत्वा पुनः शिरसि धारयेत्। शालिग्रामजलं पीत्वा
कोटियज्ञफलं लभेत्। तस्मादष्टगुणं पापं भूमौ तद्बिन्दुपातनात् ।

ತೀರ್ಥವನ್ನು ಮೊದಲು ನಮಿಸಿ, ಬಳಿಕ ಪ್ರಾಶಿಸಿ, ಪುನಃ ತಲೆಯಲ್ಲಿ ಧರಿಸುವವನು ಕೋಟಿಯಜ್ಞಗಳ ಫಲವನ್ನು ಹೊಂದುವನು. ಒಂದೇ ಹನಿಯನ್ನು ಭೂಮಿಯಲ್ಲಿ ಬೀಳಿಸಿದರೆ ಎಂಟುಪಟ್ಟು ಪಾಪಬರುವದು ನಿಶ್ಚಿತ.

–यः पुमान् मन्दबुद्धित्वात् पिबन् विष्णुपदोदकम्। न करोति यदा मूर्ध्नि तमाहुर्ब्रह्मघातकम्

ಶಿರಸ್ಸಿನಲ್ಲಿ ಧರಿಸದೇ ತೀರ್ಥವನ್ನು ಪ್ರಾಶಿಸುವವನು ಬ್ರಹ್ಮಘಾತಕನೇ ಸರಿ.

तुलसीसेवनम्

– निर्माल्यं नाभिशिरसोः कर्णयोर्धारयेत् सुधीः।

ದೇವರ ನಿರ್ಮಾಲ್ಯತುಲಸಿಯನ್ನು ಹೊಕ್ಕಳಲ್ಲಿ , ಶಿರಸ್ಸಿನಲ್ಲಿ, ಕಿವಿಗಳಲ್ಲಿ ಧರಿಸಬೇಕು.

–चतुष्कर्णे मुखे चैकं नाभ्यामेकं तथैव च। शिरस्येकं तथा प्रोक्तं तीर्थे त्रयमुदाहृतम् ।
अत्रोपरि तथा पञ्च भोजनान्ते दलद्वयम् ।

ತುಲಸಿಯನ್ನು ಕಿವಿಗಳಲ್ಲಿ ಎರಡೆರಡು, ಮುಖದಲ್ಲಿ ಒಂದು, ಹೊಕ್ಕಳಲ್ಲಿ ಒಂದು, ತಲೆಯಲ್ಲಿ ಒಂದು ಧರಿಸಬೇಕು. ತೀರ್ಥಸ್ವೀಕರಿಸುವಾಗ ಮೂರು, ಪಂಚಪ್ರಾಣಾಹುತಿಗಳಲ್ಲಿ ಒಂದೊಂದು, ಊಟವಾದಬಳಿಕ ಎರಡು ಸ್ವೀಕರಿಸಬೇಕು.

अङ्गाराः

–विष्णोरङ्गारशेषेण योऽङ्गानि परिमार्जयेत् ।
दुरितानि विनश्यन्ति व्याधयो यान्ति खण्डशः।

ಭಗವಂತನ ಅಂಗಾರದಿಂದ ಭಕ್ತ ತನ್ನ ಅಂಗಗಳನ್ನು ಲೇಪಿಸಿಕೊಳ್ಳಬೇಕು. ಪಾಪಗಳು ನಶಿಸುವವು ವ್ಯಾಧಿಗಳು ಒಡುವವು.

निवेदितसेवनम्

नैवेद्यशेषं तुलसीविमिश्रितं विशेषतः पादजलेन विष्णोः। योऽश्नाति नित्यं पुरतोऽथ विष्णोः (पुरुषोऽथ नारी) प्राप्नोति यज्ञायुतकोटिपुण्यम् । –स्कान्दे।

ವಿಷ್ಣುವಿಗೆ ನಿವೇದಿಸಿದ್ದನ್ನು ತುಲಸೀಮಿಶ್ರವಾಗಿ ವಿಷ್ಣುತೀರ್ಥವನ್ನು ಪ್ರೋಕ್ಷಿಸಿ ನಿತ್ಯವಲ್ಲಿ ಭುಂಜಿಸುವವನು ಹತ್ತುಸಾವಿರಕೋಟಿಯಜ್ಞಗಳಪುಣ್ಯವನ್ನು ಪಡೆಯುವನು.

–पत्रं पुष्पं फलं तोयमन्नं पानीयमौषधम् । अनिवेद्य न भुञ्जीत यदाहाराय कल्पितम् ।

ದೇವರಿಗೆ ನಿವೇದನಮಾಡದಿರುವ ಎಲೆ, ಹೂ, ಹಣ್ಣು, ನೀರು, ಅನ್ನ, ಹಾಲು ಮುಂತಾದಪಾನೀಯ, ಔಷಧ ಯಾವುದನ್ನೂ ಸ್ವೀಕರಿಸಬಾರದು.

– अम्बरीष नवं वस्त्रं फलमन्नं रसादिकम्। कृत्वा कृष्णोपभोग्यं हि सदा सेव्यं च वैष्णवैः।

ಗೌತಮರ ಮಾತು:- ಓ ಅಂಬರೀಷ! ಹೊಸಬಟ್ಟೆ, ಹಣ್ಣು, ಅನ್ನ, ರಸ ಮುಂತಾದ ಎಲ್ಲವನ್ನೂ ದೇವರಿಗರ್ಪಿಸಿಯೇ ವಿಷ್ಣುಭಕ್ತರು ಸ್ವೀಕರಿಸಬೇಕು.

–अग्निष्टोमसहस्रैश्च वाजपेयशतैरपि। यत्फलं लभते देवि विष्णोर्नैवेद्यभक्षणात् ।

ಸಾವಿರ ಅಗ್ನಿಷ್ಟೋಮ, ನೂರು ವಾಜಪೇಯ ಯಜ್ಞಗಳಿಂದ ಬರುವ ಪುಣ್ಯವನ್ನು ವಿಷ್ಣುವಿನ ನೈವೇದ್ಯವನ್ನು ಉಣ್ಣುವವನು ಪಡೆಯುವನು ಎಂದು ಶಿವನ ಆದೇಶ.

–इदमन्नं पवित्रं स्यात् पानीयं चातिपावनम् ।भुक्तपीतविशुद्ध्यर्थं हरेः पादोदकं पिबेत् ।

ಉಂಡ ನೈವೇದ್ಯದ ಅನ್ನ ಮತ್ತು ಕುಡಿದ ನೈವೇದ್ಯದ ನೀರು ಇನ್ನೂ ಹೆಚ್ಚು ಪವಿತ್ರವಾಗಲಿಯೆಂದು ಊಟವಾದಬಳಿಕ ತೀರ್ಥವನ್ನು ಪ್ರಾಶಿಸಬೇಕು.

–भोजनानन्तरं विष्णोरर्पितं तुलसीदलम् ।भक्षणात् पापनिर्मुक्तः चान्द्रायणशताधिकम् ।

ಊಟವಾದಮೇಲೆ ದೇವರ ನಿರ್ಮಾಲ್ಯತುಲಸೀಯನ್ನು ಸೇವಿಸುವುದು ನೂರು ಚಾಂದ್ರಾಯಣಕ್ಕೆ ಸಮಾನವಾದ ಪ್ರಾಯಶ್ಚಿತ್ತ. ಅದರಿಂದ ಭಕ್ತ ಪಾಪನಿರ್ಮುಕ್ತ.

ग्राह्याग्राह्यनैवेद्यानि

– ब्रह्माङ्गलग्नं विप्रेभ्यो वैष्णवं च प्रदीयते। रुद्राङ्गलग्नमग्नौ तु दहेत् सर्वं च तत्क्षणात् । शिष्टेभ्यस्त्वथ देवेभ्यो यत्तत् दीनेषु निक्षिपेत्। स्त्रीभ्यश्च देयं मातृभ्यो यत्तु किञ्चिन्निवेदितम्।

ವಿಷ್ಣುವಿನ ಹಾಗು ಬ್ರಹ್ಮದೇವರ ನಿರ್ಮಾಲ್ಯವನ್ನು ಬ್ರಾಹ್ಮಣರಿಗೆ ಕೊಡಬೇಕು. ಶಿವನಿರ್ಮಾಲ್ಯವನ್ನು ಕ್ಷಣದಲ್ಲಿ ಬೆಂಕಿಯಲ್ಲಿ ಹಾಕಬೇಕು. ಉಳಿದ ದೇವತೆಗಳ ನಿರ್ಮಾಲ್ಯವನ್ನು ದೀನದಲಿತರಿಗೆ ಕೊಡಬೇಕು. ಗೌರ್ಯಾದಿಮಾತೃದೇವತೆಗಳ ನೈವೇದ್ಯವನ್ನು ಹೆಣ್ಣುಮಕ್ಕಳಿಗೆ ಕೊಡಬೇಕು.

-पवित्रं विष्णुनैवेद्यं सुरसिद्धर्षिभिः स्मृतम्। अन्यदेवस्य नैवेद्यं भुक्त्वा चान्द्रायणं चरेत्।

ಸುರ, ಸಿದ್ಧ ಋಷಿಗಳೆಲ್ಲರು ವಿಷ್ಣುನೈವೇದ್ಯ ಪವಿತ್ರ. ಬೇರೆ ದೇವತೆಗಳ ನೈವೇದ್ಯವನ್ನು ಉಂಡಪಾಪವನ್ನು ಚಾಂದ್ರಾಯಣಮಾಡಿ ಕಳೆದುಕೊಳ್ಳಬೇಕು ಎಂದು ಹೇಳುತ್ತಾರೆ.

–अन्येषां चैव नैवेद्यं पत्रं पुष्पं फलं जलम्। भुञ्जीत यदि मूढात्मा तत्तुल्यं सुरया भवेत्।

ಬೇರೆ ದೇವತೆಗಳ ನೈವೇದ್ಯ, ಎಲೆ, ಹೂ, ಹಣ್ಣು, ನೀರು (ತೀರ್ಥ) ಗಳ ಸೇವನೆ ಸುರಾಪಾನಸಮಾನ.

पवित्रं पवमानस्य भुक्तशेषं जगद्गुरोः। भुञ्जीत भक्तिभावेन भक्तिज्ञानादिवर्धनम् ।

ವಿಶ್ವಗುರುಗಳಾದ ವಾಯುದೇವರ ಎಂಜಲು ಪರಮಪವಿತ್ರ. ಭಕ್ತಿಭಾವದಿಂದ ಉಂಡವನಿಗೆ ಜ್ಞಾನಭಕ್ತಿಗಳು ಬೆಳೆಯುವದು ಖಂಡಿತ.

वायूपभुक्तनैवेद्यं न ग्राह्यमिति यो वदेत्। स भुक्त्वा नरकान् घोरान् चण्डालो भुवि जायते।

ವಾಯುದೇವರ ನೈವೇದ್ಯವು ಅಗ್ರಾಹ್ಯವೆಂದು ಹೇಳುವ ಮೂಢ ಘೋರನರಕಗಳನ್ನು ಅನುಭವಿಸಿ ಕೊನೆಗೂ ಚಂಡಾಲನಾಗಿ ಕೊಳೆಯುವ.

इति वामनपुराणवचनात् अन्येषामिति वचनस्य मुख्यप्राणान्यदेवताविषयकत्वमेव।

– नैवेद्यं शिरसा नत्वा श्लोकमेतदुदीरयेत्। यस्योच्छिष्टं हि वाञ्छन्ति ब्रह्माद्या ऋषयोऽमलाः। सिद्धाद्याश्च हरेस्तस्य वयमुच्छिष्टभोजिनः।

ದೇವರ ನೈವೇದ್ಯವನ್ನು ತಲೆಬಾಗಿ ನಮಿಸಿ ಈ ಶ್ಲೋಕಗಳನ್ನು ಹೇಳಬೇಕು. ವಿಧಿವಾಯು ಮುಂತಾದ ದೇವತೆಗಳು ಹಾಗು ಋಷಿಗಳು, ಸಿದ್ಧಾದಿಗಳು ಯಾವ ಭಗವಂತನ ಎಂಜಲವನ್ನು ಬಯಸುತ್ತಾರೆಯೋ ಅದನ್ನು ನಾವು ಈಗ ಸ್ವೀಕರಿಸುತ್ತಲಿದ್ದೇವೆ.

यस्य नाम्ना विनश्यन्ति महापातककोटयः। तस्य श्रीकृष्णदेवस्य वयमुच्छिष्टभोजिनः।

ಯಾವನ ಹೆಸರಿನಿಂದ ಕೋಟಿ ಕೋಟಿ ಮಹಾಪಾತಕಗಳು ನಾಶವಾಗುವವೋ ಅಂಥ ಕೃಷ್ಣನ ಎಂಜಲುಣ್ಣುವ ಭಕ್ತರು ನಾವು.

उच्छिष्टभोजिनस्तस्य वयमद्भुतकर्मणः। येन लीलावतारेण हिरण्याक्षो निपातितः।

ಅವತರಿಸಿ ಲೀಲೆಯಿಂದ ಹಿರಣ್ಯಾಕ್ಷನನ್ನು ಕೆಡುಹಿದನೋ ಆ ಅದ್ಭುತಕರ್ಮದೇವನ ಎಂಜಲುಣ್ಣುವ ದಾಸರು ನಾವು.

प्रदक्षिणम्

–एवं कृत्वा तु कृष्णस्य यः कुर्याच्च प्रदक्षिणम्।सप्तद्वीपवती पुण्यं लभते तु पदे पदे।

(ಸಾಂಗವಾಗಿ ಭಗವಂತನನ್ನು ಪೂಜಿಸಿದಬಳಿಕ) ದೇವರಿಗೆ ಮಾಡುವ ಪ್ರದಕ್ಷಿಣೆಯ ಒಂದೊಂದು ಹೆಜ್ಜೆಯಿಂದ ಸಪ್ತದ್ವೀಪಗಳ ಪ್ರದಕ್ಷಿಣೆಯ ಪುಣ್ಯವು ದೊರೆಯುವದು.

–आसन्नप्रसवा नारी पूर्णकुम्भं जलैर्यथा। उद्वहन्ती शनैर्याति तथा कुर्यात् प्रदक्षिणम् ।

ಹೆರಿಗೆ ಹತ್ತಿರವಲ್ಲಿರುವ ಗರ್ಭಿಣಿ ಸ್ತ್ರೀ ನೀರುತುಂಬಿದ ಕೊಡವನ್ನು ಹೊತ್ತುಹೋಗುವಂತೆ ನಿಧಾನವಾಗಿ ಪ್ರದಕ್ಷಿಣೆಹಾಕಬೇಕು.

–पदे पदान्तरं गत्वा करौ चलनवर्जितौ। वाचा स्तोत्रं हृदि ध्यानं चतुरङ्गं प्रदक्षिणम् ।

1. ಹೆಜ್ಜೆಯ ಮೇಲೊಂದು ಹೆಜ್ಜೆ ಇಡುತ್ತಾ 2. ಕೈಗಳನ್ನು ಹಿಂದು ಮುಂದು ಚಲಿಸದೇ 3. ಮುಖದಿಂದ ಸ್ತುತಿಸುತ್ತಾ 4. ಹೃದಯದಲ್ಲಿ ಧ್ಯಾನಿಸುತ್ತಾ ಚತುರಂಗ ಪ್ರದಕ್ಷಿಣೆ ಹಾಕಬೇಕು.

–पठन्नामसहस्रं तु अथ नाम च केवलम्। एका प्रदक्षिणा भक्त्या दहेत् पापं तदाह्निकम्।

ವಿಷ್ಣುಸಹಸ್ರನಾಮವನ್ನು ಇಲ್ಲವೆ ಯಾವುದೇ ಒಂದು ನಾಮವನ್ನು ಉಚ್ಚರಿಸುತ್ತ ಹಾಕಿದ ಒಂದು ಪ್ರದಕ್ಷಿಣೆ ಒಂದುದಿನದ ಪಾಪವನ್ನು ಕಳೆಯುವದು.

– प्रदक्षिणं न कर्तव्यं पुरतः पृष्ठदर्शनात् ।

ದೇವರಿಗೆ ಬೆನ್ನು ತೋರಿಸ ಬಾರದೆಂಬ ಕಾರಣದಿಂದ ದೇವರ ಎದುರಲ್ಲಿ ನಿಂತಲ್ಲಿಯೇ ಪ್ರದಕ್ಷಿಣೆ ಹಾಕಬಾರದು.

–विलेपयन्ति देवेशं शङ्खे कृत्वा तु चन्दनम्। परमात्मा परां प्रीतिं करोति शतवार्षिकीम्

ಗಂಧವನ್ನು ಶಂಖಿಕ್ಕೆ ಸ್ಪರ್ಶಿಸಿ ವಿಷ್ಣುವಿಗೆ ಸಮರ್ಪಿಸಿದರೆ ನೂರು ವರ್ಷದ ಪೂಜೆಮಾಡಿದಷ್ಟು ದೇವರು ಸಂತುಷ್ಟನಾಗುವನು.

–एका चण्ड्यां रवौ सप्त तिस्रो दद्याद्विनायके। चतस्रः केशवे दद्याच्छिवे त्वर्धं प्रदक्षिणम्।

ದುರ್ಗೆಗೆ ಒಂದು, ಸೂರ್ಯನಿಗೆ ಏಳು, ಗಣೇಶನಿಗೆ ಮೂರು, ಶಿವನಿಗೆ ಅರ್ಧ, ವಿಷ್ಣುವಿಗೆ ನಾಲ್ಕು ಪ್ರದಕ್ಷಿಣೆ ಹಾಕಬೇಕು.

नमस्कारः

–वस्त्रप्रावृतदेहस्तु यो नरः प्रणमेत माम्। सदा स जायते मूर्खः सप्तजन्मनि भामिनि। स कुष्ठी जायते जन्तुः त्रिषु जन्मसु वै द्विजः।

ಮೈಮೇಲೆ ಬಟ್ಟೆಯನ್ನು ಹೊದ್ದುಕೊಂಡು ದೇವರಿಗೆ ನಮಸ್ಕರಿಸಿದವ ಏಳು ಜನ್ಮಗಳಲ್ಲಿ ಮೂರ್ಖ, ಮುಂದೆ ಕುಷ್ಠರೋಗೀ, ಮೂರುಜನ್ಮಗಳಲ್ಲಿ ಜಂತು ಆಗುವನು. (ಆದ್ದರಿಂದ ಉಟ್ಟಬಟ್ಟೆಯನ್ನು ಬಿಟ್ಟು ಮೈಮೇಲಿನ ಬಟ್ಟೆಯನ್ನು ಋಗ್ವೇದಿಗಳು ಬದಿಗಿಟ್ಟು, ಉಳಿದವರು ಸೊಂಟಕ್ಕೆ ಸುತ್ತಿ ನಮಸ್ಕರಿಸಬೇಕು.)

– अग्रे मृत्युमवाप्नोति स्मृतिभ्रंशं तु पृष्ठके। वामभागे भवेन्नाशः सर्वकामस्तु दक्षिणे।

ಎದುರಿನಲ್ಲಿ ನಮಸ್ಕರಿಸಿದರೆ ಮೃತ್ಯು, ಹಿಂದೆ ಮಾಡಿದರೆ ಸ್ಮೃತಿಭ್ರಂಶ, ಎಡಬದಿ ಮಾಡಿದರೆ ನಾಶ, ಬಲಭಾಗದಲ್ಲಿ ನಮಸ್ಕಾರ ಮಾಡಿದರೆ ಸಕಲಾಭೀಷ್ಟಸಿದ್ಧಿ ಆಗುವದು.

– अग्रे पृष्ठे वामभागे समीपे गर्भमन्दिरे। जपं होमं नमस्कारं नैव कुर्यात् द्विजोत्तमः।

ಜಪ, ಹೋಮ, ನಮಸ್ಕಾರಗಳನ್ನು ದೇವರ ಎದುರಿನಲ್ಲಿ, ಹಿಂದೆ, ಎಡಗಡೆ, ಅತಿಹತ್ತಿರ ಅಥವಾ ಗರ್ಭಗೃಹದಲ್ಲಿ ಮಾಡಬಾರದು.

–सव्यजानु निधायादौ कराभ्यां च स्पृशन् भुवम्। जानुना दक्षिणेनापि ललाटेन भुवं स्पृशेत्। पतित्वा दण्डवत् पश्चात् मूर्ध्नि बद्ध्वाञ्जलिं तथा। उत्तिष्ठेच्च पुनर्नत्वा जानुभ्यां च स्तुतिं पठन्। मम ध्यानेन संयुक्तो नमस्कार इतीरितः।

1. ಎಡದ ಮೊಣಕಾಲನ್ನು ನೆಲಕ್ಕೂರಿ, 2. ಕೈಗಳಿಂದ ಭೂಮಿಮುಟ್ಟಿ ಬಳಿಕ 3.ಬಲದ ಮೊಣಕಾಲನ್ನು ನೆಲಕ್ಕೂರಿ, 4. ಹಣೆಯನ್ನು ಭೂಮಿಗೆ ತಾಗಿಸಿ, 5. ದಂಡದಂತೆ ನೆಲದಲ್ಲಿ ದೇಹವನ್ನು ಚಾಚಿ, 6. ತಲೆಮೇಲೆ ಅಂಜಲಿಬಂಧವನ್ನು ಮಾಡಿ, 7. ಎರಡೂ ಮೊಣಕಾಲುಗಳನ್ನು ಊರಿ ಅರ್ಧಮೇಲಕ್ಕೆ ಎದ್ದು ಸ್ತುತಿಯನ್ನು ಪಠಿಸುತ್ತ, ದೇವರನ್ನು ಧ್ಯಾನಿಸುತ್ತ ಮತ್ತೆ ನಮಸ್ಕರಿಸಬೇಕು.

–प्रणामान् दण्डवत् कुर्यात् चत्वारिंशत् तथाऽष्ट च। षट्त्रिंशद् वा चतुर्विंशत् षोडश द्वादशापि वा। पञ्चाधिकं सर्वथैव प्रणमेन्मामनुस्मरन् ।

ನಾಲ್ವತ್ತೆಂಟು, ಮೂವತ್ತಾರು, ಇಪ್ಪತ್ತನಾಲ್ಕು, ಹದಿನಾರು, ಹನ್ನೆರಡು, ಕೊನೆಯಪಕ್ಷ ಐದು ಉದ್ದಂಡಪ್ರಣಾಮಗಳನ್ನು ದೇವರಿಗೆ ಮಾಡಬೇಕು.

–उरसा शिरसा दृष्ट्या मनसा वचसा तथा।पद्भ्यां कराभ्यां जानुभ्यां प्रणामोऽष्टाङ्ग ईरितः

ಎದೆ, ತಲೆ, ಕಣ್ಣು, ಮನಸ್ಸು, ಮಾತು, ಕಾಲುಗಳು, ಕೈಗಳು, ಮೊಣಕಾಲುಗಳು ಈ ಎಂಟು ಅಂಗಗಳು ನಮಸ್ಕಾರದಲ್ಲಿ ತೊಡಗಬೇಕು. ಆಗ ನಮಸ್ಕಾರ ಸಾಷ್ಟಾಂಗ.

विष्णोः पुरः अन्यदेवतापूजाविचारः

- विष्णोश्च पुरतो नान्यदेवताप्रतिमां यजेत्। वर्जयित्वा हनूमन्तं शेषं गरुडमेव च।

ದೇವರ ಎದುರಿನಲ್ಲಿ ಹನುಮಂತ (ವಾಯುದೇವರು) ಶೇಷ, ಗರುಡ ಇವರನ್ನು ಬಿಟ್ಟು ಬೇರೆ ಯಾವ ದೇವತೆಗಳನ್ನು ಪೂಜಿಸಬಾರದು.

-प्रतिमापट्टवस्त्राणां नित्यं स्नानं न कारयेत्। कारयेत्पर्वदिवसे यथामलविकर्षणम् ।
(ಪ್ರತಿಷ್ಠಾಪಿತವಾಗದಿರುವ ದೊಡ್ಡ) ಪ್ರತಿಮೆಗಳನ್ನು ಪ್ರತಿನಿತ್ಯ ಅಭಿಷೇಕಮಾಡಬಾರದು. ದೇವರ ಪಟ್ಟವಸ್ತ್ರವನ್ನು (ಪ್ರತಿಮೆಸುತ್ತುವ ವಸ್ತ್ರವನ್ನು) ನಿತ್ಯವಲ್ಲಿ ತೊಳೆಯಿಸಬಾರದು. ಗ್ರಹಣಾದಿ ಪರ್ವದಿನಗಳಲ್ಲಿ ಮಾತ್ರ ಪಟ್ಟವಸ್ತ್ರವನ್ನು ತೊಳೆಯಿಸಬೇಕು.

तीर्थप्राशनमन्त्रः।

तदस्य प्रियमभिपाथो अश्यां नरो यत्र देवयवो मदन्ति।
उरुक्रमस्य स हि बन्धुरित्था विष्णोः पदे परमे मध्व उत्सः। (१-१५४-५)
(अस्य विष्णोः तत् प्रियं अभिपाथः अभिषेकोदकं अश्यां पिबेयं , यत्र विष्णुपादोदकपाने कृते देवयवः भगवन्तं प्रेप्सवः यद्वा देवत्वप्रेप्सवः नरः नायकाः अक्षीणा वा सन्तः मदन्ति हृष्यन्ति। सः विष्णुपदतीर्थपानकर्ता उरुक्रमस्य विष्णोः बन्धुः। इत्था एवं मध्वः आनन्दतीर्थः परमे पदे उत्सः उत्कण्ठावान् विष्णोः बन्धुः।)

कलशदेवता-

-कृत्वा पीठार्चनं ह्येकशतमूर्तीरजादिकाः। मूलरूपेण सहिताः सूर्यमण्डलसंस्थिताः।
रात्रौ शुक्ले त्विन्दुसंस्थाश्चाह्नि वा वह्निमध्यगाः। आवाह्य पूजामखिलां कृत्वा विष्णौ समर्पयेत्।

गन्धः

-अगरुस्तुलसीकाष्ठं कदम्बं देवदारुकं। बिल्वागस्ती चन्दनं च कुंकुमं चेति चाष्टमं।

धूपः

- चन्दनागरुकर्पूरदेवदारूणि गुग्गुलः। जातीफलं श्रीफलं च उशीरं कोष्ठमेव च।
तथैव सालनिर्यासो दशाङ्गो धूप उच्यते।

तुलसी

-भानुवारे भृगौ भौमे व्यतीपाते युगादिषु। नाहरेत्तुलसीपत्रं मध्याह्नोपरि वैधृतौ ।
संक्रान्तौ पक्षयोरन्ते द्वादश्यां निशि संध्ययोः ।तुलसीं ये विचिन्वन्ति ते वै ब्रह्महणःस्मृताः।।
निषिध्दिवसे वापि चामावास्याहनि द्विजाः। तुलस्यारोहणं शस्तं ममार्चायां तु शाण्डिल।
सङ्क्रान्त्यादिनिषेधस्तु परेषां परिकीर्तितः। क्वचिन्न तुलसीं छिन्द्यात् द्वादश्यामेव वैष्णवः।
-निषिद्धतिथिवारेषु तुलस्याहरणं मुने। वैष्णवानां न दोषाय विष्णोः प्रीतिकरत्वतः।

पत्राणि

-भक्त्या दूर्वांकुरैः पुंभिः पूजितः पुरुषोत्तमः। हरिर्ददाति हि फलं सर्वयज्ञैश्च दुर्लभं।
-बिल्वपत्रं शमीपत्रं पत्रं भृंगारकस्य च। मालती कुशपत्रं च सद्यस्तुष्टिकरं हरेः।
-सकृदभ्यर्च्य गोविन्दं बिल्वपत्रेण मानवः। मुक्तिभागो निरातंको विष्णुलोके महीयते।।

कलशाः

-संभवे सप्तकलशाः पंच वाथ त्रयो द्वयं । असंभवे तु पात्राणां भिन्नपात्राणि कल्पयेत् ।
पूर्णकुम्भः स्नानकुम्भो निर्माल्यापनये परः । नैवेद्यप्रोक्षणार्थं च पंचपात्रप्रपूरकः ।
पानीयार्थस्तथा शंखभ्रमणार्थश्च सप्तमः । सप्त कुम्भा इति ज्ञेया अथवा पंचकुंभकाः ।
पूर्णकुंभस्नानकुंभौ निर्माल्यापनये परः । एको नैवेद्यपानीये शंखस्य भ्रमणाय च ।
पूर्णकुम्भःस्नानकुम्भः निर्माल्यापनये परः। इति त्रयो वा कुंभाः स्युः द्वौ वा ज्ञेयो विचक्षणैः।
स्नानार्थं कुम्भ एव स्यात् पानीयाद्यर्थसाधकः।
नैवेद्यप्रोक्षणार्थं च पंचपात्रप्रपूरणे । पानीयार्थं पृथक्चैव कलशत्रितयं भवेत्।
पाणिप्रक्षालनार्थं तु गन्धाद्यर्थं इति द्वयं ।।पद्ममालायाम् ।।

देवताः

शिंशुमारदिकान् पूर्वे आ येत् कलशे सुधीः । अजादिमूर्तिभिः प्राज्ञः ह्यभिषेकं समाचरेत्।

पञ्चपात्रम्

दिक्

-अर्घ्यं वायुपदे प्रोक्तं नैरृत्यां पाद्यमेव च । ईशे त्वाचमनीयं स्यात् स्नानीयं चाग्निकोणके।
मध्ये द्वे सर्वपात्राणां शुध्दतोयेन पूरयेत् । एकं स्यान्मधुपर्केऽन्यत् पुनराचमने तथा

देवता

-अर्घ्यं श्रिया समायुक्तं पाद्यपात्रे सरस्वतीं। रतिं आचमनीये च मधुपर्के पितामहं ।।
शान्तिं च पुनराचमने स्नानीये वरुणं स्मरेत्।

मुद्रा

-अर्घ्ये तु दानमुद्रा स्यात् पाद्ये चांजलिमुद्रिका । गोकर्णाकृतिराचामे मधुपर्के च सूकरी ।
पुनराचमने स्नाने हंसमुद्रा प्रकीर्तिता । ।

पञ्चामृतम्

देवता

-मध्ये क्षीरं तु दध्यादि न्यसेत्पूर्वादिषु क्रमात्। दुग्धं तु देवो गोविन्दो दधि वामनदैवतम्।
आज्यं तु विष्णुदैवत्यं मधूनि मधुसूदनम् । शर्करां चाच्युतं विद्यादेताः पंचामृतदेवताः।
-अथाचान्तःपुरोविष्णोरुपाविष्टस्समान्त्रिकः।।अब्गन्धकुसुमैरन्यैः कुर्यादात्मार्चनं हृदि।
ब्रह्मरन्ध्रे सुषुम्नायां सुषुम्नाकिरणद्युति। अर्चयेत्पीठदेवादीन् मध्ये मूलं समर्चयेत् ।

कूर्मः

-बिभर्त्यण्डं हरिः कूर्मस्त्वण्डे चाप्युदकं महत्। उदके कूर्मरूपस्य वायुः पुच्छं समाश्रितः।
वायोः पुच्छं समाश्रित्य शेषस्तु पृथिवीमिमाम् । बिभर्ति तस्यां च जगदिदं सर्वं प्रतिष्ठितम्।
स एव कूर्मरूपेण वायुरण्डोदके स्थितः। विष्णुना कूर्मरूपेण धारितोऽनन्तधारकः।
अप्सु पादा हि चत्वारो ह्यण्डोदे कोणसंस्थितः। उरस्तु भूमिसंश्लिष्टं अतिरिच्य भुवं पुनः।
पार्श्वतः पृष्ठतश्चैव शिरश्चोदकसंस्थितम् । आकाशमुदरे तस्य द्यौः पृष्ठे संस्थिता विभोः।
एवं विद्वांस्तु यत्रैति तत्रैव प्रतितिष्ठति।।

पीठदेवताः

गुरवः

-आत्मनश्च गुरुं पूज्य पीठपूजनमाचरेत् । गुरूनभ्यर्चयेत् पूर्वं पश्चात्पीठं समर्चयेत्।।
अर्चयेत् गन्धपुष्पाद्यैः पीठपार्श्वे तु सव्यके ।वायुमाद्यगुरुं लोके पीठपार्श्वे तु दक्षिणे ।।
ब्रह्माणं विष्णुं ईशं च समाराध्य तथोत्तरे । सनत्कुमारं सनकं सनंदनसनातनौ ।।पाद्यतन्त्रे।।
श्वेतांबरधरागौराः गुरवः पुस्तकान्विताः। व्याख्यानमुद्रया युक्ता ध्यायन्तो वै निजं हरिम्।
ध्यातव्या पूजनादौ च तद्ध्यानात् ज्ञानवान्भवेत् ।। तेभ्यो अनुज्ञां गृहीत्वा............।

धर्मादयः

-धर्मं वृषतनुं रक्तवर्णं आदौ प्रपूजयेत् । सिंहाकारं ततो ज्ञानं श्यामवर्णं समाहितः ।।
भूताकारं च वैराग्यं पीतवर्णं यजेत्ततः । कृष्णवर्णं गजाकारं ऐश्वर्यं साधु पूजयेत् ।।

-पृष्ठकोणेषु पद्मस्य सत्वादीन् क्रमशो यजेत्। गुणान् यजेत्ततः पूर्वं सूर्यसोमाग्निमण्डलान्।

विमलादयः

-गृहीतचामरा दिव्या विमलाद्याश्च शक्तयः। पूज्यास्सात्वतमन्त्रेण तत्राद्या मूर्तयो हरेः।
प्रधानास्ता हि सर्वासां मूर्तीनां हरिमूर्तयः। ताराद्या इम उद्देश्याः नत्यन्ताः मनवस्स्वयं।
सतारांशं चार्कसोमवह्निमण्डलमेव च।

-इच्छादित्वेन त्रिविधाः विमलाद्याश्च शक्तयः। विष्णोस्स्वरूपभूतानि ताभ्यस्तन्नामकाःपराः।
जायन्ते तत्प्रसादेन ताश्च पीठे प्रपूजयेत् । तद्भिन्नजीवास्तस्यैव प्रसादात्तत्समीपगाः।।
विष्णोः श्रियो ब्रह्मणश्च वायोस्संकर्षणस्य च । गरुडस्य च तन्त्रोक्ताः प्रत्येकं नव मूर्तयः।

गोलकम्

-प्रतिमां प्रतिमान्तस्यां वायोस्तेजोमयीं सुधीः । विष्णोर्वपुश्च तन्मध्ये ध्यायेदानन्दचिद्घनम्।
विना प्रतीकं प्राणस्य स्मरन्निरयभाक् भवेत्। वायुं विना न गृह्णामि यत्किंचिद्वस्तु मेप्रियम्।
तस्माद्वायुमुखैः देवैः वायुहस्तेन दापयेत् ।
प्रतिमा अधिकसादृश्यात् मुख्या विष्णोस्सदा रमा।

मुद्राः

दानं-

क्षिप्त्वा करतलेऽङ्गुष्ठं किञ्चिदाकुञ्च्य चाङ्गुलीः।दानमुद्रा बुधैः प्रोक्ताकनिष्ठाङ्गुष्ठयोस्ततः

अञ्जलिः

मूलेऽङ्गुष्ठे तु निक्षिप्य सम्बध्याच्छिद्रमङ्गुलीः। आकुञ्च्य सम्पुटाकारं अञ्जलीमुद्रिका तथा।

गोकर्ण

तर्जनीपृष्ठतोऽङ्गुष्ठं वेष्टयित्वा ततोऽङ्गुलीः। ऊर्ध्वमाकुञ्च्य सच्छिद्रं मुद्रा गोकर्णिका मता।

सूकरी

मुष्टिका दीर्घमध्या तु उत्तनी सूकरी स्मृता। हस्तबन्धो मुखौ कृत्वा संयोगाङ्गुष्ठयोस्तथा।

प्रार्थना

प्रसृतांगुलिकौ हस्तौ मिथःश्लिष्टौ असम्मुखौ। कुर्यात्स्वहृदये सेयं मुद्रा प्रार्थनसंज्ञिका।

प्रसाद-

उत्तानौ तु करौ कृत्वा प्रसार्य हृदयस्थितौ। प्रसादमुद्रा विज्ञेया सर्वकार्यप्रसाधनी।।

आवाहनी-

हस्ताभ्यामंजलिं कृत्वाऽनामिकामूलपर्वणोः। अंगुष्ठौ निक्षिपेत्सेयं मुद्रा त्वावहनी मता।।

स्थापनी-

अधोमुखी त्वियं चेत्स्यात् स्थापनी मुद्रिका मता।

सन्निधापनी-

उच्छ्रितांगुष्ठमुष्ट्योश्च संयोगात्सन्निधापनी।

सन्निरोधिनी-

अन्तःप्रवेशितांगुष्ठा सैव संरोधिनी मता।

सम्मुख-

मुष्टिद्वयस्थितांगुष्ठौ सम्मुखौ च परस्परम् ।संश्लिष्टावुच्छ्रितौ कुर्यात् सेयं सम्मुखमुद्रिका।

अवगुण्ठन-

हस्तौ तु सम्मुखौ कृत्वा मुष्टीकृत्वा विकुण्ठयेत्। तयोरुपरि चांगुष्ठौ निक्षिपेद्विवृतौ तथा।
अवगुण्ठनमुद्रेयं सर्वकामफलप्रदा।।

उद्वर्तनद्रव्याणि

शालिपिष्टं च गन्धश्च पालाशस्य भस्मकम् । शिलाचूर्णं ततः प्रोक्तं अथोद्वर्तनमाचरेत्।।
यवगोधूमयोश्चूर्णैः उद्वर्त्योष्णेन वारिणा । प्रक्षाल्य देवदेवेशं वारुणं लोकमाप्नुयात् ।।
पंचगव्य दधिक्षीरघृतमध्वादिपूर्वकैः। फलैः फलानां सारैश्च तिलसर्षपसक्तुभिः।
घर्षयेत् बिल्वपत्राद्यैः लेपगन्धापनुत्तये । पुनस्संस्नाप्य सलिलैः चक्रवर्त्युपचारतः ।।
सुगन्धामलकं दद्याद्धरिद्रश्च यथाक्रमम् ।। ततः संशोध्य सलिलैः देवपीठयुतं ततः ।
स्नापयेत् गन्धतोयेन कुशपुष्पाक्षतेन च । हिरण्यरत्नतोयैश्च मन्त्रसिद्धैर्यथाक्रमम् ।।

नानाभिषेकफलम्

-दशापराधान् तोयेन क्षीरेण क्षमते शतम् । सहस्रं क्षमते दध्नाऽक्षतेन क्षमतेऽयुतम् ।
मधुना क्षमते लक्षं इक्षुणा दशलक्षकम् । नारिकेलाम्बुना कोटिमनन्तं गन्धवारिणा।।

अभिषेकमन्त्राः

-स्वस्य धर्मानुवाकेन महापुरुषविद्यया । पौरुषेणात्मसूक्तेन धामनीराजनादिभिः ।।
-नितरां रंजयेद्यस्मात् पावमाने तु मण्डलं । विष्णोर्नीराजनं तस्माद्विद्वद्भिः समुदाहृतम् ।

तत्त्वमातृकान्यासौ

-वैष्णवेषु च मन्त्रेषु तत्वानां न्यसनं पुरा । ततस्तु मातृकान्यासं कुर्यादन्यत्र चान्यथा।।
अन्यत्र देवपूजादौ प्रतिमायां इत्यर्थः। अन्यथा आदौ मातृकान्यासः ततः तत्वन्यासःइत्यर्थः।

पीठ-आवरण देवतापूजा

-अर्घ्यं पाद्यं चाचमनं साचामं मधुपर्ककं। स्नपनं वसनं चैव गन्धपुष्पं च भूषणं।

दशैतानुपचारांस्तु सर्वेभ्यश्च पृथक्वदेत्। लक्ष्म्याद्यावरणस्थेभ्यः नमोऽन्तैः स्वस्वनामकैः।
आसनादि तु पीठस्य देवानां विष्णुना सह। धूपदीपादिकं सर्वं सर्वेभ्यो विष्णुना सह।।

सर्वं यज्ञसाधनं विष्ण्वधीनम् ।

यदाऽस्य नाभ्यान्नलिनादहमासं महात्मनः। नाविन्दं यज्ञसम्भारान् पुरुषावयवानृते।।
तेषु यज्ञाश्च पशवः सवनस्पतयः कुशाः। इदञ्च देवयजनं कालश्चोरुगुणान्वितः।।
वसून्योषधयः स्नेहा रसलोहमृदो जलम्।ऋचो यजूंषि सामानि चातुर्होत्रञ्च सत्तम।।
नामधेयानि मन्त्राश्च दक्षिणाश्च व्रतानि च। देवतानुक्रमः कल्पः सङ्कल्पः सूत्रमेव च।।
गतयो मतयः श्रद्धा प्रायश्चित्तं समर्पणम् ।पुरुषावयवैरेतैः सम्भाराः सम्भृता मया।।
इति सम्भृतसम्भारः पुरुषावयवैरहम्। तमेव पुरुषं यज्ञं तेनैवायजमीश्वरम् ।।
भागवत २स्कन्ध ६ अध्याय २२-२७ श्लोक